## ಅಧ್ಯಾಯ ೬

# ಬ್ಯಾಂಕಿಂಗ್, ಸಹಕಾರ, ವ್ಯಾಪಾರ ಮತ್ತು ವಾಣಿಜ್ಯ

ರಾಷ್ಟ್ರವೊಂದು ಆರ್ಥಿಕಾಭಿವೃದ್ಧಿಯನ್ನು ಸಾಧಿಸುವಲ್ಲಿ ಹಣಕಾಸು ಸಂಪನ್ಮೂಲಗಳ ಸಮರ್ಪಕ ಪೂರೈಕೆ ಮತ್ತು ದಕ್ಷ ಆಡಳಿತ ನಿರ್ವಹಣೆ ಅತ್ಯವಶ್ಯ. ಸಂಪನ್ಮೂಲಗಳ ಪರಿಣಾಮಕಾರಿ ನಿರ್ವಹಣೆಯಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳು ಮಹತ್ವದ ಪಾತ್ರವಹಿಸುತ್ತಿದ್ದು, ಇವು ರಾಷ್ಟ್ರದ ಆರ್ಥಿಕ ವ್ಯವಸ್ಥೆಗೆ ಜೀವನಾಡಿಯಾಗಿರುತ್ತವೆಂದರೆ ಉತ್ಪ್ರೇಕ್ಷೆಯಾಗಲಾರದು. ಬ್ಯಾಂಕಿಂಗ್ ಮತ್ತು ಹಣಕಾಸು ವ್ಯವಹಾರ ಸಂಸ್ಥೆಗಳೊಂದಿಗೆ ಸಹಕಾರ ಬ್ಯಾಂಕುಗಳು, ಪತ್ತಿನ ಸಹಕಾರ ಸಂಘಗಳು, ವ್ಯಾಪಾರ, ವಾಣಿಜ್ಯ, ಮಾಹಿತಿ ತಂತ್ರಜ್ಞಾನ, ಮಾರುಕಟ್ಟೆ ರಚನೆ, ವಿಮಾ ವ್ಯವಸ್ಥೆ, ಉಗ್ರಾಣ ವ್ಯವಸ್ಥೆ, ತೂಕ ಮತ್ತು ಅಳತೆ ಪದ್ಧತಿ, ನಾಣ್ಯ ಮತ್ತು ಕರೆನ್ಸಿ ಪದ್ಧತಿ, ಆಹಾರ ಮತ್ತು ನಾಗರಿಕ ಸರಬರಾಜು, ಸಾರ್ವಜನಿಕ ವಿತರಣಾ ವ್ಯವಸ್ಥೆ, ಗ್ರಾಹಕರ ಸಂರಕ್ಷಣಾ ಕಾಯಿದೆ ಮುಂತಾದವು ದೇಶದ ಸುಸ್ಥಿರ ಅಭಿವೃದ್ಧಿಯಲ್ಲಿ ಮಹತ್ವಪೂರ್ಣವಾದ ಪಾತ್ರ ವಹಿಸುತ್ತವೆ. ಇದೇ ರೀತಿ ರಾಜ್ಯದ ತುಮಕೂರು ಜಿಲ್ಲೆಯೂ ಸೇರಿದಂತೆ ದೇಶದ ಯಾವುದೇ ಪ್ರದೇಶದ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವಲ್ಲಿ ಮೇಲಿನ ಎಲ್ಲಾ ಅಂಶಗಳು ಹಿರಿದಾದ ಪಾತ್ರ ವಹಿಸುತ್ತವೆ.

ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯ ಮುಂಚೂಣಿಯಲ್ಲಿರುವ ಬ್ಯಾಂಕುಗಳ ಪ್ರಮುಖ ಕಾರ್ಯಗಳೆಂದರೆ, ಸಾರ್ವಜನಿಕರಿಂದ ಹಣವನ್ನು ವಿವಿಧ ಠೇವಣಿಗಳ ರೂಪದಲ್ಲಿ ಸ್ವೀಕರಿಸುವುದು; ಆಕರ್ಷಕ ಬಡ್ಡಿದರವನ್ನು ನೀಡಿ ಉಳಿತಾಯಕ್ಕೆ ಉತ್ತೇಜನ ನೀಡುವುದು; ಬ್ಯಾಂಕಿನ ಸಂಪನ್ಮೂಲ ಹಣವನ್ನು ಅವಶ್ಯವಿರುವ ವ್ಯಕ್ತಿ ಹಾಗೂ ಸಂಘ–ಸಂಸ್ಥೆಗಳಿಗೆ; ಸರ್ಕಾರ ಹಾಗೂ ಸರಕಾರೇತರ ಅಭಿವೃದ್ಧಿ ಚಟುವಟಿಕೆಗಳಿಗೆ ಸಾಲ ಮತ್ತು ಮುಂಗಡವಾಗಿ ನೀಡುವುದು. ಈ ರೀತಿ ಬಂಡವಾಳ ಸಂಗ್ರಹಣೆ ಮತ್ತು ವಿತರಣೆಗಳ ಮೂಲಕ ವಿವಿಧ ಸಮಾಜೋ–ಆರ್ಥಿಕ ಚಟುವಟಿಕೆಗಳಿಗೆ ಪೂರಕವಾದ ಆರ್ಥಿಕ ನೆರವು ನೀಡಿ ಆ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಉದ್ದೀಪನಗೊಳಿಸುತ್ತವೆ. ಆದ್ದರಿಂದ ಆಧುನಿಕ ಬ್ಯಾಂಕುಗಳು ಮತ್ತು ಬ್ಯಾಂಕೇತರ ಹಣಕಾಸಿನ ಮಧ್ಯವರ್ತಿ ಸಂಸ್ಥೆಗಳು, ಕೃಷಿ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ ಉದ್ದಿಮೆಗಳಿಗೆ, ಆರ್ಥಿಕ–ಸಾಮಾಜಿಕ–ಆಡಳಿತಾತ್ಮಕ ಚಟುವಟಿಕೆಗಳಿಗೆ, ಮೂಲ ಸೌಕರ್ಯ ಹಾಗೂ ಸಾಮಾಜಿಕ ಮೌಲ್ಯೋತ್ಪಾದಕ ಅಭಿವೃದ್ಧಿಗೆ ಅಗತ್ಯವಾದ ಆರ್ಥಿಕ ಸಾಲ ಸೌಲಭ್ಯಗಳನ್ನು ನೀಡುತ್ತಾ ಬಂದಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಇತರೆ ಜಿಲ್ಲೆಗಳಲ್ಲಿರುವಂತೆ ತುಮಕೂರು ಜಿಲ್ಲೆಯಲ್ಲಿಯೂ ಬ್ಯಾಂಕಿಂಗ್, ಹಣಕಾಸು ವ್ಯವಹಾರ, ಸಹಕಾರ,

ವ್ಯಾಪಾರ ಮತ್ತು ವಾಣಿಜ್ಯ ವ್ಯವಸ್ಥೆಗಳು ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ತರುವಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದು, ಈ ಅಂಶಗಳ ನಿರೂಪಣೆಯೇ ಪ್ರಸ್ತುತ ಅಧ್ಯಾಯದ ಉದ್ದೇಶವಾಗಿದೆ. ಜಿಲ್ಲೆಯ ಬ್ಯಾಂಕಿಂಗ್ ಹಣಕಾಸು, ಸಹಕಾರ, ವಾಣಿಜ್ಯ ವ್ಯಾಪಾರ ಚಟುವಟಿಗಳಿಗೆ ಸಂಬಂಧಿಸಿದಂತೆ ಸಾಧ್ಯವಾದಷ್ಟು ೨೦೧೪ರ ಮಾರ್ಚ್ ಅಂತ್ಯಕ್ಕೆ ಇದ್ದ ಸ್ಥಿತಿಗತಿಯನ್ನು ಸೂಚಿಸುವ ಅಂಕಿ–ಅಂಶಗಳನ್ನು ನೀಡಲಾಗಿದೆ.

**ಸಾಹುಕಾರರು ಮತ್ತು ದೇಶೀಯ ಬ್ಯಾಂಕರುಗಳು:** ಇಪ್ಪತ್ತನೆಯ ಶತಮಾನಕ್ಕೂ ಮುನ್ನ, ಅಂದರೆ ಆಧುನಿಕ ಬ್ಯಾಂಕಿಂಗ್ ಪದ್ಧತಿಯು ಕಾರ್ಯರೂಪಕ್ಕೆ ಬರುವುದಕ್ಕಿಂತ ಮೊದಲು ತುಮಕೂರು ಜಿಲ್ಲೆಯೂ ಸೇರಿದಂತೆ ಮೈಸೂರು ಸಂಸ್ಥಾನದಲ್ಲಿ ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮೊದಲಾದ ಚಟುವಟಿಕೆಗಳಿಗೆ ಆಯಾ ಗ್ರಾಮದ ಸಾಹುಕಾರರು, ಶ್ರೀಮಂತ ಜಮೀನ್ದಾರರು ಮತ್ತು ಲೇವಾದೇವಿಗಾರರಿಂದ ಸಾಲಿಯಾನ ಶೇ. ೨೪ ರಿಂದ ೩೬ರ ಬಡ್ಡಿ ಮತ್ತು ಚಕ್ರಬಡ್ಡಿ ದರದಲ್ಲಿ ಅಲ್ಪಾವಧಿ ಸಾಲವನ್ನು ರೈತರು, ಕಾರ್ಮಿಕರು ಮತ್ತು ಇತರ ವೃತ್ತಿಪರರು ಪಡೆಯುವ ಪದ್ಧತಿ ರೂಢಿಯಲ್ಲಿತ್ತು. ರಾಜ್ಯದ ಗ್ರಾಮೀಣ, ಪಟ್ಟಣ ಹಾಗೂ ನಗರ ಪ್ರದೇಶಗಳ ಜನರಿಗೆ ಅಗತ್ಯವಾಗಿ ಬೇಕಾಗುವ ಸಾಲವನ್ನು ಒದಗಿಸುವ ಯಾವುದೇ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಆಗಿನ್ನು ಸ್ಥಾಪನೆಗೊಂಡಿರಲಿಲ್ಲ. ಆಗಿನ ಕಾಲದಲ್ಲಿ ಯಾವುದೇ ಆಧಾರವಿಲ್ಲದೇ ನೀಡಲಾಗುತ್ತಿದ್ದ ಸಾಲಕ್ಕೆ 'ಕೈ(ಮೈ)ಸಾಲ' ಎಂದು ಕರೆಯಲಾಗುತ್ತಿತ್ತು.

ಪ್ರಾಚೀನ ಕರ್ನಾಟಕದಲ್ಲಿ ರೂಢಿಯಲ್ಲಿದ್ದ ಬಡ್ಡಿ ವ್ಯವಹಾರದ ಬಗ್ಗೆ ಶಾಸನಗಳಲ್ಲಿ ಅನೇಕ ಮಹತ್ವದ ಅಂಶಗಳು ಲಭಿಸುತ್ತದೆ. ಆಗಿನ ಕಾಲದಲ್ಲಿ ತುಮಕೂರು ಜಿಲ್ಲೆಯ ಪ್ರತೀ ಗ್ರಾಮದ ಸಾಹುಕಾರರು ಹಣದ ರೂಪದಲ್ಲಿ ನೀಡಿದ ಸಾಲದ ತೀರುವಳಿಗೆ ಕೆಲವೊಮ್ಮೆ ತೆಂಗಿನಕಾಯಿ, ಕೊಬ್ಬರಿ, ದವಸ–ಧಾನ್ಯಗಳಲ್ಲದೇ ಪಡಿ ಪದಾರ್ಥ, ವಸ್ತ್ರ ಮತ್ತು ಒಡವೆಗಳನ್ನು ಪಡೆಯುವ ಪದ್ಧತಿಯೂ ಸಹ ಜಾರಿಯಲ್ಲಿತ್ತು. ಈ ಸಾಹುಕಾರರು ಸ್ಥಳೀಯ ವ್ಯಾಪಾರಸ್ಥರಾಗಿದ್ದರಿಂದ ಅವರನ್ನು ಬಣಜಿಗರು, ಶೆಟ್ಟಿ, ವೈಶ್ಯರು, ನಕರ ಅಥವಾ ನಗರ್ತರು ಎಂದು ಕರೆಯಲಾಗುತ್ತಿದ್ದು, ಅವರು ಶೈವ, ವೈಷ್ಣವ ಮತ್ತು ಜೈನ ಮತಾವಲಂಬಿಗಳಾಗಿದ್ದರು. ಪಟ್ಟಣಗಳಲ್ಲಿ ವೈಶ್ಯರು ಒಡವೆ–ಆಭರಣ, ಪಡಿತರ ಪದಾರ್ಥಗಳನ್ನು ಒತ್ತೆಯಾಗಿಟ್ಟುಕೊಂಡು ಸಾಲ ನೀಡುತ್ತಿದ್ದು, ಜೊತೆಗೆ ಇವರು ಗಿರವಿ ಅಂಗಡಿಗಳನ್ನು ಸಹ ನಡೆಸುತ್ತಿದ್ದರು. ರೈತರು ಸಾಲವಾಗಿ ಪಡೆದ ಹಣವನ್ನು ಒಪ್ಪಂದದಂತೆ ಸುಗ್ಗಿಯ ನಂತರ ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ಸಾಹುಕಾರರಿಗೆ ಮಾರಾಟ ಮಾಡಿ ಸಾಲ ತೀರಿಸುವ ಪದ್ಧತಿಯನ್ನು ಈಗಲೂ ಸಹ ಗ್ರಾಮಗಳಲ್ಲಿ ವಿರಳವಾಗಿ ಕಾಣಬಹುದಾಗಿದೆ.

ರೈತರು, ತಮ್ಮ ಅಗತ್ಯಗಳ ಪೂರೈಕೆಗಾಗಿ ಹಣವನ್ನು ಸಾಲವಾಗಿ ಪಡೆಯಲು ಸ್ಥಳೀಯ ಸಾಹುಕಾರರೊಂದಿಗೆ ವಾಗ್ದಾನ ಪತ್ರ (ಪ್ರಾಮಿಸರಿ ನೋಟ್) ಮತ್ತು ವೈಯಕ್ತಿಕ ಜಾಮೀನಿನ ಮೇಲೆ ಅಲ್ಪಾವಧಿಗೆ ಕಡಿಮೆ ಮೊತ್ತದ ಹಣವನ್ನು ದುಬಾರಿ ಬಡ್ಡಿದರದಲ್ಲಿ ಪಡೆಯುತ್ತಿದ್ದರು. ಸಾಹುಕಾರರು ಸಾಲಗಾರರ ಸ್ಥಿರಾಸ್ತಿ ಮತ್ತು ಇತರ ಬೆಲೆಬಾಳುವ ಸ್ವತ್ತು, ಒಡವೆಗಳನ್ನು ಆಧಾರವಾಗಿ ಪಡೆದು ಒಂದು ಅಥವಾ ಎರಡು ವರ್ಷಗಳ ಅವಧಿಗಷ್ಟೇ ಸಾಲವನ್ನು ನೀಡುತ್ತಿದ್ದರು. ಬಡ್ಡಿಯನ್ನು ಸಮಯಕ್ಕೆ ಸರಿಯಾಗಿ ನೀಡದಿದ್ದಲ್ಲಿ ಚಕ್ರಬಡ್ಡಿಯನ್ನು ಕೊಡಬೇಕಾಗುತ್ತಿದ್ದಿತು. ಸಾಲವನ್ನು ವಾಯಿದೆಯೊಳಗೆ ತೀರಿಸಲಾಗದ ಸಾಲಗಾರರು ತಾವು ಅಡವಿಟ್ಟ ಸ್ಥಿರ ಮತ್ತು ಚರ ವಸ್ತುಗಳನ್ನು ಕಳೆದುಕೊಳ್ಳಬೇಕಾಗಿದ್ದಿತು. ಹಿಂದಿನ ಸಾಲದ ಬಾಕಿಯನ್ನು ತೀರಿಸಲಾಗದ ಸುಸ್ತಿದಾರ ಸಾಲಗಾರರು ಸಾಲ ತೀರುವಳಿಯವರೆಗೂ ಸಾಲಿಗರ ಮನೆಯಲ್ಲಿ ಜೀತದಾಳಾಗಿ ದುಡಿಯಬೇಕಾಗುತ್ತಿತ್ತು. ಇಂತಹ ಶೋಷಣೆಗಳಿಂದ ಜಮೀನ್ದಾರರು, ಸಾಹುಕಾರರು ಮತ್ತು ಲೇವಾದೇವಿಗಾರರು ತಮ್ಮ ಸಂಪತ್ತನ್ನು ಮತ್ತಷ್ಟು ಹೆಚ್ಚಿಸಿಕೊಂಡು ಶ್ರೀಮಂತರಾಗಿದ್ದರೆ, ತಲೆಮಾರುಗಳಿಂದ ನಿರಂತರ ಸಾಲದ ಬವಣೆಯಲ್ಲೇ ನರಳುತ್ತಿದ್ದ ಸಾಲಗಾರರು ಇನ್ನಷ್ಟು ಬಡವರಾಗುವ ಶೋಚನೀಯ ಪರಿಸ್ಥಿತಿ ಹಿಂದೆ ಉಂಟಾಗಿತ್ತು.

**ಋಣಗ್ರಸ್ಥತೆ:** ತುಮಕೂರು ಜಿಲ್ಲೆಯು, ರಾಜ್ಯದ ಇತರ ಜಿಲ್ಲೆಗಳಂತೆ ಹಿಂದುಳಿದ ಪ್ರದೇಶವಾಗಿದ್ದು, ಬೇಸಾಯವೇ ಪ್ರಧಾನ ಕಸುಬಾಗಿದ್ದು, ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು ಮತ್ತು ವಿವಿಧ ಕಸಬುದಾರರಲ್ಲಿ ಸಾಲದ ಹೊರೆ ಹೆಚ್ಚಿನ ಸಂಖ್ಯೆಯಲ್ಲಿ ಹಿಂದೆ ಕಂಡುಬಂದಿತ್ತು. ಜಿಲ್ಲೆಯ ಒಟ್ಟಾರೆ ಋಣಗ್ರಸ್ಥತೆಯ ಬಗ್ಗೆ ವಿವರವಾದ ಯಾವುದೇ ಅಧಿಕೃತ ಸಮೀಕ್ಷಾ ವರದಿಗಳು ಲಭ್ಯವಿಲ್ಲದಿರುವುದರಿಂದ ಜಿಲ್ಲೆಯ ಆರ್ಥಿಕ ಸ್ಥಿತಿ–ಗತಿ ಹಾಗೂ ಸಮಗ್ರ ಸಾಲ ವ್ಯವಸ್ಥೆಯ ಬಗ್ಗೆ ಸ್ಪಷ್ಟ ಚಿತ್ರ ದೊರಕುವುದು ದುರ್ಲಭವಾಗಿದೆ. ಋಣಗ್ರಸ್ಥತೆ ವರ್ಷದಿಂದ ವರ್ಷಕ್ಕೆ ಹೆಚ್ಚುವುದಕ್ಕೆ ಹಲವಾರು ಕಾರಣಗಳಿದ್ದವು. ಅವುಗಳೆಂದರೆ, ಅಧಿಕ ಸಂಖ್ಯೆಯಲ್ಲಿರುವ ಸಣ್ಣ ಭೂಹಿಡುವಳಿದಾರರು, ಕೃಷಿಕರು ಮತ್ತು ಕಾರ್ಮಿಕ ಕುಟುಂಬಗಳಲ್ಲಿ

ಹೆಚ್ಚುತ್ತಿದ್ದ ಸದಸ್ಯರು; ಬಡತನ, ನಿರಕ್ಷರತೆ, ಮೌಢ್ಯತೆ, ಮಳೆಯ ಅನಿಶ್ಚಿತತೆ, ಕ್ಷಾಮ, ಬರಗಾಲ, ಪ್ಲೇಗು, ಕಾಲರಾಗಳಂತಹ ಸಾಂಕ್ರಾಮಿಕ ರೋಗಗಳು, ಜನ ಮತ್ತು ಜಾನುವಾರುಗಳ ಸಾವು; ಮದುವೆ, ಹಬ್ಬ, ತೇರು, ಜಾತ್ರೆ ಮೊದಲಾದ ಧಾರ್ಮಿಕ ಕಾರ್ಯಗಳಿಂದಾಗಿ ಹೆಚ್ಚುತ್ತಿದ್ದ ದುಂದುವೆಚ್ಚ, ಹಳೆಯ ಸಾಲದ ಹೊರೆ, ಅದರ ಬಡ್ಡಿ ಮತ್ತು ಚಕ್ರಬಡ್ಡಿಗಳ ಹೊರೆ ಮೊದಲಾದ ಕಾರಣಗಳಿಂದ ಋಣಗ್ರಸ್ಥತೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದಿತು. ಕೈಗಾರಿಕೆಗಳ ಪೈಪೋಟಿಯಿಂದ ನಶಿಸುತ್ತಿದ್ದ ಗ್ರಾಮೀಣ ಕರಕುಶಲ ವೃತ್ತಿಗಳು ಸಹ ಸಾಲದ ಹೆಚ್ಚಳಕ್ಕೆ ಕಾರಣವಾಗಿತ್ತು. ೧೯೪೧ರ ಜನಗಣತಿಯಂತೆ ಜಿಲ್ಲೆಯ ಹತ್ತು ತಾಲೂಕುಗಳ ೩೬ ಆಯ್ದ ಗ್ರಾಮಗಳಲ್ಲಿ, ಗ್ರಾಮೀಣ ಸಾಲದ ಬಗ್ಗೆ ನಡೆಸಿದ ಸಮೀಕ್ಷೆಯಿಂದ ದೊರಕಿದ ಅಂಕಿ–ಅಂಶಗಳ ವಿವರವನ್ನು ಕೋಷ್ಟಕ ೬.೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೬.೧ : ಜಿಲ್ಲೆಯ ಹತ್ತು ತಾಲೂಕುಗಳ ೩೬ ಆಯ್ದ ಗ್ರಾಮಗಳ, ಗ್ರಾಮೀಣ ಸಾಲದ ೧೯೪೧ರ ಸಮೀಕ್ಷೆಯ ವಿವರ**

| ಕ್ರ. ಸಂಖ್ಯೆ | ತಾಲೂಕು | ಸಮೀಕ್ಷೆಗೆ ಆಯ್ದ ಗ್ರಾಮದ ಹೆಸರು | ಗ್ರಾಮದ ಒಟ್ಟು ಕುಟುಂಬಗಳು | ಋಣಗ್ರಸ್ಥತೆಗೊಳಪಟ್ಟ ಕುಟುಂಬಗಳು | ಒಟ್ಟು ಸಾಲ ರೂ.ಗಳಲ್ಲಿ |
|---|---|---|---|---|---|
| ೧ | **ತುಮಕೂರು** | ಕೆಂಪನದೊಡ್ಡೇರಿ | ೮೯ | ೭೧ | ೭೩೯೫ |
| | | ಹೊಳಕಲ್ | ೧೦೯ | ೬೫ | ೫೪೬೬ |
| | | ಚಿಕ್ಕಬೆಳ್ಳಾವೆ | ೩೮ | ೧೯ | ೪೭೨೩ |
| ೨ | **ಗುಬ್ಬಿ** | ತಿಮ್ಮಲಾಪುರ | ೨೫ | ೩ | ೨೭೫ |
| | | ಮೂಗನಾಯ್ಕನಕೋಟೆ | ೨೭೭ | ೧೩೦ | ೫೫೩೩೦ |
| | | ದಾಸರಕಲ್ಲಹಳ್ಳಿ | ೬೪ | ೩೫ | ೩೩೪೦ |
| ೩ | **ತಿಪಟೂರು** | ಈಚನೂರು | ೨೨೦ | ೧೨೩ | ೨೫,೩೩೦ |
| | | ಕಿಬ್ಬನಹಳ್ಳಿ | ೧೬೩ | ೬೨ | ೧೪,೪೨೬ |
| | | ನೊಣವಿನಕೆರೆ | ೩೭೨ | ೧೪೬ | ೫೭,೮೧೬ |
| | | ರಾಮನಹಳ್ಳಿ | ೪೬ | ೩೬ | ೧೩,೧೬೧ |
| ೪ | **ತುರುವೇಕೆರೆ** | ಬಾಣಸಂದ್ರ | ೧೯೩ | ೧೨೨ | ೪೧,೦೧೫ |
| | | ಮಾಯಸಂದ್ರ | ೨೫೧ | ೧೦೧ | ೧೨,೮೮೪ |
| | | ಮಾವಿನಕೆರೆ | ೧೪೭ | ೧೦೧ | ೧೨೮೮೪ |
| | | ವಿಠಲದೇವನಹಳ್ಳಿ | ೪೮ | ೪೧ | ೮೯೦೨ |
| | | ದಂಡಿನ ಶಿವರ | ೨೨೮ | ೧೬೮ | ೨೮೭೯೫ |
| ೫ | **ಕುಣಿಗಲ್** | ಸಂತೆಮಾವತ್ತೂರು | ೧೨೭ | ೧೦ | ೪೮೭೦ |
| | | ಯಲಿಯೂರು | ೨೨೭ | ೧೮೦ | ೪೧,೫೫೭ |
| | | ಹಳೆ ಊರು | ೧೬೭ | ೧೦೪ | ೧೩,೨೭೫ |
| | | ಅಮೃತೂರು | ೪೮೯ | ೨೭೫ | ೧,೪೮,೯೭೩ |
| ೬ | **ಚಿಕ್ಕನಾಯಕನಹಳ್ಳಿ** | ಗೋಪಾಲಹಳ್ಳಿ | ೪೭ | ೩೫ | ೧೧,೬೧೦ |
| | | ತಿಮ್ಮನಹಳ್ಳಿ | ೩೮೦ | ೨೪೯ | ೬೩,೯೫೫ |
| | | ಕೆಂಕೆರೆ | ೩೨೨ | ೧೬೨ | ೬೦,೬೪೦ |

| ಕೋಷ್ಟಕ ೬.೧ (ಮುಂದು.....) | | | | | |
|---|---|---|---|---|---|
| ೭ | ಶಿರಾ | ಲಕ್ಷ್ಮೀಸಾಗರ | ೧೧೨ | ೬೯ | ೨೦,೨೪೫ |
| | | ಹೊಸಹಳ್ಳಿ | ೪೯ | ೩೭ | ೪,೭೭೬ |
| | | ಚಂಗಾವರ | ೨೯೨ | ೨೧೩ | ೬೦,೯೮೨ |
| | | ತೀರ್ಥಹಳ್ಳಿ | ೨೩೪ | ೨೦೫ | ೪೩,೬೮೨ |
| ೮ | ಕೊರಟಗೆರೆ | ಹುಲಿಕುಂಟೆ | ೨೦೪ | ೯೬ | ೧೮೫೪೯ |
| | | ತೋವಿನಕೆರೆ | ೨೫೧ | ೧೫೫ | ೩೨,೦೫೯ |
| | | ಸೂರೇನಹಳ್ಳಿ | ೧೦೮ | ೪೦ | ೪೪೧೦ |
| | | ಮಾವತ್ತೂರು | ೬೪ | ೯ | ೮೯೬೮ |
| ೯ | ಮಧುಗಿರಿ | ನಾಗೇನಹಳ್ಳಿ | ೪೬ | ೩೨ | ೧೦೬೨೫ |
| | | ಕೊಡಗೇನಹಳ್ಳಿ | ೫೦೨ | ೨೦೯ | ೫೦,೫೮೯ |
| | | ಬ್ಯಾಲ್ಯ | ೩೨೨ | ೧೭೭ | ೫೬,೪೬೫ |
| ೧೦ | ಪಾವಗಡ | ಮಂಗಳವಾಡ | ೨೫೬ | ೧೬೯ | ೪೨,೦೦೪ |
| | | ಸಿದ್ಧಾಪುರ | ೬೮ | ೫೩ | ೯೨೩೯ |
| | | ತಿಮ್ಮಮ್ಮನಹಳ್ಳಿ | ೧೬೮ | ೧೧೨ | ೧೩೪೮೦ |

ಮೂಲ: ಮೈಸೂರು ರಾಜ್ಯ ಜನಗಣತಿ ೧೯೪೧

ಮೇಲ್ಕಂಡ ಪಟ್ಟಿಯಲ್ಲಿನ ಸಮೀಕ್ಷೆಯಿಂದ ವ್ಯಕ್ತಪಡುವುದೇನೆಂದರೆ ಜಿಲ್ಲೆಯಲ್ಲಿದ್ದ ಒಟ್ಟು ಕುಟುಂಬಗಳಲ್ಲಿ ಶೇ. ೭೦ರಷ್ಟು ಕುಟುಂಬಗಳು ಸಾಲ ಪಡೆದಿದ್ದವು. ಈ ಸಾಲಗಾರರೆಲ್ಲರೂ ತಮ್ಮ ಕುಟುಂಬದ ನಿರ್ವಹಣೆಯ ವೆಚ್ಚಕ್ಕಾಗಿ, ಮದುವೆ ಹಾಗೂ ಧಾರ್ಮಿಕ ಕೆಲಸಕಾರ್ಯಗಳಿಗಾಗಿ ಸಾಹುಕಾರರು ಮತ್ತು ಲೇವಾದೇವಿಗಾರರಿಂದ ದುಬಾರಿ ಬಡ್ಡಿಗೆ ಸಾಲ ಪಡೆದು ಅನುತ್ಪಾದಕತೆಗೆ ಖರ್ಚು ಮಾಡುತ್ತಿದ್ದರಿಂದ ಸಾಲ ತೀರಿಸಲಾಗದೆ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿದ್ದರು. ಹೀಗೆ ದುಬಾರಿ ಬಡ್ಡಿದರದಲ್ಲಿ ಸುಲಭವಾಗಿ ದೊರಕುತ್ತಿದ್ದ ಸಾಲವನ್ನು ಅನುತ್ಪಾದಕ ಉದ್ದೇಶಗಳಿಗೆ ಬಳಸುತ್ತಿದ್ದು, ಸಾಲಗಾರರು ತಾವು ಪಡೆದ ಸಾಲವನ್ನು ತೀರಿಸುವಲ್ಲಿ ಅಸಮರ್ಥರಾದಾಗ, ಸಾಹುಕಾರರು ಸಾಲಗಾರರಿಂದ ಜಮೀನನ್ನು ಸ್ವಾಧೀನಪಡಿಸಿಕೊಂಡು ಶ್ರೀಮಂತ ಜಮೀನ್ದಾರರೆನಿಸಿಕೊಂಡು, ಆಸ್ತಿ, ಮನೆ ಮಾರು ಕಳೆದುಕೊಂಡ ಸಾಲಗಾರರು ಭೂ ರಹಿತ ಕೂಲಿಕಾರ್ಮಿಕರಾಗಿ ಗೇಣಿದಾರರಾಗಿ, ಜೀತದಾಳುಗಳಾಗಿ ದುಡಿಯುವಂತಾದರು. ೧೯೬೧ರ ಜನಗಣತಿ ಅಂಕಿ–ಅಂಶಗಳ ವರದಿಯ ಪ್ರಕಾರ ಮಧುಗಿರಿ ತಾಲೂಕಿನ ಕೊಡಗೇನಹಳ್ಳಿಯಲ್ಲಿನ ಕುಟುಂಬಗಳ ವಾರ್ಷಿಕ ಆದಾಯದ ವಿವಿಧ ಗುಂಪುಗಳಲ್ಲಿನ ಋಣಗ್ರಸ್ಥತೆಯ ಸರಾಸರಿ ಪ್ರಮಾಣವನ್ನು ಕೋಷ್ಟಕ ೬.೨ ರಿಂದ ತಿಳಿದುಕೊಳ್ಳಬಹುದು.

**ಕೋಷ್ಟಕ ೬.೨: ಮಧುಗಿರಿ ತಾಲೂಕಿನ ಕೊಡಗೇನಹಳ್ಳಿಯಲ್ಲಿನ ಕುಟುಂಬಗಳ ವಾರ್ಷಿಕ ಆದಾಯದ ವಿವಿಧ ಗುಂಪುಗಳಲ್ಲಿನ ಋಣಗ್ರಸ್ಥತೆಯ ಸರಾಸರಿ ಪ್ರಮಾಣ**

| ಕುಟುಂಬದ ಮಾಸಿಕ ಆದಾಯದ ಶ್ರೇಣಿ | ಒಟ್ಟು ಕುಟುಂಬ ಗಳು | ಋಣಗ್ರಸ್ಥತೆಗೊಳಪಟ್ಟ ಕುಟುಂಬಗಳು | ಒಟ್ಟು ಸಾಲದ ಮೊತ್ತ ರೂ.ಗಳಲ್ಲಿ | ಒಟ್ಟು ಕುಟುಂಬಗಳಲ್ಲಿ ಶೇ.ಸಾಲದ ಹೊರೆ | ಸರಾಸರಿ ಸಾಲದ ಪ್ರಮಾಣ ರೂ.ಗಳಲ್ಲಿ |
|---|---|---|---|---|---|
| ರೂ.೨೫ ಮತ್ತು ಅದಕ್ಕಿಂತ ಕಡಿಮೆ ಆದಾಯ | ೧೦೩ | ೪೨ | ೮,೪೫೦ | ೪೦.೭೫ | ೨೧೦.೨೦ |
| ರೂ.೨೬ ರಿಂದ ೫೦ ರೂ.ವರೆಗೆ | ೨೫೨ | ೧೭೨ | ೭೦,೫೨೨ | ೬೪.೩೦ | ೪೧೦.೦೦ |

| ಕೋಷ್ಟಕ ೬.೨ (ಮುಂದು.....) | | | | | |
|---|---|---|---|---|---|
| ರೂ. ೫೧ರಿಂದ ರೂ. ೭೫ ರವರೆಗೆ | ೧೩೫ | ೧೦೩ | ೬೦,೫೮೫ | ೭೬.೩೦ | ೫೮೮.೨೦ |
| ರೂ. ೭೬ ರಿಂದ ರೂ. ೧೦೦ರ ಒಳಗೆ | ೬೧ | ೪೪ | ೪೫,೫೫೫ | ೭೨.೧೦ | ೧೦೩೫.೩೫ |
| ರೂ. ೧೦೦ಕ್ಕಿಂತ ಮೇಲ್ಪಟ್ಟು ಆದಾಯ | ೧೩೭ | ೯೩ | ೧೫,೮೧೫೫ | ೬೮.೦೦ | ೧೭೦೦.೬೦ |
| ಒಟ್ಟು ಕುಟುಂಬಗಳು | ೬೮೮ | ೪೫೪ | ೩,೪೩,೨೬೭ | ೫೮.೦೦ | ೭೫೬ |

**ಮೂಲ: ತುಮಕೂರು ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ೧೯೬೯, ಬೆಂಗಳೂರು**

ಮೇಲ್ಕಂಡ ಕೋಷ್ಟಕದಿಂದ ಲಭ್ಯವಾದ ಅಂಕಿ–ಅಂಶಗಳ ಪ್ರಕಾರ ಕೊಡಿಗೇನಹಳ್ಳಿಯ ಒಟ್ಟು ೬೮೮ ಕುಟುಂಬಗಳಲ್ಲಿ ೪೫೪ ಕುಟುಂಬಗಳು ಅಂದರೆ ಶೇ. ೬೬ರಷ್ಟು ಕುಟುಂಬಗಳು ಋಣಗಸ್ಥತೆಯಿಂದ ಕೂಡಿದ್ದು, ಅವುಗಳ ಒಟ್ಟು ಸಾಲ ಮೊತ್ತ ರೂ.೩,೪೩,೨೬೭ ರಷ್ಟಿತ್ತು. ಅಂದರೆ ಪ್ರತಿ ಕುಟುಂಬದ ಸರಾಸರಿ ಸಾಲದ ಪ್ರಮಾಣ ರೂ. ೭೫೬ ರಷ್ಟಿತ್ತು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಇಡೀ ಗ್ರಾಮದ ಒಟ್ಟು ಸರಾಸರಿ ಸಾಲದ ಪ್ರಮಾಣ ರೂ. ೯೨ರಷ್ಟಿತ್ತು. ಇದರಲ್ಲಿ ರೂ. ೫೧ ರಿಂದ ರೂ. ೭೫ರ ಗುಂಪಿನ ಆದಾಯವುಳ್ಳ ೧೩೫ ಕುಟುಂಬಗಳಲ್ಲಿ ೧೦೩ ಕುಟುಂಬಗಳು ಅಧಿಕ ಸಂಖ್ಯೆಯ ಸಾಲದ ಹೊರೆಯಲ್ಲಿದ್ದವೆಂದು ತಿಳಿದು ಬರುತ್ತದೆ. ಗ್ರಾಮದ ಒಟ್ಟು ರೂ. ೩,೪೩,೨೬೭ ರಷ್ಟು ಸಾಲದ ಮೊತ್ತದಲ್ಲಿ ವಿವಿಧ ಹಣಕಾಸು ಮೂಲಗಳಿಂದ ಪಡೆದ ಸಾಲಗಳ ವಿವರಗಳನ್ನು ಕೋಷ್ಟಕ ೬.೩ ರಲ್ಲಿ ನೀಡಲಾಗಿದೆ.

**ಕೋಷ್ಟಕ ೬.೩ : ವಿವಿಧ ಮೂಲಗಳಿಂದ ಪಡೆದ ಸಾಲದ ವಿವರ**

| | ಸಾಲ ನೀಡಿದ ವಿವಿಧ ಹಣಕಾಸು ಮೂಲಗಳು | ೧೯೫೫–೬೧ರಲ್ಲಿ ಎರವಲು ಪಡೆದ ಸಾಲ (ರೂ.ಗಳಲ್ಲಿ) | ೧೯೬೧ರ ಅಂತ್ಯದಲ್ಲಿ ಒಟ್ಟು ಸಾಲದ ಮೊತ್ತ (ರೂ.ಗಳಲ್ಲಿ) |
|---|---|---|---|
| ೧ | ಸಾಹುಕಾರರು | ೨,೮೭,೧೫೭ | ೨,೭೦,೬೨೭ |
| ೨ | ಭೂ ಅಭಿವೃದ್ಧಿ ಬ್ಯಾಂಕು | ೫೨,೩೮೦ | ೩೭,೯೨೫ |
| ೩ | ಸರ್ಕಾರ | ೫,೬೫೫ | ೫,೬೩೦ |
| ೪ | ಬ್ಯಾಂಕುಗಳು | ೨,೨೫೦ | ೨,೨೫೦ |
| ೫ | ಜೀವ ವಿಮಾ ನಿಗಮ | ೨೦೦ | ೨೦೦ |
| ೬ | ಇತರ ಮೂಲಗಳಿಂದ | ೨೬,೮೩೫ | ೨೬,೮೩೫ |
| | **ಒಟ್ಟು** | **೩,೭೪,೪೭೭** | **೩,೪೩,೪೬೭** |

**ಮೂಲ: ತುಮಕೂರು ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ೧೯೬೯, ಬೆಂಗಳೂರು**

ಮೇಲ್ಕಂಡ ಕೋಷ್ಟಕದಿಂದ ತಿಳಿಯುವುದೇನೆಂದರೆ ಸಾಲ ನೀಡಿದ ವಿವಿಧ ಹಣಕಾಸು ಮೂಲಗಳಲ್ಲಿ ಖಾಸಗಿ ಸಾಹುಕಾರರು ೧೯೬೧ರವರೆಗೂ ಗ್ರಾಮೀಣ ಪ್ರದೇಶದ ಕೃಷಿಕರಿಗೆ ಶೇ. ೭೯ರಷ್ಟು ಸಾಲವನ್ನು ನೀಡಿದ್ದರು. ಸಾಹುಕಾರರ ನಂತರ ಭೂ–ಅಭಿವೃದ್ಧಿ ಬ್ಯಾಂಕು ಶೇ. ೧೮ರಷ್ಟು ದೀರ್ಘಾವಧಿ ಸಾಲವನ್ನು ಬಾವಿ ತೋಡಲು, ಕೃಷಿ ಉಪಕರಣಗಳನ್ನು ಕೊಳ್ಳಲು, ಭೂ–ಅಭಿವೃದ್ಧಿಗೆ ಮತ್ತು ಹಳೆಯ ಸಾಲಗಳನ್ನು ತೀರಿಸಲು ರೈತರಿಗೆ ಸಾಲ ನೀಡಿತ್ತು. ಸಹಕಾರ ಸಂಘಗಳು ಮತ್ತು ಇತರ ಸಾರ್ವಜನಿಕ ಹಣಕಾಸು ಸಂಸ್ಥೆ ಮತ್ತು ಬ್ಯಾಂಕುಗಳು ಶೇ. ೩ ರಷ್ಟು ಮಾತ್ರ ಕೃಷಿ ಸಾಲ ನೀಡಿದ್ದವು.

೧೯೬೧ರ ಜನಗಣತಿಯ ಅಂಕಿ–ಅಂಶಗಳ ಪ್ರಕಾರ ತುಮಕೂರು ಜಿಲ್ಲೆಯ ಗ್ರಾಮೀಣ ಋಣಗ್ರಸ್ಥತೆಯಲ್ಲಿ ರೈತರು ಶೇ. ೨೫ ರಷ್ಟು ಸಾಲದ ಹಣವನ್ನು ಮದುವೆ ಮತ್ತು ಧಾರ್ಮಿಕ ಕಾರ್ಯಗಳಿಗೆ ಖರ್ಚು ಮಾಡಿದರೆ, ಶೇ. ೧೦ ರಷ್ಟು ಹಣವನ್ನು ವಸ್ತ್ರ ಕೊಳ್ಳಲು, ಶೇ. ೧೦ ರಷ್ಟು ಹಣ ಜಾತ್ರೆ, ತೇರು ಮತ್ತು ಧಾರ್ಮಿಕ ಕಾರ್ಯಗಳಿಗೆ ಶೇ. ೧೦ ರಷ್ಟು ಆರೋಗ್ಯ ರಕ್ಷಣೆಗೆ ಶೇ. ೧೦ ರಷ್ಟು ದುಶ್ಚಟಗಳಿಗೆ ಮತ್ತು ಉಳಿದ ಭಾಗದ ಸಾಲದ ಹಣವನ್ನು ಹಿಂದಿನ ಸಾಲ ತೀರಿಸಲು ಮತ್ತು ಉತ್ಪಾದಕ ಬೇಸಾಯಕ್ಕೆಂದು ಜಾನುವಾರು ಕೊಳ್ಳುವುದೇ ಮುಂತಾದ ಇತರೇ ವ್ಯವಹಾರಗಳಿಗೆ ಖರ್ಚು ಮಾಡಿದ್ದರು.

ಅಸಂಘಟಿತ ಹಣದ ಮಾರುಕಟ್ಟೆಯಲ್ಲಿ ಸಾಹುಕಾರರು, ಗಿರಿವಿದಾರರು, ದೇಶೀಯ ಬ್ಯಾಂಕರರು, ಬ್ಯಾಂಕೇತರ ಮಧ್ಯವರ್ತಿ ಹಣಕಾಸು ಸಂಸ್ಥೆಗಳು ಮತ್ತು ಚಿಟ್ ಫಂಡ್‌ಗಳು, ಜಿಲ್ಲೆಯ ಪ್ರಮುಖ ನಗರ ಪಟ್ಟಣಗಳಲ್ಲಿ ಲೇವಾದೇವಿ ವ್ಯವಹಾರ ನಡೆಸುತ್ತಿದ್ದವು. ಈ ಸಂಸ್ಥೆಗಳು ವ್ಯಾಪಾರ, ಉದ್ದಿಮೆ, ವಾಹನ ಖರೀದಿ, ಮುಂತಾದವುಗಳಿಗೆ, ಅಡಮಾನ ಸಾಲ ನೀಡುತ್ತಿದ್ದವು. ಸಾರ್ವಜನಿಕರಿಂದ ಠೇವಣಿ ಸ್ವೀಕರಿಸಿ, ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡು, ಸಾಲ ಮತ್ತು ಮುಂಗಡ ನೀಡುತ್ತಿದ್ದವು. ಈ ಸಂಸ್ಥೆಗಳು ೧೯೩೨ರ ಭಾರತೀಯ ಪಾಲುಗಾರಿಕೆ ಕಾಯಿದೆ ಮತ್ತು ೧೯೫೬ರ ಕಂಪನಿ ಕಾಯಿದೆ ಪ್ರಕಾರ ನೊಂದಾವಣೆಗೊಂಡ ಹಣಕಾಸು ಸಂಸ್ಥೆಗಳಾಗಿದ್ದವು. ಆದರೆ, ಮುಂದೆ ೧೯೬೧ರ ಕರ್ನಾಟಕ ಲೇವಾದೇವಿ ಕಾಯಿದೆ ಅನ್ವಯ ಸಹಕಾರ ಇಲಾಖೆಯು ಈ ಸಂಸ್ಥೆಗಳ ಮೇಲೆ ನಿಯಂತ್ರಣ ಹೊಂದುವಂತಾಯಿತು.

**ಲೇವಾದೇವಿ ನಿಯಂತ್ರಣ:** ದುಬಾರಿ ಬಡ್ಡಿ ತೆತ್ತು ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುತ್ತಿದ್ದ ಸಾಲಗಾರರ ಶೋಚನೀಯ ಸ್ಥಿತಿ; ಸಾಹುಕಾರರು ಸಾಲಗಾರರಿಗೆ ಮಾಡುತ್ತಿದ್ದ ಮೋಸ, ವಂಚನೆ ಮತ್ತು ಶೋಷಣೆಗಳಿಂದ ಋಣಗ್ರಸ್ಥರಾಗಿದ್ದ ರೈತರ ಸಂಕಷ್ಟಗಳು ಸರ್ಕಾರದ ಗಮನ ಸೆಳೆಯುವಂತಾಯಿತು. ಈ ಅನಿಷ್ಟ ಪದ್ಧತಿಯನ್ನು ತೊಡೆದು ಹಾಕುವಂತೆ ಮೈಸೂರು ಸಂಸ್ಥಾನದ ಅಂದಿನ ಪ್ರಜಾಪ್ರತಿನಿಧಿಗಳು ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್ಕಾರವನ್ನು ಒತ್ತಾಯಿಸತೊಡಗಿದರು. ಸಾಲದ ಹೊರೆಯಿಂದ ಮನೆ–ಮಾರು ಕಳೆದುಕೊಂಡ ಸಾಲಗಾರ ರೈತರು ಭೂರಹಿತ ಕೂಲಿ ಕೆಲಸಗಾರರಾಗಿ, ಜೀತದಾಳುಗಳಾಗಿ ಶ್ರೀಮಂತ ಜಮೀನುದಾರರ ಮನೆಯಲ್ಲಿ ದುಡಿಯುವಂತಾದರು. ಸುಸ್ತಿದಾರ ಸಾಲಗಾರರಿಂದ ಜಮೀನನ್ನು ವಶಪಡಿಸಿಕೊಂಡು ಸಾಹುಕಾರರು ಶ್ರೀಮಂತ ಜಮೀನ್ದಾರರೆನಿಸಿಕೊಂಡರು. ಸಾಲಗಾರ ರೈತರ ಶೋಚನೀಯ ಸ್ಥಿತಿಯನ್ನು ಗಮನಿಸಿದ ಸರ್ಕಾರ ಅಗತ್ಯ ಕಾಯಿದೆಗಳ ಮೂಲಕ ಗ್ರಾಮೀಣ ಋಣಗ್ರಸ್ಥತೆಯನ್ನು ನಿಯಂತ್ರಿಸಲು ಮೇಲಿಂದ ಮೇಲೆ ಪ್ರಯತ್ನಿಸತೊಡಗಿತು. ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸಲು ಇತರ ರಾಜ್ಯಗಳಲ್ಲಿ ಜಾರಿಯಲ್ಲಿದ್ದ ನಿಯಂತ್ರಣ ಕ್ರಮಗಳನ್ನು ಪರಿಶೀಲಿಸಿ ಅದರಂತೆ ಲೇವಾದೇವಿಗಾರರ ನೋಂದಣಿ ಮತ್ತು ಪರವಾನಗಿ ಪದ್ಧತಿಯೇ ಲೇವಾದೇವಿ ವ್ಯವಹಾರದ ನಿಯಂತ್ರಣಕ್ಕೆ ಸೂಕ್ತ ಕ್ರಮವೆಂದು ಭಾವಿಸಿದ ಸರ್ಕಾರ, ೧೯೩೯ರಲ್ಲಿ ಮೈಸೂರು ಲೇವಾದೇವಿಗಾರರ ಕಾಯ್ದೆಯನ್ನು ಜಾರಿಗೊಳಿಸಿತು. ಈ ಕಾಯಿದೆಯನ್ವಯ ಜಿಲ್ಲೆಯ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಮತ್ತು ಪರವಾನಗಿ ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ, ತಾಲೂಕುಗಳ ತಹಶೀಲ್ದಾರರಿಗೆ ಮತ್ತು ಉಪನೋಂದಣಾಧಿಕಾರಿಗಳಿಗೆ ವಹಿಸಲಾಯಿತು. ೧೯೩೯ರ ಮೈಸೂರು ಸಂಸ್ಥಾನ ಸಾಲ ನೀಡುವವರ ಅಧಿನಿಯಮದ ಪ್ರಕಾರ ಸಾಲಗಳ ಮೇಲಿನ ಬಡ್ಡಿದರಗಳು ಆಧಾರದ ಸಾಲಗಳಿಗೆ ಶೇ. ೯ ರಷ್ಟು ಮತ್ತು ಆಧಾರರಹಿತ ಸಾಲಗಳಿಗೆ ಶೇ. ೧೨ ರಷ್ಟು ಮಾತ್ರ ವಿಧಿಸಬೇಕೆಂದು ನಿಗದಿಪಡಿಸಿತು. ಅಗತ್ಯಾನುಸಾರ ಈ ಕಾಯಿದೆಗೆ ೧೯೫೫ ಮತ್ತು ೧೯೫೬ರಲ್ಲಿ ತಿದ್ದುಪಡಿಗಳನ್ನು ಮಾಡಲಾಯಿತು.

೧೯೬೧ರ ಜನಗಣತಿಯ ಪ್ರಕಾರ ತುಮಕೂರು ಜಿಲ್ಲೆಯಲ್ಲಿ ೨೧ ಲೇವಾದೇವಿಗಾರರು ಮತ್ತು ಗಿರವಿದಾರರು ಮಾತ್ರ ತಮ್ಮ ಲೇವಾದೇವಿ ವ್ಯವಹಾರವನ್ನು ನಡೆಸುತ್ತಿದ್ದರು. ೧೯೩೯ರಲ್ಲಿ ಒಟ್ಟು ೭೦ರಷ್ಟು ಇದ್ದ ಈ ಸಂಖ್ಯೆಯು ೧೯೬೧ಕ್ಕೆ ೨೧ರಷ್ಟು ಕಡಿಮೆಯಾಯಿತು. ಇದಕ್ಕೆ ಕಾರಣವೆಂದರೆ, ಜಿಲ್ಲೆಯಲ್ಲಿ ಪತ್ತಿನ ಸಹಕಾರಿ ಸಂಘಗಳು ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವ ಕ್ರಿಯಾ ಯೋಜನೆ ಮತ್ತು ಪ್ರತೀ ತಾಲೂಕಿನ ರೈತರಿಗೆ ಸಹಕಾರ ಪತ್ತಿನ ಸಂಘಗಳು ಸುಲಭವಾಗಿ ಅಲ್ಪಾವಧಿ ಸಾಲ ನೀಡಿದ್ದರಿಂದ ಸಾಹುಕಾರರ, ಲೇವಾದೇವಿಗಾರರ ಸಂಖ್ಯೆ ಕ್ರಮೇಣ ಕಡಿಮೆಯಾಯಿತು.

೧೯೫೬ರ ರಾಜ್ಯ ಪುನರ್ರಚನೆಯಿಂದಾಗಿ, ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ, ಕರ್ನಾಟಕ ಲೇವಾದೇವಿ ನಿಯಂತ್ರಣ ಕಾಯಿದೆ ಮತ್ತು ಕರ್ನಾಟಕ ಗಿರವಿದಾರರ ನಿಯಂತ್ರಣ ಕಾಯಿದೆಯನ್ನು ಕ್ರಮವಾಗಿ ೧೯೬೨ ಮತ್ತು ೧೯೬೬ರಲ್ಲಿ ಜಾರಿಗೆ ತರಲಾಯಿತು. ಈ ಎರಡು ಕಾಯಿದೆಗಳ ಮೂಲಕ ಅನೇಕ ಸುಧಾರಣಾ ಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು. ಈ ಕಾಯಿದೆಗಳು ಸಾಲ ನೀಡುವ ಸಾಹುಕಾರರು, ಲೇವಾದೇವಿಗಾರರು ಮತ್ತು ದೇಶೀಯ ಬ್ಯಾಂಕರರು ಕಾನೂನಿನ ಚೌಕಟ್ಟನ್ನು ಮೀರಿ ಸಾಲಗಾರರಿಗೆ ದುಬಾರಿ ಬಡ್ಡಿಯನ್ನು ವಸೂಲಿ ಮಾಡಿದರೆ, ನೀತಿ ನಿಯಮಾವಳಿಗಳನ್ನು ಉಲ್ಲಂಘಿಸಿ, ನಿಕೃಷ್ಟವಾಗಿ ವರ್ತಿಸಿದರೆ ಅಂತಹ ನೀತಿ ಬಾಹಿರ ಕೃತ್ಯಗಳನ್ನು ನಿಯಂತ್ರಿಸುವ, ಶಿಕ್ಷೆಗೊಳಪಡಿಸುವ, ದಂಡ ಜುಲ್ಮಾನೆ ಮತ್ತು ಕಾರಾಗೃಹ ವಾಸವನ್ನು ವಿಧಿಸುವ ಕಠಿಣವಾದ ಶಿಸ್ತಿನ ಹಾಗೂ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಜಿಲ್ಲೆಯ

ಸಹಕಾರ ಇಲಾಖೆಯ ಉಪನಿಬಂಧಕರಿಗೆ ನೀಡಿದವು. ಈ ಕಾಯಿದೆಯನ್ವಯ ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಬಂಧಕರನ್ನು ಲೇವಾದೇವಿಗಾರರಿಗೆಂದೇ ಪದನಿಮಿತ್ತ ರಿಜಿಸ್ಟರ್ ಜನರಲ್ ಎಂದು ನೇಮಿಸಲಾಯಿತು.

ಆ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ನೇಮಿಸಲಾಯಿತು. ಅದರಂತೆ, ತುಮಕೂರು ಜಿಲ್ಲೆಯಲ್ಲೂ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ಲೇವಾದೇವಿಗಾರರ ರಿಜಿಸ್ಟ್ರಾರ್ ಎಂದು ನೇಮಿಸಿ, ಅವರಿಗೆ ಜಿಲ್ಲೆಯ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ವಹಿಸಲಾಯಿತು. ಈ ಕಾನೂನು ಜಾರಿಗೆ ಬರುವುದಕ್ಕೆ ಮುಂಚೆ ತುಮಕೂರು ಜಿಲ್ಲೆಯ ಆಯಾ ತಾಲೂಕುಗಳಲ್ಲಿನ ಸಹಕಾರ ಇಲಾಖೆಯ ಉಪನೋಂದಣಾಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುತ್ತಿದ್ದರು. ೧೯೬೬ ರಿಂದೀಚೆಗೆ ಜಿಲ್ಲೆಯಲ್ಲಿ ಲೇವಾದೇವಿ ವ್ಯವಹಾರಗಾರರು ಜಿಲ್ಲಾ ರಿಜಿಸ್ಟ್ರಾರರಿಂದ ಪರವಾನಗಿ ಪಡೆಯಬೇಕೆಂಬ ನಿಯಮವಿದೆ. ಪರವಾನಗಿ ಇಲ್ಲದೇ ಲೇವಾದೇವಿ ವ್ಯವಹಾರವನ್ನು ಕೈಗೊಳ್ಳುವುದು ಕಾನೂನಿನನ್ವಯ ದಂಡಾರ್ಹ ಅಪರಾಧವಾಗುತ್ತದೆ. ಕರ್ನಾಟಕ ಸರ್ಕಾರ ೧೯೬೫ರಲ್ಲಿ ಅಧಿಸೂಚನೆಯನ್ನು ಹೊರಡಿಸಿ, ಲೇವಾದೇವಿಗಾರರು ವಿಧಿಸಬಹುದಾದ ಬಡ್ಡಿ ದರವನ್ನು ಒತ್ತೆ ಆಧಾರದ ಸಾಲಕ್ಕೆ ಶೇ. ೧೫ರಷ್ಟು ಮತ್ತು ಆಧಾರರಹಿತ ಸಾಲಕ್ಕೆ ಶೇ. ೧೮ ಎಂದು ನಿಗದಿಪಡಿಸಿತ್ತು. ಸರ್ಕಾರದ ಈಗಿನ ಆದೇಶದಂತೆ ಪರವಾನಗಿ ಪಡೆದ ಲೇವಾದೇವಿಗಾರರು ಮತ್ತು ಗಿರವಿಗಾರರು ಪ್ರತೀ ಐದು ವರ್ಷಕ್ಕೊಮ್ಮೆ ತಮ್ಮ ಪರವಾನಗಿಯನ್ನು ನವೀಕರಿಸಲೇಬೇಕಾಗಿದೆ.

ಈ ನಡುವೆ ೧೯೬೬ರಲ್ಲಿ ಸಹಕಾರ ಇಲಾಖೆಯ ಆಡಳಿತವನ್ನು ಪುನರ್‌ರಚಿಸಲಾಯಿತು. ಅದರಂತೆ ಜಿಲ್ಲಾ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ಸಹಕಾರ ಸಂಘಗಳ ಉಪನಿಬಂಧಕರೆಂದು ಹಾಗೂ ಉಪವಿಭಾಗದ ಮುಖ್ಯಸ್ಥರನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರೆಂದು ಪುನರ್ ನಾಮಕರಣ ಮಾಡಲಾಯಿತು. ಅಂದಿನಿಂದ ಈ ಅಧಿಕಾರಿಗಳು ೧೯೬೧ ರ ಕರ್ನಾಟಕ ಲೇವಾದೇವಿ ಕಾಯ್ದೆಯನ್ನು ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನೂ ನಿರ್ವಹಿಸುತ್ತಾರೆ. ಆ ಪ್ರಕಾರ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ಈ ಅಧಿಕಾರಿಗಳು ೧೯೬೧ ರ ಕರ್ನಾಟಕ ಲೇವಾದೇವಿ ಕಾಯ್ದೆ ಮತ್ತು ಕರ್ನಾಟಕ ಗಿರವಿದಾರರ ಕಾಯ್ದೆಯಲ್ಲದೆ ೧೯೮೨ರ ಚಿಟ್‌ಫಂಡ್‌ಕಾಯ್ದೆ ನಿಯಮಾವಳಿಯನ್ನೂ ಕಾರ್ಯಾಚರಣೆಗೆ ತರುವ ಜವಾಬ್ದಾರಿಯನ್ನು ಇಂದು ನಿರ್ವಹಿಸುತ್ತಿದ್ದಾರೆ. ಲೇವಾದೇವಿಗಾರರು ವಿಧಿಸಬಹುದಾದ ಬಡ್ಡಿಯ ದರವನ್ನು ೧೯೯೨ರಲ್ಲಿ ಪರಿಷ್ಕರಿಸಿ ಆಧಾರಿತ ಸಾಲದ ಮೇಲೆ ಶೇ.೨೧ ಮತ್ತು ಆಧಾರರಹಿತ ಸಾಲದ ಮೇಲೆ ಶೇ. ೨೩ ಎಂದು ರಾಜ್ಯ ಸರ್ಕಾರ ನಿಗಧಿ ಪಡಿಸಿತ್ತು. ಇಪ್ಪತ್ತೊಂದನೆಯ ಶತಮಾನದ ಆರಂಭದ ಮೂರು ವರ್ಷಗಳಲ್ಲಿ ರಾಜ್ಯ ಸತತವಾಗಿ ಅನುಭವಿಸಿದ ತೀವ್ರ ಬರಪರಿಸ್ಥಿತಿಯನ್ನು ಪರಿಗಣಿಸಿ ಸರ್ಕಾರ ಸಾಲದ ಬಡ್ಡಿದರವನ್ನು ೨೦೦೩ರಲ್ಲಿ ಪುನರ್ ಪರಿಷ್ಕರಿಸಿತು. ಆ ಪ್ರಕಾರ ಬಡ್ಡಿದರವನ್ನು ಆಧಾರ ಸಾಲಕ್ಕೆ ಶೇ.೧೪ ಮತ್ತು ಆಧಾರರಹಿತ ಸಾಲಕ್ಕೆ ಶೇ. ೧೬ ಎಂದು ನಿಗದಿಪಡಿಸಲಾಗಿದೆ.

**ಸಾಲ ಪರಿಹಾರ ಕ್ರಮಗಳು:** ಮೈಸೂರು ಸಂಸ್ಥಾನದಲ್ಲಿ ಕಂಡುಬಂದ ಮಳೆಯ ತೀವ್ರ ಅಭಾವದಿಂದ ಉಂಟಾದ ಕೃಷಿ ಉತ್ಪನ್ನಗಳ ಅನಿಶ್ಚಿತತೆ, ಕ್ಷಾಮ ಮತ್ತು ಭೀಕರ ಬರಗಾಲ ಇವುಗಳಿಂದ ಉಂಟಾದ ಜಾನುವಾರುಗಳ ಸಾವು, ರೈತರ ಸಾಲದ ಹೊರೆ, ಕಡುಬಡತನ ಮತ್ತು ನಿರುದ್ಯೋಗ ಮೊದಲಾದ ಸಮಸ್ಯೆಗಳ ಪರಿಹಾರ ಕ್ರಮವಾಗಿ ಸರ್ಕಾರ ೧೯೫೧ರಲ್ಲಿ ತಕ್ಕಾವಿ ಸಾಲ ಕಾಯಿದೆ, ರೈತರ ಸಾಲ ಪರಿಹಾರ ಕಾಯಿದೆ, ಭೂ ಸುಧಾರಣೆ ಕಾಯಿದೆ ಮತ್ತು ಮೈಸೂರು ಕೃಷಿ ಅಭಿವೃದ್ಧಿ ಕಾಯಿದೆಗಳನ್ನು ಜಾರಿಗೊಳಿಸಿತು. ಈ ಎಲ್ಲಾ ಕಾಯಿದೆಗಳನ್ನು ರಾಜ್ಯದ ಇತರೆಡೆಗಳಂತೆ ತುಮಕೂರು ಜಿಲ್ಲೆಯ ೧೦ ತಾಲೂಕುಗಳಿಗೂ ಅನ್ವಯಿಸಲಾಯಿತು. ಆರ್ಥಿಕ ಸಂಕಷ್ಟಕ್ಕೊಳಗಾಗಿ ಸಾಲಗಾರರಾಗಿದ್ದ ರೈತರ ಅಗಾಧ ಪ್ರಮಾಣದ ಸಾಲಗಳನ್ನು ಪೂರ್ತಿಯಾಗಿ ತೀರಿಸುವಷ್ಟು ಹಣವನ್ನು ಸರ್ಕಾರ ಸಕಾಲದಲ್ಲಿ ಬಿಡುಗಡೆ ಮಾಡದ ಕಾರಣ ಸಾಲದ ಹೊರೆ ಕಡಿಮೆಯಾಗಲಿಲ್ಲ. ಮುಂದಿನ ದಶಕಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸಂಘಟಿತ ವಲಯಗಳಾದ ಸಾಂಸ್ಥಿಕ ಹಣಕಾಸು ಸಂಸ್ಥೆಗಳು, ಸಹಕಾರ ಪತ್ತಿನ ಸಂಘಗಳು ಮತ್ತು ವಾಣಿಜ್ಯ ಬ್ಯಾಂಕುಗಳು ಸ್ಥಾಪನೆಯಾಗುವವರೆಗೂ ರೈತರ ಸಾಲದ ಹೊರೆ ಮತ್ತು ಅವರ ಸ್ಥಿತಿಗತಿಗಳು ತುಂಬಾ ಶೋಚನೀಯವಾಗಿದ್ದಿತು.

**ತಕ್ಕಾವಿ ಸಾಲ:** ಈ ಹಿನ್ನಲೆಯಲ್ಲಿ ರೈತರಿಗೆ ಕೃಷಿ ಅಭಿವೃದ್ಧಿಗಾಗಿ ಅಲ್ಪಾವಧಿಯ ತಕ್ಕಾವಿ ಸಾಲವನ್ನು ನೀಡುವ ಯೋಜನೆಯನ್ನು ಸರ್ಕಾರವು ಮೊದಲ ಪಂಚವಾರ್ಷಿಕ ಯೋಜನೆಯೊಂದಿಗೆ ಆರಂಭಿಸಿತು. ೧೯೫೧ರಲ್ಲಿ ತಕ್ಕಾವಿ

ಸಾಲವನ್ನು ಅತ್ಯಂತ ಕಡಿಮೆ ಭೂಹಿಡುವಳಿ ಹೊಂದಿರುವ ಅತೀ ಸಣ್ಣ ರೈತರಿಗೆ ಮತ್ತು ಭೂರಹಿತ ಕೃಷಿ ಕಾರ್ಮಿಕರಿಗೆ ಎತ್ತು, ಗಾಡಿ ಮತ್ತು ಜಾನುವಾರುಗಳನ್ನು ಖರೀದಿಸಿ, ಉಪಜೀವನ ನಡೆಸಲು ಅನುಕೂಲವಾಗುವಂತೆ ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲಿದ್ದ ರೈತರಿಗೆ ೨,೭೬,೭೫೦ ರೂ.ಗಳಷ್ಟು ತಕ್ಕಾವಿ ಸಾಲ ನೀಡಿತ್ತು. ೧೯೬೬-೬೭ರ ಹಣಕಾಸಿನ ವರ್ಷದಲ್ಲಿ ತುಮಕೂರು ಜಿಲ್ಲೆಯಲ್ಲಿ ವಿವಿಧ ಹಣಕಾಸಿನ ಮೂಲಗಳು ಒದಗಿಸಿದ ಸಾಲಗಳ ವಿವರಗಳನ್ನು ಕೋಷ್ಟಕ ೬.೪ ರಲ್ಲಿ ನೀಡಲಾಗಿದೆ.

**ಕೋಷ್ಟಕ ೬.೪ ಜಿಲ್ಲೆಯಲ್ಲಿ ವಿವಿಧ ಹಣಕಾಸಿನ ಮೂಲಗಳಿಂದ ಒದಗಿಸಿದ ಸಾಲದ ವಿವರ**

| ಕ್ರ.ಸಂ | ಸರ್ಕಾರ ನೀಡಿದ ವಿವಿಧ ಸಾಲಗಳು | ಒಟ್ಟು ಸಾಲದ ಮಂಜೂರಾತಿ (ರೂ.ಗಳಲ್ಲಿ) | ನೀಡಿದ ಸಾಲದ ಮೊತ್ತ (ರೂ.ಗಳಲ್ಲಿ) |
|---|---|---|---|
| ೧ | ತಕ್ಕಾವಿ ಸಾಲ | ೨,೭೬,೭೫೦ | ೨.೭೬,೭೦೫ |
| ೨ | ಭೂ ಅಭಿವೃದ್ಧಿ ಸಾಲ | ೨,೧೫,೦೦೦ | ೨,೧೩,೦೧೫ |
| ೩ | ನೀರಾವರಿ ಮತ್ತು ಬಾವಿ ತೋಡಲು ನೀಡಿದ ಸಾಲ | ೪,೮೨,೮೮೪ | ೩,೭೮,೬೫೭ |
| ೪ | ನೀರಾವರಿ ಮತ್ತು ಬಾವಿ ತೋಡಲು ಬ್ಲಾಕ್ ಫಂಡ್‌ನಿಂದ ನೀಡಿದ ಸಾಲ | ೧,೯೨,೦೫೦ | ೧,೭೨,೩೯೦ |
| ೫ | ಹಾಲಿ ಇರುವ ಬಾವಿಯನ್ನು ಆಳವಾಗಿ ತೋಡಲು ನೀಡಿದ ಸಾಲ | ೧,೨೫,೦೦೦ | ೧,೨೦,೭೫೦ |

**ಆಧಾರ: ತುಮಕೂರು ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ೧೯೬೯, ಬೆಂಗಳೂರು**

ಮೇಲ್ಕಂಡ ವಿವಿಧ ಸಾಲಗಳ ನೆರವಿನ ಜೊತೆಗೆ ಸರ್ಕಾರವು ಸಹಕಾರ ಸಂಘಗಳಾದ ಭೂ ಅಭಿವೃದ್ಧಿ ಬ್ಯಾಂಕು ಮತ್ತು ಕೃಷಿ ಪತ್ತಿನ ಸಹಕಾರಿ ಸಂಘಗಳಿಂದ ರೈತರಿಗೆ ತಮ್ಮ ಜಮೀನಿನ ಶಾಶ್ವತ ಅಭಿವೃದ್ಧಿ ಯೋಜನೆ, ಕೃಷಿ ಉಪಕರಣಗಳ ಕೊಳ್ಳುವಿಕೆ, ಗೊಬ್ಬರ, ಬಿತ್ತನೆ ಬೀಜ, ಸಸ್ಯ ಸಂರಕ್ಷಣೆ ಮತ್ತು ನೀರಾವರಿ ಸೌಲಭ್ಯ ಪಡೆಯಲು ಅಲ್ಪಾವಧಿ, ಮಧ್ಯಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಸಹ ಮಂಜೂರು ಮಾಡಲಾಗಿತ್ತು. ೧೯೮೩-೮೪ರಲ್ಲಿ ಸರ್ಕಾರವು ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಕಂಡುಬಂದ ತೀವ್ರ ಬರಗಾಲ ಪರಿಸ್ಥಿತಿಯನ್ನು ಮನಗಂಡು ಫಲಾನುಭವಿ ರೈತರು ತಕ್ಕಾವಿ ಸಾಲದ ಬಾಕಿ ಮೊತ್ತವನ್ನು ಮರುಪಾವತಿ ಮಾಡದಂತೆ ಮನ್ನಾ ಮಾಡಿದೆ.

ಇಪ್ಪತ್ತೊಂದನೆಯ ಶತಮಾನದ ಆರಂಭದ ಮೂರು ವರ್ಷಗಳಲ್ಲಿ ರಾಜ್ಯ ಸತತವಾಗಿ ಅನುಭವಿಸಿದ ತೀವ್ರ ಬರ ಪರಿಸ್ಥಿತಿಯನ್ನು ಪರಿಗಣಿಸಿ ಸರ್ಕಾರ ಸಾಲದ ಬಡ್ಡಿದರವನ್ನು ೨೦೦೩ರಲ್ಲಿ ಪುನರ್ ಪರಿಷ್ಕರಿಸಿತು. ಆ ಪ್ರಕಾರ ಬಡ್ಡಿದರವನ್ನು ಆಧಾರ ಸಾಲಕ್ಕೆ ಶೇ. ೧೪ ಮತ್ತು ಆಧಾರ ರಹಿತ ಸಾಲಕ್ಕೆ ಶೇ. ೧೬ ಎಂದು ನಿಗದಿಪಡಿಸಿದೆ. ೨೦೦೮ರಿಂದೀಚೆಗೆ ಈ ಬಡ್ಡಿದರಗಳನ್ನು ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶದಂತೆ ಇನ್ನಷ್ಟು ಇಳಿಸಲಾಗಿದೆ. ಮಿಗಿಲಾಗಿ ಅಗತ್ಯವೆನಿಸಿದಾಗ, ಸಾಲ ಮನ್ನಾ ಮಾಡಲು ಸರ್ಕಾರವು ಸೂಕ್ತ ಕ್ರಮಗಳನ್ನು ಕೈಗೊಂಡಿದೆ.

## ವಾಣಿಜ್ಯ ಬ್ಯಾಂಕುಗಳು

ಆಧುನಿಕ ವಾಣಿಜ್ಯ ವ್ಯವಹಾರಗಳಲ್ಲಿ ಬ್ಯಾಂಕುಗಳು ಸಂಘಟಿತ ವಲಯಕ್ಕೆ ಒಳಪಟ್ಟಿದ್ದು, ಅವುಗಳ ಸೇವೆಯನ್ನು ಜನಸಮುದಾಯದಲ್ಲಿ ಒಂದು ಜನಪ್ರಿಯ ವ್ಯವಹಾರವೆಂದು ಪರಿಗಣಿಸಲಾಗಿದೆ. ತುಮಕೂರು ಜಿಲ್ಲೆಯಲ್ಲಿ ಸಂಘಟಿತ ವಲಯದ ಬ್ಯಾಂಕುಗಳು ೧೮೭೦ರಲ್ಲಿ ಪ್ರಪ್ರಥಮವಾಗಿ ಸ್ಥಾಪನೆಗೊಂಡು, ಉತ್ತಮ ಸೇವೆ ಸಲ್ಲಿಸಿವೆ. ಅವೆಂದರೆ, ೧) ಸೇವಿಂಗ್ಸ್ ಬ್ಯಾಂಕು, ತುಮಕೂರು (೧೮೭೦), ೨) ಕರ್ನಾಟಕ ಬ್ಯಾಂಕು, ತುಮಕೂರು (೧೮೭೫), ೩) ಶ್ರೀ ಚಾಮರಾಜೇಂದ್ರ ಬ್ಯಾಂಕು, ತುಮಕೂರು (೧೮೭೪), ೪) ದೇವರಾಯ ಬ್ಯಾಂಕ್, ಕ್ಯಾತಸಂದ್ರ (೧೮೭೪), ೫) ಶ್ರೀನಿವಾಸ ಬ್ಯಾಂಕ್, ಕ್ಯಾತಸಂದ್ರ (೧೮೭೫), ೬) ಲಕ್ಷ್ಮಿವಿಲಾಸ್ ಬ್ಯಾಂಕ್, ತುಮಕೂರು (೧೮೭೫), ೭) ಶ್ರೀ ಗಂಗಾಧರೇಶ್ವರ ಬ್ಯಾಂಕ್, ಕ್ಯಾತಸಂದ್ರ (೧೮೭೬) ಈ ಏಳು, ಜಿಲ್ಲೆಯಲ್ಲಿ ಸ್ಥಾಪನೆಗೊಂಡ ಪ್ರಾರಂಭಿಕ (ಕಂಸದಲ್ಲಿ ನೀಡಿರುವ ವರ್ಷ

ಆರಂಭಿತ ವರ್ಷವನ್ನು ಸೂಚಿಸುತ್ತದೆ) ಬ್ಯಾಂಕುಗಳಾಗಿವೆ. ಅಲ್ಲದೆ, ಗ್ರೈನ್ ಮರ್ಚೆಂಟ್ಸ್ ಬ್ಯಾಂಕ್ ಕೂಡ ಕಾರ್ಯ ನಿರ್ವಹಿಸುತ್ತಿತ್ತು. ಈ ಜಿಲ್ಲೆಯಲ್ಲಿ ಸ್ಥಳೀಯವಾಗಿ ವೀರಶೈವರು, ವೈಶ್ಯರು ಮತ್ತು ಜೈನ ಸಮುದಾಯದ ವರ್ತಕರು ತಮ್ಮ ವ್ಯಾಪಾರ ವ್ಯವಹಾರಗಳಿಗೆ ಪೂರಕವಾಗಿ ಬ್ಯಾಂಕಿಂಗ್ ಉದ್ಯಮದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಬ್ಯಾಂಕುಗಳ ಏಳಿಗೆಗೆ ಶ್ರಮಿಸಿದ್ದಾರೆ.

ಜಿಲ್ಲೆಯ ಶಿರಾ ಪಟ್ಟಣದಲ್ಲಿ ಪ್ರಪ್ರಥಮವಾಗಿ ಟೌನ್ ಕೋ-ಆಪರೇಟೀವ್ ಬ್ಯಾಂಕು ೧೯೦೬ರಲ್ಲಿ ಸ್ಥಾಪನೆಗೊಂಡು ಉತ್ತಮ ಸೇವೆ ಸಲ್ಲಿಸಿದೆ. ೧೯೧೩ರಲ್ಲಿ ತುಮಕೂರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ತನ್ನ ಶಾಖೆಯನ್ನು ಆರಂಭಿಸಿತು. ಮುಂದೆ ಇದರ ಎಂಟು ಶಾಖೆಗಳು ಜಿಲ್ಲೆಯ ಇತರ ತಾಲೂಕು ಕೇಂದ್ರಗಳಾದ ತಿಪಟೂರು, ಕುಣಿಗಲ್, ಚಿಕ್ಕನಾಯಕನಹಳ್ಳಿ, ಗುಬ್ಬಿ, ಪಾವಗಡ, ಮಧುಗಿರಿ, ಶಿರಾ ಮತ್ತು ತುರುವೇಕೆರೆಯಲ್ಲಿ ಕ್ರಮವಾಗಿ ಸ್ಥಾಪನೆಗೊಂಡವು. ತರುವಾಯ, ಕೇರಳ ಮೂಲದ ಪಾಂಗಾಳ ನಾಯಕ್ ಬ್ಯಾಂಕು ತುಮಕೂರು, ಕುಣಿಗಲ್, ಚಿಕ್ಕನಾಯಕನಹಳ್ಳಿ ಮತ್ತು ಹುಳಿಯಾರುಗಳಲ್ಲಿ ತನ್ನ ಶಾಖೆಗಳನ್ನು ಪ್ರಾರಂಭಿಸಿತು. ಆನಂತರದಲ್ಲಿ ಸಿಂಡಿಕೇಟ್ ಬ್ಯಾಂಕು, ತುಮಕೂರು ಮತ್ತು ತಿಪಟೂರು ಪಟ್ಟಣಗಳಲ್ಲಿ ತನ್ನ ಶಾಖೆಯನ್ನು ಪ್ರಾರಂಭಿಸಿತು. ಮುಂದೆ ಕೆನರಾ ಬ್ಯಾಂಕು ಮತ್ತು ಕರ್ನಾಟಕ ಬ್ಯಾಂಕುಗಳು ತುಮಕೂರು ನಗರದಲ್ಲಿ ತಮ್ಮ ಶಾಖೆಗಳನ್ನು ಪ್ರಾರಂಭಿಸಿದವು. ಹೀಗೆ ಒಟ್ಟು ೧೭ ವಿವಿಧ ವಾಣಿಜ್ಯ ಬ್ಯಾಂಕು ಶಾಖೆಗಳು ೧೯೬೭ರ ವೇಳೆಗೆ ಜಿಲ್ಲೆಯ ೧೦ ತಾಲೂಕುಗಳಲ್ಲಿ ಸೇವೆ ಸಲ್ಲಿಸುತ್ತಿದ್ದವು.

**ಸ್ಟೇಟ್ ಬ್ಯಾಂಕ್ ಆಫ್ ಮೈಸೂರು:** ಸರ್.ಎಂ. ವಿಶ್ವೇಶ್ವರಯ್ಯನವರ ವಿಶೇಷ ಆಸಕ್ತಿಯ ಫಲವಾಗಿ ಆರಂಭಗೊಂಡ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ೧೯೧೩ರಲ್ಲಿ ಬೆಂಗಳೂರು ನಗರದಲ್ಲಿ ಪ್ರಧಾನ ಆಡಳಿತ ಕಚೇರಿಯನ್ನು ಹೊಂದಿದ್ದು, ೧೯೧೪ರಲ್ಲಿ ತುಮಕೂರು ಮತ್ತು ತಿಪಟೂರುಗಳಲ್ಲಿ, ತರುವಾಯ ಉಳಿದ ಎಂಟು ತಾಲೂಕು ಕೇಂದ್ರಗಳಲ್ಲಿ ತನ್ನ ಶಾಖೆಗಳನ್ನು ತೆರೆಯಿತು. ಆಗ ಈ ಬ್ಯಾಂಕು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಉಪಶಾಖೆಯಾಗಿ ಕಾರ್ಯ ನಿರ್ವಹಿಸುತ್ತಿತ್ತು. ಭಾರತೀಯ ರಿಜ಼ರ್ವ್ ಬ್ಯಾಂಕಿನ ಪ್ರತಿನಿಧಿಯಾಗಿ ಅದರ ಖಜಾನೆ ವ್ಯವಹಾರಗಳನ್ನು ಸರ್ಕಾರದ ಪರವಾಗಿ ನಿರ್ವಹಿಸುತ್ತಿದೆ. ೧೯೬೭ರ ಜೂನ್ ೩೦ರಲ್ಲಿ ಲಭ್ಯವಾದ ಮಾಹಿತಿಗಳ ಪ್ರಕಾರ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸ್ವೀಕರಿಸಿದ ಒಟ್ಟು ಠೇವಣಿ ಮತ್ತು ಅದು ನೀಡಿದ ಸಾಲ ಮತ್ತು ಮುಂಗಡಗಳ (ಲಕ್ಷ ರೂ.ಗಳಲ್ಲಿ) ಅಂಕಿ-ಅಂಶಗಳ ವಿವರ.

| | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ಸ್ವೀಕರಿಸಿದ ಒಟ್ಟು ಠೇವಣಿ | ನೀಡಿದ ಸಾಲ ಮತ್ತು ಮುಂಗಡಗಳು |
|---|---|---|---|
| ೧ | **ತುಮಕೂರು ಶಾಖೆ (ಪ್ರಧಾನ ಶಾಖೆ)** | ೪೧.೦೭ | ೧೫.೮೦ |
| ೨ | **ತಿಪಟೂರು ಶಾಖೆ** | ೧೯.೩೭ | ೪೦.೭೦ |
| ೩ | **ಕುಣಿಗಲ್ ಶಾಖೆ** | ೧೨.೯೭ | ೧.೧೨ |
| ೪ | **ಮಧುಗಿರಿ ಶಾಖೆ** | ೧೦.೭೮ | ೦.೫೨ |
| ೫ | **ಗುಬ್ಬಿ ಶಾಖೆ** | ೧೦.೭೦ | ೦.೨೨ |
| ೬ | **ತುರುವೇಕೆರೆ ಶಾಖೆ** | ೭.೮೯ | ೨.೧೦ |
| ೭ | **ಶಿರಾ ಶಾಖೆ** | ೫.೮೩ | ೧.೨೮ |
| ೮ | **ಪಾವಗಡ ಶಾಖೆ** | ೫.೬೮ | ೧.೩೬ |
| ೯ | **ಚಿಕ್ಕನಾಯಕನಹಳ್ಳಿ ಶಾಖೆ** | ೧.೬೮ | ೦.೧೮ |
| **ಒಟ್ಟು** | | **೧೧೬.೧೭** | **೬೩.೨೮** |

**ಆಧಾರ: ತುಮಕೂರು ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ೧೯೬೯, ಬೆಂಗಳೂರು**

**ಪಾಂಗಾಳ ನಾಯಕ ಬ್ಯಾಂಕು:** ಪಾಂಗಾಳ ನಾಯಕ ಬ್ಯಾಂಕು ೧೯೨೦ರಲ್ಲಿ ಪ್ರಥಮವಾಗಿ ಕೇರಳ ರಾಜ್ಯದಲ್ಲಿ ಸ್ಥಾಪನೆಗೊಂಡು ತರುವಾಯ ೧೯೫೯ರಲ್ಲಿ ತುಮಕೂರು, ೧೯೬೦ರಲ್ಲಿ ಕುಣಿಗಲ್, ೧೯೬೩ರಲ್ಲಿ ಚಿಕ್ಕನಾಯಕನಹಳ್ಳಿ ಮತ್ತು ೧೯೬೬ರಲ್ಲಿ ಹುಳಿಯಾರಿನಲ್ಲಿ ತನ್ನ ಶಾಖೆಗಳನ್ನು ಪ್ರಾರಂಭಿಸಿತ್ತು.

**ಕೆನರಾ ಬ್ಯಾಂಕು:** ಕೆನರಾ ಬ್ಯಾಂಕು ೧೯೫೭ರಲ್ಲಿ ತುಮಕೂರಿನಲ್ಲಿ ಕಾರ್ಯಾರಂಭಗೊಂಡಿತು.

**ಸಿಂಡಿಕೇಟ್ ಬ್ಯಾಂಕು:** ೧೯೨೫ರಲ್ಲಿ ದಿ ಕೆನರಾ ಇಂಡಸ್ಟ್ರಿಯಲ್ ಮತ್ತು ಬ್ಯಾಂಕಿಂಗ್ ಸಿಂಡಿಕೇಟ್ ಸ್ಥಾಪನೆಗೊಂಡು ತರುವಾಯ ಈ ಬ್ಯಾಂಕಿಗೆ ಸಿಂಡಿಕೇಟ್ ಬ್ಯಾಂಕ್ ಎಂದು ಕರೆಯಲಾಯಿತು. ತುಮಕೂರು (೧೯೩೭) ಮತ್ತು ತಿಪಟೂರು(೧೯೫೮) ಗಳಲ್ಲಿ ಶಾಖೆಗಳನ್ನು ತೆರೆಯಲಾಯಿತು.

**ಕರ್ನಾಟಕ ಬ್ಯಾಂಕು:** ಜಿಲ್ಲಾ ಕೇಂದ್ರ ತುಮಕೂರಿನಲ್ಲಿ ೧೯೫೮ರಲ್ಲಿ ಈ ಬ್ಯಾಂಕನ್ನು ಸ್ಥಾಪಿಸಲಾಯಿತು.

ಹೀಗೆ ೧೯೬೬ರ ವೇಳೆಗೆ ಒಟ್ಟು ೧೭ ವಾಣಿಜ್ಯ ಶಾಖಾ ಬ್ಯಾಂಕುಗಳನ್ನು ತುಮಕೂರು ನಗರ ಮತ್ತು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಸ್ಥಾಪಿಸಲಾಗಿತ್ತು. ಈ ಬ್ಯಾಂಕುಗಳು ಸಾರ್ವಜನಿಕರಿಂದ ಉಳಿತಾಯದ ಹಣವನ್ನು ಠೇವಣಿಗಳಾಗಿ ಸ್ವೀಕರಿಸಿ ಕೃಷಿ, ಕೈಗಾರಿಕೆ, ವ್ಯಾಪಾರ ಹಾಗೂ ಇತರ ಆರ್ಥಿಕ ಚಟುವಟಿಕೆಗಳಿಗೆ ಸಾಲ ಮತ್ತು ಮುಂಗಡವನ್ನು ನೀಡಿದ್ದವು.

**ಬ್ಯಾಂಕುಗಳ ರಾಷ್ಟ್ರೀಕರಣ**

ಮುಂದೆ, ೧೯೬೯ರ ಜುಲೈ ೧೯ರಂದು ಪ್ರಥಮ ಬಾರಿಗೆ ಭಾರತದಲ್ಲಾದ ೧೪ ಪ್ರಮುಖ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣ ಪ್ರಕ್ರಿಯೆಯನ್ನು ರಾಷ್ಟ್ರದ ಬ್ಯಾಂಕುಗಳ ಇತಿಹಾಸದಲ್ಲೊಂದು ಮೈಲಿಗಲ್ಲೆಂದೇ ಭಾವಿಸಲಾಗಿದೆ. ಖಾಸಗಿ ವಲಯದ ಪ್ರಮುಖ ಸಾಂಸ್ಥಿಕ ಹಣಕಾಸು ಸಂಸ್ಥೆಗಳನ್ನು ಸರ್ಕಾರಿ ವಲಯಕ್ಕೆ ತರುವಲ್ಲಿ ಇದು ಪ್ರಥಮ ದಿಟ್ಟ ಹೆಜ್ಜೆಯಾಗಿತ್ತು. ಭಾರತದ ತ್ವರಿತ ಆರ್ಥಿಕಾಭಿವೃದ್ಧಿಗೆ ಪೂರಕವಾಗುವಂತೆ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಹಿಂದುಳಿದ, ದುರ್ಬಲ ವರ್ಗ, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಏಳಿಗೆಗೆ ಮತ್ತು ಅವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿ ಅವರ ಜೀವನಮಟ್ಟವನ್ನು ಸುಧಾರಿಸಲು, ಆದ್ಯತಾ ವಲಯಗಳಿಗೆ, ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸುವ ಗುರಿಯಲ್ಲಿ ಅತ್ಯಂತ ಹಿಂದುಳಿದ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ, ಗ್ರಾಮೀಣ, ಕೃಷಿ, ಸಣ್ಣ, ಗುಡಿ ಕೈಗಾರಿಕೆಗಳ ಮತ್ತು ರಫ್ತು ಅಭಿವೃದ್ಧಿಗೆ ನೆರವಾಗುವಂತೆ ಬ್ಯಾಂಕುಗಳ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳಲು ಸರ್ಕಾರಕ್ಕೆ ಸಾಧ್ಯವಾಯಿತು. ರಾಷ್ಟ್ರೀಕರಣಕ್ಕೆ ಮೊದಲು ಬ್ಯಾಂಕುಗಳ ಸಾಲ ನೀಡಿಕೆಯಿಂದ ವಂಚಿತರಾಗಿದ್ದ ಹಿಂದುಳಿದ ದುರ್ಬಲ ವರ್ಗದವರಿಗೆ ಆದ್ಯತೆಯ ಮೇರೆಗೆ ನೇರವಾಗಿ ತ್ವರಿತಗತಿಯಲ್ಲಿ ಸಾಲಸೌಲಭ್ಯಗಳನ್ನು ಒದಗಿಸಲಾಯಿತು. ಇದರಿಂದ ಅಸಂಘಟಿತ ಆರ್ಥಿಕ ವಲಯಗಳು ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಸೇರುವಂತಾಯಿತು. ಅದುವರೆಗೂ ಮೇಲ್ವರ್ಗದ ಪ್ರತಿಷ್ಠಿತ ಶ್ರೀಮಂತವರ್ಗ ಹಾಗೂ ಕೈಗಾರಿಕೋದ್ಯಮಿಗಳಿಗೆ ಸೀಮಿತಗೊಂಡಿದ್ದ ಬ್ಯಾಂಕುಗಳ ಸೇವೆಗಳು ಶೇ.೭೦ರಷ್ಟು ರೈತರು ಮತ್ತು ಕೆಳವರ್ಗದವರಿಗೆ ಸುಲಭವಾಗಿ ಲಭ್ಯವಾಗುವಂತೆ ಸರ್ಕಾರವು ತನ್ನ ಆರ್ಥಿಕ ನೀತಿಯಲ್ಲಿ ಹೊಸ ಆಯಾಮವನ್ನು ರಚಿಸಿತು. ಪ್ರಾದೇಶಿಕವಾಗಿ ಹಿಂದುಳಿದ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೆಳಸ್ತರಗಳಲ್ಲಿ ಆರ್ಥಿಕ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಪರಿವರ್ತಿತ ಸುಧಾರಣೆಗಳನ್ನು ತರಲು ಸಹಾಯಕವಾಗುವಂತೆ ತ್ವರಿತವಾಗಿ ಸಾಲಸೌಲಭ್ಯಗಳು ನೇರವಾಗಿ ತಲುಪುವಂತೆ ಉದಾರತೆಯಿಂದ ಕೂಡಿದ ಕಾರ್ಯಯೋಜನೆಗಳನ್ನು ರೂಪಿಸುವ ಮೂಲಕ ರಾಷ್ಟ್ರೀಕೃತ ಬ್ಯಾಂಕುಗಳ ಧ್ಯೇಯೋದ್ದೇಶಗಳ ಗುರಿಯನ್ನು ಸಾಧಿಸಲು ಸಾಲಸೌಲಭ್ಯಗಳನ್ನು ಕಡ್ಡಾಯವಾಗಿ ನೀಡುವಲ್ಲಿ ಯಶಸ್ವಿಯಾಯಿತು.

೧೯೬೯ರಲ್ಲಿ ವಾಣಿಜ್ಯ ಬ್ಯಾಂಕುಗಳ ಶಾಖೆಗಳ ಅಂಕಿ–ಅಂಶಗಳ ಪ್ರಕಾರ ರಾಷ್ಟ್ರಮಟ್ಟದಲ್ಲಿ ಸರಾಸರಿ ೬೬,೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಸ್ಥಾಪನೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಸರಾಸರಿ ೩೬,೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಇದ್ದರೆ, ತುಮಕೂರು ಜಿಲ್ಲೆಯಲ್ಲಿ ಪ್ರತೀ ೩೨,೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಸ್ಥಾಪನೆಗೊಂಡಿತ್ತು. ೨೦೦೯ರಲ್ಲಿ ರಾಷ್ಟ್ರಮಟ್ಟದ ಪ್ರತಿ ಸರಾಸರಿ ೨೦,೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಸ್ಥಾಪನೆಯಾಗಿದ್ದರೆ, ಕರ್ನಾಟಕ ರಾಜ್ಯದಲ್ಲಿ ಪ್ರತಿ ೧೬,೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಇದ್ದು, ತುಮಕೂರು ಜಿಲ್ಲೆಯಲ್ಲಿ ಸರಾಸರಿ ೧೨,೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಇತ್ತು. ಅದೇ ೨೦೧೪ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ಸರಾಸರಿ ೧೧,೦೦೦ ಜನಸಂಖ್ಯೆಗೊಂದರಂತೆ ಶಾಖಾ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿದ್ದವು.

**ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮಾರ್ಗದರ್ಶಿ (LEAD BANK) ಬ್ಯಾಂಕ್, ಯೋಜನೆ**

೧೯೬೯ರಲ್ಲಿ ೧೪ ಬೃಹತ್ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದ ತರುವಾಯ ರಾಷ್ಟ್ರೀಕರಣದ ಧ್ಯೇಯೋದ್ದೇಶಗಳ ಸಾಧನೆಗೆ ಅಳವಡಿಸಿಕೊಂಡ ಯೋಜನೆಗಳ ಪೈಕಿ ಮಾರ್ಗದರ್ಶಿ ಬ್ಯಾಂಕು ಯೋಜನೆ ಅತ್ಯಂತ ಮಹತ್ವಪೂರ್ಣವಾಗಿದೆ. ೧೯೬೯ರಲ್ಲಿ ಡಾ.ಡಿ.ಆರ್. ಗಾಡ್ಗಿಲ್‌ರ ನೇತೃತ್ವದ ರಾಷ್ಟ್ರೀಯ ಸಾಲ ಪರಿಷತ್ತಿನ ಅಧ್ಯಯನ ತಂಡ ಮತ್ತು ಎಫ್.ಎಸ್. ನಾರಿಮನ್ ನೇತೃತ್ವದ ಸಮಿತಿ ಮಾಡಿದ ಶಿಫಾರಸ್ಸುಗಳ ಆಧಾರದ ಮೇಲೆ ಭಾರತೀಯ ರಿಜರ್ವ್ ಬ್ಯಾಂಕು ಮಾರ್ಗದರ್ಶಿ ಬ್ಯಾಂಕ್ ಯೋಜನೆಯನ್ನು ರೂಪಿಸಿ ಅನುಷ್ಠಾನಕ್ಕಾಗಿ ಅಳವಡಿಸಿಕೊಂಡಿತು. ಈ ಯೋಜನೆಯನ್ವಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ತುಮಕೂರು ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕಿನ ಹೊಣೆಗಾರಿಕೆಯನ್ನು ವಹಿಸಿಕೊಂಡಿದೆ. ಜಿಲ್ಲೆಯ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳ ಬಗೆಗೆ ಪ್ರಾಥಮಿಕ ಹಂತದಿಂದ ಸರ್ವೇಕ್ಷಣ ನಡೆಸಿ, ಆ ಪ್ರದೇಶದಲ್ಲಿ ಆರ್ಥಿಕ ಚಟುವಟಿಕೆಗಳ ಸಾಧ್ಯತೆ, ಲಭ್ಯವಿರುವ ಸಂಪನ್ಮೂಲಗಳನ್ನು ಆದ್ಯತಾ ವಲಯಗಳಿಗೆ ಅಗತ್ಯವಾದ ಸಾಲ ಮತ್ತು ಮುಂಗಡಗಳ ಮಂಜೂರಾತಿ, ವ್ಯತ್ಯಾಸಾತ್ಮಕ ಬಡ್ಡಿ ಸಾಲ ಯೋಜನೆ, ಜಿಲ್ಲೆಯ ಎಲ್ಲಾ ಸಾಂಸ್ಥಿಕ ಹಣಕಾಸು ಸಂಸ್ಥೆಗಳನ್ನೊಳಗೊಂಡಂತೆ ಆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಅದರಲ್ಲೂ ವಿಶೇಷವಾಗಿ ಹಿಂದುಳಿದ ಪ್ರದೇಶದ ಅಭಿವೃದ್ಧಿಗೆ ನೆರವು ನೀಡುವುದು ಇದರ ಮುಖ್ಯ ಉದ್ದೇಶವಾಗಿದೆ.

ಮಾರ್ಗದರ್ಶಿ ಬ್ಯಾಂಕ್ ಯೋಜನೆಯನ್ವಯ ಜಿಲ್ಲೆಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಈ ಹೊಣೆಗಾರಿಕೆಯನ್ನು ವಹಿಸಿಕೊಂಡಿದ್ದು, ಜಿಲ್ಲೆಯ ಎಲ್ಲಾ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ಮಾರ್ಗದರ್ಶಿ ಬ್ಯಾಂಕು ಪ್ರತೀ ವರ್ಷ ವಾರ್ಷಿಕ ಜಿಲ್ಲಾ ಸಾಲ ಯೋಜನೆಯನ್ನು ತಯಾರಿಸಿ ಅನುಷ್ಠಾನಕ್ಕೆ ತರುತ್ತಿದೆ. ಈ ರೀತಿಯ ಸಾಲ ಯೋಜನೆಗಳು ಕಾರ್ಯರೂಪಕ್ಕೆ ಬಂದಂದಿನಿಂದ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಸಾಲ ಸೌಲಭ್ಯಗಳು ದೊರಕುವಂತಾಗಿದೆ.

ಮಾರ್ಗದರ್ಶಿ ಬ್ಯಾಂಕು ಯೋಜನೆಯನ್ನು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಜಿಲ್ಲೆಯ ಶಾಖಾ ಬ್ಯಾಂಕುಗಳಿಗೆ ಆಯ್ಕೆ ಮಾಡಿದ ಹಲವಾರು ಗ್ರಾಮಗಳಿಗಾಗಿ "ಸಂಪೂರ್ಣ ಅಭಿವೃದ್ಧಿ ಸೇವಾಕ್ಷೇತ್ರ" ಎಂಬ ಯೋಜನೆಯನ್ನು ೧೯೮೯ರಿಂದ ಕಾರ್ಯರೂಪಕ್ಕೆ ತರಲಾಗಿದೆ. ಶಾಖಾವಾರು ಸಾಲ ಯೋಜನೆ, ಮತ್ತು ಪತ್ತಿನ ಕ್ರಿಯಾ ಯೋಜನೆಯನ್ನು ತಯಾರಿಸಿ, ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಬ್ಯಾಂಕು ರಾಷ್ಟ್ರೀಕರಣಕ್ಕೆ ಮೊದಲು ವಾಣಿಜ್ಯ ಬ್ಯಾಂಕುಗಳು ಅಭಿವೃದ್ಧಿ ಹೊಂದಿದ ನಗರಪ್ರದೇಶಗಳಲ್ಲಿ ತಮ್ಮ ಶಾಖೆಗಳನ್ನು ಸ್ಥಾಪಿಸಿ ತಮ್ಮ ವ್ಯವಹಾರವನ್ನು ಮುಂದುವರಿಸಲು ಹಾಗೂ ಠೇವಣಿಗಳನ್ನು ಸ್ವೀಕರಿಸಲು ಪ್ರಯತ್ನಿಸುತ್ತಿದ್ದವು. ಮಾರ್ಗದರ್ಶಿ ಬ್ಯಾಂಕ್ ಯೋಜನೆಯು ತೀರ ಹಿಂದುಳಿದ ಪ್ರದೇಶಗಳಲ್ಲಿ ಬ್ಯಾಂಕು ಸ್ಥಾಪನೆ ಮತ್ತು ಶಾಖಾ ವಿಸ್ತರಣೆ ನಡೆಸಿ, ಠೇವಣಿ ಸ್ವೀಕರಣೆ ಮತ್ತು ಸಾಲ ವಿತರಣೆಯ ಮೂಲಕ ಅಂತಹ ಪ್ರದೇಶಗಳಲ್ಲಿ ಅಭಿವೃದ್ಧಿಗೆ ಮಾರ್ಗದರ್ಶನ ನೀಡುವ ಪ್ರಕ್ರಿಯೆ, ಅಭಿವೃದ್ಧಿಯನ್ನು ಮುನ್ನಡೆಸುವ ಹೊಸಪ್ರಯೋಗವಾಗಿದೆ. ಮಾರ್ಗದರ್ಶಿ ಬ್ಯಾಂಕು ಇತರ ಬ್ಯಾಂಕು ಸಮೂಹಕ್ಕೆ ನಾಯಕ ಸ್ಥಾನದಲ್ಲಿರುತ್ತದೆ. ಶಾಖಾ ಬ್ಯಾಂಕ್ ರಹಿತ ಪ್ರದೇಶಗಳನ್ನು ವಿವಿಧ ಬ್ಯಾಂಕುಗಳಿಗೆ ಹಂಚಿ ಅಲ್ಲಿ ಶಾಖೆಗಳನ್ನು ತೆರೆಯುವಂತೆ ಮಾಡುವುದು, ಜಿಲ್ಲಾ ಸಾಲಯೋಜನೆಯ ರೂಪುರೇಷೆ ರಚನೆಯೂ ಸೇರಿದಂತೆ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ವಿವಿಧ ಬ್ಯಾಂಕುಗಳ ನಡುವೆ ಸಮನ್ವಯ ಸಾಧಿಸುವುದು ಇವೆಲ್ಲ ಮಾರ್ಗದರ್ಶಿ ಬ್ಯಾಂಕಿನ ಜವಾಬ್ದಾರಿ. ಮಾರ್ಗದರ್ಶಿ ಬ್ಯಾಂಕು ಪಾಲುದಾರಿಕೆ ತಂತ್ರದ ಮೂಲಕ ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸುತ್ತದೆ. ಶಾಖಾರಹಿತ ಹಿಂದುಳಿದ ಪ್ರದೇಶಗಳಲ್ಲಿ ಶಾಖಾ ವಿಸ್ತರಣೆ ನಡೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ.

ಮಾರ್ಗದರ್ಶಿ ಬ್ಯಾಂಕು ಯೋಜನೆಯು ದೇಶದ ಇತರೆಡೆಗಳಂತೆ ತುಮಕೂರು ಜಿಲ್ಲೆಯಲ್ಲೂ ಎಲ್ಲಾ ಜನರಿಗೂ ಶೇ. ೧೦೦ ರಷ್ಟು ಹಣಕಾಸಿನ ಪ್ರಯೋಜನವಾಗಬೇಕೆಂಬ ಗುರಿಯಿಂದ ಎಲ್ಲರಲ್ಲಿಯೂ ಉಳಿತಾಯ ಅಭ್ಯಾಸ ಉತ್ಪಾದನೆಗಾಗಿ ಸಾಲ ನೀಡಿಕೆಯಿಂದ ಫಲೋತ್ಪಾದಕ ಬಳಕೆ ಹಣಕಾಸಿನ ಸಾಕ್ಷರತೆ, ಸಾಲಸಾಕ್ಷರತೆ, ಮುಂತಾದ ಅರಿವು ಮೂಡಿ, ಎಲ್ಲಾ ಗ್ರಾಮಗಳೂ ಪ್ರಗತಿ ಕಾಣಬೇಕೆಂಬ ಗುರಿಯನ್ನು ಹೊಂದಿದೆ. ಎಲ್ಲರೂ ಹಣಕಾಸಿನ ಮತ್ತು ಆರ್ಥಿಕ ಜೀವನದ ಮುಖ್ಯವಾಹಿನಿಗೆ ಬರುವಂತಾಗಬೇಕು. ಅವರೆಲ್ಲ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆರ್ಥಿಕ ಸ್ವತ್ತುಗಳನ್ನು ಹೊಂದುವಂತಾಗಬೇಕು. ಈ ದೃಷ್ಟಿಯಿಂದ ಮಾರ್ಗದರ್ಶಿ ಬ್ಯಾಂಕಿನ ಸುಧಾರಣಾ ಯೋಜನೆಗಳು ಜಿಲ್ಲೆಯ ಎಲ್ಲಾ ಜನರಿಗೂ ಮಾರ್ಗದರ್ಶಿಯಾಗುವಂತಾಗಿದೆ. ತುಮಕೂರು ಜಿಲ್ಲೆಯ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಪ್ರಗತಿಗೆ ಸಂಬಂಧಿಸಿದಂತೆ ೨೦೦೯ರ ಮಾರ್ಚ್ ಅಂತ್ಯದಲ್ಲಿದ್ದ ಅಂಕಿ-ಅಂಶಗಳ ವಿವರವನ್ನು ಕೋಷ್ಟಕ ೬.೫ ಹಾಗೂ ೬.೬ ರಲ್ಲಿ, ೨೦೧೩ ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿದ್ದ ಬ್ಯಾಂಕಿಂಗ್ ವ್ಯವಸ್ಥೆಯನ್ನೂ ಕೋಷ್ಟಕ ೬.೭, ಹಾಗೂ ೬.೮ರಲ್ಲಿ ಮತ್ತು ೨೦೧೪ ರ ಚಿತ್ರಣವನ್ನು ಕೋಷ್ಟಕ ೬.೯ರಲ್ಲಿ ಬಿಂಬಿಸಲಾಗಿದೆ.

## ಕೋಷ್ಟಕ ೬.೫: ಜಿಲ್ಲೆಯಲ್ಲಿದ್ದ ಬ್ಯಾಂಕುಗಳ ಠೇವಣಿ ಮತ್ತು ಮುಂಗಡ ಸಾಲ ನೀಡಿಕೆ ಅಂಕಿ–ಅಂಶಗಳ ಪಟ್ಟಿ (೩೧–೦೩–೨೦೦೯ರ ಅಂತ್ಯಕ್ಕೆ)

(ಮೊತ್ತ ರೂ. ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆಯ ಬ್ಯಾಂಕುಗಳು | ಒಟ್ಟು ಶಾಖೆ ಗಳು | ಗ್ರಾಮೀಣ | ಪುರ ಸಭೆ | ನಗರ | ಠೇವಣಿಗಳು | ಮುಂಗಡಗಳು | ಸಾಲ/ ಠೇವಣಿಗಳ ಅನುಪಾತ (ಶೇಕಡ) |
|---|---|---|---|---|---|---|---|---|
| ೧ | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ೫೭ | ೪೦ | ೧೦ | ೭ | ೯೦೪೭೭ | ೬೮೫೨೪ | ೭೬ |
| ೨ | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | ೦೯ | ೩ | ೩ | ೩ | ೧೬೧೨೨ | ೩೧೧೭೩ | ೧೯೩ |
| ೩ | ಕೆನರಾ ಬ್ಯಾಂಕ್ | ೧೮ | ೯ | ೬ | ೩ | ೩೫೯೫೨ | ೩೪೬೫೮ | ೯೭ |
| ೪ | ಇಂಡಿಯನ್ ಓವರ್‌ಸೀಸ್ ಬ್ಯಾಂಕ್ | ೦೪ | ೨ | ೧ | ೧ | ೩೫೧೦ | ೨೫೬೬ | ೭೩ |
| ೫ | ಸಿಂಡಿಕೇಟ್ ಬ್ಯಾಂಕ್ | ೧೧ | ೪ | ೨ | ೫ | ೧೫೧೪೨ | ೧೫೨೬೮ | ೧೦೧ |
| ೬ | ವಿಜಯಾ ಬ್ಯಾಂಕ್ | ೧೧ | ೪ | ೪ | ೨ | ೧೨೮೮೫ | ೭೭೩೦ | ೬೦ |
| ೭ | ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್ | ೦೧ | – | – | ೦೧ | ೯೬೪ | ೮೪೩ | ೮೭ |
| ೮ | ಅಲಹಾಬಾದ್ ಬ್ಯಾಂಕ್ | ೦೧ | ೦ | ೦ | ೦೧ | ೨೫೧೩ | ೩೫೯೫ | ೧೪೩ |
| ೯ | ಇಂಡಿಯನ್ ಬ್ಯಾಂಕ್ | ೦೧ | – | – | ೦೧ | ೧೯೫೨ | ೪೭೮ | ೨೪ |
| ೧೦ | ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ | ೦೧ | – | – | ೦೧ | ೧೬೦೧ | ೯೨೬ | ೫೮ |
| ೧೧ | ಪಂಜಾಬ್ ನ್ಯಾಷನಲ್ ಬ್ಯಾಂಕ್ | ೦೧ | – | – | ೧ | ೮೧೬ | ೧೪೭೭ | ೧೮೧ |
| ೧೨ | ಯುಕೊ ಬ್ಯಾಂಕ್ | ೦೧ | – | – | ೧ | ೨೪೪೦ | ೧೮೬೪ | ೭೭ |
| ೧೩ | ಕಾರ್ಪೋರೇಷನ್ ಬ್ಯಾಂಕ್ | ೦೨ | – | – | ೨ | ೪೩೨೬ | ೨೬೮೩ | ೬೨ |
| ೧೪ | ಬ್ಯಾಂಕ್ ಆಫ್ ಮಹಾರಾಷ್ಟ್ರ | ೦೧ | – | – | ೦೧ | ೪೨೪ | ೭೫೨ | ೧೭೭ |
| ೧೫ | ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ | ೦೧ | – | – | ೧ | ೩೧೧ | ೬೬ | ೨೧ |
| ೧೬ | ಬ್ಯಾಂಕ್ ಆಫ್ ಇಂಡಿಯಾ | ೦೧ | – | – | ೦೧ | ೫೭೦ | ೪೦೯ | ೭೨ |
| ೧೭ | ಬ್ಯಾಂಕ್ ಆಫ್ ಬರೋಡ | ೦೧ | – | – | ೦೧ | ೭೯೬ | ೮೦೨ | ೧೦೧ |
| ೧೮ | ಕರ್ನಾಟಕ ಬ್ಯಾಂಕ್ | ೧೫ | ೫ | ೭ | ೩ | ೩೩೨೬೧ | ೮೪೫೨ | ೨೫ |
| ೧೯ | ಐ.ಎನ್.ಜಿ. ವೈಶ್ಯ ಬ್ಯಾಂಕ್ | ೦೪ | ೧ | ೨ | ೧ | ೫೬೯೦ | ೨೬೫೩ | ೪೭ |
| ೨೦ | ಕರೂರು ವೈಶ್ಯ ಬ್ಯಾಂಕ್ | ೦೧ | – | – | ೦೧ | ೧೭೬೮ | ೧೬೯೧ | ೯೬ |
| ೨೧ | ಧನಲಕ್ಷ್ಮಿ ಬ್ಯಾಂಕ್ | ೦೧ | – | – | ೦೧ | ೭೨೦ | ೪೮೫ | ೬೭ |
| ೨೨ | ಸಿಟಿ ಯೂನಿಯನ್ ಬ್ಯಾಂಕ್ | ೦೨ | – | – | ೦೨ | ೨೪೮೫ | ೧೦೦೧ | ೪೦ |
| ೨೩ | ಎಕ್ಸಿಸ್ ಬ್ಯಾಂಕ್ | ೦೧ | – | – | ೦೧ | ೩೬೦೪ | ೨೩೬೩ | ೬೬ |
| ೨೪ | ಫೆಡರಲ್ ಬ್ಯಾಂಕ್ | ೦೧ | – | – | ೦೧ | ೩೦೫ | ೬೬೭ | ೨೧೯ |
| ೨೫ | ಆಂಧ್ರ ಬ್ಯಾಂಕ್ | ೦೧ | – | – | ೦೧ | ೧೩೩ | ೨೪ | ೧೮ |
| ೨೬ | ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್ | ೪೫ | ೩೩ | ೯ | ೩ | ೨೪೫೦೦ | ೩೪೮೧೩ | ೧೪೨ |
| ೨೭ | ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಕ್ಯಾಸ್ಕರ್ಡ್) | ೧೦ | ೯ | ೧ | – | – | ೬೫೯೦ | – |
| ೨೮ | ತುಮಕೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ | ೨೨ | ೧೦ | ೯ | ೬೩ | ೧೪೯೪೦ | ೨೦೫೩೦ | ೧೩೭ |
| ೨೯ | ಕೆ.ಎಸ್.ಎಫ್.ಸಿ. | ೦೧ | – | – | ೦೧ | ೫ | ೪೭೨೩ | ೫ |
| ಒಟ್ಟು | | ೨೨೬ | ೧೨೦ | ೫೪ | ೧೧೧ | ೨೭೮೨೧೨ | ೨೫೭೮೦೯ | ೨೪೬೫ |

## ಕೋಷ್ಟಕ ೬.೬: ೨೦೦೯ರಲ್ಲಿ ಜಿಲ್ಲೆಯಲ್ಲಿದ್ದ ಬ್ಯಾಂಕುಗಳ ಠೇವಣಿ ಮತ್ತು ಮುಂಗಡ ಸಾಲ ನೀಡಿಕೆ ವಿವರ (ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆಯ ಬ್ಯಾಂಕುಗಳು | ಶಾಖೆಗಳ ಸಂಖ್ಯೆ | ಕೃಷಿ ವಲಯ | | ಸಣ್ಣ ಕೈಗಾರಿಕಾ ವಲಯ | |
|---|---|---|---|---|---|---|
| | | | ಖಾತೆ ಸಂಖ್ಯೆ | ಒಟ್ಟು ಮೊತ್ತ | ಖಾತೆ ಸಂಖ್ಯೆ | ಒಟ್ಟು ಮೊತ್ತ |
| ೧ | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ೫೭ | ೩೫೫೮೩ | ೩೩೦೭೭ | ೮೩೦೮ | ೬೯೪೨ |
| ೨ | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | ೦೯ | ೬೯೩೧ | ೯೬೯೧ | ೩೮೨ | ೫೮೭೨ |
| ೩ | ಕೆನರಾ ಬ್ಯಾಂಕ್ | ೧೮ | ೩೩೬೫೩ | ೧೮೯೮೭ | ೨೧೪೨ | ೨೫೬೭ |
| ೪ | ಇಂಡಿಯನ್ ಓವರ್‌ಸೀಸ್ ಬ್ಯಾಂಕ್ | ೦೪ | ೧೮೨೯ | ೮೨೦ | ೬೧ | ೧೪೭ |
| ೫ | ಸಿಂಡಿಕೇಟ್ ಬ್ಯಾಂಕ್ | ೧೧ | ೩೩೧೫ | ೩೫೬೬ | ೧೧೧೧ | ೧೦೭೫ |
| ೬ | ವಿಜಯಾ ಬ್ಯಾಂಕ್ | ೧೦ | ೩೯೩೩ | ೪೭೭೮ | ೧೩೨೫ | ೪೩೨ |
| ೭ | ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್ | ೦೧ | ೨೮ | ೧೩೬ | ೨೬ | ೨೦೧ |
| ೮ | ಅಲಹಾಬಾದ್ ಬ್ಯಾಂಕ್ | ೦೧ | ೨೮೨ | ೫೯೦ | ೪೩ | ೫೦೮ |
| ೯ | ಇಂಡಿಯನ್ ಬ್ಯಾಂಕ್ | ೦೧ | ೧೯೦ | ೨೫೨ | ೦ | ೦ |
| ೧೦ | ಯುನೈಟೆಡ್ ಬ್ಯಾಂಕ್‌ಆಫ್ ಇಂಡಿಯಾ | ೦೧ | ೫೩ | ೧೦೫ | ೩೪ | ೬೧ |
| ೧೧ | ಪಂಜಾಬ್ ನ್ಯಾಷನಲ್ ಬ್ಯಾಂಕ್ | ೦೧ | ೫ | ೬ | ೧೫ | ೬೭ |
| ೧೨ | ಯುಕೊ ಬ್ಯಾಂಕ್ | ೦೧ | ೨೧೫ | ೬೦೭ | ೨೮ | ೨೦೮ |
| ೧೩ | ಕಾರ್ಪೋರೇಷನ್ ಬ್ಯಾಂಕ್ | ೦೨ | ೭೧೭ | ೭೫೦ | ೧೦೧ | ೧೦೦ |
| ೧೪ | ಬ್ಯಾಂಕ್ ಆಫ್ ಮಹಾರಾಷ್ಟ್ರ | ೦೧ | ೬೪ | ೧೨೦ | ೨೩ | ೬೬ |
| ೧೫ | ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ | ೦೧ | ೬ | ೧೨ | ೦ | ೦ |
| ೧೬ | ಬ್ಯಾಂಕ್ ಆಫ್ ಇಂಡಿಯಾ | ೦೧ | ೧ | ೧೫ | ೭ | ೧೬ |
| ೧೭ | ಬ್ಯಾಂಕ್ ಆಫ್ ಬರೋಡ | ೦೧ | ೨ | ೭ | ೩ | ೧೭ |
| ೧೮ | ಕರ್ನಾಟಕ ಬ್ಯಾಂಕ್ | ೧೫ | ೪೦೪೦ | ೧೭೧೫ | ೧೦೧ | ೨೭೬ |
| ೧೯ | ಐ.ಎನ್.ಜಿ. ವೈಶ್ಯ ಬ್ಯಾಂಕ್ | ೦೪ | ೧೪೩೮ | ೧೬೬೨ | ೫೧೬ | ೪೯೭ |
| ೨೦ | ಕರೂರು ವೈಶ್ಯ ಬ್ಯಾಂಕ್ | ೦೧ | ೪೧೮ | ೨೨೬ | ೫ | ೨೩೩ |
| ೨೧ | ಧನಲಕ್ಷ್ಮಿ ಬ್ಯಾಂಕ್ | ೦೧ | ೧೧೫ | ೯೫ | ೧ | ೨೦ |
| ೨೨ | ಸಿಟಿ ಯೂನಿಯನ್ ಬ್ಯಾಂಕ್ | ೦೨ | ೧೭೬ | ೨೧೨ | ೧೯ | ೧ |
| ೨೩ | ಎಕ್ಸಿಸ್ ಬ್ಯಾಂಕ್ | ೦೧ | ೫೫೭ | ೧೯೭೧ | ೦ | ೦ |
| ೨೪ | ಫೆಡರಲ್ ಬ್ಯಾಂಕ್ | ೦೧ | ೨೮ | ೬೩ | ೨೮ | ೨೭೨ |
| ೨೫ | ಆಂಧ್ರ ಬ್ಯಾಂಕ್ | ೦೧ | – | – | – | – |
| ೨೬ | ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್ | ೪೫ | ೩೮೮೨೭ | ೨೦೫೨೬ | ೨೧೩೩ | ೭೫೨ |
| ೨೭ | ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಕ್ಯಾಸ್ಕರ್ಡ್) | ೧೦ | ೪೬೯೮೯ | ೫೭೪೦ | ೧೭೨೦ | ೬೨೩ |
| ೨೮ | ತುಮಕೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ | ೨೨ | ೩೯೨೯೯ | ೮೨೫೫ | ೩೦ | ೧೦೦ |
| ೨೯ | ಕೆ.ಎಸ್.ಎಫ್.ಸಿ. | ೦೧ | ೦ | ೦ | ೪೬೪ | ೪೬೫೦ |
| ಒಟ್ಟು | | **೨೨೫** | **೨೧೮೬೯೪** | **೧೧೩೯೮೪** | **೧೮೬೨೬** | **೨೫೭೦೩** |

**ಕೋಷ್ಟಕ ೬.೬** (ಮುಂದು.....)

| ಕ್ರ. ಸಂ | ಜಿಲ್ಲೆಯ ಬ್ಯಾಂಕುಗಳು | ಆದ್ಯತಾ ವಲಯ | |
|---|---|---|---|
| | | ಖಾತೆ ಸಂಖ್ಯೆ | ಒಟ್ಟು ಮೊತ್ತ |
| ೧ | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ೪೬೦೯೬ | ೪೭೧೭೬ |
| ೨ | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | ೧೦೭೩೮ | ೨೪೮೨೧ |
| ೩ | ಕೆನರಾ ಬ್ಯಾಂಕ್ | ೪೧೦೩೬ | ೨೭೫೪೪ |
| ೪ | ಇಂಡಿಯನ್ ಓವರ್‌ಸೀಸ್ ಬ್ಯಾಂಕ್ | ೨೯೩೦ | ೨೦೭೭ |
| ೫ | ಸಿಂಡಿಕೇಟ್ ಬ್ಯಾಂಕ್ | ೭೩೪೯ | ೧೦೨೨೪ |
| ೬ | ವಿಜಯಾ ಬ್ಯಾಂಕ್ | ೭೦೪೬ | ೬೯೩೧ |
| ೭ | ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್ | ೨೪೪ | ೬೩೨ |
| ೮ | ಅಲಹಾಬಾದ್ ಬ್ಯಾಂಕ್ | ೮೨೧ | ೨೪೧೮ |
| ೯ | ಇಂಡಿಯನ್ ಬ್ಯಾಂಕ್ | ೧೯೦ | ೨೫೨ |
| ೧೦ | ಯುನೈಟೆಡ್ ಬ್ಯಾಂಕ್‌ಆಫ್ ಇಂಡಿಯಾ | ೩೦೬ | ೫೬೦ |
| ೧೧ | ಪಂಜಾಬ್ ನ್ಯಾಷನಲ್ ಬ್ಯಾಂಕ್ | ೨೬೭ | ೧೧೫೨ |
| ೧೨ | ಯುಕೊ ಬ್ಯಾಂಕ್ | ೧೨೨೩ | ೧೮೩೫ |
| ೧೩ | ಕಾರ್ಪೋರೇಷನ್ ಬ್ಯಾಂಕ್ | ೧೨೮೨ | ೧೮೫೩ |
| ೧೪ | ಬ್ಯಾಂಕ್ ಆಫ್ ಮಹಾರಾಷ್ಟ್ರ | ೩೮೮ | ೬೫೮ |
| ೧೫ | ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ | ೬ | ೧೨ |
| ೧೬ | ಬ್ಯಾಂಕ್ ಆಫ್ ಇಂಡಿಯಾ | ೩೨೯ | ೩೩೪ |
| ೧೭ | ಬ್ಯಾಂಕ್ ಆಫ್ ಬರೋಡ | ೫೧ | ೨೯೯ |
| ೧೮ | ಕರ್ನಾಟಕ ಬ್ಯಾಂಕ್ | ೫೮೨೧ | ೪೭೩೮ |
| ೧೯ | ಐ.ಎನ್.ಜಿ. ವೈಶ್ಯ ಬ್ಯಾಂಕ್ | ೨೦೬೯ | ೨೨೦೨ |
| ೨೦ | ಕರೂರು ವೈಶ್ಯ ಬ್ಯಾಂಕ್ | ೫೧೨ | ೬೫೫ |
| ೨೧ | ಧನಲಕ್ಷ್ಮಿ ಬ್ಯಾಂಕ್ | ೧೩೧ | ೨೩೮ |
| ೨೨ | ಸಿಟಿ ಯೂನಿಯನ್ ಬ್ಯಾಂಕ್ | ೩೫೬ | ೨೨೧ |
| ೨೩ | ಎಕ್ಸಿಸ್ ಬ್ಯಾಂಕ್ | ೫೫೭ | ೧೯೭೧ |
| ೨೪ | ಫೆಡರಲ್ ಬ್ಯಾಂಕ್ | ೭೧ | ೪೦೨ |
| ೨೫ | ಆಂಧ್ರ ಬ್ಯಾಂಕ್ | – | – |
| ೨೬ | ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್ | ೫೫೪೨೦ | ೩೦೧೯೮ |
| ೨೭ | ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ | ೪೮೭೦೯ | ೬೩೬೩ |
| ೨೮ | ತುಮಕೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ | ೪೧೨೬೯ | ೧೨೨೭೩ |
| ೨೯ | ಕೆ.ಎಸ್.ಎಫ್.ಸಿ. | ೪೬೮ | ೪೬೬೧ |
| | ಒಟ್ಟು | **೨೭೫೬೮೫** | **೧೯೨೭೦೦** |

**ಕೋಷ್ಟಕ ೬.೭: ಜಿಲ್ಲೆಯಲ್ಲಿದ್ದ ರಾಷ್ಟ್ರೀಕೃತ ಬ್ಯಾಂಕು ಹಾಗೂ ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳ ವಿವರ**
**(೩೧-೩-೨೦೧೩ ರಲ್ಲಿದ್ದಂತೆ)**

(ರೂ. ಲಕ್ಷ ಗಳಲ್ಲಿ)

| ಕ್ರ.ಸಂ | ತಾಲೂಕುಗಳು | ರಾಷ್ಟ್ರೀಕೃತ ಬ್ಯಾಂಕುಗಳು | | | | |
|---|---|---|---|---|---|---|
| | | ಶಾಖೆಗಳ ಸಂಖ್ಯೆ | ಕೃಷಿ ಸಾಲ | ಇತರೆ ಸಾಲ | ಒಟ್ಟು ಸಾಲ | ಠೇವಣಿ |
| ೧ | ಚಿಕ್ಕನಾಯಕನಹಳ್ಳಿ | ೦೯ | ೪೧೬೬ | ೧೧೧೨ | ೫೨೭೮ | ೧೪೧೬೭ |
| ೨ | ಗುಬ್ಬಿ | ೧೪ | ೧೦೩೬೯ | ೨೭೮೨ | ೧೩೧೫೧ | ೨೫೬೫೪ |
| ೩ | ಕೊರಟಗೆರೆ | ೦೬ | ೪೨೦೦ | ೧೨೧೭ | ೫೪೧೭ | ೧೨೪೫೪ |
| ೪ | ಕುಣಿಗಲ್ | ೧೭ | ೧೨೯೮೪ | ೩೫೭೨ | ೧೬೫೫೬ | ೨೭೨೨೨ |
| ೫ | ಮಧುಗಿರಿ | ೧೪ | ೮೨೫೭ | ೪೧೫೭ | ೧೨೪೧೪ | ೨೨೧೭೦ |
| ೬ | ಪಾವಗಡ | ೦೯ | ೮೧೬೧ | ೧೫೪೨ | ೯೭೦೩ | ೧೨೬೨೨ |
| ೭ | ಶಿರಾ | ೧೩ | ೧೧೮೪೫ | ೩೪೫೭ | ೧೫೩೦೨ | ೨೧೩೨೫ |
| ೮ | ತಿಪಟೂರು | ೨೦ | ೯೭೯೭ | ೮೪೪೨ | ೧೮೨೩೯ | ೪೬೯೨೯ |
| ೯ | ತುಮಕೂರು | ೬೨ | ೨೪೮೯೭ | ೪೬೧೩೪ | ೭೧೦೩೧ | ೨೮೨೦೫ |
| ೧೦ | ತುರುವೇಕೆರೆ | ೧೩ | ೧೧೪೨೭ | ೨೫೦೧ | ೧೩೯೨೮ | ೨೦೨೩೩ |
| **ಜಿಲ್ಲಾ ಮೊತ್ತ** | | **೧೭೭** | **೧೦೬೧೦೩** | **೭೪೯೧೬** | **೧೮೧೦೧೯** | **೨೩೦೯೮೧** |

| ಕ್ರ.ಸಂ | ತಾಲೂಕುಗಳು | ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳು | | | | |
|---|---|---|---|---|---|---|
| | | ಶಾಖೆಗಳ ಸಂಖ್ಯೆ | ಕೃಷಿ ಸಾಲ | ಇತರೆ ಸಾಲ | ಒಟ್ಟು ಸಾಲ | ಠೇವಣಿ |
| ೧ | ಚಿಕ್ಕನಾಯಕನಹಳ್ಳಿ | ೦೭ | ೧೬೮೨ | ೫೬೬ | ೨೨೪೮ | ೫೦೯೫ |
| ೨ | ಗುಬ್ಬಿ | ೦೫ | ೨೨೯೯ | ೭೫೫ | ೩೦೫೪ | ೪೫೨೬ |
| ೩ | ಕೊರಟಗೆರೆ | ೦೪ | ೧೩೦೮ | ೬೩೫ | ೧೯೪೩ | ೫೦೪೭ |
| ೪ | ಕುಣಿಗಲ್ | ೦೪ | ೯೫೨ | ೩೩೭ | ೧೨೮೯ | ೨೩೯೪ |
| ೫ | ಮಧುಗಿರಿ | ೦೪ | ೭೧೩ | ೬೦೧ | ೧೩೧೪ | ೫೧೬೪ |
| ೬ | ಪಾವಗಡ | ೦೫ | ೨೮೯೪ | ೪೭೦ | ೩೩೬೪ | ೫೧೮೩ |
| ೭ | ಶಿರಾ | ೦೩ | ೧೧೮೦ | ೧೭ | ೧೧೯೭ | ೨೬೧೯ |
| ೮ | ತಿಪಟೂರು | ೦೪ | ೧೦೧೦ | ೪೫೩ | ೧೪೬೩ | ೨೮೩೪ |
| ೯ | ತುಮಕೂರು | ೧೨ | ೨೧೩೩ | ೧೫೧೮ | ೩೬೫೧ | ೧೭೩೭೨ |
| ೧೦ | ತುರುವೇಕೆರೆ | ೦೨ | ೧೫೧೦ | ೪೫೨ | ೧೯೬೨ | ೩೪೦೪ |
| **ಜಿಲ್ಲಾ ಮೊತ್ತ** | | **೫೦** | **೧೫೬೮೧** | **೫೮೦೪** | **೨೧೪೮೫** | **೫೩೬೩೮** |

ಆಧಾರ: ತುಮಕೂರು ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೪, ತುಮಕೂರು.

## ಕೋಷ್ಟಕ ೬.೮: ಜಿಲ್ಲೆಯ ಬ್ಯಾಂಕುಗಳ ಸಾಲ – ಠೇವಣಿ ಅನುಪಾತದ ವಿವರ (೩೧–೩–೨೦೧೩ ರಲ್ಲಿದ್ದಂತೆ)

(ರೂ. ಲಕ್ಷ ಗಳಲ್ಲಿ)

| ಬ್ಯಾಂಕುಗಳು | | | | | | | | | |
|---|---|---|---|---|---|---|---|---|---|
| ಕ್ರ.ಸಂ | ತಾಲೂಕುಗಳು | ಒಟ್ಟು ಬ್ಯಾಂಕುಗಳು | | | | | ಒಟ್ಟು ಸಾಲಗಳು/ಠೇವಣಿಗಳ ಅನುಪಾತ | | |
| | | ಶಾಖೆಗಳ ಸಂಖ್ಯೆ | ಕೃಷಿ ಸಾಲ | ಇತರೆ ಸಾಲ | ಒಟ್ಟು ಸಾಲ | ಠೇವಣಿ | ಒಟ್ಟು ಠೇವಣಿಗಳು | ಒಟ್ಟು ಸಾಲಗಳು | ಒಟ್ಟು ಕೃಷಿ ಸಾಲಗಳು |
| ೧ | ಚಿಕ್ಕನಾಯಕನಹಳ್ಳಿ | ೨೦ | ೮೦೨೭ | ೧೮೦೨ | ೯೮೨೯ | ೨೧೭೭೬ | ೨೧೮ | ೨೭೯ | ೮೦೨೭ |
| ೨ | ಗುಬ್ಬಿ | ೨೧ | ೧೪೫೦೨ | ೩೫೪೦ | ೧೮೦೪೨ | ೩೧೯೮೪ | ೩೨೦ | ೪೧೧ | ೧೪೫೦೨ |
| ೩ | ಕೊರಟಗೆರೆ | ೧೨ | ೬೨೨೮ | ೨೫೫೬ | ೮೭೮೪ | ೧೮೭೮೧ | ೧೮೮ | ೨೦೧ | ೬೨೨೮ |
| ೪ | ಕುಣಿಗಲ್ | ೨೪ | ೧೪೯೦೯ | ೪೪೪೮ | ೧೯೩೫೭ | ೩೨೦೩೯ | ೩೨೦ | ೩೮೦ | ೧೪೯೦೯ |
| ೫ | ಮಧುಗಿರಿ | ೨೨ | ೧೩೦೧೫ | ೭೦೦೯ | ೨೦೦೨೪ | ೩೦೬೦೩ | ೩೦೬ | ೩೧೮ | ೧೩೦೧೫ |
| ೬ | ಪಾವಗಡ | ೧೭ | ೧೨೪೦೩ | ೨೫೪೨ | ೧೪೯೪೫ | ೧೯೪೦೪ | ೧೯೪ | ೨೯೧ | ೧೨೪೦೩ |
| ೭ | ಶಿರಾ | ೧೯ | ೧೪೬೬೮ | ೪೨೬೬ | ೧೮೯೩೪ | ೨೫೬೬೦ | ೨೫೭ | ೪೪೭ | ೧೪೬೬೮ |
| ೮ | ತಿಪಟೂರು | ೨೭ | ೧೩೫೭೯ | ೯೬೯೧ | ೨೩೨೭೦ | ೫೩೯೧೭ | ೫೩೯ | ೪೯೪ | ೧೩೫೭೯ |
| ೯ | ತುಮಕೂರು | ೮೦ | ೩೦೭೨೭ | ೫೧೮೫೩ | ೮೨೫೮೦ | ೩೮೯೦೫ | ೨೬೫೫ | ೨೧೬೫ | ೩೦೭೨೭ |
| ೧೦ | ತುರುವೇಕೆರೆ | ೧೮ | ೧೪೭೪೬ | ೪೨೬೪ | ೧೯೦೧೦ | ೨೭೩೨೨ | ೨೭೩ | ೨೯೭ | ೧೪೭೪೬ |

| ಕ್ರ.ಸಂ | ತಾಲೂಕುಗಳು | ಸಹಕಾರ ಮತ್ತು ಕೃಷಿ ಮಾರಾಟ ಪತ್ತಿನ ಸಹಕಾರ ಸಂಘಗಳು | | | | | |
|---|---|---|---|---|---|---|---|
| | | ವ್ಯವಸಾಯ | | ವ್ಯವಸಾಯೇತರ | | ಒಟ್ಟು | |
| | | ಸಂಘ | ಸದಸ್ಯರು | ಸಂಘ | ಸದಸ್ಯರು | ಸಂಘ | ಸದಸ್ಯರು |
| ೧ | ಚಿಕ್ಕನಾಯಕನಹಳ್ಳಿ | ೨೧ | ೩೯೯೫೩ | ೧೫ | ೧೦೯೩೬ | ೩೬ | ೫೦೮೮೯ |
| ೨ | ಗುಬ್ಬಿ | ೨೬ | ೨೩೧೧೧ | ೦೯ | ೫೯೧೬ | ೩೫ | ೨೯೦೨೭ |
| ೩ | ಕೊರಟಗೆರೆ | ೧೬ | ೨೫೩೧೧ | ೦೨ | ೭೯೦ | ೧೮ | ೨೬೧೦೧ |
| ೪ | ಕುಣಿಗಲ್ | ೧೯ | ೩೫೫೫೭ | ೦೯ | ೫೪೩೫ | ೨೮ | ೪೦೯೯೨ |
| ೫ | ಮಧುಗಿರಿ | ೨೫ | ೪೦೨೦೦ | ೦೩ | ೧೪೧೮ | ೨೮ | ೪೧೬೧೮ |
| ೬ | ಪಾವಗಡ | ೨೦ | ೪೩೫೮೨ | ೦೪ | ೨೨೦೩ | ೨೪ | ೪೫೭೮೫ |
| ೭ | ಶಿರಾ | ೩೧ | ೫೮೬೦೩ | ೧೩ | ೨೧೮೬೦ | ೪೪ | ೮೦೪೬೩ |
| ೮ | ತಿಪಟೂರು | ೨೩ | ೨೫೫೫೩ | ೧೬ | ೧೩೮೨೯ | ೩೯ | ೩೯೩೮೨ |
| ೯ | ತುಮಕೂರು | ೩೧ | ೩೩೧೦೧ | ೬೩ | ೬೦೫೪೩ | ೯೪ | ೯೩೬೪೪ |
| ೧೦ | ತುರುವೇಕೆರೆ | ೨೪ | ೨೫೪೦೧ | ೦೪ | ೧೧೬೩೪ | ೨೮ | ೩೭೦೩೫ |
| ಜಿಲ್ಲಾ ಮೊತ್ತ | | ೨೩೬ | ೩೫೦೩೭೨ | ೧೩೮ | ೧೩೪೫೬೪ | ೩೭೪ | ೪೮೪೯೩೬ |

ಆಧಾರ: ತುಮಕೂರು ಜಿಲ್ಲಾ ಅಂಕಿ–ಅಂಶಗಳ ನೋಟ ೨೦೧೪, ತುಮಕೂರು.

## ಕೋಷ್ಟಕ ೬.೯: ಜಿಲ್ಲೆಯಲ್ಲಿದ್ದ ರಾಷ್ಟ್ರೀಕೃತ ಬ್ಯಾಂಕು, ಪ್ರಾಂತೀಯ ಗ್ರಾಮೀಣ ಬ್ಯಾಂಕು ಹಾಗೂ ಖಾಸಗಿ ಬ್ಯಾಂಕುಗಳ ವಿವರ (೩೧-೩- ೨೦೧೪)ರಲ್ಲಿದಂತೆ

| ಕ್ರ.ಸಂ | ತಾಲೂಕುಗಳು | ರಾಷ್ಟ್ರೀಕೃತ ಬ್ಯಾಂಕುಗಳು | | | | | ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳು | | | | | ಖಾಸಗಿ ವಲಯದ ಬ್ಯಾಂಕುಗಳು | | |
|---|---|---|---|---|---|---|---|---|---|---|---|---|---|---|
| | | ಶಾಖೆಗಳ ಸಂಖ್ಯೆ | ಕೃಷಿ ಸಾಲ | ಇತರೆ ಸಾಲ | ಒಟ್ಟು ಸಾಲ | ಠೇವಣಿ | ಶಾಖೆಗಳ ಸಂಖ್ಯೆ | ಕೃಷಿ ಸಾಲ | ಇತರೆ ಸಾಲ | ಒಟ್ಟು ಸಾಲ | ಠೇವಣಿ | ಶಾಖೆಗಳ ಸಂಖ್ಯೆ | ಇತರೆ ಸಾಲ | ಠೇವಣಿ |
| ೧ | ಚಿಕ್ಕನಾಯಕನಹಳ್ಳಿ | ೮ | – | – | ೧೭೭೦೭ | ೧೬೩೮೬ | ೭ | ೬೯೨೪ | ೨೩೧೭ | ೯೨೪೧ | ೬೦೦೮ | – | – | – |
| ೨ | ಗುಬ್ಬಿ | ೧೩ | – | – | ೩೧೯೮೬ | ೧೮೫೨೧ | ೭ | ೧೦೯೭೦ | ೨೩೪೬ | ೧೩೩೧೬ | ೫೪೮೬ | ೧ | ೨೭೩೪ | ೧೫೩೩ |
| ೩ | ಕೊರಟಗೆರೆ | ೬ | – | – | ೧೨೮೪೦ | ೧೦೨೩೧ | ೫ | ೪೫೧೧ | ೧೭೦೩ | ೬೨೧೪ | ೫೯೫೪ | ೧ | ೩೪೯೮ | ೧೮೮೯ |
| ೪ | ಕುಣಿಗಲ್ | ೧೬ | – | – | ೨೭೪೩೩ | ೨೮೦೪೮ | ೫ | ೪೭೧೫ | ೧೫೫೩ | ೬೨೬೮ | ೩೨೦೪ | ೧ | ೭೬೦ | ೧೩೩೯ |
| ೫ | ಮಧುಗಿರಿ | ೧೧ | – | – | ೧೬೫೧೬ | ೧೮೧೭೯ | ೬ | ೪೭೩೨ | ೨೬೬೬ | ೭೩೯೮ | ೬೪೨೫ | ೩ | ೬೪೯೫ | ೧೬೧೪ |
| ೬ | ಪಾವಗಡ | ೭ | – | – | ೧೮೭೪೪ | ೧೧೫೧೩ | ೫ | ೮೩೯೬ | ೧೨೯೦ | ೯೬೮೬ | ೫೫೩೩ | ೩ | ೩೮೯೧ | ೫೭೦೩ |
| ೭ | ಶಿರಾ | ೧೪ | – | – | ೪೧೯೦೩ | ೨೨೯೮೦ | ೩ | ೫೭೩೯ | ೨೨೯೬ | ೮೦೩೫ | ೩೬೩೦ | ೧ | ೭೪೮ | ೮೧೧ |
| ೮ | ತಿಪಟೂರು | ೧೨ | – | – | ೩೬೮೬೧ | ೩೩೦೯೬ | ೫ | ೪೦೦೭ | ೧೪೦೭ | ೫೪೧೪ | ೩೫೩೦ | ೯ | ೧೮೫೩೫ | ೯೭೪೦ |
| ೯ | ತುಮಕೂರು | ೪೯ | – | – | ೧೭೩೧೭೯ | ೨೦೮೬೦೮ | ೧೬ | ೯೧೦೮ | ೧೦೩೫೧ | ೧೯೪೫೯ | ೩೪೨೭೬ | ೧೩ | ೫೩೬೨೭ | ೪೬೯೦೧ |
| ೧೦ | ತುರುವೇಕೆರೆ | ೧೨ | – | – | ೨೩೭೫೩ | ೧೯೭೫೦ | ೩ | ೩೨೮೯ | ೮೭೬ | ೪೧೬೫ | ೨೩೬೭ | ೧ | ೩೩೨೯ | ೧೬೧೧ |
| ಜಿಲ್ಲಾ ಮೊತ್ತ | | ೧೪೮ | – | – | ೪೦೯೨೨ | ೩೮೭೩೦೨ | ೬೨ | ೬೨೩೯೧ | ೨೬೮೦೫ | ೮೯೧೬೯ | ೭೬೪೧೩ | ೩೩ | ೯೩೬೧೭ | ೭೧೧೪೧ |

ಆಧಾರ: ತುಮಕೂರು ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೫, ತುಮಕೂರು

ತುಮಕೂರು ಜಿಲ್ಲೆಯ ಮಾರ್ಗದರ್ಶಿ ಬ್ಯಾಂಕಾದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ೨೦೦೯–೧೦ನೇ ಸಾಲಿನ ಒಟ್ಟು ಸಾಲ ಯೋಜನೆ ರೂ.೧,೦೬೩.೭೧ ಕೋಟಿ ಆಗಿದ್ದು, ಆದ್ಯತಾ ವಲಯದ ಸಾಲಗಳಿಗೆ ೯೦೦.೩೧ ಕೋಟಿ ರೂ. ಗಳನ್ನು ವಿತರಿಸುವ ಉದ್ದೇಶವನ್ನು ಹಮ್ಮಿಕೊಂಡಿತ್ತು. ಈ ಮೊತ್ತವನ್ನು ಕೋಷ್ಟಕ ೬.೧೦ ರಲ್ಲಿ ನಮೂದಿಸಿದ ವಿವಿಧ ಯೋಜನೆಯಡಿಗಳಲ್ಲಿ ವಿತರಿಸಲು ಯೋಜಿಸಲಾಗಿತ್ತು.

### ಕೋಷ್ಟಕ ೬.೧೦: ೨೦೦೯–೧೦ನೇ ಸಾಲಿನ ಜಿಲ್ಲಾ ಸಾಲ ಯೋಜನೆಯ ವಿವಿಧ ಆದ್ಯತಾ ವಲಯಗಳಿಗೆ ಸಾಲ ಹಂಚಿಕೆ

| ಕ್ರ. ಸಂ | ಸಾಲದ ವಿವರ | ಮೊತ್ತ ಕೋಟಿ ರೂ.ಗಳಲ್ಲಿ |
|---|---|---|
| ೧ | ಬೆಳೆ ಸಾಲ | ೩೫೦.೬೫ |
| ೨ | ಸಣ್ಣ ನೀರಾವರಿ | ೨೨.೬೧ |
| ೩ | ಭೂ ಅಭಿವೃದ್ಧಿ | ೪೩.೯೭ |
| ೪ | ಕೃಷಿ ಯಾಂತ್ರೀಕರಣ | ೫೯.೦೪ |
| ೫ | ತೋಟಗಾರಿಕೆ | ೨೭.೯೯ |
| ೬ | ಇತರೆ | ೭.೮೯ |
| ೭ | ಹೈನುಗಾರಿಕೆ | ೨೨.೬೭ |
| ೮ | ಕೋಳಿಸಾಕಾಣಿಕೆ | ೫.೪೦ |
| ೯ | ಕುರಿ, ಮೇಕೆ, ಹಂದಿ ಸಾಕಾಣಿಕೆ | ೪.೬೫ |
| ೧೦ | ಮೀನುಗಾರಿಕೆ | ೦.೧೨ |
| ೧೧ | ಅರಣ್ಯಾಭಿವೃದ್ಧಿ | ೮.೦೭ |
| ೧೨ | ಗುಡಿ ಮತ್ತು ಸಣ್ಣ ಕೈಗಾರಿಕೆ | ೭೪.೦೪ |
| ೧೩ | ವ್ಯಾಪಾರ ಮತ್ತು ಇತರೆ ಸೇವೆ | ೨೭೨.೯೨ |
|  | ಒಟ್ಟು ಆದ್ಯತಾ ವಲಯ | ೯೦೦.೩೧ |
|  | ಆದ್ಯತಾವಲಯಕ್ಕೊಳಪಡದ ಇತರೇ ಯೋಜನೆ | ೧೬೩.೪೦ |
| ಒಟ್ಟು | | ೧೯೬೩.೭೩ |

ಈ ಸಾಲ ಯೋಜನೆಯು ಶೇ. ೬೧ ಭಾಗ ಕೃಷಿ, ಶೇ. ೮ ಭಾಗ ಕೈಗಾರಿಕಾ ವಲಯಕ್ಕೆ ಹಾಗೂ ಶೇ. ೩೧ ಭಾಗ ವ್ಯಾಪಾರ ಮತ್ತು ಸೇವಾವಲಯವನ್ನು ಒಳಗೊಂಡಿತ್ತು. ಹೆಚ್ಚಿನ ವಿವರಗಳಿಗೆ ಕೋಷ್ಠಕ ೬.೧೧ ರಲ್ಲಿ ನೋಡಿ.

### ಕೋಷ್ಠಕ ೬.೧೧: ೨೦೦೯–೧೦ನೇ ಸಾಲಿನ ಜಿಲ್ಲಾ ಸಾಲ ಯೋಜನೆಯ ವಲಯವಾರು ಹಂಚಿಕೆ

| ಕ್ರ. ಸಂ | ಆದ್ಯತಾ ವಲಯ | ಮೊತ್ತ (ಕೋಟಿ ರೂ.ಗಳಲ್ಲಿ) | ಶೇಕಡಾವಾರು |
|---|---|---|---|
| ೧ | ಸಾರ್ವಜನಿಕ ವಲಯದ ಬ್ಯಾಂಕುಗಳು | ೫೦೧.೩೬ | ೫೫.೬೯ |
| ೨ | ಖಾಸಗಿ ಬ್ಯಾಂಕುಗಳು | ೪೧.೧೭ | ೪.೫೨ |
| ೩ | ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕು | ೧೯೩.೦೩ | ೨೧.೪೦ |
| ೪ | ಕರ್ನಾಟಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು | ೧೬.೭೨ | ೧.೯೦ |
| ೫ | ತುಮಕೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು | ೧೪೦.೦೩ | ೧೫.೬೦ |
| ೬ | ಕರ್ನಾಟಕ ರಾಜ್ಯ ಹಣಕಾಸು ನಿಗಮ ಸಂಸ್ಥೆ | ೮.೦೦ | ೦.೯೦ |
| ಒಟ್ಟು ಯೋಜನೆ ಮೊತ್ತ | | ೯೦೦.೩೧ | ೧೦೦ |

**ಕೋಷ್ಟಕ ೬.೧೧ಎ: ಜಿಲ್ಲೆಯಲ್ಲಿರುವ ಸಹಕಾರ ಸಂಘಗಳು ಹಾಗೂ ಪ್ರಾ.ಭೂ.ಅ.ಬ್ಯಾಂಕುಗಳ ವಿವರ (೩೧-೩-೨೦೧೩ರಲ್ಲಿದ್ದಂತೆ)**

| ಕ್ರ.ಸಂ | ತಾಲೂಕುಗಳು | ಸಮಾಪನ ಗೊಂಡ ಸಹಕಾರ ಸಂಘಗಳು | | | ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು | | | ಪ್ರ.ಭೂ.ಅ. ಬ್ಯಾಂಕುಗಳಿಂದ ನೀಡಲಾದ ಸಾಲ | | ಹಾಲು ಸಂಗ್ರಹಣೆ (ಲೀ ಗಳಲ್ಲಿ) | ಸಂದಾಯವಾದ ಹಣ (ಲಕ್ಷ ರೂ. ಗಳಲ್ಲಿ) |
|---|---|---|---|---|---|---|---|---|---|---|---|
| | | ಪತ್ತಿನ | ಪತ್ತೇತರ | ಒಟ್ಟು | ಶಾಖೆಗಳ | ಠೇವಣಿ (ಲಕ್ಷ ರೂ. ಗಳಲ್ಲಿ) | ಸಾಲ ನೀಡಿಕೆ (ಲಕ್ಷ ರೂ. ಗಳಲ್ಲಿ) | ಸಂಖ್ಯೆಗಳು | ಒಟ್ಟು ಸಾಲಗಳು | | |
| ೧ | ಚಿಕ್ಕನಾಯಕನಹಳ್ಳಿ | – | ೩ | ೩ | ೧ | ೬.೦೮ | ೫೨೪.೨ | ೭೨ | ೭೪.೩೯ | ೯೭೨೦೦೦೦ | ೨೦೪೧.೨ |
| ೨ | ಗುಬ್ಬಿ | ೧ | ೪ | ೪ | – | – | – | ೨೨ | ೭೫.೯೬ | ೧.೬೦೭ | ೩೪೦೨ |
| ೩ | ಕೊರಟಗೆರೆ | – | – | ೦ | – | – | – | ೧೯೨ | ೧೪೧ | ೯೯೬೬೮೧೦ | ೨೦೯೩.೦೨ |
| ೪ | ಕುಣಿಗಲ್ | – | ೧೧ | ೧೧ | – | – | – | ೧೫ | ೪೫ | ೨.೧೮೯ | ೪೩೮೪.೮ |
| ೫ | ಮಧುಗಿರಿ | – | – | ೦ | – | – | – | ೨೬ | ೯೪೧ | ೧೧೩೩೯೦೭ | ೨೩೮.೧೨ |
| ೬ | ಪಾವಗಡ | – | – | ೦ | – | – | – | ೩೭ | ೫೮೦.೨ | ೬೯೦೫೮೦೦ | ೧೪೫೦.೨೨ |
| ೭ | ಶಿರಾ | – | – | ೦ | ೩ | ೬೬೫೪ | ೬೦೯೬ | ೩೧ | ೭೫೩.೪ | ೮೯೯೪೯೯೯ | ೧೮೮೮.೯೫ |
| ೮ | ತಿಪಟೂರು | ೪ | ೧೩ | ೧೩ | ೧ | ೪೭.೪೫ | ೭೩೭.೯ | ೧೯೮ | ೨೩೯.೪ | ೧.೬೮೯ | ೩೩೨೬.೪ |
| ೯ | ತುಮಕೂರು | ೨ | ೨೮ | ೨೮ | ೯ | ೧೫೦೨ | ೧೩೮೬ | ೭೫ | ೧೧೪ | ೧.೮೯೮ | ೩೮೫೫.೬ |
| ೧೦ | ತುರುವೇಕೆರೆ | – | ೮ | ೮ | – | – | – | ೨೧೦ | ೨೫೧.೭ | ೧.೩೮೭ | ೨೬೪೬ |
| ಜಿಲ್ಲಾ ಮೊತ್ತ | | | ೬೭ | ೬೭ | ೧೪ | ೮೨೦೯.೫೩ | ೮೭೪೪.೧ | ೮೭೮ | ೩೨೧೬.೦೫ | ೩೬೭೨೧೫೨೪.೭೭ | ೨೫೩೨೬.೩೧ |

**ಆಧಾರ: ತುಮಕೂರು ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೪, ತುಮಕೂರು**

## ಮಾರ್ಗದರ್ಶಿ ಬ್ಯಾಂಕು ರೂಪಿತ ಜಿಲ್ಲಾ ಸಾಲ ಯೋಜನೆ

ಜಿಲ್ಲೆಯ ಎಲ್ಲಾ ಬ್ಯಾಂಕುಗಳ ಶಾಖೆಗಳಿಗೆ ಸಂಬಂಧಿಸಿದಂತೆ, ಶಾಖಾವಾರು ಯೋಜನೆಗಳನ್ನು ಪ್ರತೀ ವರ್ಷ ಮಾರ್ಗದರ್ಶಿ ಬ್ಯಾಂಕ್ ತಯಾರಿಸುತ್ತದೆ. ಈ ಎಲ್ಲಾ ಶಾಖಾವಾರು ಸಾಲ ಯೋಜನೆಗಳನ್ನು ಕ್ರೋಢೀಕರಿಸಿ ತಾಲೂಕು ಮಟ್ಟದ ಸಾಲಯೋಜನೆ, ನಂತರ ಜಿಲ್ಲಾ ಮಟ್ಟದ ಸಾಲಯೋಜನೆಯನ್ನು ಮಾರ್ಗದರ್ಶಿ ಬ್ಯಾಂಕ್ ಸಿದ್ಧಪಡಿಸುತ್ತದೆ. ಈ ಸಾಲಯೋಜನೆಗಳಲ್ಲಿ ವಿವಿಧ ಕ್ಷೇತ್ರಗಳಿಗೆ ಸಾಲ ನೀಡುವ ಗುರಿಯನ್ನು ನಿಗದಿಪಡಿಸಲಾಗುತ್ತದೆ. ಈ ಯೋಜನೆಗಳ ಅನುಷ್ಠಾನದ ಜವಾಬ್ದಾರಿ ಮತ್ತು ಕಾಲಕಾಲಕ್ಕೆ ಅದರ ಪ್ರಗತಿ ಪರಿಶೀಲನೆ ನಡೆಸುವುದು ಮಾರ್ಗದರ್ಶಿ ಬ್ಯಾಂಕಿನ ಪ್ರಮುಖ ಹೊಣೆಗಾರಿಕೆಯಾಗಿದ್ದು, ಅದರ ಯಶಸ್ವಿ ನಿರ್ವಹಣೆಗಾಗಿ ಬ್ಲಾಕ್ ಮಟ್ಟದ ಬ್ಯಾಂಕುಗಳ ಸಮಿತಿ (ಬಿಎಲ್‌ಬಿಸಿ) ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನೆ, ಮುಂತಾದ ವಿಷಯಗಳ ಬಗ್ಗೆ ಸವಿಸ್ತಾರ ಚರ್ಚೆ ನಡೆಸಿದ್ದರೆ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ (ಡಿಸಿಸಿ)ಯಲ್ಲಿ ಜಿಲ್ಲಾ ಸಾಲ ಯೋಜನೆಗಳ ಚಿಂತನ–ಮಂಥನ ಕಾರ್ಯಯೋಜನೆಗಳು ಈ ಸಮಿತಿಗಳ ಸಭೆಯಲ್ಲಿ ಜರುಗುತ್ತವೆ. ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ (ಡಿ.ಎಲ್.ಆರ್.ಸಿ) ಯು ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಮತ್ತು ಅನುಷ್ಠಾನಗೊಳ್ಳುವಲ್ಲಿ ಬರುವ ಅಡಚಣೆಗಳ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತದೆ. ಸ್ಥಾಯಿಸಮಿತಿಗಳು (Standing Committee) ಪ್ರತೀ ತಿಂಗಳು ಸಭೆ ಸೇರಿ ಮಾಸಿಕ ಪ್ರಗತಿ ಪರಿಶೀಲನೆ ನಡೆಸುತ್ತಿದ್ದು, ಇವು ಡಿ.ಸಿ.ಸಿ.ಯ ಅಂಗ ಸಮಿತಿಗಳಾಗಿರುತ್ತವೆ. ಜಿಲ್ಲಾ ಮಟ್ಟದ ಸ್ವರ್ಣಜಯಂತಿ ಗ್ರಾಮಸ್ವರಾಜ್‌ಗಾರ್ ಯೋಜನೆ (SGSY) ಸಮಿತಿಯು ಯೋಜನೆಯ ಪ್ರಗತಿ ಪರಿಶೀಲನೆ, ಅನುಷ್ಠಾನದಲ್ಲಿಯ ಕುಂದುಕೊರತೆ ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸುತ್ತದೆ. ಜಿಲ್ಲಾ ಮಟ್ಟದ ಭದ್ರತಾ ಸಮಿತಿಯು ಭದ್ರತಾ ಸಂಬಂಧಿತ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ಜಾರಿಗೊಳಿಸಲು ಆರು ತಿಂಗಳಿಗೊಮ್ಮೆ ಸಭೆ ನಡೆಸುತ್ತದೆ.

ಈ ಮೇಲೆ ತಿಳಿಸಿದ ಸಮಿತಿಗಳಲ್ಲದೆ ಮಾರ್ಗದರ್ಶಿ ಬ್ಯಾಂಕಿನ ವ್ಯವಸ್ಥಾಪಕರು ಜಿಲ್ಲೆಯ ಪ್ರಮುಖ ಸಮಿತಿಗಳಲ್ಲಿ ಕ್ರಿಯಾಶೀಲ ಸದಸ್ಯರಾಗಿ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಪ್ರತೀ ಶಾಖೆಯಿಂದ ವರದಿಗಳನ್ನು ಕಾಲಕಾಲಕ್ಕೆ ಸಂಗ್ರಹಿಸಿ ಗಣಕೀಕರಿಸಿ ಜಿಲ್ಲಾ ಮಟ್ಟದ ವರದಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕು, ರಾಜ್ಯ ಮಟ್ಟದ ಬ್ಯಾಂಕುಗಳ ಸಮಿತಿ (SLBC) ನಬಾರ್ಡ್ ಇತ್ಯಾದಿ ಕಚೇರಿಗಳಿಗೆ ತಲುಪಿಸುವ ಜವಾಬ್ದಾರಿ ಮಾರ್ಗದರ್ಶಿ ಬ್ಯಾಂಕಿನದಾಗಿರುತ್ತದೆ.

**ಬ್ಯಾಂಕುಗಳು ನೀಡುವ ಸೇವಾ ಸೌಲಭ್ಯಗಳು:** ಜಿಲ್ಲೆಯ ಬ್ಯಾಂಕುಗಳು ನೀಡುವ ಆರ್ಥಿಕ ಉತ್ಪನ್ನ ಸೇವಾಸೌಲಭ್ಯಗಳಲ್ಲಿ ಠೇವಣಿ ಸಂಗ್ರಹಣೆ, ಸಾಲ ಯೋಜನೆಗಳು, ಜೀವವಿಮೆ ಮತ್ತು ಅನ್ಯ ವಿಮಾಸೌಲಭ್ಯ, ಕ್ರೆಡಿಟ್/ಡೆಬಿಟ್ ಕಾರ್ಡುಗಳು, ನಗದು ನಿರ್ವಹಣಾ ಸೇವೆ, ವಿದೇಶಗಳಿಗೆ ತ್ವರಿತವಾಗಿ ಹಣ ರವಾನೆ ಮುಂತಾದ ಸೇವೆಗಳು ಸೇರಿವೆ. ಮಿಗಿಲಾಗಿ ಇಂದಿನ ಬದಲಾದ ಬ್ಯಾಂಕಿಂಗ್ ಸನ್ನಿವೇಶದಲ್ಲಿ ಬ್ಯಾಂಕುಗಳು ಇಂದು ಬಹುವಿಧ ಸೇವಾ ಮಾಧ್ಯಮಗಳಾದ ಎ.ಟಿ.ಎಂ. ಕೋರ್ ಬ್ಯಾಂಕಿಂಗ್ ಸಲ್ಯೂಶನ್ (ಸಿ.ಬಿ.ಎಸ್) ಕಾಲ್ ಸೆಂಟರ್, ಟೆಲಿಬ್ಯಾಂಕಿಂಗ್, ಇಂಟರ್‌ನೆಟ್ ಬ್ಯಾಂಕಿಂಗ್ ಮತ್ತು ಸಂಚಾರಿ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಜಿಲ್ಲೆಯ ೧೦ ತಾಲೂಕು ಕೇಂದ್ರಗಳಲ್ಲಿ ಈ ವ್ಯವಸ್ಥೆಯಿದೆ. ಇವಲ್ಲದೆ, ಬ್ಯಾಂಕುಗಳು ವಿವಿಧ ಜನೋಪಯೋಗಿ ಸೇವೆಗಳಾದ ವಿದ್ಯುತ್/ನೀರಿನ ಬಿಲ್ಲು ಪಾವತಿ, ಟೆಲಿಫೋನ್ ಬಿಲ್ ಪಾವತಿ, ರೈಲ್ವೆ, ಬಸ್, ವಿಮಾನ ಟಿಕೆಟ್ ಕಾದಿರುಸುವಿಕೆ, ಗ್ರಾಹಕರಿಗೆ ಚಿನ್ನದ ಮಾರಾಟ, ಜೀವವಿಮೆ ಕಂತು ಪಾವತಿ ಮುಂತಾದ ಸೇವೆಗಳನ್ನು ಜಿಲ್ಲೆಯಲ್ಲಿ ಒದಗಿಸುತ್ತಿವೆ. ಇತ್ತೀಚೆಗೆ ಬ್ಯಾಂಕುಗಳು ಹೊಸದಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತೆರಿಗೆ/ತೆರಿಗೇತರ ಆದಾಯ ಸಂಗ್ರಹಣಾ ಸೇವೆಗಳ ಜೊತೆಗೆ ಮುಜರಾಯಿ ಇಲಾಖೆಗೆ ಸಂಬಂಧಿಸಿದ ವಂತಿಗೆ, ದೇಣಿಗೆ ಹಾಗೂ ಇತರ ಸೇವಾ ಕಾರ್ಯಗಳಲ್ಲಿ ನಿರತವಾಗಿವೆ.

**ಸಂಪನ್ಮೂಲ ಸಂಗ್ರಹಣೆ:** ಜಿಲ್ಲೆಯಲ್ಲಿರುವ ಬ್ಯಾಂಕಿಂಗ್ ವ್ಯವಸ್ಥೆಯು ವಿವಿಧ ಯೋಜನೆಗಳ ಮೂಲಕ ಠೇವಣಿ ಸಂಗ್ರಹಿಸಿ ಜನತೆಯ ಉಳಿತಾಯವನ್ನು ಒಟ್ಟುಗೂಡಿಸುವುದರಲ್ಲಿ ಶ್ಲಾಘನೀಯ ಕಾರ್ಯಸಾಧನೆಯನ್ನು ಮಾಡಿವೆ. ಒಟ್ಟು ಠೇವಣಿಗಳ ಬೆಳವಣಿಗೆ ವರ್ಷದಿಂದ ವರ್ಷಕ್ಕೆ ವೃದ್ಧಿಗೊಳ್ಳುತ್ತಿದೆ. ಜಿಲ್ಲೆಯಲ್ಲಿ ಬ್ಯಾಂಕುಗಳು ಬ್ಯಾಂಕಿಂಗ್ ಸೌಲಭ್ಯ ತಲುಪದ ಗ್ರಾಮ, ಗುಡ್ಡಗಾಡು ಹಾಗೂ ಗಡಿ ಪ್ರದೇಶಗಳಿಗೆ ಸೌಲಭ್ಯವನ್ನು ನೀಡುವುದರ ಜೊತೆಗೆ ಅನಿವಾಸಿ ಭಾರತೀಯ (NRI) ಆದಾಯ ಸ್ವದೇಶಕ್ಕೆ ಹರಿದು ಬರುವಂತೆ ಮಾಡಿದ ಪ್ರಯತ್ನಗಳು ಈ ಸಾಧನೆಗೆ ಕಾರಣವಾಗಿದೆ. ಜಿಲ್ಲೆಯಿಂದ ಸಂಗ್ರಹಿಸಿದ

ಸಂಪನ್ಮೂಲವನ್ನು ಬ್ಯಾಂಕುಗಳು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ವಿನಿಯೋಗಿಸಲು, ಅದರಲ್ಲೂ ಮುಖ್ಯವಾಗಿ ಆದ್ಯತಾ ರಂಗಗಳಾದ ಕೃಷಿ, ಕೃಷಿ ಆಧಾರಿತ ಕೈಗಾರಿಕೆಗಳು ಸಣ್ಣ ಪ್ರಮಾಣದ ಉದ್ದಿಮೆ, ಚಿಲ್ಲರೆ ವ್ಯಾಪಾರ, ಸಣ್ಣ ವ್ಯವಹಾರ ಮತ್ತು ಸ್ವ-ಉದ್ಯೋಗಗಳು ಸ್ತ್ರೀಶಕ್ತಿ ಸಹಾಯಕ ಯೋಜನೆಗಳು, ಶಿಕ್ಷಣ, ರಸ್ತೆ ಸಾರಿಗೆ, ವಸತಿ ಹಾಗೂ ದುರ್ಬಲ ವರ್ಗಗಳ ಅವಶ್ಯಕತೆ ಪೂರೈಸಲು ಸಾಲಸೌಲಭ್ಯಗಳನ್ನು ಒದಗಿಸುತ್ತವೆ. ಜಿಲ್ಲೆಯು ಕೃಷಿ ಪ್ರಧಾನ ಪ್ರದೇಶವಾಗಿದ್ದು ಕೃಷಿ ಚಟುವಟಿಕೆಗಳಾದ ಭೂ ಅಭಿವೃದ್ಧಿ, ತೆಂಗು, ಕೊಬ್ಬರಿ, ಆಹಾರ ಸಂಸ್ಕರಣೆ, ಕೃಷಿ ಯಂತ್ರಗಳ ಖರೀದಿ, ತೋಟಗಾರಿಕೆ, ಹೈನುಗಾರಿಕೆ, ಜೇನು ಹಾಗೂ ರೇಷ್ಮೆ ಸಾಕಣೆ, ಗ್ರಾಮೀಣ ಗೋದಾಮು, ಕೃಷಿ ಚಿಕಿತ್ಸಾಲಯ, ಕೃಷಿ ವ್ಯವಹಾರ ಕೇಂದ್ರ ಮುಂತಾದವುಗಳಿಗೆ ಆರ್ಥಿಕ ನೆರವು ನೀಡುತ್ತಾ ಬಂದಿದೆ.

## ಕೃಷಿ ವಲಯಕ್ಕೆ ನೀಡಿದ ಆರ್ಥಿಕ ನೆರವು

**೧. ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ:** ರೈತರ ಕ್ರೆಡಿಟ್ ಕಾರ್ಡ್ ಯೋಜನೆಯು ಮೂಲತಃ ರೈತರ ವ್ಯವಸಾಯ ವೆಚ್ಚಕ್ಕೆ ಅವರ ಅಗತ್ಯಕ್ಕನುಸಾರವಾಗಿ ಯಾವುದೇ ಅಡಚಣೆಯಿಲ್ಲದೆ ಸಮಯಕ್ಕೆ ಸರಿಯಾಗಿ ನೆರವು ಒದಗಿಸುವ ಉದ್ದೇಶ ಹೊಂದಿದೆ. ಈ ಯೋಜನೆಯು ನೆರವು ರೂಪದಲ್ಲಿ ಆವರ್ತನ ಸಾಲ ಒದಗಿಸುತ್ತಿರುವುದರಿಂದ ರೈತರು ತಮಗೆ ಬೇಕೆಂದಾಗ ಪಡೆದುಕೊಳ್ಳಬಹುದು. ಒಮ್ಮೆ ಜಾರಿ ಮಾಡಿದ ಕಿಸಾನ್ ಕ್ರೆಡಿಟ್ ಮೂರು ವರ್ಷದವರೆಗೆ ಚಾಲನೆಯಲ್ಲಿರುತ್ತದೆ. ತುಮಕೂರು ಜಿಲ್ಲೆಯಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯಡಿ ವಿವಿಧ ಬ್ಯಾಂಕುಗಳು ೩೧-೦೩-೨೦೦೯ ರವರೆಗೆ ೩೦೨೯೮ ಕಿಸಾನ್ ಕಾರ್ಡ್‌ಗಳನ್ನು ಜಾರಿಗೊಳಿಸಿದ್ದು, ಒಟ್ಟು ರೂ. ೭೮೮.೬೮ ಕೋಟಿ ಸಾಲ ನೀಡಿದೆ.

**ಸಾಲ ವಿತರಣೆಯ ಸರಳ ಪದ್ಧತಿಗಳು:** ನಗರ ಪಟ್ಟಣ ಹಾಗೂ ಗ್ರಾಮಗಳ ರೈತರು ಬಡವರು, ಸಣ್ಣ ಉದ್ದಿಮೆ ಹಾಗೂ ಚಿಲ್ಲರೆ ವ್ಯಾಪಾರಿಗಳು, ಸ್ವ-ಉದ್ಯೋಗಿಗಳು, ಕಾರ್ಮಿಕರು, ಮಹಿಳೆಯರು, ಅಲ್ಪಸಂಖ್ಯಾತರು ದುರ್ಬಲ ವರ್ಗದವರು ಹರಿಜನ ಗಿರಿಜನ ಮುಂತಾದವರು ಆದಾಯವನ್ನು ಹೆಚ್ಚಿಸಿಕೊಳ್ಳುವಂತಹ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲ ಒದಗಿಸುವ ಮೂಲಕ ಅವರನ್ನು ಸಶಕ್ತರನ್ನಾಗಿಸುವುದು. ತನ್ಮೂಲಕ ಬಡತನ ಸಮಸ್ಯೆಯನ್ನು ಎದುರಿಸಲು ಪೂರಕವಾದ ಪರಿಣಾಮಕಾರಿ ಕಾರ್ಯಯೋಜನೆಗಳಿಗೆ ಅತ್ಯಂತ ಸರಳ ಪದ್ಧತಿಯಲ್ಲಿ ಸಾಲ ವಿತರಣೆ ಮಾಡುವ ಕ್ರಮಗಳನ್ನು ಬ್ಯಾಂಕುಗಳು ಕೈಗೊಂಡಿವೆ. ಸ್ವಸಹಾಯ ಗುಂಪುಗಳಿಗೆ (ಎಸ್.ಎಚ್.ಜಿ) ಉತ್ತೇಜನ ನೀಡುವುದರ ಜೊತೆಗೆ ಗ್ರಾಮೀಣ ಬಡವರನ್ನು ಸಶಕ್ತರನ್ನಾಗಿಸಲು ಸ್ವಸಹಾಯ ಗುಂಪುಗಳನ್ನು ಬ್ಯಾಂಕಿಗೆ ವಹಿಸುವ ಕಾರ್ಯ ಯೋಜನೆಯು ತುಮಕೂರು ಜಿಲ್ಲೆಯಲ್ಲಿ ೧೯೯೨ರಲ್ಲಿ ಪ್ರಾರಂಭವಾಯಿತು. ಇದು ಬಡವರ ಅದರಲ್ಲೂ ವಿಶೇಷವಾಗಿ ಮಹಿಳಾ ಸಬಲೀಕರಣಕ್ಕೆ ಉಪಯುಕ್ತವೆಂದು ಕಂಡು ಬಂದಿದೆ.

ಜಿಲ್ಲೆಯ ಗ್ರಾಮೀಣ ಜನಸಂಖ್ಯೆಯು ಸುಮಾರು ೨೧ ಲಕ್ಷವಿದ್ದು, ಒಟ್ಟು ಜನಸಂಖ್ಯೆಯು ಶೇ. ೭೦ ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಶೇ. ೧೮ ಕೃಷಿ ಕಾರ್ಮಿಕರು ಶೇ. ೨೦ ಮತ್ತು ಒಟ್ಟು ಕಾರ್ಮಿಕರು ಶೇ. ೩೮ ರಷ್ಟು ಇದ್ದಾರೆ. ಒಟ್ಟು ಕಾರ್ಮಿಕರಲ್ಲಿ ಶೇ. ೮ ರಷ್ಟು ಅರೆಕಾಲಿಕ ಕಾರ್ಮಿಕರಿದ್ದಾರೆ. ಆದುದರಿಂದ ಸೂಕ್ಷ್ಮ ಆರ್ಥಿಕ ನೆರವಿಗೆ (ಮೈಕ್ರೋಫೈನಾನ್ಸ್) ಜಿಲ್ಲೆಯಲ್ಲಿ ತುಂಬಾ ಸಾಧ್ಯತೆಗಳಿವೆ. ಈ ಸೂಕ್ಷ್ಮ ಆರ್ಥಿಕ ನೆರವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವುದರಲ್ಲಿ ತುಮಕೂರು ಜಿಲ್ಲೆಯು ಮುಂಚೂಣಿಯಲ್ಲಿದೆ. ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಮತ್ತು ತುಮಕೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಸಾಲವಾಹಕದ ಪಾತ್ರ ವಹಿಸುತ್ತಿವೆ.

## ಸರ್ಕಾರ ಪ್ರವರ್ತಿತ ಯೋಜನೆಗಳ ಅನುಷ್ಠಾನದಲ್ಲಿ ಬ್ಯಾಂಕುಗಳ ಪಾತ್ರ

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಸಹಾಯಧನ ಸಹಿತ ಸಾಲ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿವೆ. ಬಡತನ ನಿರ್ಮೂಲನೆ ಮತ್ತು ನಿರುದ್ಯೋಗ ನಿವಾರಣೆ ಈ ಯೋಜನೆಗಳ ಪ್ರಮುಖ ಉದ್ದೇಶವಾಗಿದೆ. ಈ ಎಲ್ಲಾ ಯೋಜನೆಗಳು ಸಾಲ ಮತ್ತು ಸಹಾಯಧನ ಬಳಕೆಯಿಂದ ಉತ್ಪಾದಕ ಸ್ವತ್ತುಗಳು ಸೃಷ್ಟಿಯಾಗಬೇಕೆಂಬ ಆಶಯದಿಂದ ಕೂಡಿವೆ. ಈ ಯೋಜನೆಗಳು ಬಡವರನ್ನು ಬಡತನ ರೇಖೆಯಿಂದ ಮೇಲಕ್ಕೆತ್ತಿ ಅವರಿಗೆ ಲಾಭಪ್ರದ ಉದ್ಯೋಗಗಳನ್ನು ದೊರಕಿಸುವ ಗುರಿಯಿಟ್ಟುಕೊಂಡಿವೆ.

**೧. ಸ್ವರ್ಣಜಯಂತಿ ಗ್ರಾಮ ಸಮೃದ್ಧಿ ಯೋಜನೆ (ಎಸ್.ಜಿ.ಎಸ್.ವೈ):** ಭಾರತ ಸರ್ಕಾರವು ಸ್ವ–ಉದ್ಯೋಗ ಕಾರ್ಯಕ್ರಮವನ್ನು ಪುನರ್ ರಚಿಸಿ ಏಪ್ರಿಲ್ ೧, ೧೯೯೯ ರಲ್ಲಿ "ಸ್ವರ್ಣ ಜಯಂತಿ ಗ್ರಾಮ ಸಮೃದ್ಧಿ ಯೋಜನೆ" ಎಂಬ ಹೊಸ ಕಾರ್ಯಕ್ರಮವನ್ನು ಕಾರ್ಯರೂಪಕ್ಕಿಳಿಸಿತು. ಈ ಕಾರ್ಯಕ್ರಮವು ಅನುಷ್ಠಾನಕ್ಕೆ ಬಂದೊಡನೆ ಅದಕ್ಕೆ ಮೊದಲಿನ ಕಾರ್ಯಕ್ರಮಗಳಾದ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಐ.ಆರ್.ಡಿ.ಪಿ), ಟ್ರೈಸೆಮ್, ಗ್ರಾಮೀಣ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ (ಡ್ವಾಕ್ರ) ಗಂಗಾಕಲ್ಯಾಣ ಯೋಜನೆ (ಜಿ.ಕೆ.ವೈ), ಮಿಲಿಯ ಬಾವಿಗಳ ಯೋಜನೆ (ಎಂ. ಡಬ್ಲ್ಯು.ಎಸ್) ಗಳು ಅನುಷ್ಠಾನದಲ್ಲಿ ಇಲ್ಲವಾಗಿದೆ.

ಸ್ವ.ಜ.ಗ್ರಾ.ಸ್ವ. ಯೋಜನೆಯು ಬಡವರನ್ನು ಸ್ವಸಹಾಯ ಗುಂಪುಗಳಲ್ಲಿ ಸಂಘಟಿಸುವುದು, ಗುಂಪುಗಳಿಗೆ ಅವಶ್ಯವಿರುವ ತರಬೇತಿ, ಸಾಲ, ತಂತ್ರಜ್ಞಾನ, ಮೂಲಭೂತ ಸೌಕರ್ಯ, ಮಾರಾಟ ಸೌಕರ್ಯ ಮುಂತಾದ ಸ್ವ–ಉದ್ಯೋಗದ ಎಲ್ಲಾ ವಿಷಯಗಳನ್ನು ಒಳಗೊಂಡ ಒಂದು ಪರಿಪೂರ್ಣ ಕಾರ್ಯಕ್ರಮವಾಗಿದೆ. ಬ್ಯಾಂಕಿನ ಸಾಲ ಮತ್ತು ಸರ್ಕಾರದ ಸಹಾಯಧನದಲ್ಲಿ ಆದಾಯ ತರುವ ಸ್ವತ್ತುಗಳನ್ನು ಒದಗಿಸಿ ಆರ್ಥಿಕ ಸಹಾಯ ಪಡೆದ ದಿನಾಂಕದಿಂದ ಮೂರು ವರ್ಷಗಳ ಅವಧಿಯಲ್ಲಿ ನೆರವು ಪಡೆದ ಬಡಕುಟುಂಬಗಳನ್ನು ಬಡತನದ ರೇಖೆಯಿಂದ ಮೇಲೆತ್ತುವುದು ಸ್ವ.ಜ.ಗ್ರಾ.ಸ್ವ ಯೋಜನೆಯ ಮೂಲೋದ್ದೇಶವಾಗಿದೆ. ನೆರವು ಪಡೆದ ಕುಟುಂಬಕ್ಕೆ ಕನಿಷ್ಠ ರೂ.೨೦೦೦/–ದ ನಿವ್ವಳ ಮಾಸಿಕ ಆದಾಯಗಳಿಸುವುದನ್ನು ಸುನಿಶ್ಚಿತಗೊಳಿಸಲು ಈ ಯೋಜನೆಯು ಆಶಿಸುತ್ತದೆ. ಪ್ರಯೋಜನಾರ್ಥಿ ಕುಟುಂಬಗಳು ನೇರವಾಗಿ ಇಲ್ಲವೇ ಸ್ವಸಹಾಯ ಸಂಘಗಳ ಮೂಲಕ ಈ ಯೋಜನೆಯಡಿ ನೆರವು ಪಡೆಯಲು ಸಾಧ್ಯವಿದೆ. ಸ್ವರ್ಣ ಜಯಂತಿ ಗ್ರಾಮ ಸಮೃದ್ಧಿ ಯೋಜನೆಯಲ್ಲಿ ಬ್ಯಾಂಕುಗಳ ಅಭಿವೃದ್ಧಿ (೨೦೦೮–೨೦೦೯)ಯೋಜನೆಗಳಿಂದ ನೆರವು ಪಡೆದವರ ಸಂಖ್ಯೆ ಯನ್ನು ಕೋಷ್ಟಕ ೬.೧೨ ರಲ್ಲಿ ನೀಡಿದೆ.

**ಕೋಷ್ಟಕ ೬.೧೨: ಸ್ವರ್ಣ ಜಯಂತಿ ಗ್ರಾಮ ಸಮೃದ್ಧಿ ಯೋಜನೆಯಡಿ ಬ್ಯಾಂಕುಗಳ ಅಭಿವೃದ್ಧಿ ಯೋಜನೆಗಳಿಂದ ನೆರವು ಪಡೆದವರ ಸಂಖ್ಯೆಯ ವಿವರ**

| ಕ್ರ.ಸಂ | ವಿವರ | ಗುರಿ | ಸಾಧನೆ |
|---|---|---|---|
| ೧ | **ಗುಂಪು** | ೩೭೪ | ೩೧೬ |
| ೨ | **ವೈಯಕ್ತಿಕ** | ೪೦ | ೩೨ |
| ೩ | **ಆವರ್ತನ ನಿಧಿ** | ೬೩೦ | ೫೯೦ |

**೨. ಪ್ರಧಾನ ಮಂತ್ರಿಗಳ ಉದ್ಯೋಗ ಭರವಸೆ ಯೋಜನೆ (ಪಿ.ಎಂ.ಆರ್.ವೈ):** ಪ್ರಧಾನ ಮಂತ್ರಿಗಳ ಉದ್ಯೋಗ ಭರವಸೆ ಯೋಜನೆಯು ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಸ್ವ–ಉದ್ಯೋಗ ಒದಗಿಸಲು ೦೨–೧೦–೧೯೯೩ರಂದು ಕಾರ್ಯರೂಪಕ್ಕೆ ತಂದ ಸಹಾಯಧನ ಸಹಿತ ಸಾಲ ನೀಡುವ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದನ್ವಯ ಕನಿಷ್ಠ ಎಂಟನೇ ತರಗತಿವರೆಗೆ ವಿದ್ಯಾಭ್ಯಾಸ ಪಡೆದ ೧೮ ರಿಂದ, ೩೫ ವರ್ಷದ ವಯೋಮಿತಿ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ/ಮಾಜಿ ಯೋಧರು, ಸೈನಿಕರು, ವಿಕಲಾಂಗರು ಮತ್ತು ಮಹಿಳೆಯರಿಗೆ ೧೦ ವರ್ಷ ವಯೋ ರಿಯಾಯಿತಿಯೊಡನೆ) ಯೊಳಗೆ ಕುಟುಂಬದ ವಾರ್ಷಿಕ ಆದಾಯ ರೂ.೧,೦೦,೦೦೦/– ಮೀರಿರದ ನಿರುದ್ಯೋಗಿ ಯುವಕರು ಸಹಾಯಧನ ಸಹಿತ ಸಾಲಪಡೆಯಲು ಅರ್ಹರು. ಸರ್ಕಾರದಿಂದ ಮಾನ್ಯತೆ ಪಡೆದ ತಾಂತ್ರಿಕ ವಿದ್ಯಾಸಂಸ್ಥೆ (ಐಟಿಐ) ಗಳಲ್ಲಿ ಕನಿಷ್ಠ ಆರು ತಿಂಗಳು ಯಾವುದೇ ವೃತ್ತಿ ತರಬೇತಿ ಪಡೆದವರಿಗೆ ಆದ್ಯತೆ ನೀಡಲಾಗುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ (ಶೇ. ೨೨.೫ ರಷ್ಟು) ಮತ್ತು ಅನ್ಯ ಹಿಂದುಳಿದ ಜಾತಿಯವರಿಗೆ (ಶೇ.೨೭ ರಷ್ಟು) ಯೋಜನೆಯಲ್ಲಿ ಅವಕಾಶ ಕಾಯ್ದಿರಿಸಲಾಗಿದೆ. ಕೃಷಿ ಮತ್ತು ಕೃಷಿ ಉಪವೃತ್ತಿಗಳಲ್ಲಿ ಬೆಳೆ ಬೆಳೆಯುವ ಹಾಗೂ ಗೊಬ್ಬರ ಖರೀದಿ ಇತ್ಯಾದಿಗಳನ್ನು ಹೊರತುಪಡಿಸಿ ಇನ್ನೆಲ್ಲ ಚಟುವಟಿಕೆಗಳು ಈ ಯೋಜನೆಗೆ ಒಳಪಟ್ಟಿವೆ. ಅಲ್ಲದೆ ರೂ. ೨ ಲಕ್ಷ ವ್ಯಯವನ್ನು ಮೀರದ ಯಾವುದೇ ಉದ್ದಿಮೆ/ಸೇವೆ/ವ್ಯಾಪಾರ (ಐ.ಎಸ್.ಬಿ) ಚಟುವಟಿಕೆಗಳನ್ನು ಕೈಗೊಳ್ಳಲೂ ಸಾಧ್ಯವಿದೆ. ಜಿಲ್ಲಾ ಕೈಗಾರಿಕಾ ಕೇಂದ್ರವು ಈ ಕಾರ್ಯಕ್ರಮ ಅನುಷ್ಠಾನದ ಕೇಂದ್ರ ಕಾರ್ಯಕರ್ತನ ಹೊಣೆ ವಹಿಸುತ್ತದೆ. ಯೋಜನೆಯ ಪ್ರಯೋಜನಾರ್ಥಿಗಳಿಗೆ ರೂ. ೧೨,೫೦೦/–

ರ ಗರಿಷ್ಠ ಮಿತಿಗೆ ಒಳಪಟ್ಟು ಶೇ.೧೫ ರ ಬಂಡವಾಳ ಸಹಾಯಧನ ಲಭ್ಯವಿದೆ. ವ್ಯಾಪಾರ ಮತ್ತು ಸೇವಾ ರಂಗದ ಚಟುವಟಿಕೆಗಳಿಗೆ ರೂ. ಎರಡು ಲಕ್ಷದ ಸಾಲಮಿತಿಯಿದ್ದರೆ, ಉದ್ದಿಮೆ ಚಟುವಟಿಕೆಗಳಿಗೆ ರೂ. ಐದು ಲಕ್ಷದ ಸಂಯೋಜಿತ ಸಾಲವನ್ನು ಮಂಜೂರು ಮಾಡಬಹುದು. ಅರ್ಹ ವ್ಯಕ್ತಿಗಳು ಒಟ್ಟುಗೂಡಿ ರೂ.೧೦ ಲಕ್ಷದ ಒಳಗಿನ ಯೋಜನಾ ವೆಚ್ಚದ ಉದ್ಯಮಕ್ಕೆ ಆರ್ಥಿಕ ನೆರವು ಪಡೆಯಬಹುದು. ಈ ಯೋಜನೆಯಲ್ಲಿ ಕೈಗಾರಿಕಾ ಕ್ಷೇತ್ರಕ್ಕೆ ಪಡೆಯುವ ಐದು ಲಕ್ಷದವರೆಗಿನ ಹಾಗೂ ವ್ಯಾಪಾರ ಮತ್ತು ಸೇವಾ ಕ್ಷೇತ್ರಕ್ಕೆ ಪಡೆಯುವ ಎರಡು ಲಕ್ಷದವರೆಗಿನ ಸಾಲಕ್ಕೆ ಉಪಭದ್ರತೆಗಳ ಅಗತ್ಯವಿಲ್ಲ.

**೩. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎನ್.ಆರ್.ಇ.ಜಿ.ಎಸ್):** ತುಮಕೂರು ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಗ್ರಾಮೀಣ ಜನರು ಹೆಸರನ್ನು ನೋಂದಾಯಿಸಿ ಕೊಂಡಿದ್ದಾರೆ. ಇವರಿಗೆ ಉದ್ಯೋಗ ಭರವಸೆ ಕಾರ್ಡ್ ನೀಡಲಾಗಿದೆ. ಜಲಸಂವರ್ಧನೆಯಡಿಯಲ್ಲಿ ಜಿಲ್ಲೆಯ ಕೆರೆ-ಕಟ್ಟೆಗಳನ್ನು ಪುನರುಜ್ಜೀವನಗೊಳಿಸಲಾಗುತ್ತಿದೆ. ಈ ಕಾಮಗಾರಿಯಲ್ಲಿ ೧೦೦೨ ಕುಟುಂಬಗಳ ಸದಸ್ಯರು ದುಡಿಯುತ್ತಿದ್ದಾರೆ ಎಂಬ ಮಾಹಿತಿ ಜಿಲ್ಲಾ ಪಂಚಾಯಿತಿಯಿಂದ ಲಭ್ಯವಾಗಿದೆ. ಕಾರ್ಮಿಕರ ದಿನಗೂಲಿಯನ್ನು ೮೨ ರೂಪಾಯಿಂದ ೧೦೦ ರೂಪಾಯಿಗೆ ಏರಿಸಲಾಗಿದೆ. ಈ ಯೋಜನೆಯಡಿ ಶೇ. ೨೫ ರಷ್ಟು ಹಣವನ್ನು ರಸ್ತೆ ನಿರ್ಮಾಣಕ್ಕೆ ಹಾಗೆಯೇ ಗ್ರಾಮಾಂತರ ಪ್ರದೇಶಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಬಳಸಲಾಗಿದೆ. ಸ್ವಚ್ಛ ಗ್ರಾಮ ಯೋಜನೆಯಡಿ ಶೇ. ೧೦೦ ರಷ್ಟು ಶೌಚಾಲಯ ನಿರ್ಮಿಸುವ ಉದ್ದೇಶವಿದೆ. ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ಯೋಜನೆಯಾದ 'ಗ್ರಾಮಸ್ವರಾಜ್' ಅನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಗ್ರಾಮಪಂಚಾಯಿತಿ ಮಟ್ಟದಲ್ಲಿ ಜಲಸಂವರ್ಧನೆ, ಕೆರೆಗಳ ಪುನರುಜ್ಜೀವನ, ಸ್ವ ಉದ್ಯೋಗ ತರಬೇತಿ, ಜಲನಿರ್ಮಲ ಮತ್ತು ಗ್ರಾಮಗಳಲ್ಲಿ ನೀರು ಸರಬರಾಜು ಮಾಡುವ ನೀರಿನ ಟ್ಯಾಂಕುಗಳಿಗೆ ಫಿಲ್ಟರ್ ಅಳವಡಿಸಲಾಗಿದೆ. ಗ್ರಾಮ ಪಂಚಾಯತಿಗಳಿಗೆ ಉಪತಹಶೀಲ್ದಾರ್ ದರ್ಜೆಯ ಅಭಿವೃದ್ಧಿ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.

**೪. ಸ್ವರ್ಣಜಯಂತಿ ಷಹರಿ ರೋಜ್‌ಗಾರ್ ಯೋಜನೆ (ಎಸ್.ಜೆ.ಎಸ್.ಆರ್.ವೈ) ೨೦೦೮-೨೦೦೯:** ಇದು ದೇಶದ ನಗರ ಕೇಂದ್ರಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಕೇಂದ್ರ ಸರ್ಕಾರ ಪ್ರವರ್ತಿತ ಕಾರ್ಯಕ್ರಮ. ಬಡತನ ರೇಖೆಯ ಕೆಳಗೆ ಜೀವಿಸುತ್ತಿರುವ ನಗರದ ಬಡಜನರಿಗೆ ಸ್ವ-ಉದ್ಯೋಗ ಸೌಲಭ್ಯ ಅಥವಾ ದಿನಗೂಲಿ ಉದ್ಯೋಗದ ಮೂಲಕ ಲಾಭಪ್ರದ ಉದ್ಯೋಗ ಒದಗಿಸುವುದು ಈ ಯೋಜನೆಯ ಗುರಿ. ಆದುದರಿಂದ ಈ ಯೋಜನೆಯಲ್ಲಿ ಎರಡು ಕಾರ್ಯಕ್ರಮಗಳಿವೆ. ಅವೆಂದರೆ ನಗರ ಸ್ವ-ಉದ್ಯೋಗ ಯೋಜನೆ ಮತ್ತು ನಗರ ದಿನಗೂಲಿ ಉದ್ಯೋಗ ಯೋಜನೆ. ಈ ಯೋಜನೆಯಡಿ ಕುಟುಂಬದ ಆದಾಯ ಬಡತನದ ರೇಖೆಯ ಕೆಳಗಿದ್ದು ೯ನೇ ತರಗತಿವರೆಗೆ ಕಲಿತ ಅರೆ ಉದ್ಯೋಗಿ ಅಥವಾ ನಿರುದ್ಯೋಗಿ ಯುವಕರಿಗೆ ಯೋಜಿತ ಉದ್ಯಮ ವೆಚ್ಚದ ಶೇ..೧೫ ರ ಸಹಾಯಧನದನ್ವಯ ರೂ.೫೦,೦೦೦/- ದ ಬ್ಯಾಂಕು ಸಾಲದ ನೆರವು ನೀಡಲಾಗುವುದು. ಪ್ರಯೋಜನಾರ್ಥಿಗಳು ತೊಡಗಿಸಬೇಕಾದ ಮೂಲಧನ ಶೇ..೫ ರಷ್ಟು ಮಾತ್ರ. ಪಾಲುದಾರಿಕೆ ಸಮ್ಮತಿಸಲ್ಪಟ್ಟಿದ್ದರೂ ಅವರ ಒಟ್ಟು ಯೋಜಿತ ಉದ್ಯಮ ವೆಚ್ಚವು ವ್ಯಕ್ತಿಗತ ಮಿತಿಯನ್ನನುಸರಿಸಿ ಪಾಲುದಾರರಿಗಿರುವ ಒಟ್ಟು ಮೊತ್ತಕ್ಕೆ ಸೀಮಿತವಾಗಿರುತ್ತದೆ. ಗುಂಪಾಗಿ ಸ್ವ-ಉದ್ಯೋಗ ಕೈಗೊಳ್ಳಲಿಚ್ಛಿಸುವ ನಗರದ ಬಡ ಮಹಿಳೆಯರಿಗೆ ಈ ಯೋಜನೆಯು ವಿಶೇಷ ಸವಲತ್ತನ್ನು ಒದಗಿಸುತ್ತದೆ. ಕನಿಷ್ಠ ೧೦ ಮಹಿಳೆಯರಿಂದ ಕೂಡಿದ ಇಂಥ ಪ್ರತೀ ಗುಂಪು ರೂ.೧.೨೫ ಲಕ್ಷ ಇಲ್ಲವೇ ಯೋಜಿತ ಉದ್ಯಮ ವೆಚ್ಚದ ಶೇ.೫೦ ಇವೆರಡರಲ್ಲಿ ಯಾವುದು ಕಡಿಮೆ ಅದಕ್ಕೆ ಸೀಮಿತವಾದ ಸಹಾಯಧನ ಪಡೆಯಲು ಅರ್ಹರು. ಯೋಜನೆಯಡಿ ಆಯ್ಕೆಯಾದ ಉದ್ಯಮೋತ್ಸಾಹಿಗಳಿಗೆ ಸರ್ಕಾರವು ತರಬೇತಿಯನ್ನು ನೀಡುತ್ತದೆ. ನಗರದ ಸ್ಥಳೀಯ ಆಡಳಿತ ವರ್ಗವು ಇದರ ಅನುಷ್ಠಾನದ ಹೊಣೆ ಹೊರುತ್ತದೆ.

**೫) ಉದ್ಯೋಗಿನಿ (Women Entrepreneur):** ೧೯೯೬-೯೭ ರಲ್ಲಿ ಆರಂಭಿಸಲಾದ ಈ ಹೊಸ ಯೋಜನೆಯು ಮಹಿಳಾ ಉದ್ಯಮಿಗಳಿಗೆ ವ್ಯಾಪಾರ ಮತ್ತು ಸೇವಾ ಉದ್ಯೋಗಗಳಿಗಾಗಿ ರೂ.೧,೦೦,೦೦೦/- ಲಕ್ಷದವರೆಗಿನ ಸಹಾಯಧನಯುಕ್ತ ಸಾಲದ ನೆರವನ್ನು ನೀಡುವ ಉದ್ದೇಶವನ್ನು ಹೊಂದಿದೆ. ಸಹಾಯಧನವು ಯೋಜಿತ ಉದ್ಯೋಗ ವೆಚ್ಚದ ಶೇ.೨೦ರ ಮಿತಿಗೊಳಪಟ್ಟಿದೆ. ಆದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ವಿಕಲಾಂಗ ಮತ್ತು ವಿಧವೆಯರಾದ ಮಹಿಳೆಯರು ಶೇ.೩೦ ರನ್ನು ಹೆಚ್ಚಿನ ಸಹಾಯಧನಕ್ಕೆ ಅರ್ಹರು. ಪ್ರಯೋಜನಾರ್ಥಿಗಳ ವಾರ್ಷಿಕ ಮಿತಿ ರೂ.೨೫,೦೦೦/- ಅಥವಾ ಅದಕ್ಕೂ ಕಡಿಮೆಯಾಗಿರಬೇಕೆನ್ನುವುದು ಅರ್ಹತೆಯ ನಿಯಮ. ಈ ಯೋಜನೆಯ ಅನುಷ್ಠಾನದ ಹೊಣೆಯನ್ನು ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆಯು ನಿರ್ವಹಿಸುತ್ತದೆ.

**೬) 'ಸ್ವಾವಲಂಬನ' ಮೃದುಸಾಲ ಯೋಜನೆ:** ಅರ್ಹ ವ್ಯಕ್ತಿಗಳಿಗೆ ಈ ಯೋಜನೆಯಡಿಯಲ್ಲಿ ಬ್ಯಾಂಕುಗಳ ಮೂಲಕ ವ್ಯಾಪಾರ ಅಭಿವೃದ್ಧಿ, ಸಣ್ಣ ಪ್ರಮಾಣದ ಉದ್ದಿಮೆಗಳ ಪ್ರಾರಂಭ, ಸೇವಾ ಉದ್ಯಮ, ಕೃಷಿ ಇತ್ಯಾದಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಆರ್ಥಿಕ ನೆರವು ನೀಡಲಾಗುತ್ತದೆ. ಯೋಜನೆಯನ್ವಯ ಸಹಾಯಕ್ಕೆ ಅರ್ಹರಾಗಲು, ಅರ್ಜಿದಾರರು ಜನ್ಮತಃ ಅಥವಾ ವಾಸ್ತವ್ಯದಲ್ಲಿ ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದು ಧಾರ್ಮಿಕ ಅಲ್ಪಸಂಖ್ಯಾತರ ಗುಂಪಿಗೆ ಸೇರಿರಬೇಕು. ಅಲ್ಲದೆ ಅರ್ಜಿದಾರರ ಕುಟುಂಬದ ಒಟ್ಟು ವಾರ್ಷಿಕ ಆದಾಯ ರೂ.೨೨,೦೦೦/– ವನ್ನು ಮೀರಿರಬಾರದು. ಹಾಗೆಯೇ ಅರ್ಜಿದಾರರು ವ್ಯಾಪಾರ ಅಥವಾ ತಮ್ಮದೇ ಆದ ಉದ್ಯೋಗ ಪ್ರಾರಂಭಿಸಲು ಅಗತ್ಯವುಳ್ಳ ಕೌಶಲ್ಯ ಮತ್ತು ಅನುಭವಗಳನ್ನು ಹೊಂದಿರಬೇಕು. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಅರ್ಜಿದಾರರನ್ನು ಗುರುತಿಸಿ ಅವರ ಅರ್ಜಿಯನ್ನು ಸಂಬಂಧಪಟ್ಟ ಬ್ಯಾಂಕಿಗೆ ಅವರು ಕೈಗೊಳ್ಳುವ ಉದ್ಯಮದ ಸಾಧ್ಯತೆ ಮತ್ತು ಲಾಭದಾಯಕತೆಗಳ ಪರಶೀಲನೆಗಾಗಿ ಕಳುಹಿಸಿ ಸಮರ್ಪಕವೆನಿಸಿದ ಮೇಲೆ ಮಂಜೂರು ಮಾಡಲಾಗುತ್ತದೆ.

**೭) ಚೈತನ್ಯ ಸಾಲ ಯೋಜನೆ:** ಈ ಯೋಜನೆಯಡಿಯಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಹಿಂದುಳಿದ ವರ್ಗಕ್ಕೆ ಸೇರಿದ ಪ್ರಯೋಜನಾರ್ಥಿಗಳಿಗೆ ಗರಿಷ್ಟ ಮಿತಿ ರೂ.೫೦,೦೦೦/– ಗೆ ಒಳಪಟ್ಟು ಅವರು ಕೈಗೊಳ್ಳುವ ಉದ್ಯಮ ವೆಚ್ಚದ ಶೇ.೫೦ ರ ಸಹಾಯಧನ ನೀಡುವುದಲ್ಲದೆ, ಅವರಿಗೆ ಆದಾಯ ತರುವ ಉದ್ದಿಮೆ, ಸೇವಾ ಉದ್ಯಮ ಮತ್ತು ವ್ಯಾಪಾರ ರಂಗದ ಅನೇಕ ಚಟುವಟಿಕೆಗಳಿಗೆ ಬ್ಯಾಂಕು ಮತ್ತು ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆಯಲು ನೆರವಾಗುತ್ತದೆ.

| ೨೦೦೮–೦೯ | ಗುರಿ | ಸಾಧನೆ |
|---|---|---|
| ಚೈತನ್ಯ ಸಾಲ ಯೋಜನೆ | ೨೬೧ | ೨೦೫ |
| ಸ್ವಾವಲಂಬನ ಮೃದು ಸಾಲ ಯೋಜನೆ | ೨೫೦ | ೧೫೬ |

**೮) ಕಾವೇರಿ ಸರಸ್ :** ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡತನ ನಿರ್ಮೂಲನೆಗೆ ಸ್ವರ್ಣ ಜಯಂತಿ ಗ್ರಾಮ ಸ್ವರಾಜ್‌ಗಾರ್ ಯೋಜನೆಯಡಿಯಲ್ಲಿ ಶೇ ೭೫.೨೫ ಅನುಪಾತದಲ್ಲಿ ಸಾಲ–ಸಹಾಯಧನ ಒದಗಿಸಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿನ ಸಂಪನ್ಮೂಲ ಮತ್ತು ಮಾನವ ಶಕ್ತಿ ಉಪಯೋಗಿಸಿಕೊಂಡು ಗ್ರಾಮೀಣ ಜನರಿಗೆ ಉದ್ಯೋಗ ನೀಡುವುದರ ಜೊತೆಗೆ ಅವರು ಉತ್ಪಾದಿಸಿದ ಪಾರಂಪರಿಕ ಗುಡಿ ಕೈಗಾರಿಕಾ ಉತ್ಪನ್ನಗಳ ಮಾರಾಟಕ್ಕೆ ಪ್ರತಿ ವರ್ಷ ಕಾವೇರಿ ಸರಸ್ ಮೇಳವನ್ನು ಬೆಂಗಳೂರು ನಗರದಲ್ಲಿ ಏರ್ಪಡಿಸುತ್ತಿದೆ.

**೯) ಯಶಸ್ವಿನಿ ವಿಮಾ ಯೋಜನೆ:** ಕರ್ನಾಟಕ ಸರ್ಕಾರವು ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ರೈತ ಸದಸ್ಯರಿಗೆ ಯಶಸ್ವಿನಿ ವಿಮಾ ಯೋಜನೆಯನ್ನು ಪ್ರಾರಂಭಿಸಿದ್ದು, ಈ ಬ್ಯಾಂಕು ಜಿಲ್ಲೆಯಲ್ಲಿ ೩೪೦೦೦ ರೈತರಿಗೆ ವಿಮಾ ಯೋಜನೆಯ ಸೌಲಭ್ಯವನ್ನು ನೀಡಿದೆ.

**ಯಶಸ್ವಿನಿ ಯೋಜನೆ**

| ಕ್ರ.ಸಂ | ವಿವರಗಳು | ೨೦೦೮–೦೯ | ೨೦೦೯–೧೦ |
|---|---|---|---|
| ೧ | ಸಾಲ ಪಡೆದ ಸಾಲಗಾರರ ಸಂಖ್ಯೆ | ೩೯೨೯ | ೪೯೬೮೦ |
| ೨ | ನೋಂದಣಿಗಾಗಿ ಗುರಿ ನಿಗದಿಪಡಿಸಿದ ಸದಸ್ಯರ ಸಂಖ್ಯೆ | ೪.೦೦ ಲಕ್ಷ | ೪.೦೦ ಲಕ್ಷ |
| ೩ | ನೋಂದಣಿ ಮಾಡಿದ ಸದಸ್ಯರ ಸಂಖ್ಯೆ | ೧,೯೧,೮೬೧ | ೬೬,೨೦೨ |
| ೪ | ಸಂಗ್ರಹಿಸಿದ ಮೊತ್ತ | ೨,೩೦,೨೩,೩೨೦ | ೯೨,೬೮,೨೮೦ |
| ೫ | ಶಸ್ತ್ರಚಿಕಿತ್ಸೆ ಮಾಡಿದ ಜನರ ಸಂಖ್ಯೆ | ೪,೧೪೩ | – |
| ೬ | ಚಿಕಿತ್ಸೆಗಾಗಿ ನೀಡಿದ ಮೊತ್ತ | ೩,೫೨,೮೧,೮೦೧ | – |
| ೭ | ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದ ಸದಸ್ಯರ ಸಂಖ್ಯೆ | ೩,೭೨೬ | – |
| ೮ | ಸಂಘಗಳ ನೋಂದಣಿ ಕಾನೂನು ಅನುಷ್ಠಾನ | – | – |

ಜಿಲ್ಲೆಯ ರೈತರಿಗೆ ಕೃಷಿ ಅಭಿವೃದ್ಧಿಗಾಗಿ ಶೇ. ೪ರ ಬಡ್ಡಿದರದಲ್ಲಿ ಸಾಲ ನೀಡುತ್ತಿದೆ. ಬ್ಯಾಂಕು ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ, ಕೈಗಾರಿಕಾ ಮತ್ತು ನೇಕಾರರ ಸಂಘಗಳು, ಪಟ್ಟಣ ಸಹಕಾರ ಸಂಘಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ನೆರವು ನೀಡುತ್ತಿದೆ. ಅಲ್ಲದೆ, ೧೯೯೯–೨೦೦೦ ರಿಂದ ಜಾರಿಗೊಳಿಸಿದ ಕಲ್ಪತರು ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯನ್ವಯ ರೈತರಿಗೆ ಸಾಲವನ್ನು ಸಹಕಾರ ಬ್ಯಾಂಕ್ ಒದಗಿಸುತ್ತಿದೆ. ಸಾಲ ಪಡೆಯುವ ರೈತರನ್ನು ವೈಯಕ್ತಿಕ ಅಪಘಾತ ವಿಮಾ ಯೋಜನೆಯ ವ್ಯಾಪ್ತಿಗೂ ಒಳಪಡಿಸಲಾಗುತ್ತಿದೆ. ಜಿಲ್ಲೆಯಲ್ಲಿ ಈ ಯೋಜನೆ ಪ್ರಾರಂಭವಾದಂದಿನಿಂದ ೨೦೦೯ರವರೆಗೆ ಒಟ್ಟು ೫೦೫೮೪ ಕಿಸಾನ್ ಕ್ರೆಡಿಟ್ ಕಾರ್ಡುಗಳನ್ನು ಸದಸ್ಯ ಸಹಕಾರ ಸಂಘಗಳ ಮೂಲಕ ರೈತರಿಗೆ ಹಂಚಲಾಗಿದೆ. ಈ ಕಾರ್ಡುಗಳು ರೂ.೩೯೮೦.೦೦ ಲಕ್ಷದಷ್ಟು ಸಾಲದ ಮಿತಿಯನ್ನು ಹೊಂದಿವೆ. ಗ್ರಾಮೀಣ ಬಡ ಜನರ ಆರ್ಥಿಕಾಭಿವೃದ್ಧಿಯಲ್ಲಿ ಪರಿಣಾಮಕಾರಿ ಪಾತ್ರ ವಹಿಸುತ್ತಿರುವ ಸ್ವಸಹಾಯ ಗುಂಪುಗಳಿಗೂ ಜಿಲ್ಲಾ ಬ್ಯಾಂಕು ಸಾಲ ಸೌಲಭ್ಯಗಳನ್ನು ಒದಗಿಸುತ್ತಿದೆ.

## ಪ್ರಾಂತೀಯ(ಕಾವೇರಿ ಕಲ್ಪತರು) ಗ್ರಾಮೀಣ ಬ್ಯಾಂಕು

ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳ ೧೯೭೬ರ ಶಾಸನದ ಪ್ರಕಾರ ಭಾರತ ಸರ್ಕಾರ, ರಾಜ್ಯ ಸರ್ಕಾರ ಮತ್ತು ಪ್ರವರ್ತಕ ಬ್ಯಾಂಕುಗಳ ಸಹಭಾಗಿತ್ವದಲ್ಲಿ ತುಮಕೂರು ಜಿಲ್ಲೆಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪ್ರಾಯೋಜಿತ ಕಲ್ಪತರು ಗ್ರಾಮೀಣ ಬ್ಯಾಂಕನ್ನು ೩೧–೦೩–೧೯೮೨ರಲ್ಲಿ ಸ್ಥಾಪಿಸಲಾಯಿತು. ವಾಣಿಜ್ಯ ಬ್ಯಾಂಕುಗಳು ತಮ್ಮ ಬ್ಯಾಂಕಿಂಗ್ ವ್ಯವಹಾರಗಳನ್ನು ಕೇವಲ ನಗರ ಪಟ್ಟಣಗಳಿಗೆ ಮಾತ್ರ ಸೀಮಿತಗೊಳಿಸಿದ್ದು, ದೇಶದ ಶೇ. ೭೦ರಷ್ಟು ಜನಸಂಖ್ಯೆಯು ಸುಮಾರು ಐದು ಲಕ್ಷ ಗ್ರಾಮಗಳಲ್ಲಿ ವಾಸಿಸುವ ರೈತರು, ಕೃಷಿಕಾರ್ಮಿಕರು, ಕುಶಲಕರ್ಮಿಗಳು, ಮುಂತಾದವರನ್ನು ಒಳಗೊಂಡಿದೆ. ಈ ಗ್ರಾಮೀಣ ಜನರ ಆರ್ಥಿಕ ಸ್ಥಿತಿಗತಿ, ಬೇಸಾಯ– ಕೃಷಿಯೇತರ ಚಟುವಟಿಕೆ, ಗೃಹ, ಕರಕುಶಲ ಹಾಗೂ ಗ್ರಾಮೋದ್ಯೋಗ ಮೊದಲಾದವುಗಳನ್ನು ನಗರ, ಪಟ್ಟಣಗಳಲ್ಲಿರುವಂತೆಯೇ ಸಮನಾದ ಅಭಿವೃದ್ಧಿಯನ್ನು ಸಾಧಿಸುವ ಜವಾಬ್ದಾರಿಯನ್ನು ವಾಣಿಜ್ಯ ಬ್ಯಾಂಕುಗಳು ಹೊರಲಾರವೆಂದು ಮನಗಂಡ ಸರ್ಕಾರ, ಗ್ರಾಮೀಣ ಆರ್ಥಿಕತೆಯನ್ನು ಉತ್ತಮ ಪಡಿಸುವ ಗುರಿಯಿಂದ ಗ್ರಾಮೀಣ ಪರಿಸರಕ್ಕೆ ಹೊಂದಿಕೊಳ್ಳುವಂತೆ ಪ್ರತ್ಯೇಕ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲು ಮುಂದಾಯಿತು. ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ನೆರವಾಗುವ ಗುರಿಯಿಂದ ಕೃಷಿಕರ ಆರ್ಥಿಕ ಅಗತ್ಯಗಳನ್ನು ಪೂರೈಸುವುದಕ್ಕೆ ಸ್ಥಾಪನೆಗೊಂಡ ಈ ಬ್ಯಾಂಕುಗಳು ಗ್ರಾಮೀಣ ಮತ್ತು ಕೃಷಿ ಅಭಿವೃದ್ಧಿಗೆ ಪೂರ್ಣ ಪ್ರಮಾಣದಲ್ಲಿ ಸಕಾಲದಲ್ಲಿ ಹಣದ ಸೌಲಭ್ಯವನ್ನು ಒದಗಿಸುತ್ತವೆ. ರೈತರು ತಮ್ಮ ಲೇವಾದೇವಿದಾರರಿಂದ ಪುನಃ ಸಾಲಕ್ಕೆ ಕೈಚಾಚುವುದನ್ನು ತಪ್ಪಿಸುವ ಗುರಿಯಿಂದ ಅತೀ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರು; ಹಿಂದುಳಿದ ದುರ್ಬಲ ವರ್ಗದ ಬಡವರ ಜೀವನಮಟ್ಟವನ್ನು ಸುಧಾರಿಸಲು ನೆರವಾಗುವಂತೆ ಆರ್ಥಿಕ ನೆರವು ನೀಡುವುದೇ ಗ್ರಾಮೀಣ ಬ್ಯಾಂಕುಗಳ ಧ್ಯೇಯೋದ್ದೇಶವಾಗಿರುತ್ತದೆ.

ಜಿಲ್ಲೆಯಲ್ಲಿ ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕು ೧೯೮೨ರಲ್ಲಿ ಸ್ಥಾಪನೆಯಾದ ನಂತರ ಜಿಲ್ಲೆಯಲ್ಲಿ ೨೦೦೯ ರ ಮಾರ್ಚ್ ಅಂತ್ಯಕ್ಕೆ ಒಟ್ಟು ೪೫ ಬ್ಯಾಂಕು ಶಾಖೆಗಳನ್ನು ಹೊಂದಿತ್ತು. ಇವುಗಳಲ್ಲಿ ನಗರಗಳಲ್ಲಿ ಮೂರು, ಪುರಸಭಾ ಪಟ್ಟಣಗಳಲ್ಲಿ ೧೨ ಹಾಗೂ ಉಳಿದ ೩೩ ಶಾಖೆಗಳು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪನೆಗೊಂಡಿವೆ. ತುಮಕೂರು ಜಿಲ್ಲೆಯ ಗ್ರಾಮೀಣ ಜನರ ಅಭ್ಯುದಯಕ್ಕಾಗಿ ಕೃಷಿಯಲ್ಲಿ ನಿರತರಾಗಿರುವ ಅತೀ ಸಣ್ಣ ರೈತರು, ಕೃಷಿ ಕಾರ್ಮಿಕರು, ಅಲ್ಪಸಂಖ್ಯಾತರು, ಹಿಂದುಳಿದ ಬಡವರು, ಮಹಿಳೆಯರು, ಹಿರಿಯ ನಾಗರಿಕರು, ವಿಕಲಚೇತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಈ ಬ್ಯಾಂಕುಗಳು ಉತ್ತಮ ಸೇವೆ ಸಲ್ಲಿಸುತ್ತಾ ಬಂದಿವೆ. ಗ್ರಾಮೀಣ ಜನರ ಉಳಿತಾಯದ ಹಣವನ್ನೂ ಠೇವಣಿ ರೂಪದಲ್ಲಿ ಸ್ವೀಕರಿಸುವುದು. ಅವರಲ್ಲಿ ಉಳಿತಾಯ ಪ್ರವೃತ್ತಿ ಹೆಚ್ಚುವಂತೆ ಉತ್ತೇಜನ ನೀಡುವುದು. ಪ್ರತೀ ತಿಂಗಳು ಗ್ರಾಮಸ್ಥರೊಂದಿಗೆ ಮಾರ್ಗದರ್ಶಿ ಬ್ಯಾಂಕುಗಳ ಅಧಿಕಾರಿ ವರ್ಗದವರು ನೇರ ಸಂವಾದ ಏರ್ಪಡಿಸಿ ಬ್ಯಾಂಕುಗಳ ಉದ್ದರಿ ನೀತಿಯ ಬಗ್ಗೆ ಪರಿಚಯಿಸುವ ಮೂಲಕ ಬ್ಯಾಂಕು ವ್ಯವಹಾರಗಳಲ್ಲಿ ಗ್ರಾಮಸ್ಥರು ತೊಡಗಿಸಿಕೊಳ್ಳುವಂತೆ ಪ್ರಚಾರಾಂದೋಲನದಲ್ಲಿ ಕಾರ್ಯಪ್ರವೃತ್ತರಾಗಿದ್ದು, ಗ್ರಾಮಸ್ಥರೊಂದಿಗೆ ಸಮಾಜ ಮುಖಿಗಳಾಗಿದ್ದಾರೆ.

ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಸಮಗ್ರ ಗ್ರಾಮೀಣ ಅಭಿವೃದ್ಧಿಗೆ, ಕಿರು ನೀರಾವರಿ ಯೋಜನೆ, ಕುಡಿಯುವ ನೀರಿನ ಪೂರೈಕೆಗೆ, ಕಿರು ಅರಣ್ಯ ಅಭಿವೃದ್ಧಿ, ತೋಟಗಾರಿಕೆ, ರೇಷ್ಮೆ,, ಹೈನುಗಾರಿಕೆ, ಕುರಿ ಕೋಳಿ ಸಾಕಣೆ, ಆಹಾರ ಸಂಸ್ಕರಣ ಮತ್ತು ವಿತರಣಾ ವ್ಯವಸ್ಥೆ, ಆಹಾರ ಭದ್ರತೆ ಮುಂತಾದ ಸ್ವಉದ್ಯೋಗ ಕಾರ್ಯಗಳಲ್ಲಿ ನಿರುದ್ಯೋಗಿ

ಯುವಕರು ತೊಡಗುವಂತೆ ಆರ್ಥಿಕ ನೆರವು ನೀಡುವುದು. ಸಮಗ್ರ ಗ್ರಾಮೀಣ ಉದ್ಯೋಗಗಳ ನಿರ್ಮಾಣಕ್ಕೆ, ಸ್ತ್ರೀ ಶಕ್ತಿ ಯೋಜನೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ದುರ್ಬಲ ವರ್ಗದವರು, ಅಲ್ಪಸಂಖ್ಯಾತರು, ಬಡತನದಲ್ಲಿರುವ ಹಿರಿಯ ನಾಗರಿಕರು. ಸಣ್ಣ ಪ್ರಮಾಣದ ಕೈಗಾರಿಕೆಗಳು, ಕರಕುಶಲ ಗ್ರಾಮೋದ್ಯೋಗ ಇವೇ ಮೊದಲಾದ ಚಟುವಟಿಕೆಗಳಿಗೆ ಕಾವೇರಿ ಗ್ರಾಮೀಣ ಬ್ಯಾಂಕು ಆರ್ಥಿಕ ನೆರವು ನೀಡುತ್ತಾ ಬಂದಿದೆ. ೨೦೧೪ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ಒಟ್ಟು ೬೨ ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳಿದ್ದು ಅವುಗಳ ಒಟ್ಟ ಠೇವಣಿ ಮೊತ್ತವು ೯೬೪೧೩ ಲಕ್ಷ ರೂ.ಗಳಾಗಿದ್ದು. ೮೯೧೯೮ ಲಕ್ಷ ರೂ.ಸಾಲ ನೀಡಲಾಗಿತ್ತು.

## ಸ್ತ್ರೀಶಕ್ತಿ ಯೋಜನೆ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ)

ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಸ್ತ್ರೀಶಕ್ತಿ ಯೋಜನೆಯನ್ನು ೨೦೦೦-೦೧ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿದೆ. ಗ್ರಾಮೀಣ ಮಹಿಳೆಯರ ಸ್ವಸಹಾಯ ಗುಂಪುಗಳ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಸಶಕ್ತತೆಯನ್ನು ತರುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಯೋಜನೆಯ ಮಹಿಳಾ ಸ್ವಸಹಾಯ ಗುಂಪುಗಳ ವಿವರವನ್ನು ಕೋಷ್ಟಕ ೬.೧೩ ರಲ್ಲಿ ನೀಡಿದೆ.

**ಕೋಷ್ಟಕ ೬.೧೩: ೩೦-೦೩-೨೦೦೮ರ ಅಂತ್ಯಕ್ಕೆ ತಾಲೂಕುವಾರು ಸ್ವ-ಸಹಾಯ ಗುಂಪುಗಳ ಅಂಕಿ-ಅಂಶಗಳು**

| ಕ್ರ. ಸಂ | ತಾಲೂಕು | ಸ್ವಸಹಾಯ ಗುಂಪುಗಳ ಸಂಖ್ಯೆ | ಪರಿಶಿಷ್ಟ ಜಾತಿ ಮಹಿಳೆಯರು | ಪರಿಶಿಷ್ಟ ಪಂಗಡ ಮಹಿಳೆಯರು | ಒಟ್ಟು ಮಹಿಳೆಯರು |
|---|---|---|---|---|---|
| ೧ | ಚಿಕ್ಕನಾಯಕನಹಳ್ಳಿ | ೧೦೩೩ | ೩೩೫೯ | ೧೪೫೫ | ೧೭೦೮೯ |
| ೨ | ಗುಬ್ಬಿ | ೧೧೮೦ | ೩೪೦೬ | ೨೨೨೭ | ೧೯೯೯೬ |
| ೩ | ಕೊರಟಗೆರೆ | ೫೯೮ | ೨೪೮೪ | ೨೨೪೨ | ೧೨೪೧೬ |
| ೪ | ಕುಣಿಗಲ್ | ೮೦೮ | ೧೦೨೧ | ೧೯೭ | ೧೪೧೧೩೬ |
| ೫ | ಮಧುಗಿರಿ | ೯೮೫ | ೩೬೮೭ | ೨೦೨೦ | ೧೫೯೩೦ |
| ೬ | ಪಾವಗಡ | ೯೧೪ | ೪೧೫೯ | ೨೪೨೯ | ೧೪೪೨೫ |
| ೭ | ಶಿರಾ | ೯೮೫ | ೪೬೦೮ | ೧೮೨೧ | ೧೬೭೧೫ |
| ೮ | ತಿಪಟೂರು | ೯೫೩ | ೨೫೦೭ | ೭೫೧ | ೧೫೫೪೬ |
| ೯ | ತುಮಕೂರು | ೧೫೩೦ | ೫೯೪೮ | ೨೪೨೭ | ೨೮೦೬೮ |
| ೧೦ | ತುರುವೇಕೆರೆ | ೮೦೧ | ೨೧೫೧ | ೩೭೬ | ೧೩೩೫೮ |
| ಒಟ್ಟು | | **೯೭೮೭** | **೩೩೩೧೦** | **೧೫೯೪೫** | **೨೯೪೫೫೯** |

ಸ್ವ-ಸಹಾಯ ಗುಂಪುಗಳಿಗೆ ಸಾಲ ನೀಡುವ ಕಾರ್ಯಕ್ರಮದಲ್ಲಿ ಬ್ಯಾಂಕು ತನ್ನ ಅತ್ಯುನ್ನತ ಕಾರ್ಯಸಾಧನೆಯನ್ನು ಮುಂದುವರೆಸಿಕೊಂಡು ಬಂದಿದೆ. ಇದರ ಕಾರ್ಯಸಾಧನೆಯನ್ನು ಮೆಚ್ಚಿ ನಬಾರ್ಡ್ ಸತತವಾಗಿ ಮೂರು ಸಲ ಬಹುಮಾನವನ್ನು ನೀಡಿದೆ. ಜೊತೆಗೆ ತುಮಕೂರು ಜಿಲ್ಲೆಯಲ್ಲಿ ರೈತ ಸಂಘಗಳಿಗೆ ನಬಾರ್ಡ್ ಪ್ರಶಸ್ತಿಯನ್ನು ಸಹ ನೀಡಲಾಗಿದೆ. ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿಗೆ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿಗೆ ವಿಶೇಷ ಆರ್ಥಿಕ ನೆರವು ನೀಡುತ್ತಾ ಬಂದಿದೆ.

ಬ್ಯಾಂಕು, ರೈತರ ತೊಂದರೆಗಳಿಗೆ ಸ್ಪಂದಿಸಿ ಸಾಲ ಮನ್ನಾ ಮತ್ತು ಸಾಲ ಪರಿಹಾರದ ಯೋಜನೆಯನ್ನು ಜಾರಿಗೆ ತಂದಿದೆ. ೩೧-೦೩-೨೦೦೯ರ ಅಂತ್ಯದಲ್ಲಿದ್ದಂತೆ ಗ್ರಾಮೀಣ ಬ್ಯಾಂಕಿನ ಸಮಗ್ರ ಠೇವಣಿ ೨೬೨೨೪.೯೧ ಲಕ್ಷ ರೂ.ಗಳಷ್ಟಿದೆ ಮತ್ತು ಮುಂಗಡವಾಗಿ ನೀಡಿದ ಸಾಲ ಮೊತ್ತ ರೂ. ೩೩೫೯೧.೮೬ ಲಕ್ಷಗಳಷ್ಟಿದೆ. ಕೃಷಿ ವಲಯಕ್ಕೆ ಅವಶ್ಯಕತೆಗೆ ಅನುಗುಣವಾಗಿ ಸಕಾಲಕ್ಕೆ ಸಾಲ ನೀಡುತ್ತಾ ಬಂದಿದೆ. ಬೆಳೆ ಸಾಲ, ಅವಧಿ ಸಾಲ, ಆರ್ಥಿಕ ಸಂಕಷ್ಟಕ್ಕೊಳಗಾದ ರೈತರಿಗೆ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಂಡಿದೆ. ೩೧-೦೩-೨೦೦೯ರವರೆಗೆ ತುಮಕೂರು ಜಿಲ್ಲೆಯ ಜಿಲ್ಲಾ ಸಾಲ

ಯೋಜನೆಯಂತೆ ಆದ್ಯತಾ ವಲಯಗಳಿಗೆ ೬೬೮೬೩.೪೭ ಲಕ್ಷ ರೂ.ಗಳು ಮತ್ತು ಉಳಿದ ವಲಯಗಳಿಗೆ ೧೩೭೮೬.೬೩ ಲಕ್ಷ ರೂ.ಗಳನ್ನು ಸಾಲ ನೀಡಿದೆ.

ಬ್ಯಾಂಕು ಕಿಸಾನ್ ಕ್ರೆಡಿಟ್ ಕಾರ್ಡನ್ನು ನೀಡುತ್ತಿದೆ. ಕೃಷಿ ಚಿನ್ನದ ಕಾರ್ಡನ್ನು ಕೃಷಿ ಚಟುವಟಿಕೆಗಳಿಗಾಗಿ ಅವಧಿ ಸಾಲಗಳನ್ನು ಪಡೆಯಲು ಬ್ಯಾಂಕು ಅನುಷ್ಠಾನಕ್ಕೆ ತಂದಿದೆ. ಎಲ್ಲಾ ಕಾರ್ಡುದಾರರನ್ನು ವೈಯಕ್ತಿಕ ಅಪಘಾತ ವಿಮೆ ಯೋಜನೆಯಡಿಯಲ್ಲಿ ಸೇರಿಸಲಾಗಿದೆ. ಸಾಕಷ್ಟು ಆದಾಯವಿಲ್ಲದ ಹಿರಿಯ ನಾಗರಿಕರಿಗೆ 'ವಿಲೋಮ ಅಡಮಾನ ಯೋಜನೆ'ಯನ್ನು ತಮ್ಮದೇ ಆದ ಮನೆ ಹೊಂದಿರುವವರಿಗೆ ಸಾಲ ನೀಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಗೃಹಸಾಲ, ಸಣ್ಣ, ಮದ್ಯಮ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ಸಾಲ ನೀಡಲು ಬ್ಯಾಂಕು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದೆ. ಬ್ಯಾಂಕು ಗೃಹ ಸಾಲ ಮೇಳವನ್ನು ನಡೆಸಿ, ಗೃಹ ನಿರ್ಮಾಣಕ್ಕೆ ಅರ್ಹ ವ್ಯಕ್ತಿಗಳಿಗೆ ಸಾಲ ನೀಡುತ್ತಿದೆ.

ಸಾಲ ಮನ್ನಾ ಮತ್ತು ಸಾಲ ಪರಿಹಾರದ ಯೋಜನೆಯನ್ನು ಬ್ಯಾಂಕ್ ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಅದರಂತೆ, ಜಿಲ್ಲೆಯ ತಾಲೂಕು/ಹೋಬಳಿ ಹಾಗೂ ಗ್ರಾಮಗಳಲ್ಲಿ ಅಧಿಸೂಚಿತ ಬೆಳೆಗಳನ್ನು ರಾಷ್ಟ್ರೀಯ ಕೃಷಿ ಭೀಮಾ ಯೋಜನೆಯಡಿಯಲ್ಲಿ ವಿಮೆ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ. ಹವಾಮಾನಕ್ಕನುಗುಣವಾಗಿ ಬೆಳೆ ವಿಮೆಯನ್ನು ಜಾರಿಗೊಳಿಸಲಾಗಿದೆ. ಸಾಲ ವಸೂಲಾತಿಯ ಎಲ್ಲಾ ಪ್ರಯತ್ನಗಳ ನಂತರವೂ ವಸೂಲಾಗದ ಸಾಲಗಳನ್ನು ರದ್ದುಪಡಿಸುವ ಕ್ರಮವನ್ನು ಕೈಗೊಂಡಿದೆ. ಬ್ಯಾಂಕಿನ ಮಹಿಳಾ ಅಭಿವೃದ್ಧಿ ವಿಭಾಗವು ಮಹಿಳೆಯರಿಗೆ ಸಾಲ ನೀಡುವಲ್ಲಿ ಮತ್ತು ಮಹಿಳಾ ಸ್ವಸಹಾಯ ಸಂಘಗಳನ್ನು ಸ್ಥಾಪಿಸುವುದರಲ್ಲಿ ಬ್ಯಾಂಕು ಸಹಕಾರ ನೀಡುತ್ತಾ ಬಂದಿದೆ.

**ರೈತಸಂಘಗಳು**

ಜಿಲ್ಲೆಯಲ್ಲಿ ಈ ಬ್ಯಾಂಕುಗಳು ಸ್ಥಾಪಿಸಿರುವ ರೈತ ಸಂಘಗಳು ಅತ್ಯುತ್ತಮ ಸಾಧನೆಗಳನ್ನು ಮಾಡಿವೆ. ಬ್ಯಾಂಕುಗಳು ಮಹಿಳಾ ರೈತ ಸಂಘಗಳ ನಿರ್ಮಾಣಕ್ಕೆ ಹೆಚ್ಚು ಆದ್ಯತೆ ನೀಡಿದೆ. ಕುಟುಂಬ ಆರೋಗ್ಯ ತಪಾಸಣೆ, ನೇತ್ರ ಶಿಬಿರ, ಪ್ರಾಣಿಗಳ ಆರೋಗ್ಯ ತಪಾಸಣೆ ಮತ್ತು ಹೆಚ್ಚು ಅಂಕಗಳಿಸಿದ ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪ್ರಶಸ್ತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಸಾಂಸ್ಥಿಕೇತರ ಮೂಲಗಳಾದ ಸಾಹುಕಾರರು ಮತ್ತು ಖಾಸಗಿ ಲೇವಾದೇವಿದಾರರ ಮುಷ್ಠಿಯಿಂದ ಸಾಲಗಾರರನ್ನು ಬಿಡಿಸಲು ಬ್ಯಾಂಕು ಪ್ರತಿಯೊಂದು ಗ್ರಾಮದಲ್ಲಿ ಸಮೀಕ್ಷೆ ನಡೆಸಿ ಖಾಸಗಿ ಲೇವಾದೇವಿ ಮುಕ್ತಗ್ರಾಮ ಯೋಜನೆಯಡಿಯಲ್ಲಿ ಜನರಿಗೆ ಧನಸಹಾಯ ನೀಡಿದೆ.

**ನಬಾರ್ಡ್ ಸಂಸ್ಥೆಯ ಚಟುವಟಿಕೆಗಳು:** ನಬಾರ್ಡ್ ಸಂಸ್ಥೆಯು ಜಿಲ್ಲೆಯ ವಿವಿಧ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬ್ಯಾಂಕ್ ಹಾಗೂ ಇನ್ನಿತರ ಸಂಘ ಸಂಸ್ಥೆಗಳ ಮುಖಾಂತರ ರೈತರಿಗೆ ನಿರಂತರ ಸಹಕಾರವನ್ನು ನೀಡುತ್ತಿದೆ. ನಬಾರ್ಡ್ ಸಂಸ್ಥೆಯು ಬ್ಯಾಂಕುಗಳಿಗೆ ಮರುಸಾಲಯೋಜನೆ (Refinance) ಸಹಕಾರಿ ಹಾಗೂ ಗ್ರಾಮೀಣ ಬ್ಯಾಂಕುಗಳ ಮೇಲುಸ್ತುವಾರಿ ಹಾಗೂ ಮರುಸಾಲ ನೀಡುವಿಕೆಯ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಜಿಲ್ಲೆಯಲ್ಲಿರುವ ವಿವಿಧ ಸರಕಾರೇತರ ಸಂಘಟನೆಗಳಿಗೆ (NGO) ಸ್ವಸಹಾಯ ಸಂಘಗಳಿಗೆ ಬ್ಯಾಂಕಿನ ಸಿಬ್ಬಂದಿಗಳಿಗೆ ಸರಕಾರಿ ಅಧಿಕಾರಿಗಳಿಗೆ ಹಾಗೂ ಸ್ವಯಂ ಉದ್ಯೋಗ ಪಡೆಯಲಿಚ್ಛಿಸುವವರಿಗೆ ಉದ್ಯಮಶೀಲತೆಯ ತರಬೇತಿ ಕಾರ್ಯಕ್ರಮಗಳಿಗೆ ಹಾಗೂ ರೈತಮಿತ್ರ ಸಂಘಗಳಿಗೆ ನಬಾರ್ಡ್ ಹಣಕಾಸಿನ ನೆರವು ನೀಡುತ್ತಿದೆ. ನಬಾರ್ಡ್ ಸಂಸ್ಥೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಸದಾ ಬ್ಯಾಂಕು ಇನ್ನಿತರ ಸಂಘ ಸಂಸ್ಥೆ ಹಾಗೂ ಸರಕಾರಿ ಕಚೇರಿಗಳ ಸಮನ್ವಯದೊಂದಿಗೆ ಜೊತೆಗೂಡಿ ಗ್ರಾಮೀಣ ಅಭಿವೃದ್ಧಿಯಲ್ಲಿ ಕೈ ಜೋಡಿಸುತ್ತಿದ್ದಾರೆ. ನಬಾರ್ಡ್ ಸಂಸ್ಥೆಯ ಪ್ರತಿನಿಧಿಗಳು ಪ್ರತೀ ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ತುಮಕೂರು ಜಿಲ್ಲೆಯ ಪ್ರತಿನಿಧಿತ್ವವನ್ನು ಮೈಸೂರು ಜಿಲ್ಲೆಯ ನಬಾರ್ಡ್ ಪ್ರತಿನಿಧಿ ನಿಭಾಯಿಸುತ್ತಿದ್ದಾರೆ. ಬ್ಯಾಂಕುಗಳ ಸಾಲಯೋಜನೆಗೆ ಪೂರಕವಾಗಿ ನಬಾರ್ಡ್ ಮಾರ್ಗಸೂಚಿಯಾಗಿರುತ್ತದೆ.

ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಜಿಲ್ಲೆಯಲ್ಲಿ ಅತ್ಯಧಿಕ ಜನರಿಗೆ ಅದರಲ್ಲೂ ವಿಶೇಷವಾಗಿ ಗ್ರಾಮಸ್ಥರಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಿರುವುದು ನಿಜಕ್ಕೂ ಶ್ಲಾಘನೀಯವಾದುದು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲದೇ ಅನಿವಾಸಿ ಭಾರತೀಯ ಮೂಲದಿಂದಲೂ ಗಮನಾರ್ಹ ಸಂಪನ್ಮೂಲ ಸಂಗ್ರಹಿಸಿ ಅದನ್ನು ಸಮರ್ಪಕವಾಗಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಸೇವೆ ಸಲ್ಲಿಸಿವೆ. ಕೃಷಿ, ಉದ್ದಿಮೆ, ವ್ಯಾಪಾರ, ಸಾರಿಗೆ ಸಂಪರ್ಕ, ವಸತಿ, ಶಿಕ್ಷಣ, ನೀರಾವರಿ, ಮುಂತಾದ ಸೇವಾ ವಲಯಗಳ ಅಭಿವೃದ್ಧಿಗೆ ನೆರವು ನೀಡಿವೆ. ಜಿಲ್ಲೆಯ ಸಾಂಪ್ರದಾಯಿಕ ಚಟುವಟಿಕೆಗಳಾದ ರೇಷ್ಮೆ, ಕರಕುಶಲ ವಸ್ತುಗಳ

ಉತ್ಪಾದನೆ, ಕಿರು ಅರಣ್ಯ ಉತ್ಪನ್ನ, ಸಾಂಬಾರ ಹಾಗೂ ದಿನಸಿ ಪದಾರ್ಥಗಳು ಆಹಾರ ಸಂಸ್ಕರಣೆ ಮುಂತಾದವುಗಳಿಗೆ ಬೆಂಬಲ ನೀಡಿ ವಿದೇಶಿ ವಿನಿಮಯ ಗಳಿಸಲು ಬ್ಯಾಂಕುಗಳು ಕಾರಣವಾಗಿವೆ. ಇವುಗಳ ಜೊತೆಗೆ ಸರಕಾರಿ ಪ್ರವರ್ತಿತ ಅನುಷ್ಠಾನ, ಸ್ವಸಹಾಯ ಗುಂಪುಗಳಿಗೆ ಉತ್ತೇಜನ, ದಲಿತರು, ದುರ್ಬಲರು, ಹಿಂದುಳಿದ ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ; ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಂಪೂರ್ಣವಾಗಿ ಭಾಗಿಯಾಗಿ ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಯಶಸ್ವಿ ಯಾಗಿವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಬ್ಯಾಂಕುಗಳು ಜಿಲ್ಲೆಯ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತು ಅವರ ಶ್ರೇಯೋಭಿವೃದ್ಧಿಗೆ ಪೂರ್ಣ ಸಹಕಾರ, ಪ್ರೋತ್ಸಾಹಗಳನ್ನಿತ್ತು ಜಿಲ್ಲೆಯ ಅಭಿವೃದ್ಧಿಯ ವೇಗವರ್ಧಕಗಳಾಗಿವೆ ಎನ್ನುವುದಕ್ಕೆ ಅವು ಸಾಧಿಸಿದ ಅಂಕಿಅಂಶಗಳು ಸಾಕ್ಷಿಯಾಗಿವೆ.

ಗ್ರಾಮೀಣ ಏಳಿಗೆಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯು ಪ್ರಮುಖ ಪಾತ್ರ ವಹಿಸುವುದನ್ನು ಮನಗಂಡು ಭಾರತ ಸರ್ಕಾರ ಗ್ರಾಮೀಣ ಮೂಲಭೂತ ಸೌಕರ್ಯದ ಅಭಿವೃದ್ಧಿ ನಿಧಿಯನ್ನು ೧೯೯೫ರಲ್ಲಿ ಪ್ರಾರಂಭಿಸಿದ್ದು ನಬಾರ್ಡ್ ಸಂಸ್ಥೆಯು ಈ ನಿಧಿಯ ನಿರ್ವಹಣಾ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಬ್ಯಾಂಕು ಹಾಗೂ ಇನ್ನಿತರ ಹಣಕಾಸು ಸಂಸ್ಥೆಗಳಿಂದ ಈ ನಿಧಿಯಲ್ಲಿ ಹಣವನ್ನು ತೊಡಗಿಸಿ ಸಂಪನ್ಮೂಲ ಕ್ರೋಢೀಕರಿಸುತ್ತದೆ. ರಾಜ್ಯ ಸರ್ಕಾರಗಳಿಗೆ ತಮ್ಮ ಅನೇಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ನಬಾರ್ಡ್ ಸಂಸ್ಥೆಯು ದೀರ್ಘಾವಧಿ ಸಾಲದ ರೂಪದಲ್ಲಿ ಈ ನಿಧಿಯಿಂದ ಧನ ಸಹಾಯ ಮಾಡುತ್ತದೆ. ಸದರಿ ಯೋಜನೆಯಡಿ, ಜಿಲ್ಲೆಯ ವಿವಿಧ ಯೋಜನೆಗಳಿಗೆ ಧನಸಹಾಯ ಮಾಡುತ್ತಿದೆ. ಈ ಯೋಜನೆಗಳ ಸಿಂಹಪಾಲನ್ನು (ಶೇ. ೭೦ರಷ್ಟು) ಗ್ರಾಮೀಣ ರಸ್ತೆ ಹಾಗೂ ಸೇತುವೆ ನಿರ್ಮಾಣ ಕಾರ್ಯಗಳಿಗೆ ವಿನಿಯೋಗಿಸಲಾಗಿದೆ. ಇತರ ಪ್ರಮುಖ ಯೋಜನೆಗಳಾದ ಶಾಲಾ ಕೊಠಡಿ, ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣ, ಕಿರು ನೀರಾವರಿ, ಕೃಷಿ ಹೊಂಡ, ಜಲಾನಯನ ಪ್ರದೇಶದ ಅಭಿವೃದ್ಧಿ, ಗ್ರಾಮೀಣ ಕುಡಿಯುವ ನೀರಿನ ಸೌಕರ್ಯ, ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಗಳ ನಿರ್ಮಾಣ, ಗ್ರಾಮೀಣ ಮಾರುಕಟ್ಟೆ ವ್ಯವಸ್ಥೆ ಮುಂತಾದವು ಆರ್.ಐ.ಡಿ.ಎಫ್ ಯೋಜನೆಯಿಂದ ಲಾಭ ಪಡೆದುಕೊಂಡಿದೆ.

## ಮೈಕ್ರೋ ಫೈನಾನ್ಸಿಂಗ್ ಮತ್ತು ಬ್ಯಾಂಕುಗಳು

ಮೈಕ್ರೋ ಫೈನಾನ್ಸಿಂಗ್ ಪದ್ಧತಿಯನ್ನು ಅಳವಡಿಸಿಕೊಳ್ಳುವಲ್ಲಿ ತುಮಕೂರು ಜಿಲ್ಲೆಯು ಮುಂಚೂಣಿಯಲ್ಲಿದೆ. ಜಿಲ್ಲೆಯಲ್ಲಿ ಹಲವಾರು ಸರ್ಕಾರೇತರ ಸಂಘಟನೆ (ಎನ್.ಜಿ.ಒ) ಮತ್ತು ಸ್ವಸಹಾಯ ಸಂಘಗಳನ್ನು ಉತ್ತೇಜಿಸುವ ಸಂಸ್ಥೆಗಳು (ಎಸ್.ಎಚ್.ಪಿ.ಐ) ಕಾರ್ಯನಿರತವಾಗಿವೆ. ಜಿಲ್ಲೆಯ ಎಲ್ಲಾ ಬ್ಯಾಂಕುಗಳು ಸ್ವಸಹಾಯ ಗುಂಪುಗಳಿಗೆ ಸಾಲ ನೀಡುತ್ತಿವೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ **"ಸ್ತ್ರೀಶಕ್ತಿ"** ಗುಂಪುಗಳನ್ನು ಪ್ರಾಯೋಜಿಸುತ್ತಿದೆ. ನಬಾರ್ಡ್ ಸಂಸ್ಥೆಯು ಸ್ವಸಹಾಯ ಗುಂಪುಗಳ ಮೈಕ್ರೋ ಫೈನಾನ್ಸ್ ಬೆಳವಣಿಗೆಯಲ್ಲಿ ಈ ಕೆಳಗಿನ ಯೋಜನೆಗಳಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.

೧. ಸ್ವಸಹಾಯ ಸಂಘಗಳ ರಚನೆ, ೨. ನವೀನ ವಿಚಾರಗಳನ್ನು ಸಂಶೋಧನೆಗಳನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುವುದು, ೩. ಎನ್.ಜಿ.ಓ. ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಬೆಂಬಲ, ೪. ಪ್ರಚಾರ ಕಾರ್ಯಕ್ರಮ, ೫. ತರಬೇತಿ ಕಾರ್ಯಕ್ರಮಗಳಿಗೆ ಬೆಂಬಲ, ೬. ಸಾಲಸೌಲಭ್ಯಗಳ ಸಂಪರ್ಕ ಕಾರ್ಯಕ್ರಮಗಳಲ್ಲಿ ಸಕ್ರಿಯ ಭಾಗವಹಿಸುವಿಕೆ. ೭. ವಿಶೇಷ ಅಧ್ಯಯನ, ಯಶೋಗಾಥೆಗಳ ಸಂಗ್ರಹಣೆ ಮತ್ತು ಪ್ರಚಾರ, ೮. ಎನ್.ಜಿ.ಒ. ಮತ್ತು ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಗೆ ಬೆಂಬಲ ನೀಡುವುದು ಮತ್ತು ಸ್ವಸಹಾಯ ಗುಂಪುಗಳ ಮುನ್ನಡೆ ಸಾಧಿಸುವುದು, ೯. ಆರ್ಥಿಕ ಚಟುವಟಿಕೆ ಕಾರ್ಯಕ್ರಮಗಳನ್ನು ನಿಭಾಯಿಸಲು ಧನ ಸಹಾಯ ನೀಡುವುದು.

## ತರಬೇತಿ ಕೇಂದ್ರಗಳು

ಕೃಷಿಕರಿಗೆ, ಕುಶಲಕರ್ಮಿಗಳಿಗೆ, ವಿದ್ಯಾವಂತ ನಿರುದ್ಯೋಗಿಗಳಿಗೆ, ಕೈಗಾರಿಕೆ, ವ್ಯಾಪಾರ ಮತ್ತು ಸೇವಾಕ್ಷೇತ್ರದ ಜನರಿಗೆ ತಂತ್ರಜ್ಞಾನ, ಮಾಹಿತಿ ಹಾಗೂ ತರಬೇತಿ ನೀಡಿ ಉದ್ಯಮಶೀಲತೆ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಮತ್ತು ಅದರಿಂದ ಆರ್ಥಿಕ ಅಭಿವೃದ್ಧಿಗೆ ಜಿಲ್ಲೆಯ ಬ್ಯಾಂಕುಗಳು ಹಲವಾರು ತರಬೇತಿ ಕೇಂದ್ರಗಳನ್ನು ನಬಾರ್ಡ್ ಸ್ಥಾಪಿಸಿವೆ. ಅವುಗಳೆಂದರೆ:

೧. ಗ್ರಾಮೀಣ ಅಭಿವೃದ್ಧಿ ಮತ್ತು ಸ್ವ ಉದ್ಯೋಗ ತರಬೇತಿ ಸಂಸ್ಥೆ (ಮಿಸ್ಸೆಟ್), ೨. ಗ್ರಾಮೀಣ ಬ್ಯಾಂಕು ಉದ್ಯಮಶೀಲತೆ ಅಭಿವೃದ್ಧಿ ಸಂಸ್ಥೆ, ೩. ಮೈಬ್ಯಾಂಕ್ ಸ್ವ–ಉದ್ಯೋಗ ಮತ್ತು ಅಭಿವೃದ್ಧಿನಿರತ ತರಬೇತಿ ಸಂಸ್ಥೆ (ಮಿಪ್‌ಸೆಡ್) ಹಿರೇಹಳ್ಳಿ.

# ಸಹಕಾರ

**ಸಹಕಾರಿ ಆಂದೋಲನ:** ಸಹಕಾರ ಪದ್ಧತಿಯು ಮಾನವನ ಸಾಮೂಹಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಸಹಕಾರ ಪತ್ತಿನ ಸಂಘಗಳು, ಸಹಕಾರಿ ಬ್ಯಾಂಕುಗಳು, ಗ್ರಾಹಕರ, ಉತ್ಪಾದಕರ ಮತ್ತು ಉದ್ಯಮಿಗಳ ಸಹಕಾರ ಸಂಘ ಸಂಸ್ಥೆಗಳು ಮಹತ್ವಪೂರ್ಣವಾದ ಪಾತ್ರವನ್ನು ವಹಿಸಿವೆ. ಭಾರತದ ಆರ್ಥಿಕತೆಯಲ್ಲಿ ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯಗಳೊಂದಿಗೆ ಸಹಭಾಗಿಯಾಗಿ ಅಸ್ತಿತ್ವದಲ್ಲಿರುವ ಸಹಕಾರ ವಲಯ ಜನಸಾಮಾನ್ಯರ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಿ ಅವರ ಆರ್ಥಿಕ ಉನ್ನತಿಗೆ ಮಾರ್ಗದರ್ಶಿಯಾಗಿದೆ. ಜನಸಾಮಾನ್ಯರು ಸ್ವಯಂ ಪ್ರೇರಿತರಾಗಿ ಸಂಘಟಿತಗೊಂಡು ಪರಸ್ಪರ ಸಹಕಾರ ಮನೋಭಾವದಿಂದ ದುಡಿಯುವುದು ಸಹಕಾರ ತತ್ವದ ತಿರುಳಾಗಿದೆ. "ತಾವು ಎಲ್ಲರಿಗಾಗಿ, ಎಲ್ಲರೂ ತಮಗಾಗಿ" ಎಂಬ ಸೇವಾಮನೋಭಾವದಿಂದ ದುಡಿಯಬೇಕೆಂಬುದು ಸಹಕಾರದ ಮೂಲಮಂತ್ರವಾಗಿದೆ.

೧೯ನೆಯ ಶತಮಾನದ ಪೂರ್ವದಲ್ಲಿ ರೈತರು ಹಾಗೂ ಕೃಷಿ ಕಾರ್ಮಿಕರನ್ನು ಶ್ರೀಮಂತ ಜಮೀನ್ದಾರರು, ಸಾಹುಕಾರರು ಮತ್ತು ಲೇವಾದೇವಿಗಾರರ ಬಿಗಿಮುಷ್ಟಿಯಿಂದ ರಕ್ಷಿಸಿ, ಸ್ವತಂತ್ರಗೊಳಿಸಲು; ಜೀತಪದ್ಧತಿಯಿಂದ ವಿಮುಕ್ತಿಗೊಳಿಸಿ ಋಣಮುಕ್ತರನ್ನಾಗಿ ಮಾಡುವ ಉದ್ದೇಶದಿಂದ ರೂಪಗೊಂಡಿದೆ. ಸಹಕಾರ, ರೈತರ, ಕಾರ್ಮಿಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಹಕಾರ ಚಳುವಳಿಯೇ ಸೂಕ್ತವಾಗಿದ್ದು. ಇದರಿಂದ ರೈತರು ಸ್ವಾವಲಂಬಿಗಳಾಗಬಹುದು ಎಂದು ಸರ್ಕಾರ ಆಲೋಚಿಸಿತು. ವ್ಯವಸಾಯ ಅಭಿವೃದ್ಧಿಗೆ ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಕಾಲದಲ್ಲಿ ಸಾಲ ದೊರೆಯುವಂತೆ ಮಾಡಬೇಕೆಂಬ ಉದ್ದೇಶದಿಂದ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪಿಸಬೇಕೆಂಬ ಆಗ್ರಹ ಹೆಚ್ಚಾಗುತ್ತಿದ್ದಂತೆ ಅಂದಿನ ಮದ್ರಾಸ್ ಪ್ರಾಂತೀಯ ಸರ್ಕಾರ ೧೮೯೨ರಲ್ಲಿ ಸರ್ ಫ್ರೆಡ್ರಿಕ್ ನಿಕೋಲ್ಸನ್ ಎಂಬ ಅಧಿಕಾರಿಯನ್ನು ಐರೋಪ್ಯ ರಾಷ್ಟ್ರಗಳಲ್ಲಿನ ಸಹಕಾರ ಚಳುವಳಿಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ಸೂಚಿಸಿತು. ಇವೆಲ್ಲದರ ಪರಿಣಾಮವಾಗಿ ಭಾರತದಲ್ಲಿ ೧೯೦೪ ಮಾರ್ಚ್ ೨೫ರಂದು ಸಹಕಾರ ಸಂಘಗಳ ಪ್ರಥಮ ಕಾನೂನು ಜಾರಿಗೊಳಿಸಲಾಯಿತು. ಹೀಗೆ ಸಹಕಾರ ಆಂದೋಲನವು ೧೯೦೪ ರಿಂದ ಅಧಿಕೃತವಾಗಿ ಪ್ರಾರಂಭವಾಯಿತು.

ಭಾರತದಲ್ಲಿ ಪ್ರಪ್ರಥಮವಾಗಿ ೦೮-೦೫-೧೯೦೫ರಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಕಣಗಿನಹಾಳದಲ್ಲಿ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ ಎಂಬ ಸಹಕಾರಿ ಧುರೀಣರ ನೇತೃತ್ವದಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥಾಪಕರನ್ನು ಇಡೀ ಏಷ್ಯಾ ಖಂಡದ ಸಹಕಾರಿ ಸಂಘದ ಪ್ರಥಮ ಅಧ್ಯಕ್ಷ ಹಾಗೂ ಭಾರತದ 'ಸಹಕಾರಿ ಆಂದೋಲನದ ಪಿತಾಮಹ' ಎಂದು ಹೇಳಲಾಗುತ್ತದೆ. ರೈತರಿಂದ ರೈತರಿಗೋಸ್ಕರ ಸ್ಥಾಪಿತವಾದ ಸಹಕಾರ ಸಂಘಗಳು ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ದೊರೆಯುವಂತೆ ಮಾಡುವುದರ ಮೂಲಕ ಅವರಿಗೆ ಆರ್ಥಿಕ ಭದ್ರತೆಯನ್ನು ಒದಗಿಸತೊಡಗಿತು. ಇದರ ಪ್ರೇರಣೆಯಿಂದ ಎಲ್ಲಾ ಕ್ಷೇತ್ರಗಳಲ್ಲೂ ಸಹಕಾರ ಸಂಘಗಳು ಪತ್ತಿನ ಸಹಕಾರ ಸಂಘಗಳು ಗ್ರಾಹಕರ ಸಹಕಾರ ಸಂಘಗಳು, ಪಟ್ಟಣ ಸಹಕಾರ ಬ್ಯಾಂಕುಗಳು, ಮುಂತಾದವು ಕಾರ್ಯನಿರ್ವಹಿಸುತ್ತಾ ಬಂದವು.

೧೯೦೪ರ ಸಹಕಾರಿ ಸಂಘಗಳ ನೋಂದಣಿ ಕಾಯಿದೆಯನ್ವಯ ತುಮಕೂರು ಜಿಲ್ಲೆಯಲ್ಲಿ ಸಹಕಾರಿ ಆಂದೋಲನವು ೧೯೦೪ರಲ್ಲಿಯೇ ತನ್ನ ಪ್ರಭಾವವನ್ನು ಬೀರಿದೆ. ಪ್ರಾರಂಭದಲ್ಲಿ ಈ ಆಂದೋಲನವು ಕೇವಲ ವ್ಯವಸಾಯ ಪತ್ತಿನ ಸಹಕಾರ ಸಂಘಗಳ ರಚನೆಗೆ ಸೀಮಿತವಾಗಿದ್ದರೂ ವ್ಯವಸಾಯೇತರ ಮತ್ತು ಲೇವಾದೇವಿಯಲ್ಲದ ಸಹಕಾರ ಸಂಘಗಳ ಬೆಳವಣಿಗೆಗೆ ಉತ್ತೇಜನ ನೀಡಲು ಕಾರಣವಾಯಿತು. ಜಿಲ್ಲೆಯ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರಿ ವಲಯವು ಮಹತ್ತರವಾದ ಪಾತ್ರವನ್ನು ವಹಿಸುತ್ತಾ ಬಂದಿದೆ. ಇದು ವ್ಯವಸಾಯ ಸಾಲ ಹಾಗೂ ಅದಕ್ಕೆ ಪೂರಕವಾದ ಇತರ ಕ್ಷೇತ್ರಗಳ ಚಟುವಟಿಕೆಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ.

ಭಾರತ ಸರ್ಕಾರದ ೧೯೦೪ರ ಸಹಕಾರಿ ಸಂಘಗಳ ಕಾಯಿದೆಯನ್ವಯ ಜಿಲ್ಲೆಯ ಮೊಟ್ಟ ಮೊದಲ ಪತ್ತಿನ ಸಹಕಾರ ಸಂಘ ತುಮಕೂರು ಟೌನ್ ಗ್ರಾಹಕರ ಸಹಕಾರ ಸಂಘ ೧೯೦೫ರಲ್ಲಿ ಸ್ಥಾಪಿತವಾಯಿತು. ನಂತರ ಶ್ರೀ ರಾಘವೇಂದ್ರ ಪತ್ತಿನ ಸಹಕಾರ ಸಂಘವು ೧೯೦೬ರಲ್ಲಿ ಸ್ಥಾಪನೆಗೊಂಡಿತು. ಶಿರಾ ಟೌನ್ ಕೋ-ಆಪರೇಟೀವ್ ಬ್ಯಾಂಕ್ ೧೯೦೬ರಲ್ಲಿ ಶಿರಾದಲ್ಲಿ ಸ್ಥಾಪಿತವಾಯಿತು. ೧೯೦೯ರಲ್ಲಿ ಟೌನ್ ಕೋ-ಆಪರೇಟೀವ್ ಬ್ಯಾಂಕ್ ಚಿಕ್ಕನಾಯಕನಹಳ್ಳಿಯಲ್ಲಿ ಸ್ಥಾಪನೆಗೊಂಡಿತು.

೧೯೧೨ರ ಸಹಕಾರಿ ಕಾಯಿದೆಯನ್ವಯ ಜಿಲ್ಲೆಯಲ್ಲಿ ಹಲವಾರು ಸಹಕಾರಿ ಸಂಘಗಳ ಸ್ಥಾಪನೆಗೆ ದಾರಿ ಮಾಡಿಕೊಟ್ಟಿದ್ದರಿಂದ ಸಹಕಾರಿ ಸಂಘಗಳ ಸಂಖ್ಯೆ ಹಾಗೂ ಅವುಗಳ ಸದಸ್ಯತ್ವ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ. ಜಿಲ್ಲೆಯ ಎಲ್ಲಾ ಸಹಕಾರಿ ಸಂಘಗಳಿಗೆ ಆರ್ಥಿಕ ಸಹಾಯವನ್ನು ಒದಗಿಸುವುದು, ಕೃಷಿ ಚಟುವಟಿಕೆಗಳಿಗೆ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳ ವಿಸ್ತರಣೆ, ಸಾಲೇತರ ಚಟುವಟಿಕೆಗಳಿಗೆ ನೆರವು, ಗೃಹ ನಿರ್ಮಾಣ, ಸಣ್ಣ ಕೈಗಾರಿಕೆಗಳು, ಗೃಹ ಹಾಗೂ ಗ್ರಾಮೀಣ ಕರಕುಶಲ ಕೈಗಾರಿಕೆಗಳಿಗೆ, ನೀರಾವರಿ, ಕೃಷಿ, ಹೈನುಗಾರಿಕೆ, ಕೃಷಿ ಉತ್ಪನ್ನ ಮಾರಾಟ ವ್ಯವಸ್ಥೆ ಮುಂತಾದವುಗಳ ಅಭಿವೃದ್ಧಿಗೆ ಉತ್ತೇಜನ ಲಭಿಸಿದೆ. ಹೀಗೆ ಜಿಲ್ಲೆಯಲ್ಲಿ ವಾಣಿಜ್ಯ ಬ್ಯಾಂಕುಗಳನ್ನೊಳಗೊಂಡಂತೆ ಸಹಕಾರಿ ಬ್ಯಾಂಕು ಹಾಗೂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು, ಕೃಷಿ, ಕೈಗಾರಿಕೆ, ವ್ಯಾಪಾರ, ಕೃಷಿಯೇತರ ಚಟುವಟಿಕೆಗಳಾದ ಕರಕುಶಲ ಕರ್ಮಿಗಳಿಗೆ ಸ್ವ-ಉದ್ಯೋಗಿಗಳಿಗೆ ಹಾಗೂ ಇತರ ಆರ್ಥಿಕ ಚಟುವಟಿಕೆಗಳಿಗೆ ಹಣಕಾಸಿನ ಸೌಲಭ್ಯಗಳನ್ನು ಒದಗಿಸುತ್ತಿವೆ.

ಜಿಲ್ಲೆಯಲ್ಲಿ ೧೯೦೫ರಲ್ಲಿ ಆರಂಭಗೊಂಡ ಸಹಕಾರ ಚಳವಳಿಯು ನಂತರದ ದಶಕಗಳಲ್ಲಿ ತೀವ್ರಗತಿಯಲ್ಲಿ ಮುನ್ನಡೆದು ಜಿಲ್ಲಾದ್ಯಂತ ಹಲವಾರು ಸಹಕಾರ ಸಂಘಗಳ ಸ್ಥಾಪನೆಗೆ ಕಾರಣವಾಯಿತು. ಜಿಲ್ಲೆಯಲ್ಲಿನ ವ್ಯವಸಾಯ ಪತ್ತಿನ ಸಹಕಾರಿ ಸಂಘಗಳ ಜೊತೆಗೆ ನಗರ ಪ್ರದೇಶಗಳಲ್ಲಿ ವ್ಯವಸಾಯೇತರ ಮತ್ತು ವಿವಿಧೋದ್ದೇಶ ಸಹಕಾರ ಸಂಘಗಳ ಬೆಳವಣಿಗೆಗೆ ಹೆಚ್ಚಿನ ಒತ್ತು ನೀಡಲಾಯಿತು. ಇದರಿಂದಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಹಕಾರ ಚಳವಳಿ ವ್ಯಾಪಕವಾಗಿ ಬೆಳೆಯಲು ಅನುಕೂಲವಾಯಿತು.

೧೯೦೮ರಲ್ಲಿ ಬೆಂಗಳೂರು ಕೇಂದ್ರ ಸಹಕಾರಿ ಬ್ಯಾಂಕನ್ನು ಸ್ಥಾಪಿಸಿ ಮೈಸೂರು ಸಂಸ್ಥಾನದ ಎಲ್ಲಾ ಸದಸ್ಯ ಸಹಕಾರಿ ಸಂಘಗಳ ಮೂಲಕ ರೈತರಿಗೆ ಸಾಲವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಲಾಯಿತು. ಈ ಬ್ಯಾಂಕು ಸದಸ್ಯರಿಗೂ ಸಾಲ ಸೌಲಭ್ಯ ನೀಡುವ ಅವಕಾಶ ಪಡೆದಿತ್ತು. ೧೯೧೫ರಲ್ಲಿ ಮೈಸೂರು ಪ್ರಾಂತೀಯ ಸಹಕಾರಿ ಬ್ಯಾಂಕನ್ನು ಸ್ಥಾಪಿಸುವುದರ ಮೂಲಕ ತುಮಕೂರು ಸೇರಿದಂತೆ ಉಳಿದ ಜಿಲ್ಲೆಗಳನ್ನು ಪ್ರಾಂತೀಯ ಬ್ಯಾಂಕಿನ ವ್ಯಾಪ್ತಿಗೆ ಒಳಪಡಿಸಲಾಯಿತು. ೧೯೧೨-೧೩ರಲ್ಲಿ ಒಂದು ಅಥವಾ ಎರಡು ತಾಲೂಕುಗಳ ಕಾರ್ಯಕ್ಷೇತ್ರವನ್ನು ಹೊಂದಿದಂತೆ "ಸಂಯುಕ್ತ ಬ್ಯಾಂಕಿಂಗ್ ಯೂನಿಯನ್' ನಂತಹ ಸಣ್ಣ ಕೇಂದ್ರ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಇವು ಸಾಲ ನೀಡುವ ಬ್ಯಾಂಕು ಮತ್ತು ಪ್ರಾಥಮಿಕ ಸಹಕಾರಿ ಸಂಘಗಳ ಮಧ್ಯಸ್ಥಿಕೆಯ ಸಂಸ್ಥೆಗಳಂತೆ ಕಾರ್ಯ ನಿರ್ವಹಿಸುತ್ತಿದ್ದುದಲ್ಲದೇ ಸಂಘಗಳ ಮೇಲ್ವಿಚಾರಣಾ ಕಾರ್ಯವನ್ನು ಕೈಗೊಳ್ಳುತ್ತಿದ್ದವು.

ಸೀಮಿತ ಕಾರ್ಯವ್ಯಾಪ್ತಿಯಿಂದಾಗಿ ಈ ಸಂಯುಕ್ತ ಬ್ಯಾಂಕಿಂಗ್ ಯೂನಿಯನ್‌ಗಳು ಪ್ರಗತಿ ಹೊಂದದ ಕಾರಣ ಇವುಗಳ ಬದಲಾಗಿ ಜಿಲ್ಲಾ ಕೇಂದ್ರ ಬ್ಯಾಂಕುಗಳನ್ನು ಜಿಲ್ಲಾ ವ್ಯಾಪ್ತಿಗೆ ಹೊಂದಿಕೊಳ್ಳುವಂತೆ ಸ್ಥಾಪಿಸಲಾಯಿತು. ತುಮಕೂರು ಜಿಲ್ಲೆಯ ಜಿಲ್ಲಾ ಬ್ಯಾಂಕು ಸೇರಿದಂತೆ ಐದು ಜಿಲ್ಲಾ ಬ್ಯಾಂಕುಗಳು ೧೯೨೦-೨೧ ರವರೆಗೆ ಕಾರ್ಯ ನಿರ್ವಹಿಸುತ್ತಿದ್ದು, ಕಾಲಾನಂತರ ಈ ಜಿಲ್ಲಾ ಕೇಂದ್ರ ಬ್ಯಾಂಕುಗಳು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸದ ಕಾರಣ ಅವಸಾನಗೊಂಡವು.

೧೯೦೫ರ ಸಹಕಾರಿ ಕಾನೂನು ಕಾಯ್ದೆಯು ಅನುಷ್ಠಾನಕ್ಕೆ ಬಂದ ಕೆಲವು ವರ್ಷಗಳಲ್ಲಿ ಈ ಕಾನೂನಿನಲ್ಲಿ ಹಲವು ಲೋಪದೋಷಗಳು ಕಂಡುಬಂದಿದ್ದರಿಂದ ಅವುಗಳನ್ನು ಸರಿಪಡಿಸಿ ೧೯೧೮ರಲ್ಲಿ ಹೊಸದೊಂದು ಸಹಕಾರಿ ಕಾನೂನನ್ನು ಜಾರಿಗೆ ತರಲಾಯಿತು. ಈ ಹೊಸ ಕಾನೂನಿನನ್ವಯ ತಾಲೂಕು ಮಟ್ಟದ ಯೂನಿಯನ್‌ಗಳು, ಜಿಲ್ಲಾ ಮಟ್ಟದ ಸಹಕಾರಿ ಬ್ಯಾಂಕುಗಳಂತಹ ಕೇಂದ್ರ ಸಹಕಾರಿ ಸಂಸ್ಥೆಗಳ ರಚನೆಗೆ ಮತ್ತು ಸಹಕಾರಿ ಸಂಘಗಳ ಸಹಾಯಕ ನಿಬಂಧಕರನ್ನು ನೇಮಿಸಲು ಅವಕಾಶ ದೊರೆಯಿತು. ಇದರಿಂದಾಗಿ ಗ್ರಾಮೀಣ ಸಹಕಾರಿ ಸಂಸ್ಥೆಗಳ ಸಂಘಟನೆ ಮತ್ತು ಅಭಿವೃದ್ಧಿಗೆ ಹೊಸಚಾಲನೆ ದೊರೆತಂತಾಯಿತು. ಸಹಕಾರ ಇಲಾಖೆಗೆ ಸಮರ್ಥ ಆಡಳಿತ ನೀಡುವ ಉದ್ದೇಶದಿಂದ ೧೯೧೮-೧೯ರಲ್ಲಿ ಮೈಸೂರು ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿಯನ್ನು ಮೈಸೂರಿನಲ್ಲಿ ತೆರೆಯಲಾಯಿತು.

ಮುಂದೆ, ಸಹಕಾರ ಸಂಘಗಳ ಪ್ರಗತಿಯನ್ನು ವಿಮರ್ಶಿಸಿ ಮುಂದಿನ ಬೆಳವಣಿಗೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಸೂಚಿಸಲು ಭಾರತ ಸರ್ಕಾರ ೧೯೨೦ರಲ್ಲಿ ಸಮಲ್ ದಾಸ್ ಮೆಹತಾ ಸಮಿತಿಯನ್ನು ರಚಿಸಿತು. ಈ ಸಮಿತಿಯು ಸಲ್ಲಿಸಿದ ವರದಿಯನ್ವಯ ಸರ್ಕಾರ ೧೯೨೫ರಲ್ಲಿ ವಿವಿಧೋದ್ದೇಶ ಸಹಕಾರ ಸಂಘಗಳ ಸ್ಥಾಪನೆಗೆ ಅದರಲ್ಲೂ ಮುಖ್ಯವಾಗಿ ಹಿಂದುಳಿದ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಸಂಘಟನೆಗೆ ಉತ್ತೇಜನ ನೀಡಿತು. ರೈತರಿಗೆ ಋಣ ವಿಮೋಚನಾ

ಸಾಲಗಳನ್ನು ಒದಗಿಸುವ ಉದ್ದೇಶದಿಂದ ೧೯೨೯ರಲ್ಲಿ ಭೂ ಅಡಮಾನ ಬ್ಯಾಂಕನ್ನು (ಈಗಿನ ಕೃಷಿ ಭೂ ಅಭಿವೃದ್ಧಿ ಬ್ಯಾಂಕು) ಸಹಕಾರ ತಳಹದಿಯ ಮೇಲೆ ಸ್ಥಾಪಿಸಲಾಯಿತು. ಮೆಹತಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಮೈಸೂರು ಪ್ರಾಂತೀಯ ಸಹಕಾರಿ ಬ್ಯಾಂಕನ್ನು ಅಪೆಕ್ಸ್ ಬ್ಯಾಂಕಾಗಿ ಪುನರ್ರಚಿಸಲಾಯಿತು. ಅಲ್ಲದೆ ಸಹಕಾರಿ ತತ್ವದ ಪ್ರಚಾರಕ್ಕಾಗಿ ಪ್ರಾಂತೀಯ ಪ್ರಚಾರ ಸಂಸ್ಥೆಯನ್ನು ಸಹ ಸ್ಥಾಪಿಸಲಾಯಿತು. ರೈತರಿಗೆ ಸಾಲನೀಡುವುದರ ಜೊತೆಗೆ ಸುಧಾರಿಸಿದ ಬೇಸಾಯ ಕ್ರಮಗಳನ್ನು ಕೈಗೊಳ್ಳಲು ಕೃಷಿಕರಿಗೆ ಬೇಸಾಯಕ್ಕೆ ಬೇಕಾಗುವ ಸುಧಾರಿತ ಕೃಷಿ ಉಪಕರಣ, ಬಿತ್ತನೆ ಬೀಜ, ರಸಗೊಬ್ಬರ ಸಸ್ಯ ಸಂರಕ್ಷಣಾ ಔಷಧಿ ಮತ್ತು ಸಿಂಪರಣಾ ಸಲಕರಣೆ ಹಾಗೂ ಕೃಷಿ ಸೇವಾ ಸಹಕಾರ ಸಂಘಗಳಿಂದ ಒದಗಿಸಲಾಯಿತು.

೧೯೨೯-೩೧ರ ಜಾಗತಿಕ ಮಟ್ಟದಲ್ಲಿ ತೀವ್ರ ಆರ್ಥಿಕ ಮುಗ್ಗಟ್ಟಿನಿಂದಾಗಿ ಸಹಕಾರ ಸಂಘಗಳ ಪ್ರಗತಿ ಕುಂಠಿತವಾಯಿತು. ಇದರಿಂದ ಕೃಷಿ ಉತ್ಪನ್ನಗಳ ಬೆಲೆಯಲ್ಲೂ ಕುಸಿತವುಂಟಾಯಿತು. ರೈತರು ಸಾಲ ತೀರಿಸುವ ಸಾಮರ್ಥ್ಯವನ್ನು ಕಳೆದುಕೊಂಡರು. ಸಹಕಾರಿ ಸಂಘಗಳ ಸಾಲವನ್ನು ತೀರಿಸಲು ರೈತರು ಅಶಕ್ತರಾದ್ದರಿಂದ ಸಂಘಗಳಲ್ಲಿ ಸುಸ್ತಿ ಬಾಕಿಯು ಹೆಚ್ಚಿತು. ಇಂತಹ ಆರ್ಥಿಕ ಮುಗ್ಗಟ್ಟಿನಿಂದ ಚೇತರಿಸಿಕೊಳ್ಳಲಾಗದ ಅನೇಕ ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು ಮುಚ್ಚಲಾಯಿತು. ಸಹಕಾರ ಸಂಘಗಳ ಪುನಶ್ಚೇತನಕ್ಕಾಗಿ ಸರ್ಕಾರ ೧೯೩೫ರಲ್ಲಿ ಕೆ.ಎಸ್.ಚಂದ್ರಶೇಖರ್ ಅಯ್ಯರ್ ಸಮಿತಿಯನ್ನು ರಚಿಸಿತು. ಈ ಸಮಿತಿಯ ಶಿಫಾರಸ್ಸುಗಳನ್ವಯ ಸಹಕಾರ ಚಳುವಳಿಯ ಪುನಶ್ಚೇತನಕ್ಕಾಗಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಯಿತು. ೧೯೩೯ರಲ್ಲಿ ಎರಡನೆಯ ಜಾಗತಿಕ ಯುದ್ಧ ಪ್ರಾರಂಭವಾದ ಕಾರಣ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿ ಬೆಲೆಗಳು ತೀವ್ರವಾಗಿ ಏರತೊಡಗಿದವು. ಈ ಕಾರಣದಿಂದಾಗಿ ಆಹಾರದ ಬೆಲೆಗಳ ಏರಿಕೆಯಿಂದ ರೈತರ ಆರ್ಥಿಕ ಸ್ಥಿತಿ ಸುಧಾರಿಸಿತು. ರೈತರು ಸಹಕಾರಿ ಸಾಲ ತೀರಿಸಲು ಸಮರ್ಥರಾದ ಕಾರಣ ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಸ್ಥಿತಿಯೂ ಸುಧಾರಿಸುವಂತಾಯಿತು. ಇದೇ ಸಂದರ್ಭದಲ್ಲಿ ಏರುತ್ತಿರುವ ಬೆಲೆಗಳನ್ನು ನಿಯಂತ್ರಿಸಲು ಸಹಾಯಕವಾಗುವಂತೆ ಗ್ರಾಹಕರ ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದವು.

೧೯೪೯ರ ತರುವಾಯ ಕೇಂದ್ರ ಸರ್ಕಾರ ವ್ಯವಸಾಯ ಪತ್ತಿನ ಸಹಕಾರ ಸಂಘಗಳನ್ನು ಪುನರ್ ಸಂಘಟಿಸಲು ಹಲವಾರು ಯೋಜನಾಬದ್ಧ ಕಾರ್ಯಕ್ರಮಗಳನ್ನು ಕೈಗೊಂಡಿದ್ದರಿಂದ ವಿವಿಧೋದ್ದೇಶ ಸಹಕಾರ ಸಂಘಗಳು ಜಿಲ್ಲೆಯಲ್ಲಿ ಸ್ಥಾಪನೆಗೊಂಡವು. ಮೊದಲೇ ಅಸ್ತಿತ್ವದಲ್ಲಿದ್ದ ವ್ಯವಸಾಯ ಪತ್ತಿನ ಸಹಕಾರ ಸಂಘಗಳನ್ನು ವಿವಿಧೋದ್ದೇಶ ಸಂಘಗಳಾಗಿ ಪರಿವರ್ತಿಸಲಾಯಿತು. ಜಿಲ್ಲೆಯ ಹಲವಾರು ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಮುಂದೆ ಕೃಷಿ ಉತ್ಪನ್ನಗಳ ಮಾರಾಟ, ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆ, ನಿಯಂತ್ರಿತ ಮತ್ತು ನಿಯಂತ್ರಿತವಲ್ಲದ ಆಹಾರೇತರ ಉತ್ಪನ್ನಗಳ ವಿತರಣೆ ಮತ್ತು ಮಾರಾಟ, ಉಗ್ರಾಣ ವ್ಯವಸ್ಥೆ, ರೈತರಿಗೆ ಅಲ್ಪಾವಧಿ (ಬೆಳೆ ಸಾಲ) ಮತ್ತು ಮಧ್ಯಾವಧಿ ಸಾಲ ನೀಡುವುದರ ಜೊತೆಗೆ ಅವರಿಗೆ ಕೃಷಿ ಉಪಕರಣ, ಬಿತ್ತನೆಬೀಜ, ಗೊಬ್ಬರ ಮತ್ತು ಸಸ್ಯಸಂರಕ್ಷಣಾ ಔಷಧಿ ಮತ್ತು ಸಿಂಪರಣೆ ಸಲಕರಣೆಗಳು ಮೊದಲಾದವುಗಳನ್ನು ಪೂರೈಕೆ ಮಾಡುವ ವಿವಿಧೋದ್ದೇಶ ಕೃಷಿ ಸಹಕಾರ ಸಂಘಗಳನ್ನಾಗಿ ಪರಿವರ್ತಿಸಲಾಯಿತು. ಇದರ ಜೊತೆಗೆ ರೈತರಿಗೆ ಅಧಿಕ ಇಳುವರಿ ಪಡೆಯುವ ಬಗ್ಗೆ ಕೃಷಿ ವಿಜ್ಞಾನದಲ್ಲಿ ತರಬೇತಿ ಪಡೆದ ಕೃಷಿ ಸಹಾಯಕರು ರೈತರ ಜಮೀನಿನಲ್ಲಿಯೇ ಪ್ರಾಯೋಗಿಕವಾದ ಮಾರ್ಗದರ್ಶನ ಸಲಹೆ ಸೂಚನೆ ಇವೇ ಮೊದಲಾದ ಕೃಷಿ ಅಭಿವೃದ್ಧಿ ಕ್ರಮಗಳ ಬಗ್ಗೆ ರೈತರಿಗೆ ಹೆಚ್ಚಿನ ಮಾಹಿತಿಯನ್ನು ಸಹ ನೀಡುವ ಕಾರ್ಯಕ್ರಮವನ್ನು ನಿಯೋಜಿಸಿತು.

ಜಿಲ್ಲೆಯ ರೈತರು ತಮ್ಮ ಜಮೀನಿನಲ್ಲಿ ಶಾಶ್ವತವಾದ ಅಭಿವೃದ್ಧಿಯನ್ನು ಕೈಗೊಳ್ಳಲು ನೆರವಾಗುವಂತೆ ದೀರ್ಘಾವಧಿ ಸಾಲದ ಅವಶ್ಯಕತೆಯನ್ನು ಪೂರೈಸುವ ಗುರಿಯಿಂದ ಭೂ ಅಭಿವೃದ್ಧಿ ಬ್ಯಾಂಕನ್ನು ಸ್ಥಾಪಿಸಲಾಯಿತು. ತಾಲೂಕು ಕೃಷಿ ಉತ್ಪನ್ನ ಸಹಕಾರ ಮಾರುಕಟ್ಟೆಯನ್ನು ಸ್ಥಾಪಿಸಲಾಯಿತು. ರೈತರ ಕೃಷಿ ಉತ್ಪನ್ನಗಳ ಮಾರಾಟದ ವ್ಯವಸ್ಥೆಯ ಜೊತೆಗೆ ಅವರಿಗೆ ಸಾಲ ನೀಡುವ ಕಾರ್ಯವನ್ನೂ ಕೈಗೊಳ್ಳಲಾಯಿತು.

೧೯೫೧ರಿಂದ ಪ್ರಾರಂಭವಾದ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ ವಲಯಕ್ಕೆ ಪ್ರಥಮ ಆದ್ಯತೆ ನೀಡಿದ್ದರ ಫಲವಾಗಿ ಸಹಕಾರ ಸಂಘಗಳಿಗೆ ಹೆಚ್ಚಿನ ಆರ್ಥಿಕ ನೆರವು ದೊರೆಯುವಂತಾಯಿತು. ವಿವಿಧೋದ್ದೇಶ ಸಹಕಾರ ಸಂಘಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸುವುದರ ಜೊತೆಗೆ ಮೊದಲೇ ಕಾರ್ಯನಿರತವಾಗಿದ್ದ ವ್ಯವಸಾಯ ಪತ್ತಿನ ಸಂಘಗಳನ್ನು ವಿವಿಧೋದ್ದೇಶ ಸಂಘಗಳನ್ನಾಗಿ ಪರಿವರ್ತಿಸಿ ಹೆಚ್ಚಿನ ಆದ್ಯತೆ ನೀಡಲಾಯಿತು. ಜಿಲ್ಲೆಯಲ್ಲಿನ ಅನೇಕ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸಂಘಟಿಸಲಾಯಿತು. ಕೃಷಿ ಮತ್ತು ಕೃಷಿಯೇತರ ಸಾಲ ನೀಡುವ ಮತ್ತು ಸಾಲೇತರ ಸಹಕಾರ ಸಂಘಗಳನ್ನು ಸರ್ಕಾರದ ಸಹಾಯದಿಂದ ಅಭಿವೃದ್ಧಿಪಡಿಸಲಾಯಿತು. ಇದರಿಂದ ಹಿಂದಿನ ದಶಕಗಳಲ್ಲಿ ಸಹಕಾರಿ

ಆಂದೋಲನವು ಭೌಗೋಳಿಕವಾಗಿ ವಿಸ್ತಾರವಾಗಿ ಬೆಳೆಯುವುದರ ಜೊತೆಗೆ ಗುಣಾತ್ಮಕವಾಗಿ ಅಭಿವೃದ್ಧಿ ಹೊಂದಲೂ ಸಹಾಯಕವಾಯಿತು. ಸಹಕಾರ ಸಂಘಗಳಿಗೆ ಅಲ್ಪಾವಧಿ ಬೆಳೆ ಸಾಲ ಮತ್ತು ಮಧ್ಯಾವಧಿ ಅಭಿವೃದ್ಧಿ ಸಾಲ ಒದಗಿಸುವ ಉದ್ದೇಶದಿಂದ ೧೯೫೫ರಲ್ಲಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕನ್ನು ತುಮಕೂರಿನಲ್ಲಿ ಸ್ಥಾಪಿಸಲಾಯಿತು. ೧೯೬೧ರಲ್ಲಿ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದ ಪ್ರಾಥಮಿಕ ಸಹಕಾರ ಸಂಘಗಳನ್ನು ತಾಲೂಕಿಗೊಂದರಂತೆ ಸ್ಥಾಪಿಸಲಾಯಿತು.

ಪ್ರಾಥಮಿಕ ವ್ಯವಸಾಯ ಹುಟ್ಟುವಳಿ ಮಾರಾಟ ಸಂಘಗಳನ್ನು ೧೯೫೯ರಲ್ಲಿ ಸ್ಥಾಪಿಸಲಾಯಿತು. ಬಿತ್ತನೆಬೀಜ, ರಸಗೊಬ್ಬರ, ವ್ಯವಸಾಯ ಉಪಕರಣ, ಕ್ರಿಮಿನಾಶಕ ಮೊದಲಾದವುಗಳ ಮಾರಾಟ ಮತ್ತು ಶೇಖರಣೆಗೆ ಮಾರಾಟ ಸಂಘ ಹಾಗೂ ಗೋದಾಮುಗಳ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಇವುಗಳ ನಿರ್ಮಾಣಕ್ಕಾಗಿ ಸರ್ಕಾರ ಧನಸಹಾಯ ನೀಡಿತು. ಈ ಅವಧಿಯಲ್ಲಿ ಜಿಲ್ಲೆಯಲ್ಲಿ ನೇಕಾರರ ಸಹಕಾರ ಸಂಘ ಮತ್ತು ಕೈಗಾರಿಕಾ ಸಂಘಗಳನ್ನು ಸಹ ಸ್ಥಾಪನೆ ಮಾಡಲಾಯಿತು. ಅಲ್ಲದೆ, ಬೇಸಾಯ ಸಹಕಾರರ ಸಂಘ, ಕಬ್ಬು ಬೆಳೆಗಾರರ ಸಹಕಾರ ಸಂಘ, ಸಹಕಾರಿ ಮಾರಾಟ ಸಂಘ, ಮೀನುಗಾರಿಕೆ ಸಹಕಾರ ಸಂಘ ಹಾಗೂ ರೇಷ್ಮೆ ಬೆಳೆಗಾರರ ಸಹಕಾರ ಸಂಘಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದವು.

ಜಿಲ್ಲೆಯಲ್ಲಿ ೧೯೦೫ರಲ್ಲಿ ಆರಂಭಗೊಂಡ ಸಹಕಾರ ಆಂದೋಲನ ಸ್ವಾತಂತ್ರ್ಯ ಪೂರ್ವದಲ್ಲಿ ವ್ಯವಸ್ಥಿತವಾಗಿ ಬೆಳೆದು ಬಂದಿತಲ್ಲದೇ ಅದು ಜನರಲ್ಲಿ 'ಸಹಕಾರ'ದ ಬಗ್ಗೆ ವಿಶ್ವಾಸ ಮತ್ತು ಆಸಕ್ತಿ ಮೂಡಿಸುವಲ್ಲಿ ಪರಿಣಾಮಕಾರಿ ಪಾತ್ರವನ್ನು ವಹಿಸುವಂತಾಗಿತ್ತು. ಸ್ವಾತಂತ್ರ್ಯಾ ನಂತರವೂ ಅದು ಉತ್ತಮ ಸ್ಥಿತಿಯಲ್ಲಿ ಮುಂದುವರಿಯುವಂತಾಯಿತು. ೧೯೫೬ರ ರಾಜ್ಯ ಪುನರ್ ಸಂಘಟನೆಯ ನಂತರ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಸಮಗ್ರ ಏಕೀಕೃತ ಕರ್ನಾಟಕಕ್ಕೆ ಸಹಕಾರ ಕಾಯ್ದೆ ೧೯೫೯ನ್ನು ರೂಪಿಸಿ ರಾಜ್ಯಾದ್ಯಂತ ೧೯೬೦ರಿಂದ ಜಾರಿಗೆ ತಂದ ನಂತರ 'ಸಹಕಾರಿ' ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಗಳನ್ನು ತರಲಾಯಿತು. ಸರ್ಕಾರದ ಆರ್ಥಿಕ ಸಹಾಯ ಮತ್ತು ಪ್ರೋತ್ಸಾಹದಿಂದ ಜಿಲ್ಲೆಯ ಸಹಕಾರ ಸಂಘಗಳು ರೈತರು ಹಾಗೂ ಸಾಮಾನ್ಯ ವರ್ಗದವರಲ್ಲಿ ಸಹಕಾರ ಮನೋಭಾವವನ್ನು ಬೆಳೆಸಿ ಸ್ವಯಂ ಪ್ರೇರಣೆಯಿಂದ ಸಂಘಟನೆ ಹೊಂದಿ ಜನಸಾಮಾನ್ಯರಲ್ಲಿ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸಿ ತನ್ಮೂಲಕ ಬಂಡವಾಳ ವೃದ್ಧಿಗೆ ಉತ್ತೇಜನ ನೀಡುತ್ತಾ ಬಂದಿವೆ. ಜಿಲ್ಲೆಯಲ್ಲಿ ಒಬ್ಬ ಸಹಕಾರ ಉಪನಿಬಂಧಕರು ನೇಮಕಗೊಂಡು ಈ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದ್ದಾರೆ.

## ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ನಿಯಮಿತ)

ಭಾರತೀಯ ಸಹಕಾರ ಸಂಘಗಳ ಕಾಯಿದೆ ೧೯೧೨ರನ್ವಯ ಜಿಲ್ಲೆಯಲ್ಲಿ ರೈತರಿಗೆ ಕೃಷಿ ಸಾಲವನ್ನು ಒದಗಿಸುವ ಮೂಲ ಉದ್ದೇಶ ಹಾಗೂ ಗ್ರಾಮೀಣ ಜನರನ್ನು ಸಾಹುಕಾರರು, ಲೇವಾದೇವಿಗಾರರು ಮತ್ತು ಮಧ್ಯವರ್ತಿ ವರ್ತಕರಿಂದ ವಿಮುಕ್ತಿಗೊಳಿಸಿ ಗ್ರಾಮೀಣ ಆರ್ಥಿಕ ಪ್ರಗತಿಯನ್ನು ಸಾಧಿಸುವ ಉದ್ಧೇಶದಿಂದ ಫೆಬ್ರವರಿ ೧೯೫೫ರಲ್ಲಿ ತುಮಕೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಸಹಕಾರ ಸಂಘಗಳ ಅಧಿನಿಯಮಗಳಡಿಯಲ್ಲಿ ಸ್ಥಾಪನೆಗೊಂಡಿತು.ದಿನಾಂಕ ೧೭-೧೧-೨೦೦೬ರಂದು ಈ ಬ್ಯಾಂಕಿನ ಸುವರ್ಣ ಮಹೋತ್ಸವವನ್ನು ಆಚರಿಸಲಾಯಿತು. ಈ ಬ್ಯಾಂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಇತರ ಎಲ್ಲಾ ಸಹಕಾರ ಸಂಘಗಳಿಗೆ ಅಗತ್ಯವಾಗಿ ಬೇಕಾಗುವ ಸಾಲಗಳನ್ನು ಒದಗಿಸುವುದು, ಸಹಕಾರ ಸಂಘಗಳ ಮೇಲ್ವಿಚಾರಣೆಯ ಜೊತೆಗೆ ಸಹಕಾರ ಆಂದೋಲನವನ್ನು ಹೆಚ್ಚು ಪರಿಣಾಮಕಾರಿಯಾಗಿ ವಿಸ್ತರಿಸಿ ತನ್ನ ಕಾರ್ಯಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ಕಾರ್ಯಯೋಜನೆಯನ್ನು ರೂಪಿಸಿಕೊಂಡಿತು.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಜಿಲ್ಲೆಯ ಗ್ರಾಮೀಣಾಭಿವೃದ್ಧಿಗೆ ಪೂರಕವಾದ ಮಾರಾಟ ಸಹಕಾರ ಸಂಘ, ಕೃಷಿ ಅಭಿವೃದ್ಧಿ ಸಂಘ, ನೇಕಾರರ ಸಹಕಾರ ಸಂಘ, ತೋಟಗಾರಿಕೆ ಉತ್ಪನ್ನಗಳ ಮಾರಾಟ ಸಹಕಾರ ಸಂಘ, ಸಕ್ಕರೆ ಕಾರ್ಖಾನೆ, ಹಾಲು ಉತ್ಪಾದಕರ ಸಹಕಾರ ಸಂಘ, ರೇಷ್ಮೆ ಬೆಳೆಗಾರರ ಸಹಕಾರ ಸಂಘ, ಮುಂತಾದ ಹಲವಾರು ಸಹಕಾರ ಸಂಘಗಳ ಮೂಲಕ ಜಿಲ್ಲೆಯ ಗ್ರಾಮೀಣ ಆರ್ಥಿಕಾಭಿವೃದ್ಧಿಗೆ ಅನುವು ಮಾಡಿಕೊಟ್ಟಿದೆ. ಜಿಲ್ಲೆಯ ಪ್ರಮುಖ ಬೆಳೆಗಳಾದ ತೆಂಗು, ಅಡಿಕೆ, ಬಾಳೆ, ಬತ್ತ, ಕಬ್ಬು ಖುಷ್ಕಿ ಬೆಳೆಗಳು, ಹಣ್ಣು, ತರಕಾರಿ ಮುಂತಾದ ಬೆಳೆಗಳನ್ನು ಬೆಳೆಸಲು ಅಲ್ಪಾವಧಿ ಸಾಲವನ್ನು ನೀಡುತ್ತಿದೆ. ಸರ್ಕಾರದ ಪ್ರಾಯೋಜಿತ ಕಾರ್ಯಕ್ರಮಗಳಾದ ಐ.ಆರ್.ಡಿ.ಪಿ. ನೂರು ಬಾವಿ ಯೋಜನೆ, ಬಯೋಗ್ಯಾಸ್, ಗ್ರಾಮೀಣ ಉದ್ಯೋಗ ಯೋಜನೆ, ಸ್ವಸಹಾಯ ಗುಂಪು, ಸ್ತ್ರೀಶಕ್ತಿ ಯೋಜನೆ ಮುಂತಾದ

ಹಲವು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಬ್ಯಾಂಕು ಮಹತ್ವದ ಪಾತ್ರ ವಹಿಸುತ್ತಿದೆ. ಗ್ರಾಮೀಣ ರೈತರಿಗೆ ಪಂಪ್‌ಸೆಟ್, ಕೊಳವೆಬಾವಿ, ಪವರ್‌ಟಿಲ್ಲರ್, ಹೈನುಗಾರಿಕೆ, ಕೋಳಿಸಾಗಣೆ, ತೋಟಗಾರಿಕೆ, ಕೆರೆ ದುರಸ್ತಿ, ಭೂ ಅಭಿವೃದ್ಧಿ ಕೃಷಿ ಕ್ಷೇತ್ರ, ಗೃಹ ನಿರ್ಮಾಣ, ಜಾನುವಾರು ಖರೀದಿ ಮುಂತಾದ ಉದ್ದೇಶಗಳಿಗೆ ಮಧ್ಯಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಒದಗಿಸುತ್ತಿದೆ. ಹೈನುಗಾರಿಕೆ, ಕುರಿ ಕೋಳಿಸಾಕಣೆ, ಮುಂತಾದ ಕೃಷಿಯೇತರ ಉಪಕಸುಬುಗಳಲ್ಲಿ ಕಾರ್ಯನಿರತರಾಗಿರುವವರಿಗೆ ಸಾಕಷ್ಟು ಸಾಲಸೌಲಭ್ಯ ಒದಗಿಸುತ್ತಿರುವುದರಿಂದ ಈ ವೃತ್ತಿಯನ್ನು ಅವಲಂಬಿಸುವ ಕುಟುಂಬಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಿರುತ್ತಿವೆ.

ಗ್ರಾಮೀಣ ನಿರುದ್ಯೋಗವನ್ನು ನೀಗಿಸಲು ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಕೇಂದ್ರ ಬ್ಯಾಂಕು 'ನಬಾರ್ಡ್' ಪುನರ್ಧನ ಯೋಜನೆಯಡಿಯಲ್ಲಿ ಗ್ರಾಮೀಣ ಗುಡಿ ಕೈಗಾರಿಕೆ, ಕಿರು ಕೈಗಾರಿಕೆ, ಸೇವಾ ಘಟಕಗಳು, ಮುಂತಾದವುಗಳಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ನೀಡುತ್ತಿರುವುದಲ್ಲದೆ ಆರ್ಥಿಕ ಸಂಕಷ್ಟಕ್ಕೆ ಒಳಗಾದ ಸಾಲಗಾರರ ಬಡ್ಡಿಯನ್ನು ಮನ್ನಾ ಮಾಡುವ ಕ್ರಮವನ್ನು ಸಹ ಕೈಗೊಂಡಿದೆ. ಜೊತೆಗೆ ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಸಾಲ ನೀಡುವುದಲ್ಲದೇ ಸಹಾಯಧನವನ್ನೂ ನೀಡುತ್ತಿದೆ. ಗ್ರಾಮೀಣ ಜನರಿಗೆ ವ್ಯಾಪಾರ, ಸಾಲ, ವಾಹನ ಖರೀದಿ ಸಾಲ, ಅಂಗಡಿ–ಮಳಿಗೆಗಳ ನಿರ್ಮಾಣ, ವಾಣಿಜ್ಯ ಸಂಕೀರ್ಣ ನಿರ್ಮಾಣ ಸಾಲ ಮುಂತಾದ ಹಲವು ವಿಧದ ಸಾಲದ ಬೇಡಿಕೆಗಳನ್ನು ಬ್ಯಾಂಕು ಪೂರೈಸುತ್ತಿದೆ. ಮಹಿಳೆಯರು ಸ್ವ ಉದ್ಯೋಗ ಕೈಗೊಳ್ಳಲು ಉತ್ತೇಜನ, ಮಾರ್ಗದರ್ಶನ, ಸಾಲಸೌಲಭ್ಯ ಮುಂತಾದವುಗಳನ್ನು ನೀಡುತ್ತಿದೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ತುಮಕೂರು ನಗರದಲ್ಲಿ ಪ್ರಧಾನ ಕಚೇರಿಯನ್ನು ಸ್ಥಾಪಿಸುವುದರ ಜೊತೆಗೆ ಸೋಮೇಶ್ವರ ಪುರಂ, ಕ್ಯಾತ್ಸಂದ್ರ, ಹತ್ತು ತಾಲೂಕುಗಳು ಮತ್ತು ಹತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶಾಖೆಗಳನ್ನು ಹೊಂದಿದ್ದು, ಒಟ್ಟು ೨೨ ಶಾಖೆಗಳು ಹಾಗೂ ೨೩೨ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಬಡಜನರಿಗೆ ೨೦೪೧ ಸ್ವಸಹಾಯ ಸಂಘಗಳ ಮೂಲಕ ಸಾಲ ನೀಡಿ ಬಡತನ ನಿವಾರಣಾ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಮುನ್ನಡೆ ಸಾಧಿಸಿದೆ. ನಬಾರ್ಡ್ ಯೋಜನೆಯಡಿಯಲ್ಲಿ ಈ ಬ್ಯಾಂಕು ಜಿಲ್ಲೆಯ ೧೩ ರೈತಕೂಟಗಳನ್ನು ಸ್ಥಾಪಿಸುವುದರ ಜೊತೆಗೆ ಗ್ರಾಮೀಣ ಜನತೆಗೆ ತರಬೇತಿ ಶಿಕ್ಷಣವನ್ನೂ ಸಹ ನೀಡುತ್ತಿದೆ. ವಿವರಗಳಿಗೆ ಕೋಷ್ಟಕ ೬.೧೪ ೬.೧೫ ಹಾಗೂ ೬.೧೬ ನೋಡಿ.

**ಕೋಷ್ಟಕ ೬.೧೪: ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು (ನಿ) (೧೯೫೫ ರಿಂದ ೨೦೦೯ರವರೆಗೆ) ಸಾಧಿಸಿದ ಪ್ರಗತಿ**

(ಲಕ್ಷ ರೂ.ಗಳಲ್ಲಿ)

| | ವಿವರಗಳು | ೧೯೫೫ | ೧೯೬೫ | ೧೯೭೫ | ೧೯೮೫ | ೧೯೯೫ | ೨೦೦೬ | ೨೦೦೯ ಮಾರ್ಚ್ ಅಂತ್ಯದವರೆಗೆ |
|---|---|---|---|---|---|---|---|---|
| ೧ | ಸದಸ್ಯರ ಸಂಖ್ಯೆ | ೧೫೨ | ೬೯೬ | ೮೩೧ | – | ೯೪೬ | ೧೦೩೯ | ೧೦೪೬ |
| ೨ | ಶಾಖೆಗಳು | – | ೬ | ೧೩ | ೧೭ | ೧೯ | ೨೧ | ೨೨ |
| ೩ | ಷೇರು ಬಂಡವಾಳ | ೦.೬೭ | ೩೧.೪೧ | ೪೪.೯೪ | ೧೩೦.೬೦ | ೩೧೪.೧೬ | ೬೬೯.೦೧ | ೧೧೧೨.೯೯ |
| ೪ | ಆಪದ್ಧನ | – | ೧.೬೦ | ೭.೯೧ | ೧೮.೧೯ | ೨೭.೨೩ | ೧೦೫.೯೦ | ೩೪೫.೧೨ |
| ೫ | ಇತರೆ ನಿಧಿಗಳು | – | ೧.೧೮ | ೧೭.೭೪ | ೪೮.೯೦ | ೬೦.೦೭ | ೯೯.೨೨ | ೬೫೫.೯೮ |
| ೬ | ಠೇವಣಿಗಳು | ೦.೦೬ | ೩೭.೯೧ | ೧೦೭.೫೨ | ೪೯೧.೩೯ | ೨೧೪೦.೩೫ | ೯೨೬೪.೦೦ | ೧೪೯೪೧.೬೪ |
| ೭ | ಪಡೆದಿರುವ ಸಾಲಗಳು | – | ೩.೧೪ | ೭೩.೦೨ | ೩೫೪.೮೧ | ೧೦೪೩.೮೦ | ೧೦೧೪೧.೯೦ | ೭೪೬೬.೮೩ |
| ೮ | ದುಡಿಯುವ ಬಂಡವಾಳ | ೦.೭೩ | ೧೧೦.೮೧ | ೨೫೧.೧೩ | ೧೦೪೩.೮೯ | ೩೬೧೫.೬೦ | ೧೩೯೦೪.೦೦ | ೨೩೧೫೯.೮೦ |
| ೯ | ಹಂಚಿರುವ ಸಾಲಗಳು | ೦.೨೦ | ೯೨.೫೬ | ೧೭೦.೨೮ | ೮೯೧.೦೫ | ೨೧೧೬.೭೧ | ೧೨೦೮೨.೦೦ | ೧೯೮೧೯.೯೯ |
| ೧೦ | ಹೂಡಿಕೆಗಳು | ೦.೦೧ | ೮.೮೦ | ೨೫.೮೭ | ೧೧೦.೭೪ | ೪೯೦.೧೮ | ೩೩೩೮.೯೦ | ೫೯೨೦.೫೦ |
| ೧೧ | ನಿವ್ವಳ ಲಾಭ/ನಷ್ಟ | – | ೧.೫೫ | ೩.೦೨ | ೦.೨೦ | ೩೪.೦೨ | ೮೫೧.೪೪ | ೩೩೪.೫೭ |

ಆಧಾರ : ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು, ತುಮಕೂರು

## ಕೋಷ್ಟಕ ೬.೧೫: ಜಿಲ್ಲೆಯಲ್ಲಿದ್ದ ಡಿ.ಸಿ.ಸಿ. ಶಾಖಾ ಬ್ಯಾಂಕು ಹಾಗೂ ಕ.ರಾ.ಕೃ.ಗ್ರಾ.ಅ. ಬ್ಯಾಂಕುಗಳ ವಿವರ (೩೧-೩-೨೦೧೪ ರಲ್ಲಿದ್ದಂತೆ)

(ಲಕ್ಷ ರೂ.ಗಳಲ್ಲಿ)

| ತಾಲೂಕುಗಳು | ಡಿ.ಸಿ.ಸಿ. ಬ್ಯಾಂಕುಗಳು | | | |
|---|---|---|---|---|
| | ಶಾಖೆಗಳ ಸಂಖ್ಯೆ | ಕೃಷಿ ಸಾಲ | ಇತರೆ ಸಾಲ | ಒಟ್ಟು ಸಾಲ |
| ಚಿಕ್ಕನಾಯಕನಹಳ್ಳಿ | ೦೩ | ೨೧೦೪ | ೧೨೪ | ೨೨೨೮ |
| ಗುಬ್ಬಿ | ೦೧ | ೧೭೪೭ | ೩ | ೧೭೫೦ |
| ಕೊರಟಗೆರೆ | ೦೧ | ೫೨೫ | ೭೦೪ | ೧೨೨೯ |
| ಕುಣಿಗಲ್ | ೦೨ | ೯೨೮ | ೫೩೯ | ೧೪೬೭ |
| ಮಧುಗಿರಿ | ೦೩ | ೩೯೭೨ | ೨೨೫೧ | ೬೨೨೩ |
| ಪಾವಗಡ | ೦೨ | ೧೨೯೯ | ೫೩೦ | ೧೮೨೯ |
| ಶಿರಾ | ೦೨ | ೧೫೯೦ | ೭೯೨ | ೨೩೮೨ |
| ತಿಪಟೂರು | ೦೨ | ೨೫೩೩ | ೭೯೬ | ೩೩೨೯ |
| ತುಮಕೂರು | ೦೫ | ೩೫೮೨ | ೪೨೦೧ | ೭೭೮೩ |
| ತುರುವೇಕೆರೆ | ೦೨ | ೧೫೫೫ | ೧೩೧೧ | ೨೮೬೬ |
| ಜಿಲ್ಲಾ ಮೊತ್ತ | **೨೩** | **೧೯೮೩೫** | **೧೧೨೫೧** | **೩೧೦೮೬** |

| ತಾಲೂಕುಗಳು | ಕ.ರಾ.ಕೃ.ಗ್ರಾ.ಅ. ಬ್ಯಾಂಕುಗಳು | | | | |
|---|---|---|---|---|---|
| | ಶಾಖೆಗಳ ಸಂಖ್ಯೆ | ಕೃಷಿ ಸಾಲ | ಇತರೆ ಸಾಲ | ಒಟ್ಟು ಸಾಲ | ಠೇವಣಿ |
| ಚಿಕ್ಕನಾಯಕನಹಳ್ಳಿ | ೧ | ೭೫ | ೦ | ೭೫ | ೦ |
| ಗುಬ್ಬಿ | ೧ | ೮೭ | ೦ | ೮೭ | ೦ |
| ಕೊರಟಗೆರೆ | ೧ | ೧೯೫ | ೦ | ೧೯೫ | ೦ |
| ಕುಣಿಗಲ್ | ೧ | ೪೫ | ೦ | ೪೫ | ೦ |
| ಮಧುಗಿರಿ | ೧ | ೭೩ | ೦ | ೭೩ | ೦ |
| ಪಾವಗಡ | ೧ | ೪೯ | ೦ | ೪೯ | ೦ |
| ಶಿರಾ | ೧ | ೫೩ | ೦ | ೫೩ | ೦ |
| ತಿಪಟೂರು | ೧ | ೨೩೯ | ೦ | ೨೩೯ | ೦ |
| ತುಮಕೂರು | ೧ | ೧೧೫ | ೦ | ೧೧೫ | ೦ |
| ತುರುವೇಕೆರೆ | ೧ | ೨೫೪ | ೦ | ೨೫೪ | ೦ |
| ಜಿಲ್ಲಾ ಮೊತ್ತ | **೧೦** | **೧೧೮೫** | **೦** | **೧೧೮೫** | **೦** |

ಆಧಾರ: ತುಮಕೂರು ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೪, ತುಮಕೂರು

## ಕೋಷ್ಟಕ ೬.೧೬: ಜಿಲ್ಲೆಯಲ್ಲಿದ್ದ ಡಿ.ಸಿ.ಸಿ. ಶಾಖಾ ಬ್ಯಾಂಕು ಹಾಗೂ ಕ.ರಾ.ಕೃ.ಗ್ರಾ.ಅ. ಬ್ಯಾಂಕುಗಳ ವಿವರ (೩೧-೩-೨೦೧೪ ರಲ್ಲಿದ್ದಂತೆ)

(ಲಕ್ಷ ರೂ.ಗಳಲ್ಲಿ)

| ಡಿ.ಸಿ.ಸಿ. ಬ್ಯಾಂಕುಗಳು | | | | | |
|---|---|---|---|---|---|
| ತಾಲೂಕುಗಳು | ಶಾಖೆಗಳ ಸಂಖ್ಯೆ | ಕೃಷಿ ಸಾಲ | ಇತರೆ ಸಾಲ | ಒಟ್ಟು ಸಾಲ | ಠೇವಣಿ |
| ಚಿಕ್ಕನಾಯಕನಹಳ್ಳಿ | ೧ | ೨೪೮೯.೮೩ | ೧೯೨೧.೪೨ | ೪೪೧೧.೨೫ | ೨೯೮೩.೦೦ |
| ಗುಬ್ಬಿ | ೧ | ೨೦೦೩.೪೧ | ೭೯೮.೭೮ | ೨೮೦೨.೧೯ | ೨೨೫೬.೦೦ |
| ಕೊರಟಗೆರೆ | ೧ | ೧೩೫೪.೫೬ | ೫೦೮,೮೪ | ೧೮೬೩.೪೦ | ೧೫೦೧.೦೦ |
| ಕುಣಿಗಲ್ | ೧ | ೧೩೩೮.೩೦ | ೧೫೫೧.೫೦ | ೨೮೮೯.೮೦ | ೨೭೪೩.೦೦ |
| ಮಧುಗಿರಿ | ೧ | ೪೯೦೬.೧೫ | ೩೩೯೪.೩೨ | ೮೩೦೦.೪೭ | ೩೭೭೭.೦೦ |
| ಪಾವಗಡ | ೧ | ೧೩೬೬.೬೯ | ೨೫೮೬.೮೧ | ೩೯೫೩.೫೦ | ೧೬೬೯.೦೦ |
| ಶಿರಾ | ೧ | ೧೮೩೦.೪೨ | ೧೧೬೯,೯೮ | ೩೦೦೦.೪೦ | ೨೦೮೮,೦೦ |
| ತಿಪಟೂರು | ೧ | ೪೧೮೫.೧೮ | ೧೬೨೭.೪೧ | ೫೮೧೨.೫೯ | ೪೯೧೬.೦೦ |
| ತುಮಕೂರು | ೧ | ೩೨೪೮.೮೩ | ೧೧೧೬೫.೬೫ | ೧೪೯೦೪,೪೮ | ೧೬೦೦೦೪.೦೦ |
| ತುರುವೇಕೆರೆ | ೧ | ೩೨೪೭.೭೦ | ೨೬೦೦.೫೯ | ೫೮೪೮.೨೯ | ೪೩೨೫.೦೦ |
| ಜಿಲ್ಲಾ ಮೊತ್ತ | ೧೦ | ೨೫೯೭೧.೦೭ | ೨೫೬೪೬.೪೮ | ೩೪೯೨೮ | ೧೮೪೧೭೪ |

| ತಾಲೂಕುಗಳು | ಕ.ರಾ.ಕೃ.ಗ್ರಾ.ಅ. ಬ್ಯಾಂಕುಗಳು | | | | |
|---|---|---|---|---|---|
| | ಶಾಖೆಗಳ ಸಂಖ್ಯೆ | ಕೃಷಿ ಸಾಲ | ಇತರೆ ಸಾಲ | ಒಟ್ಟು ಸಾಲ | ಠೇವಣಿ |
| ಚಿಕ್ಕನಾಯಕನಹಳ್ಳಿ | ೧ | ೫೬೪.೪೫ | ೬.೨೮ | ೫೭೦,೭೩ | ೩೭,೧೧ |
| ಗುಬ್ಬಿ | ೧ | ೬೦೭.೧೩ | ೧.೦೧ | ೬೦೮.೧೪ | ೯.೨೩ |
| ಕೊರಟಗೆರೆ | ೧ | ೫೭೮.೧೭ | ೦.೨೫ | ೫೭೮.೪೨ | ೧೦.೬೩ |
| ಕುಣಿಗಲ್ | ೧ | ೩೧೨.೩೫ | ೮.೩೯ | ೩೭೦.೭೪ | ೦.೦೦ |
| ಮಧುಗಿರಿ | ೧ | ೪೧೨.೮೪ | ೨.೫೪ | ೪೧೫.೩೮ | ೨.೦೨ |
| ಪಾವಗಡ | ೧ | ೫೫೩.೭೮ | ೭.೩೧ | ೫೬೧.೦೯ | ೦.೦೦ |
| ಶಿರಾ | ೧ | ೫೨೯.೨೯ | ೫.೫೩ | ೫೩೪.೮೨ | ೦.೦೦ |
| ತಿಪಟೂರು | ೧ | ೧೧೦೨.೮೨ | ೪.೦೬ | ೧೧೦೪,೪೮ | ೬೦.೯೨ |
| ತುಮಕೂರು | ೧ | ೪೬೫.೧೨ | ೦.೯೩ | ೪೬೬.೦೫ | ೩೪.೨೭ |
| ತುರುವೇಕೆರೆ | ೧ | ೧೦೪೩.೧೨ | ೪.೦೬ | ೧೦೪೭.೧೮ | ೮೫.೨೧ |
| ಜಿಲ್ಲಾ ಮೊತ್ತ | ೧೦ | ೬೧೬೯.೦೭ | ೪೦.೩೬ | ೬೨೫೭.೦೩ | ೨೩೯.೩೯ |

ಆಧಾರ: ತುಮಕೂರು ಜಿಲ್ಲಾ ಅಂಕಿ-ಅಂಶಗಳ ನೋಟ ೨೦೧೫, ತುಮಕೂರು.

**ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು (ನಿಯಮಿತ) ತುಮಕೂರು (ಭೂ ಅಭಿವೃದ್ಧಿ ಬ್ಯಾಂಕು)**

ರಾಜ್ಯ ಸಹಕಾರಿ ರಂಗದಲ್ಲಿ ದೀರ್ಘಾವಧಿ ಸಾಲ ಸೌಲಭ್ಯಗಳನ್ನು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ನೀಡುತ್ತಿರುವ ಭೂ ಅಭಿವೃದ್ಧಿ ಬ್ಯಾಂಕು ರೈತರನ್ನು ಖಾಸಗಿ ಲೇವಾದೇವಿದಾರರ ಅಧಿಕ ಬಡ್ಡಿಯ ಸಾಲದ ಹೊರೆಯಿಂದ ಮುಕ್ತಗೊಳಿಸುವುದಕ್ಕಾಗಿ ೧೯೨೯ರಲ್ಲಿ ಸ್ಥಾಪನೆಯಾಗಿದೆ. ೧೯೬೩ರವರೆಗೆ ಹಳೆ ಸಾಲ ತೀರುವಳಿ ಮತ್ತು ಭೂ ಅಭಿವೃದ್ಧಿ ಉದ್ದೇಶಗಳಿಗೆ ಸಾಲ ವಿತರಿಸುತ್ತಿದ್ದ ಈ ಬ್ಯಾಂಕು ಕೃಷಿ ಪುನರ್ಧನ ಮತ್ತು ಅಭಿವೃದ್ಧಿ ನಿಗಮದ ಸ್ಥಾಪನೆಯ ನಂತರ ಪುನರ್ಧನ ನೆರವಿನಿಂದ ಕೃಷಿ ಅಭಿವೃದ್ಧಿಗೆ ಅನೇಕ ಉತ್ಪಾದನಾ ಸಾಲಗಳನ್ನು ನೀಡಲು ಮುಂದಾಯಿತು. ಧ್ಯೇಯ ಧೋರಣೆಗಳಲ್ಲಿನ ಬದಲಾವಣೆಗಳಿಂದಾಗಿ ಮೊದಲು ಭೂ ಅಡಮಾನ ಬ್ಯಾಂಕು ಎಂದು ಕರೆಯಲಾಗುತ್ತಿದ್ದ ಈ ಬ್ಯಾಂಕಿನ ಹೆಸರನ್ನು ಕ್ರಮೇಣ "ಭೂ ಅಭಿವೃದ್ಧಿ ಬ್ಯಾಂಕು" ಎಂದು ಬದಲಾಯಿಸಲಾಯಿತು. ೧೯೮೨ರಲ್ಲಿ ಸ್ಥಾಪನೆಯಾದ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ನಿಂದ ಪುನರ್ಧನ ಪಡೆಯಲು ಪ್ರಾರಂಭಿಸಿದ ನಂತರ, ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೆ ದೀರ್ಘಾವಧಿ ಸಾಲಗಳನ್ನು ಒದಗಿಸುತ್ತಿರುವ ಹಿನ್ನೆಲೆಯಲ್ಲಿ ಈಗಿನ ಹೆಸರಾದ "ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್: ಎಂದು ಪುನರ್ ನಾಮಕರಣಗೊಂಡು ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಪ್ರದೇಶದ ಎಲ್ಲಾ ವರ್ಗದ ಜನರಿಗೆ ಆರ್ಥಿಕ ನೆರವು ನೀಡುತ್ತಲಿದೆ.

ಜಿಲ್ಲೆಯ ಹತ್ತು ತಾಲೂಕು ಕೇಂದ್ರಗಳಲ್ಲಿ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳನ್ನು ಸ್ಥಾಪಿಸಲಾಗಿದೆ. ಈ ಬ್ಯಾಂಕುಗಳು ಸ್ಥಾಪನೆಯಾದ ಪ್ರಾರಂಭದಲ್ಲಿ ರೈತರ ಹಳೆ ಸಾಲ ತೀರುವಳಿಗೆ ಸಾಲ ನೀಡುತ್ತಿದ್ದು, ಅನಂತರ ಕೃಷಿಯ ಶಾಶ್ವತ ಅಭಿವೃದ್ಧಿ ಉದ್ದೇಶಗಳಿಗೆ ದೀರ್ಘಾವಧಿ ಸಾಲಗಳನ್ನು ಕಡಿಮೆ ಬಡ್ಡಿದರದಲ್ಲಿ ಸುಲಭವಾದ ಕಂತುಗಳ ಮೂಲಕ ಒದಗಿಸುತ್ತಿದೆ. ೧೯೬೬ರಲ್ಲಿ ಲಭ್ಯವಾದ ಅಂಕಿಅಂಶಗಳ ಪ್ರಕಾರ ಈ ೧೦ ಬ್ಯಾಂಕುಗಳ ಒಟ್ಟು ಸದಸ್ಯತ್ವ ಸಂಖ್ಯೆ ೩೧,೦೦೦ ಗಳಷ್ಟಿದ್ದು, ಷೇರು ಮತ್ತು ದುಡಿಮೆ ಬಂಡವಾಳವು ರೂ. ೧೩,೫೮ ಲಕ್ಷ ಮತ್ತು ರೂ. ೨೦೩.೧೨ ಲಕ್ಷದಷ್ಟಿದೆ. ಈ ಬ್ಯಾಂಕುಗಳು ೧೯೬೬ರಲ್ಲಿ ೧,೩೦೬ ಸದಸ್ಯರಿಗೆ ರೂ. ೪೨೯ ಲಕ್ಷದಷ್ಟು ದೀರ್ಘಾವಧಿ ಸಾಲ ನೀಡಿವೆ. ಈ ಯೋಜನೆಯಡಿಯಲ್ಲಿ ೨೬೯ ಬಾವಿಗಳನ್ನು ತೋಡಲು ರೂ.೨೨ ಲಕ್ಷ ಸಾಲ ನೀಡಿವೆ.

ಕೃಷಿ ಅಭಿವೃದ್ಧಿಗೆ ದೀರ್ಘಾವಧಿ ಸಾಲಗಳನ್ನು ನೀಡುವ ಯೋಜನೆಗಳು ಮತ್ತು ಸಾಲ ಮಂಜೂರಾತಿ ಅಧಿಕಾರವನ್ನು ಆಯಾ ಪ್ರಾಥಮಿಕ ಬ್ಯಾಂಕುಗಳಿಗೆ ಮತ್ತು ಬ್ಯಾಂಕಿನ ಎಲ್ಲಾ ಶಾಖಾ ಕಚೇರಿಗಳಿಗೆ ವಿಕೇಂದ್ರಿಕರಣ ಮಾಡಿದ್ದು, ಸಾಲ ಮಂಜೂರಾತಿ, ಮೇಲ್ವಿಚಾರಣೆ, ವಸೂಲಾತಿ, ಮುಂತಾದ ಕಾರ್ಯಗಳು ಸುಗಮವಾಗಿ ಜರುಗುವಂತೆ ವ್ಯವಸ್ಥೆ ಮಾಡಲಾಗಿದೆ. ಪ್ರಾಥಮಿಕ ಬ್ಯಾಂಕುಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ರಾಜ್ಯ ಬ್ಯಾಂಕಿನ ಸದಸ್ಯತ್ವ ಹೊಂದಿವೆ. ರಾಜ್ಯ ಸರ್ಕಾರದ ಕೃಷಿ ಕೈಗಾರಿಕಾ ನಿಗಮ ಮಾರಾಟ ಮಂಡಳಿ ಉಗ್ರಾಣ ನಿಗಮ, ವಿದ್ಯುತ್ ಮಂಡಳಿ, ಅಚ್ಚುಕಟ್ಟು ಪ್ರಾಧಿಕಾರಗಳು ಮುಂತಾದ ೧೩ ಸಂಸ್ಥೆಗಳು ಬ್ಯಾಂಕಿನ ಸಹಸದಸ್ಯತ್ವ ಹೊಂದಿದ್ದು, ಇವುಗಳಿಗೆ ಸಾರ್ವಜನಿಕ ಹಿತಾಸಕ್ತಿಯ ಅಭಿವೃದ್ಧಿ ಉದ್ದೇಶಗಳಿಗೆ ಆರ್ಥಿಕ ನೆರವು ನೀಡಲಾಗಿದೆ. ೧೯೮೭ರಿಂದ ಕೃಷಿಯೇತರ ಚಟುವಟಿಕೆಗಳಾದ ಗೃಹ ಮತ್ತು ಗ್ರಾಮೀಣ ಗುಡಿ ಕೈಗಾರಿಕೆಗಳು, ಗ್ರಾಮೋದ್ಯೋಗ ಗೃಹನಿರ್ಮಾಣ, ಕೃಷಿ ಪೂರಕವಾದ ಉದ್ದೇಶಗಳಿಗೆ ಅಂದರೆ ಪಶು ಸಂಗೋಪನೆ, ರೇಷ್ಮೆ, ಹೈನುಗಾರಿಕೆ, ಕೋಳಿ, ಕುರಿ, ಹಂದಿ ಮೊಲ, ಜೇನುಸಾಕಣೆ, ಮೀನುಗಾರಿಕೆ ಮೊದಲಾದವುಗಳಿಗೆ ಸಾಲಸೌಲಭ್ಯಗಳನ್ನು ಒದಗಿಸುತ್ತಿದೆ. ಈ ಬ್ಯಾಂಕು ಆದ್ಯತಾ ವಲಯಗಳಿಗೆ ನಬಾರ್ಡ್ ನೀಡುವ ನಿರ್ದೇಶನದಂತೆ ಸಾಲ ವಿತರಣೆಯನ್ನು ಮಾಡುತ್ತದೆ. ರೈತರು ತಮ್ಮ ಬೇಸಾಯದಲ್ಲಿ ಅಧಿಕ ಇಳುವರಿ ಪಡೆಯುವ ಗುರಿಯಲ್ಲಿ ಸುಧಾರಿತ ಬೇಸಾಯಕ್ಕೆ ಅಗತ್ಯವಾಗಿ ಬೇಕಾಗುವ ಆಧುನಿಕ ಕೃಷಿ ಉಪಕರಣಗಳನ್ನು ಕೊಳ್ಳಲು ಶಾಶ್ವತ ನೀರಾವರಿ ಅಭಿವೃದ್ಧಿಗೆ ಹೈನುಗಾರಿಕೆ, ತೋಟಗಾರಿಕೆ, ಫಲಪುಷ್ಪ, ತರಕಾರಿ, ಹಣ್ಣು ಹಂಪಲು, ರೇಷ್ಮೆ ಕೃಷಿ ಅಭಿವೃದ್ಧಿಗೆ ಆಹಾರ ಸಂಸ್ಕರಣೆ, ಗ್ರಾಮೀಣ ಆರ್ಥಿಕ ಮೂಲಸೌಲಭ್ಯಗಳ ಅಭಿವೃದ್ಧಿಗೆ ಸಾಲನೀಡಿಕೆ, ಗೃಹ ಮತ್ತು ಗ್ರಾಮೀಣ ಗುಡಿ ಕೈಗಾರಿಕೆ, ಗ್ರಾಮೋದ್ಯೋಗ ಮೊದಲಾದ ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ದೀರ್ಘಾವಧಿ ಸಾಲವನ್ನು ಒದಗಿಸುತ್ತಿವೆ. ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಿಂದುಳಿದ ದುರ್ಬಲ ಅಲ್ಪಸಂಖ್ಯಾತ ಬಡವರಿಗೆ ಮತ್ತು ಸಣ್ಣ ರೈತರಿಗೆ ಸಾಲ ನೀಡುತ್ತದೆ. ತುಮಕೂರು ಜಿಲ್ಲೆಯಲ್ಲಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ಸಾಧಿಸಿದ ಪ್ರಗತಿಯನ್ನು ಕೋಷ್ಟಕ ೬.೧೭ ರಿಂದ ೬.೨೦ ವರೆಗೆ ನೀಡಲಾಗಿದೆ.

## ಕೋಷ್ಟಕ ೬.೧೭: ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಜಿಲ್ಲೆಯಲ್ಲಿ ತಾಲೂಕುವಾರು ಸಾಧಿಸಿದ ಪ್ರಗತಿ (೩೧-೦೩-೨೦೦೯ ರಲ್ಲಿದ್ದಂತೆ)

| ಕ್ರ.ಸಂ | ತಾಲೂಕುಗಳು | ಸದಸ್ಯರ ಸಂಖ್ಯೆ | ಷೇರು ಬಂಡವಾಳ | ನಿಧಿಗಳು | ನಿಶ್ಚಿತ ಠೇವಣಿ | ಕೇಂದ್ರ ಬ್ಯಾಂಕಿನಿಂದ ಪಡೆದ ಸಾಲಗಳು | ಸಾಲ ವಿತರಣೆ | ಸದಸ್ಯರಿಂದ ಬರಬೇಕಾದ ಸಾಲಗಳು | ಸಾಲ ವಸೂಲಾತಿ | ಹೂಡಿಕೆಗಳು | ದುಡಿಯುವ ಬಂಡವಾಳ | ನಿವ್ವಳ | |
|---|---|---|---|---|---|---|---|---|---|---|---|---|---|
| | | | | | | | | | | | | ಲಾಭ | ನಷ್ಟ |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ | ೧೪ |
| ೧ | ಚಿಕ್ಕನಾಯಕನಹಳ್ಳಿ | ೮೨೪೭ | ೫೪.೪೪ | ೭೪.೮೧ | ೨.೪೩ | ೫೯೧.೭ | ೯೧.೧೨ | ೫೯೨.೮೩ | ೧೫೮.೫೦ | ೩೧.೯೦ | ೫೭೧.೦೪ | ೦.೦೦ | ೧೫೨.೩೧ |
| ೨ | ಗುಬ್ಬಿ | ೯೮೯೦ | ೬೪.೧೯ | ೭೩.೭೮ | ೦.೦೫ | ೮೧೨.೮೧ | ೧೦೭.೮೩ | ೭೨೮.೯೩ | ೧೭೪.೦೮ | ೩೩.೭೫ | ೭೪೯.೦೦ | ೦.೦೦ | ೨೦೧.೮೩ |
| ೩ | ಕೊರಟಗೆರೆ | ೫೨೪೭ | ೩೫.೧೦ | ೪೯.೬೧ | ೦.೦೦ | ೩೯೩.೦೪ | ೮೮.೪೮ | ೩೧೧.೩೮ | ೧೧೦.೩೮ | ೧೬.೭೨ | ೨೯೦.೨೮ | ೦.೦೦ | ೧೮೭.೪೭ |
| ೪ | ಕುಣಿಗಲ್ | ೭೨೩೦ | ೩೮.೮೦ | ೪೧.೧೩ | ೦.<br>೧೦ | ೪೪೩.೭೪ | ೫೮.೧೯ | ೩೬೨.೮೫ | ೮೫.೫೮ | ೧೯.೦೪ | ೨೯೩.೦೦ | ೦.೦೦ | ೨೩೦.೭೭ |
| ೫ | ಮಧುಗಿರಿ | ೬೬೧೦ | ೪೨.೮೦ | ೫೭.೧೪ | ೦.೦೦ | ೩೩೩.೯೫ | ೫೩.೯೯ | ೩೩೨.೮೨ | ೯೨.೯೫ | ೨೧.೪೩ | ೨೮೩.೧೦ | ೦.೦೦ | ೩೨೭.೧೦ |
| ೬ | ಪಾವಗಡ | ೬೮೪೧ | ೫೩.೩೯ | ೧೦೬.೪೬ | ೦.೫೭ | ೮೨೮.೭೧ | ೮೯.೫೪ | ೬೦೫.೪೫ | ೧೩೮.೭೯ | ೨೬.೧೦ | ೫೬೫.೭೪ | ೦.೦೦ | ೪೨೩.೩೯ |
| ೭ | ಶಿರಾ | ೯೧೭೫ | ೫೭.೭೨ | ೧೨೭.೫೯ | ೦.೦೦ | ೮೪೯.೭೭ | ೬೭.೫೨ | ೫೪೯.೦೦ | ೧೨೫.೨೨ | ೩೧.೪೭ | ೪೯೮.೭೦ | ೦.೦೦ | ೫೩೬.೩೮ |
| ೮ | ತಿಪಟೂರು | ೭೫೮೬ | ೮೦.೨೩ | ಕ೧೬೬.೭೫ | ೦.೦೦ | ೯೪೬.೪೨ | ೨೨೮.೯೨ | ೧೦೪೨.೯೫ | ೨೨೬.೭೫ | ೪೮.೮೮ | ೧೧೯೩.೪೦ | ೧೫.೧೦ | ೦.೦೦ |
| ೯ | ತುಮಕೂರು | ೬೧೩೨ | ೪೧.೩೪ | ೧೦೫.೮೩ | ೦.೨೦ | ೫೧೨.೦೮ | ೭೩.೭೭ | ೪೨೦.೦೬ | ೧೩೫.೩೭ | ೨೮.೬೯ | ೩೫೮.೧೯ | ೦.೦೦ | ೩೦೪.೨೬ |
| ೧೦ | ತುರುವೇಕೆರೆ | ೧೦೨೮೨ | ೬೯.೭೩ | ೪೯.೩೪ | ೦.೩೧ | ೭೦೧.೫೩ | ೨೧೦.೯೬ | ೮೧೮.೨೨ | ೧೬೨.೨೩ | ೨೩.೬೫ | ೭೯೮.೮೫ | ೦.೦೦ | ೨೨.೦೬ |
| | ಒಟ್ಟು | **೭೭೨೪೦** | **೫೩೭.೭೪** | **೬೮೫.೬೯** | **೩.೫೬** | **೬೪೧೩.೭೫** | **೧೦೭೦.೩೨** | **೫೭೬೪.೪೯** | **೧೪೦೯.೮೫** | **೨೮೧.೬೩** | **೫೬೦೧.೩೦** | **೧೫.೧೦** | **೨೩೮೫.೫೭** |

## ಕೋಷ್ಟಕ ೬.೧೮: ಜಿಲ್ಲೆಯಲ್ಲಿರುವ ಕೃಷಿ ಪತ್ತೇತರ ಸಹಕಾರ ಸಂಘಗಳ ವಿವರ (೩೧-೩-೨೦೧೩ ರಲ್ಲಿದ್ದಂತೆ)

| ಕ್ರ.ಸಂ | ತಾಲೂಕುಗಳು | ಪತ್ತೇತರ ಸಹಕಾರ ಸಂಘಗಳು | | | | | | | | | | ಒಟ್ಟು ಸಹಕಾರ ಸಂಘಗಳು (ಪತ್ತಿನ + ಪತ್ತೇತರ) | ಒಟ್ಟು ಸದಸ್ಯರ ಸಂಖ್ಯೆ (ಪತ್ತಿನ + ಪತ್ತೇತರ) |
|---|---|---|---|---|---|---|---|---|---|---|---|---|---|
| | | ಮಾರಾಟ | | ಗೃಹ ನಿರ್ಮಾಣ | | ಹಾಲು | | ಇತರೆ | | ಒಟ್ಟು | | | |
| | | ಸಂಘ | ಸದಸ್ಯರು | ಸಂಘ | ಸದಸ್ಯರು | ಸಂಘ | ಸದಸ್ಯರು | ಸಂಘ | ಸದಸ್ಯರು | ಸಂಘ | ಸದಸ್ಯರು | | |
| ೧ | ಚಿಕ್ಕನಾಯಕನಹಳ್ಳಿ | ೧ | ೧೬೮೩ | ೨ | ೧೧೭೫ | ೧೦೦ | ೧೮೨೩೭ | ೨೯ | ೧೪೫೬೦ | ೧೩೨ | ೩೫೬೫೫ | ೧೬೮ | ೫೭೧೫೫ |
| ೨ | ಗುಬ್ಬಿ | ೧ | ೫೮೦ | ೧ | ೫೬೮ | ೧೧೩ | ೨೬೮೧೦ | ೪೧ | ೨೨೧೦೦ | ೧೫೬ | ೫೦೦೫೮ | ೧೯೫ | ೭೯೦೮೫ |
| ೩ | ಕೊರಟಗೆರೆ | ೧ | ೧೫೬೫ | – | – | ೧೦೨ | ೨೨೭೫೯ | ೭ | ೧೯೯೫೭ | ೧೧೦ | ೪೪೨೮೧ | ೧೮ | ೨೬೧೦೧ |
| ೪ | ಕುಣಿಗಲ್ | ೧ | ೧೩೭೦ | ೨ | ೮೯೫ | ೧೦೧ | ೨೩೨೯೮ | ೧೫ | ೩೧೨೫ | ೧೧೯ | ೨೮೬೮೮ | ೧೪೭ | ೬೯೬೮೦ |
| ೫ | ಮಧುಗಿರಿ | ೧ | ೨೨೩೭ | ೧ | ೧೫೯೮ | ೧೪೩ | ೩೩೨೭೮ | ೨೯ | ೩೧೪೪೧ | ೧೭೪ | ೧೯೮೦೫ | ೨೮ | ೪೧೬೧೮ |
| ೬ | ಪಾವಗಡ | ೧ | ೧೧೭೬ | ೨ | ೧೬೫೧ | ೬೨ | ೧೩೯೭೦ | ೪೦ | ೩೭೦೫೯ | ೧೦೫ | ೬೮೫೫೪ | ೨೪ | ೪೫೭೮೫ |
| ೭ | ಶಿರಾ | ೧ | ೯೪೭ | ೨ | ೧೨೪೧ | ೯೦ | ೨೪೩೬೨ | ೪೧ | ೩೧೯೦೫ | ೧೩೪ | ೫೮೪೪೫ | ೪೪ | ೮೦೪೬೩ |
| ೮ | ತಿಪಟೂರು | ೧ | ೨೧೦೩ | ೩ | ೧೦೭೪ | ೧೧೦ | ೨೧೦೮೮ | ೬೨ | ೩೧೨೦೩ | ೧೭೬ | ೫೫೪೬೮ | ೨೧೬ | ೮೭೫೯ |
| ೯ | ತುಮಕೂರು | ೧ | ೩೪೪ | ೧೯ | ೪೩೧೧ | ೧೧೪ | ೨೪೧೨೦ | ೫೮ | ೧೭೧೫೧ | ೧೯೨ | ೪೫೯೨೬ | ೨೮೬ | ೧೩೯೫೭೦ |
| ೧೦ | ತುರುವೇಕೆರೆ | ೧ | ೧೨೨೮ | – | – | ೯೪ | ೧೯೦೪೯ | ೪೪ | ೨೬೩೦೬ | ೧೩೯ | ೪೬೫೮೩ | ೧೬೭ | ೬೦೫೮೩ |
| | **ಜಿಲ್ಲಾ ಮೊತ್ತ** | ೧೦ | ೧೩೨೩೩ | ೩೨ | ೧೨೫೧೩ | ೧೦೨೯ | ೨೨೯೬೭೧ | ೩೬೬ | ೨೩೪೮೦೭ | ೧೪೩೭ | ೪೮೭೫೨೪ | ೧೨೯೩ | ೬೮೭೬೩೯ |

**ಆಧಾರ: ತುಮಕೂರು ಜಿಲ್ಲಾ ಅಂಕಿ ಅಂಶಗಳ ನೋಟ – ೨೦೧೪, ತುಮಕೂರು**

## ಕೋಷ್ಟಕ ೬.೨೦: ಜಿಲ್ಲೆಯಲ್ಲಿದ್ದ ಇತರೆ ಸಹಕಾರ ಬ್ಯಾಂಕುಗಳ ವಿವರ ೩೧–೩–೨೦೧೩ ರಲ್ಲಿದ್ದಂತೆ

| ಕ್ರ.ಸಂ | ತಾಲೂಕುಗಳು | ಇತರೆ ಸಹಕಾರ ಬ್ಯಾಂಕುಗಳು | | | | | ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಕೊಡಲ್ಪಟ್ಟ ಸಾಲ (ಲಕ್ಷ ರೂ.ಗಳಲ್ಲಿ) | | | |
|---|---|---|---|---|---|---|---|---|---|---|
| | | ಶಾಖೆಗಳ ಸಂಖ್ಯೆ | ಮುಂಗಡ ಸಾಲ ನೀಡಿಕೆ | | | | ಅಲ್ಪಾವಧಿ | ಮಧ್ಯಾವಧಿ | ದೀರ್ಘಾವಧಿ | ಒಟ್ಟು |
| | | | ಕೃಷಿ ಸಾಲ | ಇತರೆ ಸಾಲ | ಒಟ್ಟು ಸಾಲ | ಠೇವಣಿ | | | | |
| ೧ | ಚಿಕ್ಕನಾಯಕನಹಳ್ಳಿ | – | – | – | – | – | ೨೩೦೬.೪ | ೪೦.೭೭ | ೭೩.೭೬ | ೨೪೨೧ |
| ೨ | ಗುಬ್ಬಿ | – | – | – | – | – | ೯೯೮.೨ | ೫೨.೮೫ | – | ೧೦೫೧.೧ |
| ೩ | ಕೊರಟಗೆರೆ | – | – | – | – | – | ೧೪೮೨.೪ | ೭೦ | – | ೧೫೫೨.೪ |
| ೪ | ಕುಣಿಗಲ್ | – | – | – | – | – | ೭೩೦.೦೩ | ೨೧೧.೯ | – | ೯೪೧.೮೮ |
| ೫ | ಮಧುಗಿರಿ | – | – | – | – | – | ೩೬೪೪.೮ | ೪೫೨.೫ | – | ೪೦೯೭.೩ |
| ೬ | ಪಾವಗಡ | – | – | – | – | – | ೧೮೫೫ | ೧೩೨.೪ | – | ೧೯೮೭.೪ |
| ೭ | ಶಿರಾ | – | – | – | – | – | ೧೧೧೨.೨ | ೬೭.೪ | – | ೧೧೭೯.೬ |
| ೮ | ತಿಪಟೂರು | – | – | – | – | – | ೨೫೬೦.೨ | ೬೦ | ೨೩೮.೭ | ೨೮೫೮.೯ |
| ೯ | ತುಮಕೂರು | – | – | – | – | – | ೧೪೫೫.೧ | ೧೧೯.೫ | – | ೧೫೭೪.೬ |
| ೧೦ | ತುರುವೇಕೆರೆ | – | – | – | – | – | ೧೭೦೯.೮ | ೬೭.೫೫ | ೨೦೮.೯ | ೧೯೮೬.೩ |
| ಜಿಲ್ಲಾ ಮೊತ್ತ | | – | – | – | – | – | ೧೭೮೫೪.೧ | ೧೨೭೫ | ೫೨೧.೪ | ೧೯೬೫೦.೫೦ |

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು**

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಭಾರತದ ಸಹಕಾರ ವ್ಯವಸ್ಥೆಯಲ್ಲಿ ಆಧಾರ ಸ್ಥಂಭಗಳಾಗಿದ್ದು, ಇವು ಅತ್ಯಂತ ಕೆಳಮಟ್ಟದಲ್ಲಿ ಅಂದರೆ ಪ್ರತೀ ಗ್ರಾಮದಲ್ಲಿ ಹತ್ತು ಅಥವಾ ಅದಕ್ಕಿಂತ ಹೆಚ್ಚಿನ ಗ್ರಾಮಸ್ಥರು ಸೇರಿ ಸ್ಥಾಪಿಸಿದ ಪತ್ತಿನ ಸಹಕಾರಿ ಸಂಘಗಳಾಗಿದ್ದು, ಸಂಘದ ಸದಸ್ಯರಿಗೆ ಬೇಸಾಯ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಕಡಿಮೆ ಬಡ್ಡಿದರದಲ್ಲಿ ಅಲ್ಪಾವಧಿ ಸಾಲ ನೀಡುತ್ತಿವೆ. ವ್ಯವಸಾಯದ ಅಭಿವೃದ್ಧಿಗೆ ಒದಗಿಸಲಾಗುವ ಸಹಕಾರಿ ಸಾಲವನ್ನು ಹೆಚ್ಚು ಪರಿಣಾಮಕಾರಿಗೊಳಿಸುವುದು; ರೈತರನ್ನು ಸ್ಥಳೀಯ ಸಾಹುಕಾರರು ಮತ್ತು ಲೇವಾದೇವಿದಾರರಿಂದ ಋಣಮುಕ್ತರನ್ನಾಗಿಸುವುದು; ಮತ್ತು ಮುಂದೆ ಪುನಃ ಸಾಹುಕಾರರ ಬಳಿ ಸಾಲಕ್ಕೆ ಕೈಚಾಚದಂತೆ ಅವರಿಗೆ ವ್ಯವಸಾಯ ಪತ್ತಿನ ಸಹಕಾರ ಸಂಘಗಳಿಂದ ಅಲ್ಪಾವಧಿ ಬೆಳೆಸಾಲ ಮತ್ತು ಮಧ್ಯಾವಧಿ ಸಾಲ ನೀಡುವುದು; ಜೊತೆಗೆ ಸುಧಾರಿಸಿದ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕ್ರಿಮಿನಾಶಕ ಔಷಧಿಗಳನ್ನು ಒದಗಿಸುತ್ತದೆ, ರೈತರ ಸೇವಾ ಸಹಕಾರ ಸಂಘಗಳಿಂದ ರೈತರಿಗೆ, ಕೃಷಿ ಕಾರ್ಮಿಕರಿಗೆ ಅಗತ್ಯವಾಗಿ ಬೇಕಾಗುವ ಬಟ್ಟೆ, ಸಕ್ಕರೆ, ಸೀಮೆಎಣ್ಣೆ, ಪಡಿತರ ಆಹಾರ ಮೊದಲಾದ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ.

**ತುಮಕೂರು ಜಿಲ್ಲಾ ಸಹಕಾರ ಒಕ್ಕೂಟ (ನಿ) ತುಮಕೂರು**

ಸಹಕಾರಿ ಆಂದೋಲನದ ವ್ಯಾಪಕ ಪ್ರಚಾರ, ಪ್ರಗತಿಪರ ಧೋರಣೆ ಮತ್ತು ಪರಿಸರ ಸ್ನೇಹಿ ಬೆಳವಣಿಗೆಯಲ್ಲಿ ಸಹಕಾರಿ ಯೂನಿಯನ್ (ಒಕ್ಕೂಟ) ಕಳೆದ ಒಂದು ಶತಮಾನದಿಂದಲೂ ಮಹತ್ವದ ಪಾತ್ರವನ್ನು ವಹಿಸುತ್ತಾ ಬಂದಿದೆ. ಮೂಲಭೂತ ಸಹಕಾರ ತತ್ವಗಳ ಪ್ರಚಾರ; ಸಂಘಗಳ ರಚನೆಗೆ ಮಾರ್ಗದರ್ಶನ; ಸದಸ್ಯರಿಗೆ ಮತ್ತು ಆಡಳಿತ ವರ್ಗದವರಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ; ಸಹಕಾರಿ ಧೋರಣೆಯ ನಿರೂಪಣೆ; ಸದಸ್ಯರಿಗೆ ಸಹಕಾರಿ ಶಿಕ್ಷಣದ ಪ್ರಚಾರ ಇವೇ ಮುಂತಾದವು ಸಹಕಾರ ಒಕ್ಕೂಟದ ಪ್ರಮುಖ ಉದ್ದೇಶಗಳು. ರಾಜ್ಯ ಪುನಾರಚನೆಯ ನಂತರ ರಾಜ್ಯ ಮಟ್ಟದಲ್ಲಿ ಪುನರ್ರಚನೆಗೊಂಡ ಬೆಂಗಳೂರಿನ ರಾಜ್ಯ ಸಹಕಾರಿ ಯೂನಿಯನ್ (ನಂತರ ಸಹಕಾರ ಮಹಾಮಂಡಳ), ಜಿಲ್ಲಾ ಮಟ್ಟದ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವಲ್ಲಿ ಪರಿಣಾಮಕಾರಿ ಪಾತ್ರ ವಹಿಸುತ್ತಿದೆ. ಜಿಲ್ಲಾ ಸಹಕಾರಿ ಯೂನಿಯನ್‌ಗಳ ಒಕ್ಕೂಟವೇ ಸಹಕಾರಿ ಮಹಾಮಂಡಳವಾಗಿದೆ.

ಸಹಕಾರ ಚಳವಳಿಯ ಪ್ರಗತಿಗೆ ಅಗತ್ಯವಾದ ಮಾರ್ಗದರ್ಶನವನ್ನು ನೀಡುವ ಉದ್ದೇಶದಿಂದ ೧೯೬೩ರಲ್ಲಿ ತುಮಕೂರು ಜಿಲ್ಲಾ ಸಹಕಾರಿ ಯೂನಿಯನ್ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದು ರಾಜ್ಯ ಸಹಕಾರಿ ಮಹಾಮಂಡಳಿಗೆಯೊಂದಿಗೆ ಸಂಯೋಜನೆ ಗೊಂಡಿದೆ. ಇದು ರಾಜ್ಯ ಸಹಕಾರ ಮಹಾಮಂಡಳದ ಮಾರ್ಗದರ್ಶನದ ಮೇರೆಗೆ ಸಹಕಾರಿ ತತ್ವಗಳಾದ ಸಹಕಾರಿ ಶಿಕ್ಷಣ, ತರಬೇತಿ, ಪ್ರಚಾರ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಕ್ಕೆ ತರುವ ಮೂಲಕ ಸಹಕಾರದ ಉದ್ದೇಶ ಹಾಗೂ ತತ್ವಗಳನ್ನು ಪ್ರಚಾರ ಮಾಡಿ ಸಹಕಾರ ಚಳವಳಿಯ ಬೆಳವಣಿಗೆಗಾಗಿ ಶ್ರಮಿಸುತ್ತಿದೆ. ಅಲ್ಲದೇ ಜಿಲ್ಲೆಯಲ್ಲಿನ ಎಲ್ಲಾ ಬಗೆಯ ಸಹಕಾರ ಸಂಘಗಳನ್ನು ಬಲಪಡಿಸುವುದು, ಹೊಸ ಸಹಕಾರ ಸಂಘಗಳನ್ನು ಸ್ಥಾಪಿಸಲು ಮಾರ್ಗದರ್ಶನ ನೀಡುವುದು ಮುಂತಾದವು ಈ ಒಕ್ಕೂಟದ ಉದ್ದೇಶಗಳಾಗಿವೆ. ಜಿಲ್ಲೆಯಲ್ಲಿನ ಎಲ್ಲಾ ಸಹಕಾರ ಸಂಘಗಳು ಈ ಯೂನಿಯನ್ನಿನ ಸದಸ್ಯತ್ವವನ್ನು ಪಡೆಯಬಹುದಾಗಿದೆ.

ನವದೆಹಲಿಯ ರಾಷ್ಟ್ರೀಯ ಸಹಕಾರ ಒಕ್ಕೂಟದವರು ರೂಪಿಸಿರುವಂತೆ ಜಿಲ್ಲೆಯಲ್ಲಿ ಸಹಕಾರ ಶಿಕ್ಷಣ, ಅಭಿವೃದ್ಧಿ ಮತ್ತು ಪ್ರಚಾರ ಯೋಜನೆಯು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶನದಂತೆ ಜಾರಿಯಲ್ಲಿರುತ್ತದೆ. ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳಿಗೆ ಆಡಳಿತ ಮಂಡಳಿ ಸದಸ್ಯರು, ಮಹಿಳಾ ಸದಸ್ಯರು, ಹಾಗೂ ಯುವಜನರಿಗೆ ಸಹಕಾರ ಶಿಕ್ಷಣ ಯೋಜನೆಯಲ್ಲಿ ತರಬೇತಿ ನೀಡಲಾಗುತ್ತದೆ. ಈ ಕಾರ್ಯಕ್ರಮಗಳ ಜೊತೆಗೆ ಸಹಕಾರ ಸಮ್ಮೇಳನ, ಸಹಕಾರ ಸಪ್ತಾಹ; ಸಹಕಾರ ಸಂಘಗಳ ಸಿಬ್ಬಂದಿ ವರ್ಗದವರಿಗೆ ಆಡಳಿತ ಮಂಡಳಿ ಸದಸ್ಯರಿಗೆ, ಸಹಕಾರ ಸಂಘಗಳ ವ್ಯವಸ್ಥಾಪಕರಿಗೆ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ, ಕೇಂದ್ರ ಸಹಕಾರ ಬ್ಯಾಂಕಿನ ಮಾರಾಟಗಾರರು ಮತ್ತು ಮೇಲ್ವಿಚಾರಕರಿಗೆ, ಲೆಕ್ಕ ಪರಿಶೋಧನಾ ಇಲಾಖೆ ಅಧಿಕಾರಿಗಳಿಗೆ ಮಹಿಳಾ ಸಹಕಾರಿಗಳಿಗೆ ಆದಾಯೋತ್ಪನ್ನ ತರಬೇತಿ ನೀಡಲಾಗಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಹಕಾರ ಕುರಿತು ಚರ್ಚಾ ಮತ್ತು ಪ್ರಬಂಧ ಸ್ಪರ್ಧೆ ಕಾರ್ಯಕ್ರಮಗಳನ್ನು ಏರ್ಪಡಿಸಿ ಕಾರ್ಯಗತಗೊಳಿಸುವಲ್ಲಿ ಯಶಸ್ವಿ ಪ್ರಯತ್ನ ನಡೆಸಲಾಗಿದೆ. ವಿವಿಧ

ಸಹಕಾರ ಸಂಘಗಳನ್ನು ನೋಂದಣಿ ಮಾಡಿಸುವಲ್ಲಿ ಮಾರ್ಗದರ್ಶನ ಸಲಹೆ ಸೂಚನೆಗಳನ್ನು ಕೊಡಲಾಗಿದೆ. ರಾಜ್ಯ ಪುನಾರ್ರಚನೆಯ ನಂತರ ರಾಜ್ಯಮಟ್ಟದಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಗೊಂಡ ರಾಜ್ಯ ಸಹಕಾರ ಮಹಾಮಂಡಳವು, ಜಿಲ್ಲಾ ಮಟ್ಟದ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವಲ್ಲಿ ಪರಿಣಾಮಕಾರಿ ಪಾತ್ರ ವಹಿಸುತ್ತಿದೆ. ಜಿಲ್ಲಾ ಸಹಕಾರಿ ಯೂನಿಯನ್‌ಗಳ ಒಕ್ಕೂಟವೇ ಸಹಕಾರಿ ಮಹಾಮಂಡಳವಾಗಿದ್ದು ತುಮಕೂರು ಜಿಲ್ಲೆಯಲ್ಲಿ ಒಟ್ಟು ೧೬೪೧ ಸಹಕಾರ ಸಂಘಗಳಿದ್ದು, ಅವುಗಳ ಅಂಕಿಅಂಶಗಳ ವಿವರ ಕೆಳಕಂಡಂತಿವೆ. (ಮಾರ್ಚ್ ೨೦೦೯ರ ಅಂತ್ಯಕ್ಕೆ)

| | | |
|---|---|---|
| ೧ | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು (ನಿ) | ೧ |
| ೨ | ಪ್ರಾಥಮಿಕ ಕೃಷಿ ಅಭಿವೃದ್ಧಿ ಮತ್ತು ಗ್ರಾಮೀಣ ಬ್ಯಾಂಕು (ನಿ) | ೧೦ |
| ೩ | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು | ೨೩೪ |
| ೪ | ರೇಷ್ಮೆ ಬೆಳೆಗಾರರ ಸಹಕಾರ ಸಂಘಗಳು | ೩ |
| ೫ | ಪಟ್ಟಣ ಸಹಕಾರ ಬ್ಯಾಂಕುಗಳು (ಕೃಷಿಯೇತರ ಪತ್ತಿನ ಸಹಕಾರ ಸಂಘಗಳು) | ೧೨ |
| ೬ | ಇತರೆ ಪತ್ತಿನ ಸಹಕಾರ ಬ್ಯಾಂಕುಗಳು | ೮೪ |
| ೭ | ನೌಕರರ ಪತ್ತಿನ ಸಹಕಾರ ಸಂಘಗಳು | ೨೧ |
| ೮ | ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು | ೧೦ |
| ೯ | ಇತರೆ ಮಾರಾಟ ಸಹಕಾರ ಸಂಘಗಳು | ೩ |
| ೧೦ | ಸಹಕಾರಿ ಸಕ್ಕರೆ ಕಾರ್ಖಾನೆ | ೧ |
| ೧೧ | ಸಂಸ್ಕರಣ ಸಹಕಾರ ಸಂಘಗಳು | ೨ |
| ೧೨ | ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳು | ೩೨ |
| ೧೩ | ಲೈವ್‌ಸ್ಟಾಕ್ ಸಹಕಾರ ಸಂಘಗಳು | ೯ |
| ೧೪ | ಹಾಲು ಉತ್ಪಾದಕರ ಸಹಕಾರ ಸಂಘಗಳು | ೮೫೦ |
| ೧೫ | ಸಹಕಾರಿ ಹಾಲು ಒಕ್ಕೂಟ | ೧ |
| ೧೬ | ಸಂಯುಕ್ತ ಬೇಸಾಯ ಸಹಕಾರ ಸಂಘಗಳು | ೬ |
| ೧೭ | ನೀರು ಬಳಕೆದಾರರ ಸಹಕಾರ ಸಂಘಗಳು | ೮೧ |
| ೧೮ | ಮೀನುಗಾರಿಕಾ ಸಹಕಾರ ಸಂಘಗಳು | ೧೮ |
| ೧೯ | ನೇಕಾರರ ಸಹಕಾರ ಸಂಘಗಳು | ೨೦ |
| ೨೦ | ಕೈಗಾರಿಕಾ ಸಹಕಾರ ಸಂಘಗಳು | ೩೬ |
| ೨೧ | ಗ್ರಾಹಕರ ಸಹಕಾರ ಸಂಘಗಳು | ೪೨ |
| ೨೨ | ಗೃಹ ನಿರ್ಮಾಣ ಸಹಕಾರ ಸಂಘಗಳು | ೩೪ |
| ೨೩ | ಕೂಲಿಕಾರರ ಸಹಕಾರ ಸಂಘಗಳು | ೪ |
| ೨೪ | ಜಿಲ್ಲಾ ಸಹಕಾರ ಒಕ್ಕೂಟ | ೧ |
| ೨೫ | ವಿವಿಧೋದ್ದೇಶ ಸಹಕಾರ ಸಂಘಗಳು | ೧೧ |
| ೨೬ | ವಿದ್ಯಾರ್ಥಿ ಗ್ರಾಹಕರ ಸಹಕಾರ ಸಂಘಗಳು | ೧೩ |
| ೨೭ | ಮಹಿಳಾ ಸಹಕಾರ ಸಂಘಗಳು | ೧೦ |
| ೨೮ | ಮಹಿಳಾ ವಿವಿಧೋದ್ದೇಶ ಸಹಕಾರ ಸಂಘಗಳು | ೩೩ |
| ೨೯ | ದರ್ಜಿಗಳ ಸಹಕಾರ ಸಂಘಗಳು | ೨ |
| ೩೦ | ಚರ್ಮ ಹದ ಮಾಡುವವರ ಸಹಕಾರ ಸಂಘಗಳು | ೨ |
| ೩೧ | ಸಹಕಾರಿ ಆಸ್ಪತ್ರೆಗಳು | ೧ |
| ೩೨ | ಉಣ್ಣೆ ನೇಕಾರರ ಸಹಕಾರ ಸಂಘಗಳು | ೧೬ |
| ೩೩ | ಇತರೆ ಸಹಕಾರ ಸಂಘಗಳು | ೧೮ |
| ೩೪ | ಇತರೇ ರೀತಿಯ ಸಹಕಾರ ಸಂಘಗಳು | ೩೯೮ |
| | **ಒಟ್ಟು** | **೧೬೪೧** |

ಜಿಲ್ಲೆಯಲ್ಲಿ ೨೦೧೪ರ ಮಾರ್ಚ್ ಅಂತ್ಯಕ್ಕೆ ವಿವಿಧ ಬಗೆಯ ಒಟ್ಟು ೧೫೬೭ ಸಹಕಾರಿ ಸಂಘಗಳಿದ್ದು ಅವುಗಳಲ್ಲಿದ್ದ ಒಟ್ಟು ಸದಸ್ಯರ ಸಂಖ್ಯೆ ೪,೨೦,೭೭೩ ಆಗಿತ್ತು. ಇದೇ ಸಂದರ್ಭದಲ್ಲಿ ಜಿಲ್ಲೆಯಲ್ಲಿ ೨೩೮ ಕೃಷಿಪತ್ತಿನ ಸಹಕಾರ ಸಂಘಗಳು ೩,೯೯,೬೫೩ ಸದಸ್ಯರನ್ನು ಹೊಂದಿದ್ದರೆ, ೧೪೩ ಕೃಷಿ ಪತ್ತೇತರ ಸಹಕಾರ ಸಂಘಗಳು ೧,೨೩,೪೨೨ ಸದಸ್ಯರನ್ನು ಹೊಂದಿತ್ತು. ಮಿಗಿಲಾಗಿ ೧೧ ಮಾರುಕಟ್ಟೆ ಸಂಘಗಳಲ್ಲಿ ೧೪,೫೬೭ ಸದಸ್ಯರಿದ್ದರು. ಅಲ್ಲದೆ, ೪೧ ಗೃಹನಿರ್ಮಾಣ ಸಂಘಗಳಲ್ಲಿ ೧೨,೭೧೫ ಸದಸ್ಯರು, ೧೯೯೭ ಹಾಲು ಉತ್ಪಾದಕರ ಸಂಘಗಳಲ್ಲಿ ೨,೮೯,೦೩೭ ಸದಸ್ಯರು ಹಾಗೂ ೪೧೮ ಇತರೇ ವಿವಿಧ ಸಂಘಗಳಲ್ಲಿ ೧,೬೪,೪೩೪ ಸದಸ್ಯರಿದ್ದರು.

### ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು

ಕರ್ನಾಟಕ ರಾಜ್ಯ ಸಹಕಾರ ವಲಯದ ಅಭಿವೃದ್ಧಿಯಲ್ಲಿ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಮಹತ್ವದ ಪಾತ್ರವನ್ನು ವಹಿಸಿವೆ. ಸಹಕಾರ ಸಂಘಗಳು ಮತ್ತು ಬ್ಯಾಂಕುಗಳು ಕೃಷಿಯ ಅಭಿವೃದ್ಧಿಗೆ ಸಾಲಸೌಲಭ್ಯ ಒದಗಿಸುವುದರ ಜೊತೆಗೆ ರೈತರು ಬೆಳೆದ ಹುಟ್ಟುವಳಿಗಳನ್ನು ಉತ್ತಮ ಹಾಗೂ ಲಾಭದಾಯಕ ಬೆಲೆಗೆ ಮಾರಾಟ ಮಾಡುವ ವ್ಯವಸ್ಥೆಯನ್ನು ಒದಗಿಸುತ್ತಿವೆ. ಕೃಷಿ ಉತ್ಪನ್ನಗಳನ್ನು ರಾಜ್ಯ ಉಗ್ರಾಣಗಳಲ್ಲಿ ದಾಸ್ತಾನಾಗಿಟ್ಟು, ಅದರ ರಸೀತಿಯ ಆಧಾರದಿಂದ ಬ್ಯಾಂಕುಗಳಲ್ಲಿ ಅಲ್ಪಾವಧಿ ಸಾಲ ಪಡೆಯುವ; ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘ ಅಥವಾ ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆಗಳಲ್ಲಿ ವಿದ್ಯುನ್ಮಾನ ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯಲ್ಲಿ ಯೋಗ್ಯ ಬೆಲೆಗೆ ಮಾರಾಟ ಮಾಡುವ; ಗುಣಮಟ್ಟದಿಂದ ಕೂಡಿದ ಸಂಸ್ಕರಣಗೊಂಡ ಹಾಗೂ ಶುದ್ಧೀಕರಣಗೊಳಿಸಿದ ಆಹಾರ ಧಾನ್ಯಗಳನ್ನು ಗ್ರಾಹಕರಿಗೆ ಮಾರಾಟ ಮಾಡುವ ಕಾರ್ಯವನ್ನು ನಿರ್ವಹಿಸುತ್ತಿವೆ.

ತುಮಕೂರು ಜಿಲ್ಲೆಯ ಹತ್ತು ತಾಲೂಕು ಮತ್ತು ಹೋಬಳಿಗಳಲ್ಲಿ ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘ, ತೋಟಗಾರಿಕೆ ಮಾರಾಟ ಸಂಘ, ಬೆಳೆ ಮಾರಾಟ ಸಂಘ ಮತ್ತು ಇತರ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ವಿಶಿಷ್ಟೋಪಯುಕ್ತ ಮಾರಾಟ ಸಂಘಗಳು ಅಧಿಕ ಇಳುವರಿಗೆ ಬೇಕಾಗುವ ಉತ್ತಮ ಬಿತ್ತನೆ ಬೀಜದ ತಳಿಗಳು, ರಸಗೊಬ್ಬರ, ಕೃಷಿ ಉಪಕರಣ, ಕೀಟನಾಶಕ ಔಷಧಿಗಳು, ಮುಂತಾದ ಕೃಷಿ ಪರಿಕರಗಳನ್ನು ರೈತರಿಗೆ ಪೂರೈಕೆ ಮಾಡುವುದರ ಜೊತೆಗೆ ರೈತರ ಉತ್ಪನ್ನಗಳನ್ನು ಗುಣಮಟ್ಟ ಆಧಾರಿತ ವರ್ಗೀಕರಣ, ಶುದ್ಧೀಕರಣ ಮಾಡುವ ವಿವಿಧ ವರ್ಗಗಳಾಗಿ ವಿಂಗಡಿಸುವ ಆಹಾರ ಸಂಸ್ಕರಣಾ ಘಟಕಗಳು ಮತ್ತು ಉತ್ತಮ ಪ್ಯಾಕಿಂಗ್ ವ್ಯವಸ್ಥೆಯನ್ನು ಸಹ ರೈತರ ಪರವಾಗಿ ಕೈಗೊಳ್ಳುತ್ತವೆ. ಸಾಗಣೆ ವ್ಯವಸ್ಥೆ, ರಾಜ್ಯ ಉಗ್ರಾಣಗಳಲ್ಲಿ ದಾಸ್ತಾನು ವ್ಯವಸ್ಥೆ, ಉತ್ತಮ ಬೆಲೆಗೆ ಮಾರಾಟ, ಮತ್ತು ಬ್ಯಾಂಕುಗಳಿಂದ ಮುಂಗಡವಾಗಿ ಸಾಲಸೌಲಭ್ಯ ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತವೆ. ರೈತರಿಗೆ ಲಾಭದಾಯಕ ಬೆಲೆ ದೊರಕದ ಸಂದರ್ಭದಲ್ಲಿ ಮಾರಾಟ ಸಂಘಗಳು ತಮ್ಮ ಉಗ್ರಾಣದಲ್ಲಿ ಧಾನ್ಯಗಳನ್ನು ದಾಸ್ತಾನಾಗಿಟ್ಟುಕೊಂಡು ಅದರ ಆಧಾರದ ಮೇಲೆ ಅಥವಾ ಪಹಣಿಯ ಆಧಾರದ ಮೇಲೆ ಬ್ಯಾಂಕುಗಳಿಂದ ಮುಂಗಡವಾಗಿ ಸಾಲ ಮಂಜೂರು ಮಾಡಿಸುವ ಕಾರ್ಯವನ್ನು ಸಹ ನಿರ್ವಹಿಸುತ್ತಿವೆ.

೧೯೬೬ ಜೂನ್ ೩೦ರಲ್ಲಿ ಲಭ್ಯವಾದ ಅಂಕಿ ಅಂಶಗಳಂತೆ ತುಮಕೂರು ಜಿಲ್ಲೆಯ ತಾಲೂಕು ಹಾಗೂ ಹೋಬಳಿಗಳಲ್ಲಿ ೧೬ ವಿವಿಧ ಮಾರಾಟ ಸಂಘಗಳು ಸ್ಥಾಪನೆಗೊಂಡಿದ್ದು, ಅವುಗಳ ಒಟ್ಟು ಸದಸ್ಯತ್ವ ಸಂಖ್ಯೆ ೫,೪೨೧ರಷ್ಟು ಇದ್ದು, ಷೇರು ಬಂಡವಾಳ ಮತ್ತು ದುಡಿಯುವ ಬಂಡವಾಳ ಕ್ರಮವಾಗಿ ರೂ. ೭.೫೭ ಲಕ್ಷ ಹಾಗೂ ೪೫.೧೨ ಲಕ್ಷದಷ್ಟಿತ್ತು. ಈ ಮಾರಾಟ ಸಂಘಗಳು ರೈತರಿಂದ ಕೃಷಿ ಹುಟ್ಟುವಳಿಗಳನ್ನು ಖರೀದಿಸುವುದು ಮತ್ತು ಗ್ರಾಹಕರಿಗೆ ಉತ್ತಮ ಬೆಲೆಗೆ ಮಾರಾಟ ಮಾಡುವುದು ಆಗಿರುತ್ತದೆ. ಈ ಮಾರಾಟ ಸಂಘಗಳು ಉಗ್ರಾಣ ವ್ಯವಸ್ಥೆಯನ್ನು ಹೊಂದಿದ್ದು, ಸರ್ಕಾರದ ಪರವಾಗಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಆಹಾರ ಧಾನ್ಯಗಳನ್ನು ರೈತರಿಂದ ಸರ್ಕಾರವು ಶಿಫಾರಸ್ಸು ಮಾಡಿದ ಬೆಂಬಲ ಬೆಲೆಗೆ ಖರೀದಿಸುವುದು, ಸಂಸ್ಕರಿಸಿ ಗ್ರಾಹಕರಿಗೆ ವಿತರಣೆ ಮಾಡುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ.

### ತುಮಕೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ನಿ)

ತುಮಕೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟವು ೧೯೬೪ರಲ್ಲಿ ೧೪ ಸಹಕಾರಿ ಸಂಘ ಹಾಗೂ ೧,೧೭೪ ಸದಸ್ಯರನ್ನೊಳಗೊಂಡಿದ್ದು, ಒಟ್ಟು ಷೇರು ಬಂಡವಾಳ ರೂ.೦.೧೭ ಲಕ್ಷ ಇತ್ತು. ೧೯೬೭ರಲ್ಲಿ ಸಂಘಗಳ ಸಂಖ್ಯೆ ೨೦ಕ್ಕೆ ಹೆಚ್ಚಿದ್ದು, ಅವುಗಳ ಸದಸ್ಯರ ಸಂಖ್ಯೆಯು ೧೬೦೦ಕ್ಕೆ ಏರುವುದರ ಜೊತೆಗೆ ಷೇರು ಬಂಡವಾಳವೂ ರೂ ೦.೫೪ ಲಕ್ಷವಿತ್ತು. ಈ ಸಂಘಗಳಿಗೆ ಸರ್ಕಾರವು ಷೇರು ಬಂಡವಾಳ ನೀಡುವುದರ ಮೂಲಕ ಉತ್ತೇಜನ ನೀಡಿತ್ತು. ಅಲ್ಲದೆ,

೧೯೬೬ರಲ್ಲಿ ತುಮಕೂರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರೂ.೦.೯೪ ಲಕ್ಷ ದುಡಿಯುವ ಬಂಡವಾಳ ನೀಡುವ ಮೂಲಕ ತುಮಕೂರು ಗ್ರಾಮೀಣ ಕೈಗಾರಿಕಾ ಸಹಕಾರ ಹಾಲು ಯೋಜನೆಗೆ ನೆರವು ನೀಡಿದೆ.

ವಿಶ್ವಬ್ಯಾಂಕಿನ ನೆರವಿನೊಡನೆ ಕರ್ನಾಟಕ ಹೈನು ಅಭಿವೃದ್ಧಿ ಯೋಜನೆಯಂತೆ ಜಿಲ್ಲೆಯಲ್ಲಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ೧೯೭೬ರಲ್ಲಿ 'ಅಮುಲ್' ಮಾದರಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪುನಾರೂಪಿಸಿತು. ಗ್ರಾಮೀಣ ಪ್ರದೇಶದ ಉತ್ಪಾದಕರು ಪೂರೈಸುವ ಹಾಲಿಗೆ ನಿಯಮಿತವಾಗಿ ಯೋಗ್ಯದರ ನೀಡಿ ವರ್ಷಪೂರ್ತಿ ಮಾರುಕಟ್ಟೆ ಒದಗಿಸುವುದು, ಗ್ರಾಮೀಣ ಪ್ರದೇಶದಿಂದ ಸಂಗ್ರಹಿಸಿದ ಹಾಲನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಶುದ್ಧ ಹಾಲನ್ನು ಪಾಲಿಥಿನ್ ಪ್ಯಾಕೇಟ್‌ಗಳಲ್ಲಿ ಗ್ರಾಹಕರಿಗೆ ನಿತ್ಯ ತಲುಪಿಸುವುದು. ಉತ್ಪಾದಕರ ರಾಸುಗಳಿಗೆ ಪಶುವೈದ್ಯಕೀಯ ಸೌಲಭ್ಯ; ರಾಸುಗಳ ತಳಿ ಅಭಿವೃದ್ಧಿಗೆ ಕೃತಕ ಗರ್ಭಧಾರಣಾ ಸೌಲಭ್ಯ ಸಂಘಗಳ ಸದಸ್ಯರ ರಾಸುಗಳಿಗೆ ಹಸಿರು ಮೇವು ಮತ್ತು ಅಧಿಕ ಹಾಲಿನ ಉತ್ಪಾದನೆಗಾಗಿ ಸಮತೋಲನ ಪಶು ಆಹಾರವನ್ನು ಉತ್ಪಾದಕರಿಗೆ ಒದಗಿಸುವುದು, ಲಸಿಕೆ ಕಾರ್ಯಕ್ರಮ ಮುಂತಾದವನ್ನು ಸದಸ್ಯರಿಗೆ ಒದಗಿಸಲಾಗುತ್ತಿದೆ. ಸಂಘಗಳ ಸಾಂಸ್ಥಿಕ ಬಲವರ್ಧನೆಗಾಗಿ ಸಹಕಾರ ಆಭಿವೃದ್ಧಿ ಕಾರ್ಯಕ್ರಮದಡಿ ಮಹಿಳಾ ಶಿಕ್ಷಣ ಶಿಬಿರ, ಸದಸ್ಯರ ಶಿಕ್ಷಣ ಶಿಬಿರಗಳನ್ನು ಏರ್ಪಡಿಸುವುದನ್ನೂ ಮಾಡಲಾಗುತ್ತಿದೆ.

ತುಮಕೂರು ಜಿಲ್ಲಾ ಹಾಲು ಸಹಕಾರ ಸಂಘಗಳ ಒಕ್ಕೂಟವು ಪ್ರತೀದಿನ ೧.೫೦ ಲಕ್ಷ ಲೀಟರ್ ಶುದ್ಧ ಹಾಗೂ ಸತ್ವಪೂರ್ಣ ಆರೋಗ್ಯಕರ ಹಾಲನ್ನು ಬೆಂಗಳೂರು ನಗರ ಮತ್ತು ತುಮಕೂರು ಜಿಲ್ಲೆಯಾದ್ಯಂತ ಗ್ರಾಹಕರಿಗೆ ಮಾರಾಟ ಮಾಡುತ್ತಿದೆ. ದಿನವಹಿ ಸರಾಸರಿ ೧೪,೦೦೦ ಕೆ.ಜಿ. ಮೊಸರು, ೬೦೦ ಟನ್ ಹಾಲಿನಪುಡಿ ಮತ್ತು ೩೪೦ ಟನ್ ಬೆಣ್ಣೆಯನ್ನು ಮಾರಾಟ ಮಾಡುತ್ತಿದೆ. ಪ್ರತೀ ತಿಂಗಳು ಸರಾಸರಿ ೫೦,೦೦ರೆ ಲೀಟರ್ ತುಪ್ಪ , ೫೦೦೦ ಕೆ.ಜಿ. ಪೇಡ, ೨೦೦೦ ಕೆ.ಜಿ. ಮೈಸೂರು ಪಾಕು, ೬೦೦ ಲೀಟರ್ ಮಸಾಲ ಮಜ್ಜಿಗೆ, ಐಸ್‌ಕ್ರೀಮ್‌ಗಳನ್ನು ತಾಜಾತನದಲ್ಲಿ ಮಾರಾಟ ಮಾಡುತ್ತಿದೆ. ಇದಲ್ಲದೇ ಪ್ರತೀವರ್ಷ ೨೨೦ ಲಕ್ಷ ಕೆ.ಜಿ. ಹಾಲನ್ನು ಮಹಾರಾಷ್ಟ್ರ, ಕೇರಳ ಮತ್ತು ಇತರ ರಾಜ್ಯಗಳ ಡೈರಿಗಳಿಗೆ ಸಗಟು ಬೆಲೆಯಲ್ಲಿ ಮಾರಾಟ ಮಾಡುತ್ತಿತ್ತು. ತುಮಕೂರು ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟವು ೨೦೦೯ರ ಮಾರ್ಚ್ ಅಂತ್ಯಕ್ಕೆ ಹೊಂದಿದ್ದ ಪ್ರಗತಿಯನ್ನು ಕೋಷ್ಟಕ ೬.೨೧ ರಲ್ಲಿ ನೀಡಲಾಗಿದೆ.

**ಕೋಷ್ಟಕ ೬.೨೧: ತುಮಕೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ವಿವರ (೨೦೦೯ರ ಮಾರ್ಚಿವರೆಗೆ)**

| | | |
|---|---|---|
| ೧. | ಒಕ್ಕೂಟದ ಕಾರ್ಯವ್ಯಾಪ್ತಿಗೆ ಜಿಲ್ಲೆಯಲ್ಲಿ ಒಳಪಟ್ಟ ಒಟ್ಟು ಗ್ರಾಮಗಳು | ೨೨೪೮ |
| ೨. | ನೋಂದಣಿಯಾದ ಒಟ್ಟು ಸಂಘಗಳು | ೮೫೪ |
| ೩. | ಕಾರ್ಯಾಚರಣೆಯಲ್ಲಿರುವ ಸಂಘಗಳು | ೮೩೦ |
| ೪. | ಸಂಘಕ್ಕೆ ನೋಂದಣಿಯಾದ ಸದಸ್ಯರ ಸಂಖ್ಯೆ | |
| ಅ | ಸಣ್ಣರೈತರು | ೭೯೪೭೦ |
| ಆ | ಅತೀ ಸಣ್ಣರೈತರು | ೫೦೯೧೦ |
| ಇ | ಭೂರಹಿತ ಕಾರ್ಮಿಕರು | ೩೦೩೮೦ |
| ಈ | ಇತರರು | ೪೧೮೮೨ |
| ಉ | ಒಟ್ಟು ಸದಸ್ಯರ ಸಂಖ್ಯೆ | ೨೦೨೯೪೦ |
| ಊ | ಹರಿಜನರು | ೧೯೦೬೦ |
| ಋ | ಗಿರಿಜನರು | ೧೫೨೮೦ |
| ಎ | ಮಹಿಳೆಯರು | ೫೩೮೨೫ |
| ೫. | ಷೇರು ಬಂಡವಾಳ (ರೂ.ಲಕ್ಷಗಳಲ್ಲಿ) | ೭೨೯.೦೯ |
| ೬. | ವಾರ್ಷಿಕ ವಹಿವಾಟು (ರೂ.ಲಕ್ಷಗಳಲ್ಲಿ) | ೧೮೩೫೭.೦೦ |
| ೭. | ನಿವ್ವಳಲಾಭ (ರೂ.ಲಕ್ಷಗಳಲ್ಲಿ) | ೧೭೦.೦೦ |
| ೮. | ಹಾಲುಶೇಖರಣೆ ದಿನವಹಿ ಸರಾಸರಿ | ೨೯೧೭೨೦ ಕೆ.ಜಿ. ಹಾಲು |
| ೯. | ಹಾಲು ಮತ್ತು ಉತ್ಪನ್ನಗಳ ಮಾರಾಟ ಸರಾಸರಿ (ಇರಲ್ಲಿ ಮೊಸರು, ಹಾಲಿನಪುಡಿ, ಬೆಣ್ಣೆ, ತುಪ್ಪ, ಪೇಡ ಹಾಗೂ ಮಸಾಲ ಮಜ್ಜಿಗೆ ಸೇರಿದೆ) ಲೀ. ಗಳಲ್ಲಿ | ೧೪೨೪೫೦ |
| ೧೦. | ಒಕ್ಕೂಟದ ಆಡಳಿತ ಮಂಡಳಿಯಲ್ಲಿ ಕಾರ್ಯನಿರತರಾಗಿರುವ ನೌಕರ ಸಂಖ್ಯೆ | ೩೭೦ |

೨೦೧೪ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ೧೦೮೭ ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು ಸದಸ್ಯರ ಸಂಖ್ಯೆ ೨,೯೯,೦೩೭ ಆಗಿತ್ತು. ಹಾಲು ಒಕ್ಕೂಟದ ಆರ್ಥಿಕ ಸುಧಾರಣೆಗೆ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ, ಕೇಂದ್ರ ಸರ್ಕಾರ, ಕರ್ನಾಟಕ ಸರ್ಕಾರ, ಕರ್ನಾಟಕ ಹಾಲು ಮಹಾಮಂಡಳಿ, ಸಹಕಾರ ಇಲಾಖೆ, ಜಿಲ್ಲಾ ಪರಿಷತ್, ಡಿಸಿಸಿ ಬ್ಯಾಂಕು, ಕೆನರಾ ಬ್ಯಾಂಕ್, ಎಸ್.ಬಿ.ಎಂ., ಎಸ್.ಬಿ.ಐ., ಮುಂತಾದವು ಹಣಕಾಸಿನ ನೆರವು, ತಾಂತ್ರಿಕ ಹಾಗೂ ಆಡಳಿತಾತ್ಮಕ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡುತ್ತಾ ಬಂದಿವೆ. ಇದನ್ನು ಲಾಭದಾಯಕ ಘಟಕವನ್ನಾಗಿ ಪರಿವರ್ತಿಸಲು ಪ್ರಯತ್ನಿಸಲಾಗುತ್ತಿದೆ.

### ಕೃಷಿಯೇತರ ಸಾಲ ಕ್ಷೇತ್ರ

**ಪಟ್ಟಣ ಸಹಕಾರ ಬ್ಯಾಂಕು ಮತ್ತು ನೌಕರರ ಪತ್ತಿನ ಸಹಕಾರ ಸಂಘಗಳು:** ಕೃಷಿಯೇತರಸಾಲ ನೀಡಿಕೆ ಕ್ಷೇತ್ರದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ನೌಕರರ ಪತ್ತಿನ ಸಹಕಾರ ಸಂಘಗಳು ಸಹಕಾರಿ ವಲಯದ ಪ್ರಮುಖ ಸೇವಾ ಮೂಲಗಳಾಗಿವೆ. ನಗರ, ಪಟ್ಟಣ, ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರಗಳಲ್ಲಿ ಹೆಚ್ಚಾಗಿ ಸ್ಥಾಪನೆಗೊಂಡು ಸಾರ್ವಜನಿಕರಿಂದ ಠೇವಣಿಗಳನ್ನು ಸಂಗ್ರಹಿಸುವುದು ಮತ್ತು ಆಕರ್ಷಕ ಬಡ್ಡಿಯನ್ನು ನೀಡುವುದರ ಮೂಲಕ ಜನರಲ್ಲಿ ಉಳಿತಾಯ ಮನೋಭಾವವನ್ನು ಬೆಳೆಸುತ್ತಿವೆ. ನಗರ ಪಟ್ಟಣ ವ್ಯಾಪ್ತಿಯ ಸಣ್ಣ ವ್ಯಾಪಾರಿಗಳು, ಉದ್ಯಮಿಗಳು ಸ್ವಂತ ಉದ್ಯೋಗಗಳಿಗೆ ಕುಶಲ ಕಾರ್ಮಿಕರು ಮತ್ತು ನೌಕರರಿಗೆ ಈ ಬ್ಯಾಂಕುಗಳು ಸಾಲವನ್ನು ನೀಡುತ್ತಿವೆ. ಈ ಪಟ್ಟಣ ಬ್ಯಾಂಕುಗಳಲ್ಲಿ ಕೆಲವು ಪ್ರಮುಖ ಬ್ಯಾಂಕುಗಳು ೧೯೪೯ರ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಗೆ ಒಳಪಟ್ಟಿರುತ್ತವೆ. ನೌಕರರ ಸಹಕಾರ ಪತ್ತಿನ ಸಂಘಗಳು ನೌಕರ ವರ್ಗದವರಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತಿವೆ. ಸದಸ್ಯರಲ್ಲಿ ಉಳಿತಾಯದ ಭಾವನೆಯನ್ನು ಮೂಡಿಸುತ್ತಿವೆ. ಅಲ್ಲದೆ ಖಾತೆದಾರರಿಂದ ಠೇವಣಿಗಳನ್ನೂ ಆಕರ್ಷಿಸುತ್ತಿವೆ.

### ತುಮಕೂರು ಜಿಲ್ಲಾ ಕೈಗಾರಿಕಾ ಸಹಕಾರ ಸಂಘಗಳು

ಕೈಗಾರಿಕಾ ಸಹಕಾರ ಸಂಘಗಳ ಸ್ಥಾಪನೆಯ ಪ್ರಮುಖ ಉದ್ದೇಶ ಪ್ರತಿಯೊಂದು ಗ್ರಾಮ, ನಗರ ಮತ್ತು ಪಟ್ಟಣಗಳಲ್ಲಿ ಕೃಷಿಯ ತಾಂತ್ರಿಕ ಉಪಕರಣಗಳ ತಯಾರಿಕೆ, ಗೃಹ ಕೈಗಾರಿಕೆ, ಗ್ರಾಮೋದ್ಯೋಗ ಮತ್ತು ಕರಕುಶಲ ಗುಡಿ ಕೈಗಾರಿಕೆ, ಸಣ್ಣ, ಅತೀ ಸಣ್ಣ ಕೈಗಾರಿಕೆಗಳ ಸ್ಥಾಪನೆಯಾಗಿದೆ. ಇವನ್ನು ಅಭಿವೃದ್ಧಿಪಡಿಸುವುದರಿಂದ ವಿಕೇಂದ್ರಿಕರಣ ವ್ಯವಸ್ಥೆಯಡಿಯಲ್ಲಿ ಸ್ಥಳೀಯವಾಗಿ ಉದ್ಯೋಗಗಳು ವರ್ಷವಿಡೀ ದೊರಕುವುದರಿಂದ ನಗರಗಳಿಗೆ ಉದ್ಯೋಗ ಹುಡುಕಿ ವಲಸೆ ಹೋಗುವಿಕೆಯನ್ನು ತಡೆಯುವುದೇ ಮುಖ್ಯ ಉದ್ದೇಶವಾಗಿದೆ. ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಆಯಾ ಗ್ರಾಮಗಳಲ್ಲಿಯೇ ಗೃಹಕೈಗಾರಿಕೆಗಳಿಗೆ ಕಚ್ಚಾ ಪದಾರ್ಥಗಳಾಗಿ ಉಪಯೋಗಿಸಿ, ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸುವ ಉದ್ದೇಶದಿಂದ ಕೈಗಾರಿಕಾ ಸಹಕಾರ ಬ್ಯಾಂಕು ಸಂಘದ ಸದಸ್ಯರಿಗೆ ಸಾಲ ಸೌಲಭ್ಯ ಒದಗಿಸುತ್ತದೆ.

ನಗರ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಸಣ್ಣ ಪ್ರಮಾಣದ ವಿವಿಧ ಕೈಗಾರಿಕೆಗಳು, ಗುಡಿ ಕೈಗಾರಿಕೆ, ಮತ್ತು ಗ್ರಾಮೋದ್ಯೋಗಗಳನ್ನು ಸ್ಥಾಪಿಸಿ ಅಭಿವೃದ್ಧಿಪಡಿಸುವ ಕರಕುಶಲ ಕೈಗಾರಿಕೋದ್ಯಮಿಗಳಿಗೆ, ಸ್ವಂತ ಉದ್ಯೋಗಸ್ಥರಿಗೆ ಸಾಲಸೌಲಭ್ಯಗಳನ್ನು ಒದಗಿಸುವ ಮೂಲ ಉದ್ದೇಶದಿಂದ ಕೈಗಾರಿಕಾ ಸಹಕಾರ ಸಂಘಗಳು ಸ್ಥಾಪನೆಗೊಂಡಿವೆ. ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ಸದಸ್ಯರಿಗೆ ಒದಗಿಸುವುದು, ಉತ್ಪಾದಕರಿಗೆ ತಾಂತ್ರಿಕ ಸಲಹೆ ನೀಡುವುದು, ವಸ್ತುಗಳ ಮಾರಾಟ ವ್ಯವಸ್ಥೆಯನ್ನು ಮಾಡುವುದು ಇವುಗಳ ಕಾರ್ಯವ್ಯಾಪ್ತಿಗೊಳಪಟ್ಟಿರುತ್ತದೆ. ತೆಂಗಿನ ನಾರಿನ ಕೈಗಾರಿಕೆ, ರೇಷ್ಮೆ, ಬೆಲ್ಲ, ಖಂಡಸಾರಿ, ಚರ್ಮೋದ್ಯೋಗ, ಕುಂಬಾರಿಕೆ, ಕರಕುಶಲ ಕೈಗಾರಿಕೆ, ಇಟ್ಟಿಗೆ, ಹೆಂಚು ತಯಾರಿಕೆ ವಾಹನಗಳ ಬಿಡಿಭಾಗಗಳ ತಯಾರಿಕೆ, ಉಡುಪು ತಯಾರಿಕೆ, ಕುಂಬಾರಿಕೆ, ಲೋಹ ತಯಾರಿಕೆ, ಕೈಮಗ್ಗ ಉಣ್ಣೆ ನೇಕಾರಿಕೆ, ಗ್ರಾಮೋದ್ಯೋಗ ಮುಂತಾದ ಹಲವು ಕೈಗಾರಿಕಾ ಸಂಘಗಳು ತುಮಕೂರು ಜಿಲ್ಲೆಯಲ್ಲಿ ಸ್ಥಾಪನೆಗೊಂಡಿದ್ದು ಕಾರ್ಯ ನಿರ್ವಹಿಸುತ್ತಿವೆ.

## ವ್ಯಾಪಾರ ಮತ್ತು ವಾಣಿಜ್ಯ

ಕರ್ನಾಟಕ ರಾಜ್ಯದ ಇತರ ಜಿಲ್ಲೆಗಳಂತೆ ತುಮಕೂರು ಜಿಲ್ಲೆಯ ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳು ಪ್ರಾಚೀನ ಕಾಲದಿಂದ ಇಂದಿನವರೆಗೆ ನಡೆದು ಬಂದ ದಾರಿ ಮತ್ತು ಅದರ ವ್ಯಾಪಾರಾಭಿವೃದ್ಧಿಯನ್ನು ತಿಳಿದುಕೊಳ್ಳುವುದು ಮುಖ್ಯವಾಗಿದೆ. ಪ್ರಾಚೀನ ಕಾಲದಲ್ಲಿ ಜಿಲ್ಲೆಯ ವಾಣಿಜ್ಯ ವ್ಯಾಪಾರಗಳು ಸಂಸ್ಥಾನದ ಒಳಗಡೆ, ನೆರೆಯ ರಾಜ್ಯಗಳಲ್ಲದೆ, ಅರಬ್ಬಿ ಸಮುದ್ರದ ಬಂದರು ಪ್ರದೇಶಗಳಾದ ತೆಲಚೇರಿ ಮತ್ತು ಮಂಗಳೂರು ಮೂಲಕ ನಡೆಯುತ್ತಿತ್ತು. ಕಲ್ಪವೃಕ್ಷವೆಂದೇ

ಪ್ರಖ್ಯಾತವಾದ ಕೊಬ್ಬರಿ, ತೆಂಗಿನಕಾಯಿ; ಕೃಷಿ ಉತ್ಪನ್ನ ಹಾಗೂ ಸಾಂಬಾರ (ದಿನಸಿ) ಪದಾರ್ಥಗಳನ್ನು ವಿದೇಶಗಳಿಗೆ ರಫ್ತು ಮಾಡುತ್ತಿದ್ದ ಬಗ್ಗೆ ಕ್ರಿ.ಪೂ. ೧೩೦ ರಲ್ಲಿದ್ದ ಟಾಲೆಮಿ ಎಂಬ ವಿದೇಶಿ ಪ್ರವಾಸಿಗರ ಬರಹದಲ್ಲಿನ ಉಲ್ಲೇಖಗಳಿಂದ ತಿಳಿದುಬರುತ್ತದೆ.

ಸುಮಾರು ೧೩ ನೆಯ ಶತಮಾನದಲ್ಲಿ ಜಿಲ್ಲೆಯ ಪ್ರಮುಖ ನಗರ, ಪಟ್ಟಣ ಮತ್ತು ಹೋಬಳಿಗಳಲ್ಲಿ ನಡೆಯುತ್ತಿದ್ದ ವಾರದಸಂತೆಗಳಲ್ಲಿ ರೈತರು, ಕೃಷಿ ಕಾರ್ಮಿಕರು, ಮತ್ತು ಇತರ ವರ್ಗದ ಜನರು ಸ್ಥಳೀಯ ವ್ಯಾಪಾರಿಗಳೊಂದಿಗೆ ಪರಸ್ಪರ ವಸ್ತುವಿನಿಮಯ ಅಥವಾ ಸಾಟಿ ವ್ಯಾಪಾರದ (Barter System) ಮೂಲಕ ತಮ್ಮ ಅಗತ್ಯ ಬೇಡಿಕೆಗಳನ್ನು ಪೂರೈಸಿಕೊಳ್ಳುತ್ತಿದ್ದರು. ಆಗಿನ ಕಾಲದಲ್ಲಿ ತುಮಕೂರು, ಕ್ಯಾತಸಂದ್ರ (ಸಿದ್ದಗಂಗಾ) ಕುಣಿಗಲ್, ದೇವರಾಯನದುರ್ಗ, ಯಡಿಯೂರು, ಯಡವಾಣಿ, ಅಮೃತೂರು, ಹೆಬ್ಬೂರು, ಹೊನ್ನುಡಿಕೆ, ನಾಗವಲ್ಲಿ, ಮಲ್ಲಸಂದ್ರ, ಬೆಳ್ಳಾವೆ, ಗುಬ್ಬಿ, ಕಲ್ಲೂರು, ನಿಟ್ಟೂರು, ಕಡಬ, ತುರುವೇಕರೆ, ಮಾಯಸಂದ್ರ, ಕೊರಟಗೆರೆ, ತಿಪಟೂರು, ನೊಣವಿನಕೆರೆ, ಕಿಬ್ಬನಹಳ್ಳಿ, ಬಿಳಿಗೆರೆ, ದಂಡಿನಶಿವರ, ಬಾಣಸಂದ್ರ, ಅಮ್ಮಸಂದ್ರ, ಸಂಪಿಗೆ, ದಬ್ಬೆಘಟ್ಟ, ಚಿಕ್ಕನಾಯಕನಹಳ್ಳಿ, ಹುಳಿಯೂರು, ಶಿರಾ, ಕಳ್ಳಂಬಳ್ಳಿ, ಬರಗೂರು, ಬುಕ್ಕಪಟ್ಟಣ, ಮಧುಗಿರಿ, ಕೊಡಗೆಹಳ್ಳಿ, ಬಡವನಹಳ್ಳಿ, ಪಾವಗಡ, ವೆಂಕಟಾಪುರ, ಹೊಸಕೋಟೆ, ಹರಿಹರಪುರ, ಮೊದಲಾದ ಸ್ಥಳಗಳಲ್ಲಿ ಕೊಬ್ಬರಿ, ತೆಂಗು, ಅಡಿಕೆ, ವಿಳೇದೆಲೆ, ಹಣ್ಣು, ತರಕಾರಿ, ಮಾವು, ದಾಳಿಂಬೆ, ಮೊದಲಾದ ನೂರೆಂಟು ಕೃಷಿ ಉತ್ಪನ್ನಗಳು ಮಾರಾಟವಾಗುತ್ತಿದ್ದ ಬಗ್ಗೆ ಚಾರಿತ್ರಿಕ ದಾಖಲೆಗಳಿವೆ.

ಜಿಲ್ಲೆಯ ನಗರ, ಪಟ್ಟಣ, ಹೋಬಳಿ ಕೇಂದ್ರ ಮತ್ತು ಪ್ರಮುಖ ಗ್ರಾಮಗಳಲ್ಲಿ ವಾರದಸಂತೆಗಳಲ್ಲದೆ ಪ್ರತೀಗ್ರಾಮದ ಸ್ಥಳೀಯ ವ್ಯಾಪಾರಿಗಳು ತಮ್ಮ ಅಂಗಡಿಗಳಲ್ಲಿ ವ್ಯಾಪಾರ ವ್ಯವಹಾರ ನಡೆಸುತ್ತಿದ್ದರು. ಆಗಿನ ಕಾಲದಲ್ಲಿ ಈಗಿರುವಂತೆ ಆಧುನಿಕ ರಸ್ತೆ, ರೈಲ್ವೆ ಮಾರ್ಗ ಮತ್ತು ವಾಹನ ಸಂಚಾರ ಮುಂತಾದವು ಇನ್ನೂ ಅಭಿವೃದ್ಧಿ ಹೊಂದಿರಲಿಲ್ಲ. ವ್ಯವಸ್ಥಿತ ಮಾರುಕಟ್ಟೆ ಮತ್ತು ಮಂಡಿಗಳು ಸಹ ಅಸ್ತಿತ್ವದಲ್ಲಿರಲಿಲ್ಲ. ರೈತರು ಮಾರಾಟಕ್ಕೋಸ್ಕರ ಬೆಳೆದ ಕೊಬ್ಬರಿ, ತೆಂಗಿನಕಾಯಿ, ಅಡಿಕೆ, ವಿಳೆದೆಲೆ, ಆಹಾರ ಧಾನ್ಯಗಳು, ತರಕಾರಿ, ಹಣ್ಣು, ಫಲಪುಷ್ಪ ಮುಂತಾದ ಕೃಷಿ ಉತ್ಪನ್ನಗಳಲ್ಲದೆ ಜಾನುವಾರುಗಳನ್ನು ಸಂತೆಯಲ್ಲಿ ಮಾರಾಟ ಮಾಡಿ ತಮಗೆ ಅಗತ್ಯ ವಸ್ತುಗಳಾದ ಸೀಮೆಎಣ್ಣೆ, ಬೆಂಕಿಪಟ್ಟಣ, ಬಟ್ಟೆ, ಉಪ್ಪು, ಬೇಳೆ, ಹೊಗೆಸೊಪ್ಪು, ಸಾಬೂನು, ಖಾದ್ಯತೈಲ, ಸಾಂಬಾರ, ಮಸಾಲೆ ಪದಾರ್ಥ, ಬೆಲ್ಲ ಮುಂತಾದ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದರು. ಎತ್ತಿನಗಾಡಿ (ಬಂಡಿ), ಸಾಕು ಪ್ರಾಣಿಗಳ ಮೇಲೆ ಹೇರಿಕೊಂಡು ಅಥವಾ ರೈತರೇ ಸ್ವತಃ ಹೊತ್ತುಕೊಂಡು ಸಂತೆಯಲ್ಲಿ ಮಾರುವುದು ಮತ್ತು ಖರೀದಿಸುವ ಪದ್ಧತಿ ಈಗಲೂ ರೂಢಿಯಲ್ಲಿದೆ. ವಾರದ ಸಂತೆಗಳಲ್ಲಿ ಸಗಟು ವ್ಯಾಪಾರಿಗಳಿಂದ ಖರೀದಿಸಿದ ವಸ್ತುಗಳನ್ನು ಚಿಲ್ಲರೆ ವ್ಯಾಪಾರಿಗಳು ತಮ್ಮ ತಮ್ಮ ಗ್ರಾಮದ ಅಂಗಡಿಗಳಲ್ಲಿ ಮಾರಾಟ ಮಾಡುತ್ತಿದ್ದರು.

ಮೈಸೂರು ಸಂಸ್ಥಾನದ ಒಡೆಯರ್ ಮನೆತನದ ಚಿಕ್ಕದೇವರಾಜ ಒಡೆಯರ್ (೧೬೭೩–೧೭೦೪) ಕಾಲದಲ್ಲಿ ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿನ ಪೇಟೆಗಳಲ್ಲಿ ಕರಾರು ತಕ್ಕಡಿ, ತೂಕದ ಬಟ್ಟು ಮತ್ತು ಅಳತೆಯ ಸೇರು ಮುಂತಾದ ಮಾಪನ ಪರಿಕರಗಳನ್ನು ಅಳವಡಿಸಿ, ವರ್ತಕರಿಗೆ ಮತ್ತು ಗ್ರಾಹಕರಿಗೆ ಅನುಕೂಲವಾಗುವಂತೆ ವ್ಯವಸ್ಥಿತ ತೂಕ ಮತ್ತು ಅಳತೆ ಪದ್ಧತಿಯನ್ನು ಜಾರಿಗೊಳಿಸಿದರು. ಸಂತೆ ಜರುಗುವ ಸ್ಥಳವನ್ನು "ಸಂತೆಮಾಳ"ಎಂದು ಕರೆಯುತ್ತಿದ್ದರು. ಸಂತೆ ಮೈದಾನದಲ್ಲಿ ದನಗಳ ಜಾತ್ರೆ (ಪರಿಷೆ) ಜರುಗುತ್ತಿದ್ದವು. ಕಣ, ಸುಗ್ಗಿಯ ನಂತರ ಸಂಕ್ರಾಂತಿ, ಶಿವರಾತ್ರಿ, ಹೋಳಿಹಬ್ಬ, ಯುಗಾದಿ ಮತ್ತು ಬಸವ ಜಯಂತಿ ಹಬ್ಬಗಳ ಆಚರಣೆಯ ನಡುವೆ ಗ್ರಾಮದೇವತೆಗಳ ತೇರು, ರಥೋತ್ಸವ, ಜಾತ್ರೆ, ಕೆಂಡ ಉರುಸ್, ಮುಂತಾದ ಉತ್ಸವಗಳು ರೈತ ಸಮುದಾಯಕ್ಕೆ ಮತ್ತು ವರ್ತಕರಿಗೆ ಸಂತಸ ಸಂಭ್ರಮ ನೀಡುತ್ತಿದ್ದವು. ಇಂತಹ ವಿಶೇಷವಾದ ಸಂದರ್ಭಗಳಲ್ಲಿ ವ್ಯಾಪಾರ ವಹಿವಾಟುಗಳು ಅಧಿಕ ಪ್ರಮಾಣದಲ್ಲಿ ಜರುಗುತ್ತಿದ್ದವು. ವರ್ತಕರು, ಗ್ರಾಮಸ್ಥರು ಮತ್ತು ಭಕ್ತಾದಿಗಳು ಸೇರಿ ಸಂತೆ ಆವರಣದಲ್ಲಿ ಗುಡಿಗಳನ್ನು ಕಟ್ಟಿಸಿ, ದೇವರನ್ನು ಪ್ರತಿಷ್ಠಾಪಿಸಿ, ಅರ್ಚಕರನ್ನು ನೇಮಿಸಿ, ಪೂಜಾ ಕಾರ್ಯಗಳನ್ನು ಪ್ರತೀದಿನ ನೆರವೇರಿಸುತ್ತಿದ್ದರು. ಪ್ರತೀವರ್ಷ ಗಣೇಶನ ಉತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸುತ್ತಿದ್ದರು. ಸಂತೆ ಆವರಣದಲ್ಲಿ ಕಲ್ಯಾಣಿ, ಬಾವಿಗಳನ್ನು ನಿರ್ಮಿಸಿ ನೀರಿನ ಸೌಕರ್ಯವನ್ನು ಮಾಡುತ್ತಿದ್ದರು. ದನಕರುಗಳಿಗೆ ನೀರು ಕುಡಿಯಲು ಕಲ್ಲಿನ ಬಾನಿ (ತೊಟ್ಟಿ)ಗಳನ್ನು ನಿರ್ಮಿಸುತ್ತಿದ್ದರು. ಪ್ರಯಾಣಿಕರಿಗೆ ಕುಡಿಯುವ ನೀರು ಒದಗಿಸಲು ಅರವಟ್ಟಿಗೆಗಳೂ ಇರುತ್ತಿದ್ದವು. ವಿಶ್ರಾಂತಿಗೆ ಚಾವಡಿಗಳು, ತಂಪಾದ ಸಾಲುಮರಗಳು ಮತ್ತು ಗುಂಡುತೋಪುಗಳನ್ನು ಬೆಳೆಸಿದ್ದರಿಂದ ಇವು ವ್ಯಾಪಾರ ಅಭಿವೃದ್ಧಿಗೆ ಉತ್ತೇಜನ ನೀಡಿದವು.

ತಿಪಟೂರು, ತುರುವೇಕೆರೆ ಮತ್ತು ಚಿಕ್ಕನಾಯಕನಹಳ್ಳಿ ತಾಲೂಕುಗಳು ಕೊಬ್ಬರಿ, ತೆಂಗು, ತೆಂಗಿನ ಉಪಯುಕ್ತ ವಸ್ತುಗಳು, ಗೃಹಕೃತ್ಯ ಸರಕುಗಳು ಮತ್ತು ಜಿಲ್ಲೆಯ ಇತರ ತಾಲೂಕುಗಳು ದವಸಧಾನ್ಯಗಳ ವ್ಯಾಪಾರದಲ್ಲಿ ಹೆಸರುವಾಸಿ ಪಡೆದಿದ್ದ ಅಂಶ ೧೩ನೇ ಶತಮಾನದಲ್ಲಿ ಶೈವ ಮತ್ತು ಜೈನ ಸಾಹಿತ್ಯಗಳಿಂದ ಗೊತ್ತಾಗುತ್ತದೆ. ವ್ಯಾಪಾರಸ್ಥರಿಗೆ ಬಣಜಿಗರು, ನಕರ ಅಥವಾ ನಗರ್ತಕರು, ವೈಶ್ಯರು, ಶೆಟ್ಟರು, ಮುಮ್ಮರಿದಂಡರು, ಹಲರು, ಎಳಮೆ ಎಂಬ ವಿವಿಧ ಹೆಸರುಗಳಿದ್ದು, ವರ್ತಕರು ಕಾಲಕ್ರಮೇಣ ಮಂಡಿಗಳನ್ನು ಸ್ಥಾಪಿಸಿದ್ದರಿಂದ ಮಂಡೀಪೇಟೆ ಎಂಬ ಹೆಸರು ಬಂದಿದೆ.

ಮಂಡೀಪೇಟೆ ಆವರಣದಲ್ಲಿ ದಾಸ್ತಾನು (ಉಗ್ರಾಣ) ಮಳಿಗೆಗಳನ್ನು ಸರ್ಕಾರದ ಆರ್ಥಿಕ ನೆರವಿನಿಂದ ಸ್ಥಾಪಿಸಲಾಯಿತು. ಸರ್ಕಾರವು ವ್ಯಾಪಾರ ಕೇಂದ್ರಗಳ ರಹದಾರಿಗಳಲ್ಲಿ ಸುಂಕದಕಟ್ಟೆಗಳನ್ನು (ಟೋಲ್‌ಗೇಟ್) ಸ್ಥಾಪಿಸಿದ್ದರು. ಸುಂಕದ ಕಟ್ಟೆಯಲ್ಲಿ ಸುಂಕದ ಅಧಿಕಾರಿಗಳು ಮಾರಾಟವಾಗುವ ಪ್ರತಿಯೊಂದು ಸರಕುಗಳನ್ನು ತಪಾಸಣೆ ಮಾಡಿ ಸುಂಕಗಳನ್ನು ವಸೂಲಿ ಮಾಡುತ್ತಿದ್ದರು. ಸುಂಕದ ಕಟ್ಟೆಯ ರಹದಾರಿಯಲ್ಲಿ ಚಲಿಸುವ ಪ್ರತಿಯೊಂದು ವಾಹನದ ತಪಾಸಣೆ ಮಾಡುವುದು, ಮಂಡಿಪೇಟೆಗಳಿಗೆ ಆಗಮಿಸುವ ಮತ್ತು ನಿಗರ್ಮಿಸುವ ಪ್ರತಿಯೊಂದು ಸರಕನ್ನು ತಪಾಸಣೆಗೊಳಪಡಿಸಿ ಸುಂಕ ವಿಧಿಸಿ ವಸೂಲಿ ಮಾಡುತ್ತಿದ್ದರು. ಮಂಡೀಪೇಟೆ ಮತ್ತು ವ್ಯಾಪಾರ ಕೇಂದ್ರಗಳಲ್ಲಿ ವಾಣಿಜ್ಯ ತೆರಿಗೆ ಇಲಾಖೆಯನ್ನು ಸ್ಥಾಪಿಸಿ, ತೆರಿಗೆ ಅಧಿಕಾರಿಗಳು ಪ್ರತಿಯೊಂದು ಸರಕಿನ ಮೇಲೆ ಮಾರಾಟ ತೆರಿಗೆ ಆಕ್ಟ್ರಾಯ್ ಸುಂಕ ಮೊದಲಾದವುಗಳಿಂದ ಸಂಗ್ರಹಿಸಿದ ಹಣವನ್ನು ಭದ್ರವಾದ ಕಪಾಟುಗಳಲ್ಲಿ ಸುರಕ್ಷಿತವಾಗಿಟ್ಟು, ಆಮೇಲೆ ಬ್ಯಾಂಕುಗಳಲ್ಲಿ ಜಮಾ ಮಾಡುತ್ತಿದ್ದರು. ಕ್ರಮೇಣ ಹುಜೂರ್ ಟ್ರಜ಼ರಿಯನ್ನು ಸ್ಥಾಪಿಸಲಾಯಿತು.

**ಆಧುನಿಕ ಸಾರಿಗೆ ವ್ಯವಸ್ಥೆ:** ೧೮೫೦ರ ನಂತರ ಬೆಂಗಳೂರಿನಿಂದ ತುಮಕೂರು, ತಿಪಟೂರು, ಹಾಸನ, ಮೈಸೂರು ಹರಿಹರ, ಹುಬ್ಬಳ್ಳಿ, ಮೀರಜ್, ಪುಣೆ ಮತ್ತು ಮುಂಬೈಗೆ ನಿರ್ಮಿಸಿದ ರೈಲುಮಾರ್ಗ, ಚೈನ್ನೈ, ಹೈದರಾಬಾದ್, ಮಂಗಳೂರು ಮುಂತಾದ ನಗರಗಳಿಗೆ ಸಂಪರ್ಕ ಕಲ್ಪಿಸಿದ ರೈಲ್ವೆ ಮತ್ತು ರಾಷ್ಟ್ರೀಯ ಹೆದ್ದಾರಿ ರಸ್ತೆಗಳ ಸಂಚಾರ ಮತ್ತು ಸಂಪರ್ಕ ವ್ಯವಸ್ಥೆಯ ಸುಧಾರಣೆಗಳಿಂದಾಗಿ ತುಮಕೂರು ಜಿಲ್ಲೆಯ ವ್ಯಾಪಾರ–ವಾಣಿಜ್ಯ ವಹಿವಾಟುಗಳು ಸುಗಮವಾಗಿ ಬೆಳೆಯುವಂತಾಯಿತು. ಜಿಲ್ಲೆಯ ಎಲ್ಲಾ ತಾಲೂಕುಗಳಿಗೆ, ಹೋಬಳಿ, ಪಟ್ಟಣ ಮತ್ತು ಮುಖ್ಯ ಹಳ್ಳಿಗಳಿಗೆ ರಸ್ತೆ ಮತ್ತು ಸಾರಿಗೆ ಸಂಪರ್ಕಗಳನ್ನು ಕಲ್ಪಿಸಿದ್ದರಿಂದ, ಆಂತರಿಕ ಮತ್ತು ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ತುಮಕೂರು ಜಿಲ್ಲೆ ಸಜ್ಜಾಗಲು ಸಾಧ್ಯವಾಯಿತು.

**ರಫ್ತು ಮತ್ತು ಆಮದು ವ್ಯಾಪಾರ**

ರೈಲು–ರಸ್ತೆ ಮತ್ತು ಸಾರಿಗೆ ಸಂಪರ್ಕಗಳ ಆಧುನೀಕರಣ, ಔದ್ಯಮೀಕರಣ ಹಾಗೂ ಮಾಹಿತಿ ತಂತ್ರಜ್ಞಾನದ ಅಭಿವೃದ್ಧಿಯಿಂದ ಸ್ಥಳೀಯ ಜನರಲ್ಲಿ ಕಂಡು ಬಂದ ಉತ್ತಮ ನಾಗರಿಕ ಜೀವನಮಟ್ಟ; ಜನಸಂಖ್ಯೆ ಬೆಳವಣಿಗೆ, ಜನರ ಆದಾಯದ ಹೆಚ್ಚಳದಿಂದ ಉಂಟಾದ ಬೇಡಿಕೆ, ಮುಂತಾದ ಹಲವಾರು ಅಂಶಗಳು ಉತ್ಪಾದನೆಯನ್ನು ಹೆಚ್ಚಿಸಿವೆ, ಪರಿಣಾಮವಾಗಿ ವ್ಯಾಪಾರ ವಹಿವಾಟುಗಳ ವೃದ್ಧಿಯಿಂದ ಮಾರುಕಟ್ಟೆ ಸಂಕೀರ್ಣ, ರಾಜ್ಯ, ರಾಷ್ಟ್ರ, ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಸ್ತಾರವಾಗಿ ಅಭಿವೃದ್ಧಿ ಹೊಂದುತ್ತಿವೆ. ತುಮಕೂರು, ತಿಪಟೂರು, ತುರುವೇಕೆರೆ, ಗುಬ್ಬಿ, ಕುಣಿಗಲ್, ಚಿಕ್ಕನಾಯಕನಹಳ್ಳಿ, ಶಿರಾ, ಮಧುಗಿರಿ, ಪಾವಗಡ ಮತ್ತು ಕೊರಟಗೆರೆ ಮುಂತಾದ ಪಟ್ಟಣ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟುಗಳು ಹೆಚ್ಚಿವೆ. ತಿಪಟೂರು, ತುರುವೇಕೆರೆ ಮತ್ತು ಚಿಕ್ಕನಾಯಕನಹಳ್ಳಿ, ತಾಲೂಕು ಕಲ್ಪವೃಕ್ಷವೆಂದೇ ಹೆಸರು ಗಳಿಸಿದ್ದು ಕೊಬ್ಬರಿ, ತೆಂಗಿನಕಾಯಿಗಳು, ಅಧಿಕ ಪ್ರಮಾಣದಲ್ಲಿ ಪುಣೆ, ಮುಂಬೈ, ಅಹಮದಾಬಾದ್, ಕಾನ್ಪುರ, ದೆಹಲಿ, ಮೊದಲಾದ ಪ್ರಮುಖ ಮಾರುಕಟ್ಟೆಗಳಲ್ಲಿ ಮಾರಾಟವಾಗುತ್ತಿವೆ. ಜಿಲ್ಲೆಯ ಇತರ ತಾಲೂಕುಗಳಿಂದ ರಾಗಿ, ಹುರುಳಿ, ಕಡಲೆ ಮುಂತಾದ ಆಹಾರ ಧಾನ್ಯಗಳು ಹುಣಸೇಹಣ್ಣು, ಸೀಗೆಪುಡಿ, ಅಂಟುವಾಳ, ಅಡಿಕೆ, ಎಣ್ಣೆಬೀಜಗಳು, ವಿಳೇದೆಲೆ ಇವು ಕೊರಟಗೆರೆ, ಶಿರಾ ಮಧುಗಿರಿ ಮತ್ತು ಪಾವಗಡ ತಾಲೂಕುಗಳಿಂದ ಪಕ್ಕದ ರಾಜ್ಯಗಳಲ್ಲಿ ಹೆಚ್ಚಿನ ಬೇಡಿಕೆ ಇತ್ತು. ಗುಬ್ಬಿ ಮತ್ತು ಕುಣಿಗಲ್‌ನಿಂದ ಮಾವು, ತೆಂಗು, ಬೆಲ್ಲ, ಅಡಿಕೆ, ವಿಳೇದೆಲೆ ಮುಂತಾದವು ಮಂಗಳೂರು ಮತ್ತು ಕೇರಳ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗುತ್ತಿವೆ.

ತುಮಕೂರು ಜಿಲ್ಲೆಗೆ ಆಮದಾಗುತ್ತಿದ್ದ ಸರಕುಗಳೆಂದರೆ ಅಕ್ಕಿ, ಗೋದಿ, ಧನಿಯ, ಕಾಫಿ ಚಹ, ಈರುಳ್ಳಿ, ಬೆಳ್ಳುಳ್ಳಿ, ಬೇಳೆಕಾಳುಗಳು, ಮಸಾಲೆ, ದಿನಸಿ ಪದಾರ್ಥಗಳು, ಖಾದ್ಯತೈಲ, ಸಕ್ಕರೆ, ಜವಳಿ (ಹತ್ತಿ) ಉಣ್ಣೆ, ರೇಷ್ಮೆ ಲೋಹ ವಸ್ತುಗಳು, ಹೊಗೆಸೊಪ್ಪು, ಸೋಪು, ಉಪ್ಪು, ಔಷಧಿಗಳು, ಕೃಷಿ ಮತ್ತು ಕೈಗಾರಿಕಾ ತಯಾರಿಕಾ ವಸ್ತುಗಳು, ಕಾಗದ, ಮದ್ಯ, ಮರಮುಟ್ಟು, ಅರಣ್ಯ ಉತ್ಪನ್ನಗಳು, ಮತ್ತು ಇತರೇ ವಸ್ತುಗಳನ್ನು ರಾಜ್ಯದ ಬೇರೆ ಜಿಲ್ಲೆಗಳಲ್ಲದೆ ನೆರೆ ರಾಜ್ಯಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ.

**ಸಂತೆಗಳು**

ವ್ಯಾಪಾರ ಮತ್ತು ವಾಣಿಜ್ಯಗಳ ಆರ್ಥಿಕ ವಿಕಾಸದಲ್ಲಿ 'ಸಂತೆಗಳು' ಜಿಲ್ಲೆಯಲ್ಲಿ ಪ್ರಾಚೀನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಬಗ್ಗೆ ಶಾಸನಗಳ ದಾಖಲೆಗಳಿಂದ ತಿಳಿದುಬಂದಿದೆ. ವಾರದಲ್ಲಿ ಒಂದ ದಿವಸ ಸ್ಥಳೀಯ ಕೃಷಿಕರು (ರೈತರು) ಹಾಗೂ ವ್ಯಾಪಾರಿಗಳು ಗ್ರಾಹಕರ ಬೇಡಿಕೆ ವಸ್ತುಗಳನ್ನು ಗ್ರಾಮ, ಪಟ್ಟಣಗಳಲ್ಲಿನ ಜನಸಂದಣಿಯ ಸ್ಥಳಗಳಲ್ಲಿ ಮಾರಾಟ ಮಾಡುವ ಮತ್ತು ವಸ್ತು ವಿನಿಮಯ ಮಾಡುವ ಸಾಟಿ ವ್ಯಾಪಾರ ಪದ್ಧತಿಯು ಬಹಳ ಹಿಂದಿನ ಕಾಲದಲ್ಲಿಂದಲೂ ನಡೆದು ಬಂದಿದೆ. ಇಂತಹ ಮಾರಾಟ ಸ್ಥಳಕ್ಕೆ ಸಂತೆ ಎಂದು ಕರೆಯುತ್ತಾರೆ.  ನಗರ ಪಟ್ಟಣಗಳಲ್ಲಿರುವ ಮಂಡೀಪೇಟೆ (ಬಜಾರ್) ಮತ್ತು ನಿಯಂತ್ರಿತ ಮಾರುಕಟ್ಟೆಯ ಅಕ್ಕಪಕ್ಕದ ಪ್ರಮುಖ ರಸ್ತೆ ಅಂಚಿನಲ್ಲಿ ಅಥವಾ ಜನಸಂದಣಿಯ ಮೈದಾನಗಳಲ್ಲಿಯೂ ಸಹ ವಾರದಲ್ಲಿ ಒಂದು ಅಥವಾ ಎರಡು ದಿವಸ ಸಂತೆಗಳು ಈಗಲೂ ಜರುಗುತ್ತವೆ. ಇಂತಹ ಸಂತೆಯಲ್ಲಿ ಸಾಕು ಪ್ರಾಣಿಗಳು, ಮೀನು, ತರಕಾರಿ, ಜವಳಿ, ಗೃಹಬಳಕೆ ವಸ್ತುಗಳು ಇತ್ಯಾದಿ ಮಾರಾಟ ಮಾಡುವ ವ್ಯವಸ್ಥೆಯು ಈಗಲೂ ಅಸ್ತಿತ್ವದಲ್ಲಿದೆ. ಸಂತೆ ವ್ಯಾಪಾರವು ಬೆಳಗಿನಿಂದ ಸಂಜೆಯವರೆಗೆ ಬಿಡದೆ ಜರುಗುತ್ತದೆ. ಸ್ಥಳೀಯವಾಗಿ ಐದು ಕಿಲೋಮೀಟರ್ ಸುತ್ತಳತೆಯ ವ್ಯಾಪ್ತಿಯಲ್ಲಿ ವಾಸಿಸುವ ಜನರಿಗೆ ತಮ್ಮ ವಾರದ ಅವಶ್ಯ ವಸ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಸಂತೆಯು ಅನುಕೂಲಕರವಾದ ಮಾರುಕಟ್ಟೆಯಾಗಿದೆ.

ರೈತರು ಉತ್ಪಾದಿಸಿದ ಎಲ್ಲಾ ಕೃಷಿ ಉತ್ಪನ್ನಗಳು ಹಣ್ಣು, ತರಕಾರಿ, ಕಾಯಿಪಲ್ಯ, ತೆಂಗಿನಕಾಯಿ, ಕೊಬ್ಬರಿ, ಅಡಿಕೆ, ವೀಳೇದೆಲೆ, ಹೊಗೆಸೊಪ್ಪು, ಬೆಲ್ಲ, ಈರುಳ್ಳಿ, ಬೆಳ್ಳುಳ್ಳಿ, ಮೆಣಸಿನಕಾಯಿ, ದಿನಸಿ (ಸಂಬಾರ) ಪದಾರ್ಥ ಮುಂತಾದ ನೂರೆಂಟು ವಸ್ತುಗಳಲ್ಲದೇ ಸಾಕು ಪ್ರಾಣಿಗಳು ಸಹ ಮಾರಾಟಕ್ಕಾಗಿ ಬರುತ್ತವೆ. ಸಂತೆಯ ಮಾರಾಟವನ್ನೇ ತಮ್ಮ ವೃತ್ತಿಕಸುಬಾಗಿ ನಡೆಸಿಕೊಂಡು ಬಂದಿರುವ ಬಣಜಿಗರು, ಶೆಟ್ಟರು, ವೈಶ್ಯರು, ಮಾರ್ವಾಡಿಗಳಲ್ಲದೇ, ಕಿರಾಣಿ, ಜವಳಿ ಮತ್ತು ಪಾತ್ರೆಗಳ ವ್ಯಾಪಾರಿಗಳು ತಾತ್ಕಾಲಿಕವಾಗಿ ಗುಡಾರ (ಟೆಂಟ್) ಹಾಕಿಕೊಂಡು ಮಾರಾಟ ಮಾಡುತ್ತಾರೆ. ಇತ್ತೀಚೆಗೆ ನಗರ, ಪುರಸಭೆ ಪಟ್ಟಣ ಮತ್ತು ಗ್ರಾಮ ಪಂಚಾಯಿತಿಗಳು ವ್ಯಾಪಾರ ಮಳಿಗೆಗಳನ್ನು ಶಾಶ್ವತವಾಗಿ ನಿರ್ಮಿಸಿ, ಬಾಡಿಗೆಗೆ ನೀಡಿವೆ.  ಸಂತೆ ಮೈದಾನದ ಪ್ರಮುಖ ರಸ್ತೆ ಪಕ್ಕದಲ್ಲಿ ಟೋಲ್‌ಗೇಟ್ ಅಥವಾ ಸುಂಕದ ಕಟ್ಟೆಯನ್ನು ಸರ್ಕಾರವು ನಿರ್ಮಿಸಿ ಸಂತೆಗೆ ಬರುವ ಪ್ರತಿಯೊಂದು ಸರಕಿಗೂ ರಹದಾರಿ ಸುಂಕ, ಆಕ್ಟ್ರಾಯ್ ತೆರಿಗೆ, ಪ್ರವೇಶ ತೆರಿಗೆ, ಮಾರಾಟ ತೆರಿಗೆ, ಮುಂತಾದ ತೆರಿಗೆಗಳನ್ನು ವಸೂಲಿ ಮಾಡುತ್ತದೆ. ವಾಣಿಜ್ಯ ಚಟುವಟಿಕೆಯ ನಿಯಂತ್ರಣಕ್ಕೆಂದೇ ವಾಣಿಜ್ಯ ತೆರಿಗೆ ಇಲಾಖೆಯು ಕಾರ್ಯನಿರ್ವಹಿಸುತ್ತಿದೆ.

ಗ್ರಾಮದ ಗ್ರಾಮದೇವತೆಯ ವಿಶೇಷವಾದ ಪೂಜಾ ದಿವಸವನ್ನು ಸಂತೆಯ ದಿನವೆಂದು ಕರೆಯುವ ಸಂಪ್ರದಾಯವಿದೆ. ಸಂತೆಯಲ್ಲಿ ಕೃಷಿ ಉತ್ಪನ್ನಗಳಲ್ಲದೇ ಗೃಹಕೈಗಾರಿಕಾ ಉತ್ಪನ್ನಗಳು, ಕಚ್ಚಾ ಉತ್ಪನ್ನಗಳು, ಜವಳಿ, ಸಿದ್ಧವಸ್ತುಗಳು, ಪಾತ್ರೆ, ಕಿರಾಣಿ ಸಾಮಾನು, ಸಾಕು ಪ್ರಾಣಿಗಳು ಮಾರಾಟಕ್ಕೆ ಬರುತ್ತವೆ.  ಸಂತೆಗಳಲ್ಲಿ ದೊಡ್ಡ ಸಗಟು ವ್ಯಾಪಾರಿಗಳು ತಮ್ಮ ಪ್ರತಿನಿಧಿಗಳಾದ ದಲ್ಲಾಳಿಗಳ ಮೂಲಕ ಮಾರಾಟ ಖರೀದಿ ಚಟುವಟಿಕೆಗಳನ್ನು ನಡೆಸುತ್ತಾರೆ. ಅಲ್ಲದೆ, ಚಿಲ್ಲರೆ ವ್ಯಾಪಾರಿಗಳು ಮಾರಾಟ ಮಾಡುವ ವ್ಯವಸ್ಥೆ ಇರುತ್ತದೆ.  ವರ್ಷಕ್ಕೊಮ್ಮೆ  ಗಣೇಶೋತ್ಸವ ಮತ್ತು ವಿವಿಧ ಮತೀಯ ಧರ್ಮೀಯರು ಆಚರಿಸುವ ರಥೋತ್ಸವಗಳು ವ್ಯಾಪಾರಕ್ಕೆ ಅವಕಾಶ ಕಲ್ಪಿಸಿಕೊಡುತ್ತವೆ. ಹೀಗೆ ದೇವಾಲಯ, ಮಸೀದಿ, ಚರ್ಚುಗಳು ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿದ್ದು ಜೊತೆಗೆ ಅಲ್ಲಿ ನೆರೆಯುವ ಸಂತೆಯಿಂದಾಗಿ ವ್ಯಾಪಾರ ಕೇಂದ್ರವಾಗಿಯೂ ಮಹತ್ವ ಪಡೆದಿದ್ದು ಎಲ್ಲಾ ವರ್ಗದ ಜನರ ಸ್ನೇಹ ಸಹಕಾರ ಮತ್ತು ಸಹಬಾಳ್ವೆಗೆ ದಾರಿ ದೀಪವಾಗಿರುತ್ತದೆ. ಜಿಲ್ಲೆಯಲ್ಲಿ ಜರುಗುವ ಪ್ರಮುಖ ವಾರದಸಂತೆಗಳ ಪಟ್ಟಿಯನ್ನು ಮುಂದೆ ನೀಡಲಾಗಿದೆ.

| ಕ್ರ.ಸಂ | ತಾಲೂಕು | ಸಂತೆ ನಡೆಯುವ ಸ್ಥಳ | ಸಂತೆ ನಡೆಯುವ ದಿನ |
|---|---|---|---|
| ೧ | **ತುಮಕೂರು** | ಹೆಬ್ಬೂರು | ಶುಕ್ರವಾರ |
| | | ಹೊನ್ನುಡಿಕೆ | ಭಾನುವಾರ |
| | | ನಾಗವಲ್ಲಿ | ಮಂಗಳವಾರ |
| | | ಕ್ಯಾತಸಂದ್ರ | ಮಂಗಳವಾರ |
| | | ಮಲ್ಲಸಂದ್ರ | ಬುಧವಾರ |
| | | ಅಜ್ಜಗೊನಹಳ್ಳಿ | ಶುಕ್ರವಾರ |
| | | ಕೊಡಿಗೆಹಳ್ಳಿ | ಶನಿವಾರ |
| | | ಬ್ಯಾಲದಾರ | ಬುಧವಾರ |
| | | ಬೆಳ್ಳಾವೆ | ಸೋಮವಾರ |
| | | ಚಿಕ್ಕತೊಟ್ಲುಕೆರೆ | ಸೋಮವಾರ |
| | | ತುಮಕೂರು ನಗರ | ಸೋಮವಾರ, ಗುರುವಾರ |
| ೨ | **ಗುಬ್ಬಿ** | ಕಲ್ಲೂರು | ಗುರುವಾರ |
| | | ಮಾವಿನಹಳ್ಳಿ | ಶನಿವಾರ |
| | | ಕಲಘಟ್ಟಮ್ಮ ದೇವಸ್ಥಾನ | ಮಂಗಳವಾರ |
| | | ಚಂದ್ರಶೇಖರಪುರ | ಬುಧವಾರ |
| | | ಕಡಬ | ಭಾನುವಾರ |
| | | ನಿಟ್ಟೂರು | ಶುಕ್ರವಾರ |
| | | ಕೊಂಡ್ಲಿ | ಭಾನುವಾರ |
| | | ದೊಡ್ಡಗುಣಿ | ಬುಧವಾರ |
| | | ಬಿದರೆ | ಶುಕ್ರವಾರ |
| | | ಹಾಗಲವಾಡಿ | ಬುಧವಾರ |
| | | ಚೇಳೂರು | ಭಾನುವಾರ |
| | | ಗುಬ್ಬಿ ಪಟ್ಟಣ | – |
| ೩ | **ಕೊರಟಗೆರೆ** | ಅಕ್ಕಿರಾಂಪುರ | ಶನಿವಾರ |
| | | ಮಾವತ್ತೂರು | ಭಾನುವಾರ |
| | | ಇರಕಸಂದ್ರ | ಮಂಗಳವಾರ |
| | | ಎಲೆಕಾಮಪುರ | ಬುಧವಾರ |
| | | ತೋವಿನಕೆರೆ | ಶುಕ್ರವಾರ |
| | | ನಾಗೇನಹಳ್ಳಿ | ಶನಿವಾರ |
| ೪ | **ತಿಪಟೂರು** | ಕಿಬ್ಬನಹಳ್ಳಿ | ಗುರುವಾರ |
| | | ಬಿಳಿಗೆರೆ | ಗುರುವಾರ |
| | | ಹೊಂಗಲಕ್ಷ್ಮಿ ದೇವಸ್ಥಾನ | ಶುಕ್ರವಾರ |
| | | ನೊಣವಿನಕೆರೆ | ಬುಧವಾರ |
| | | ಕೊನೆಹಳ್ಳಿ | ಮಂಗಳವಾರ |
| | | ಕಾಳಮ್ಮನಗುಡ್ಡ | ಮಂಗಳವಾರ |
| | | ಹೊನ್ನವಳ್ಳಿ | ಬುಧವಾರ |
| | | ಹಾಲಕುರ್ಕೆ | ಬುಧವಾರ |
| | | ಬೆಸಿಗೆ | ಸೋಮವಾರ |
| | | ದಾಸರಿಘಟ್ಟ | ಬುಧವಾರ |
| | | ತಿಪಟೂರು ನಗರ | – |

| ಕ್ರ.ಸಂ | ತಾಲೂಕು | ಸಂತೆ ನಡೆಯುವ ಸ್ಥಳ | ಸಂತೆ ನಡೆಯುವ ದಿನ |
|---|---|---|---|
| ೫ | **ತುರುವೇಕೆರೆ** | ದಂಡಿನಶಿವರ | ಶುಕ್ರವಾರ |
| | | ಬಾಣಸಂದ್ರ | ಭಾನುವಾರ |
| | | ಸಂಪಿಗೆ | ಶನಿವಾರ |
| | | ಮಾಯಸಂದ್ರ | ಬುಧವಾರ |
| | | ಮಾವಿನಕೆರೆ | ಶುಕ್ರವಾರ |
| | | ವಿಠಲಪುರ | ಭಾನುವಾರ |
| | | ಕಣತ್ತೂರು | ಭಾನುವಾರ |
| | | ದಬ್ಬೆಘಟ್ಟ | ಶುಕ್ರವಾರ |
| | | ಅರೆಮಲ್ಲೇನಹಳ್ಳಿ | ಗುರುವಾರ |
| | | ಜೋಡಿಬೆನಕನಕೆರೆ | ಶುಕ್ರವಾರ |
| ೬ | **ಚಿಕ್ಕನಾಯಕನಹಳ್ಳಿ** | ಚಿಕ್ಕನಾಯಕನಹಳ್ಳಿ | – |
| | | ಹುಳಿಯಾರು | ಗುರುವಾರ |
| | | ಹಂದನಕೆರೆ | ಶನಿವಾರ |
| | | ಕಂದಿಕೆರೆ | ಮಂಗಳವಾರ |
| | | ಮತ್ತಿಘಟ್ಟ | ಶುಕ್ರವಾರ |
| | | ದೊಡ್ಡಹೆಣ್ಣಗೆರೆ | ಸೋಮವಾರ |
| | | ದಸೂಡಿ | ಗುರುವಾರ |
| ೭ | **ಕುಣಿಗಲ್** | ನಾಗಸಂದ್ರ | ಸೋಮವಾರ |
| | | ಹುತ್ರಿದುರ್ಗ | ಭಾನುವಾರ |
| | | ಹುಲಿಯೂರುದುರ್ಗ | ಗುರುವಾರ |
| | | ಕೊಡವಟ್ಟಿ | ಸೋಮವಾರ |
| | | ಉಜ್ಜನಿ | ಶುಕ್ರವಾರ |
| | | ಬ್ಯಾಡರಹಳ್ಳಿ (ಆರ್) | ಸೋಮವಾರ |
| | | ಅಮೃತೂರು | ಗುರುವಾರ |
| | | ಎಡೆಯೂರು | ಶುಕ್ರವಾರ |
| | | ಹೊನ್ನಮಾಚನಹಳ್ಳಿ | ಭಾನುವಾರ |
| | | ಯೂರೋನಹಳ್ಳಿ | ಭಾನುವಾರ |
| | | ಯಡವಣಿ | ಶುಕ್ರವಾರ |
| ೮ | **ಶಿರಾ** | ಕಳ್ಳಂಬೆಳ್ಳ | ಭಾನುವಾರ |
| | | ಚಿತ್ರಹಳ್ಳಿ | ಸೋಮವಾರ |
| | | ಬರಗೂರು | ಬುಧವಾರ |
| | | ತಾವರೆಕೆರೆ | ಶುಕ್ರವಾರ |
| | | ಹೊಸೂರು | ಬುಧವಾರ |
| | | ಬುಕ್ಕಪಟ್ಟಣ | ಬುಧವಾರ |
| | | ಹೊರಗೆರೆ | ಬುಧವಾರ |
| | | ಭೂತನಗುಡಿ | ಶನಿವಾರ |
| | | ಗುಳಿಗೇನಹಳ್ಳಿ | ಶುಕ್ರವಾರ |

| ಕ್ರ.ಸಂ | ತಾಲೂಕು | ಸಂತೆ ನಡೆಯುವ ಸ್ಥಳ | ಸಂತೆ ನಡೆಯುವ ದಿನ |
|---|---|---|---|
| | | ಹೊಸಕೆರೆ | ಸೋಮವಾರ |
| | | ಮಧುಗಿರಿ | ಬುಧವಾರ |
| | | ಬ್ಯಾಲ್ಯ | ಸೋಮವಾರ |
| | | ಇಟ್ಟಿಗ ದಿಬ್ಬನಹಳ್ಳಿ | ಶನಿವಾರ |
| | | ಜೋಡಿ ಇನಾಮಗರಾನಿ | ಗುರುವಾರ |
| ೯ | ಮಧುಗಿರಿ | ಮಿಡಿಗೇಶಿ | ಶನಿವಾರ |
| | | ನೇರಲಕೆರೆ | ಮಂಗಳವಾರ |
| | | ಕೊಡಿಗೆಹಳ್ಳಿ | ಗುರುವಾರ |
| | | ಎಲ್ಲುರ | ಸೋಮವಾರ |
| | | ದಂಡಿನದಿಬ್ಬ | ಶನಿವಾರ |
| | | ಬಡವನಹಳ್ಳಿ | ಸೋಮವಾರ |
| | | ವೆಂಕಟಾಪುರ | ಭಾನುವಾರ |
| | | ಚನ್ನಕೇಶವಪುರ | ಬುಧವಾರ |
| | | ತಿರುಮಣಿ | ಬುಧವಾರ |
| ೧೦ | ಪಾವಗಡ | ದೊಡ್ಡಹಳ್ಳಿ | ಶನಿವಾರ |
| | | ಮಂಗಳವಾಡ | ಬುಧವಾರ |
| | | ಹೊಸಕೋಟೆ | ಗುರುವಾರ |
| | | ಹರಿಹರಪುರ | ಭಾನುವಾರ |

**ಮೂಲ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತುಮಕೂರು**

## ಜಾತ್ರೆ–ತೇರು–ರಥೋತ್ಸವ

ಪ್ರಾಚೀನ ಕಾಲದಿಂದಲೂ ಜಿಲ್ಲೆಯ ಅನೇಕ ನಗರ, ಪಟ್ಟಣ, ತಾಲೂಕು ಕೇಂದ್ರ ಹಾಗೂ ಗ್ರಾಮಗಳಲ್ಲಿ ವರ್ಷಕ್ಕೊಮ್ಮೆ ತೇರು, ಜಾತ್ರೆ ಪರಿಷೆ ಮತ್ತು ರಥೋತ್ಸವಗಳು ಧಾರ್ಮಿಕ ಆಚರಣೆಯಾಗಿ ಎಲ್ಲಾ ಮತೀಯ ಧರ್ಮೀಯರ ಒಗ್ಗಟ್ಟಿನಿಂದ ನಿರಂತರವಾಗಿ ನಡೆಯುತ್ತಾ ಬಂದಿದೆ. ಗ್ರಾಮದೇವತೆಗಳ ರಥೋತ್ಸವ (ತೇರು), ಗೌರಿ ಗಣೇಶ ಉತ್ಸವ, ರಾಮನವಮಿ, ಸಂಕ್ರಾಂತಿ, ಹೋಳಿ ಆಚರಣೆ, ಶ್ರಾವಣ ಮಾಸ, ಯುಗಾದಿ, ಬಸವ ಜಯಂತಿ, ದಸರಾ, ದೀಪಾವಳಿ, ಕಾರ್ತೀಕ, ಮುಂತಾದ ಹಿಂದೂ ಸಂಪ್ರದಾಯದ ಹಬ್ಬಗಳಲ್ಲಿ; ಧಾರ್ಮಿಕ ಆಚರಣೆಯಾಗಿ ಸುಗ್ಗಿನಂತರ ಜರುಗುವ ದನಗಳ ಪರಿಷೆ ಅಥವಾ ಜಾನುವಾರು ಜಾತ್ರೆ, ಮುಸ್ಲಿಂ ಧರ್ಮದವರು ಆಚರಿಸುವ ಮೊಹರಂ, ಉರುಸ್, ಕ್ರೈಸ್ಥ ಧರ್ಮೀಯರ ಕ್ರಿಸ್‌ಮಸ್ ಆಚರಣೆ, ಜೈನರು, ಬೌದ್ಧಧರ್ಮಿಯರು ಆಚರಿಸುವ ಧಾರ್ಮಿಕ ಆಚರಣೆಗಳು, ಜಿಲ್ಲೆಯಲ್ಲಿವೆ. ಈ ಜಾತ್ರೆ ರಥೋತ್ಸವಗಳಲ್ಲಿ ಜನರು ಸಂಭ್ರಮ ಸಡಗರದಿಂದ ಭಾಗವಹಿಸಿ ದೇವರಿಗೆ ವಿಶೇಷವಾದ ಪೂಜೆಯೊಂದಿಗೆ ಕಾಣಿಕೆ, ಮುಡುಪು ಅರ್ಪಿಸುವ, ಮುಡಿಕೊಡುವ ಸಂಪ್ರದಾಯಗಳು ಸನಾತನ ಕಾಲದಿಂದ ನಿರಂತರವಾಗಿ ನಡೆಯುತ್ತಿವೆ. ಕೆಲವು ದೊಡ್ಡ ಜಾತ್ರೆಗಳು ವಾರದಿಂದ ೧೫ ಅಥವಾ ಒಂದು ತಿಂಗಳು ಜರುಗುತ್ತವೆ. ಇಂತಹ ಜಾತ್ರೆಗಳಲ್ಲಿ ಜನರು ತಮಗೆ ಬೇಕಾಗುವ ಬಟ್ಟೆ, ವಸ್ತ್ರ, ಒಡವೆ, ಪಾತ್ರೆಗಳು ಗೃಹ ಅಲಂಕಾರ ವಸ್ತುಗಳು ದೇವರ ವಿಗ್ರಹ ಮತ್ತು ಪೂಜಾ ಸಾಮಗ್ರಿಗಳನ್ನು ಕೊಂಡುಕೊಳ್ಳುತ್ತಾರೆ. ಇದೇ ಸಂದರ್ಭದಲ್ಲಿ ನಡೆಯುವ ಜಾನುವಾರು ಜಾತ್ರೆಯಲ್ಲಿ ರೈತರು ಜಾನುವಾರುಗಳನ್ನು ಮಾರುವ ಮತ್ತು ಕೊಳ್ಳುವ ವ್ಯಾಪಾರದಲ್ಲಿ ತೊಡಗಿರುತ್ತಾರೆ.

ಜಾತ್ರೆಗಳಲ್ಲಿ ಕೃಷಿ, ಕೈಗಾರಿಕೆ ಮತ್ತು ವಸ್ತುಪ್ರದರ್ಶನ, ಸರ್ಕಸ್, ಬಯಲಾಟ, ಕೀಲುಕುದುರೆ, ಜಾದೂವಿದ್ಯೆ, ಕೋಲಾಟ, ಡೊಳ್ಳುಕುಣಿತ, ಕುಸ್ತಿ, ವೀರಗಾಸೆ, ಜಾನಪದ ಕಲೆ, ನೃತ್ಯ, ಸಂಗೀತ, ನಾಟಕ, ಯಕ್ಷಗಾನ, ಮೊದಲಾದ ಸಾಂಸ್ಕೃತಿಕ ಮನೋರಂಜನಾ ಕಾರ್ಯಕ್ರಮಗಳು ಜನರಿಗೆ ಮನೋಲ್ಲಾಸ ನೀಡುತ್ತವೆ. ತುಮಕೂರು ನಗರದ ಕ್ಯಾತಸಂದ್ರದ ಸಿದ್ಧಗಂಗಾ ಮಠದ ಶ್ರೀಕ್ಷೇತ್ರದಲ್ಲಿ ಪ್ರತೀ ವರ್ಷ ಮಹಾಶಿವರಾತ್ರಿ ಸಂದರ್ಭದಲ್ಲಿ ವಿಜೃಂಭಣೆಯಿಂದ ಜರುಗುವ

ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಜಾತ್ರೆ ಮತ್ತು ದನಗಳ ಪರಿಷೆ ಉಲ್ಲೇಖಾರ್ಹ. ಅದರಲ್ಲೂ ಶತಾಯುಷಿ ಕರ್ನಾಟಕ ರತ್ನ, ಪರಮಪೂಜ್ಯ ಡಾ. ಶಿವಕುಮಾರ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ನಿರಂತರವಾಗಿ ನಡೆಯುತ್ತಿರುವ ತ್ರಿವಿಧ ದಾಸೋಹ, ಅಂತಾರಾಷ್ಟ್ರೀಯ ಮಟ್ಟದಲ್ಲಿ ನಾಡಿಗೇ ಕೀರ್ತಿ ತಂದಿದೆ. ಜಿಲ್ಲೆಯಲ್ಲಿ ನಡೆಯುವ ಪ್ರಮುಖ ಜಾತ್ರೆಗಳ ಪಟ್ಟಿಯನ್ನು ಅಧ್ಯಾಯ–೩ರಲ್ಲಿ ನೀಡಲಾಗಿದೆ.

## ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆ

ವ್ಯವಸಾಯದ ಅಭಿವೃದ್ಧಿಗೆ ಪೂರಕವಾದ ಹಲವಾರು ಆರ್ಥಿಕ ಅಂಶಗಳಲ್ಲಿ ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆಯು ಕಾರ್ಯರೂಪಕ್ಕೆ ಬರುವುದಕ್ಕಿಂತ ಪೂರ್ವದಲ್ಲಿ ರಾಜ್ಯದ ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ತಮ್ಮ ಕಣದಲ್ಲಿಯೇ ಅಥವಾ ಶ್ರೀಮಂತ ಜಮೀನ್ದಾರರು, ಸಾಹುಕಾರರು, ಊರಿನ ವ್ಯಾಪಾರಿಗಳಿಗೆ, ಮಧ್ಯವರ್ತಿ ದಲ್ಲಾಳಿಗಳಿಗೆ ಅಥವಾ ವಾರದ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ ಸಾಂಸ್ಥಿಕ ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯಗಳು ರೈತರಿಗೆ ದೊರಕದಿದ್ದರಿಂದ ಅವರು ತಮ್ಮ ಗ್ರಾಮದ ಸಾಹುಕಾರರಿಂದ ದುಬಾರಿ ಬಡ್ಡಿಯಲ್ಲಿ ಅಲ್ಪಾವಧಿ ಸಾಲ ಪಡೆದು ಸಾಲ ತೀರಿಸಲಾಗದ ಪರಿಸ್ಥಿತಿಯಲ್ಲಿ ಸುಗ್ಗಿ ಮುಗಿದ ತಕ್ಷಣವೇ ಸಾಹುಕಾರರಿಗೆ ಕಡಿಮೆ ಮತ್ತು ಮೋಸದ ತೂಕ ಮತ್ತು ಅಳತೆಗೆ ಕಡಿಮೆ ಬೆಲೆಗೆ ಕಣದಲ್ಲೆ ಮಾರುವ ಪರಿಸ್ಥಿತಿಯಲ್ಲಿದ್ದರು. ಇಂತಹ ಪರಿಸ್ಥಿತಿಯಿಂದ ರೈತರನ್ನು ರಕ್ಷಿಸುವ ಉದ್ದೇಶದಿಂದ ಅಂದಿನ ಕೇಂದ್ರ ಸರ್ಕಾರ ೧೯೨೭ರಲ್ಲಿ ಕೃಷಿಗೆ ಸಂಬಂಧಪಟ್ಟ ರಾಯಲ್ ಆಯೋಗವನ್ನು ನಿಯಮಿಸಿತು. ಆಯೋಗವು ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ನಿಯಂತ್ರಿತ ಮಾರುಕಟ್ಟೆಗಳ ಸ್ಥಾಪನೆಗೆ ಒತ್ತು ನೀಡಿತು. ರೈತರ ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಮತ್ತು ಮಾರಾಟದ ಅನುಕೂಲತೆಗಳನ್ನು ಒದಗಿಸಿಕೊಡುವ ಉದ್ದೇಶದಿಂದ ಕೃಷಿ ಉತ್ಪನ್ನ ಮಾರುಕಟ್ಟೆ ಕಾಯಿದೆಯನ್ನು ೧೯೩೯ರಲ್ಲಿ ಜಾರಿಗೊಳಿಸಿ, ೧೯೪೭ರಲ್ಲಿ ಕಾರ್ಯಾರಂಭ ಮಾಡಿತು.

## ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಮತ್ತು ಅಭಿವೃದ್ಧಿ ಕಾಯಿದೆ ೧೯೬೬ ಮತ್ತು ನಿಯಮ ೬೮

ಕೃಷಿ ಉತ್ಪನ್ನಗಳ ಮಾರಾಟಕ್ಕೆ ಹೆಚ್ಚಿನ ಸೌಲಭ್ಯ ಮತ್ತು ರಾಜ್ಯಾದ್ಯಂತ ನಿಯಂತ್ರಣ ವ್ಯವಸ್ಥೆಯಲ್ಲಿ ಏಕರೂಪತೆಯನ್ನು ತರುವ ಉದ್ದೇಶದಿಂದ ರಾಜ್ಯ ಪುನಾರಚನೆಯ ನಂತರ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಸಮಗ್ರ ಏಕೀಕೃತ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯಿದೆಯನ್ನು ೧೯೬೬ರಲ್ಲಿ ರಚಿಸಲಾಯಿತು. ಈ ಕಾಯಿದೆಯನ್ನು ಜಾರಿಗೆ ತರಲು ಅನುಕೂಲವಾಗುವಂತೆ ೧೯೬೮ರಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ನಿಯಮಗಳನ್ನು ರೂಪಿಸಲಾಯಿತು. ತುಮಕೂರು ಜಿಲ್ಲೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಆಡಳಿತವನ್ನು ನೋಡಿಕೊಳ್ಳಲು ೧೯೬೭ರಲ್ಲಿ ಜಿಲ್ಲಾ ಮಾರುಕಟ್ಟೆ ಅಧಿಕಾರಿ ಕಚೇರಿಯನ್ನು ಸ್ಥಾಪಿಸಲಾಯಿತು. ಇದರೊಂದಿಗೆ ಜಿಲ್ಲೆಯಲ್ಲಿ ೧೯೬೮ರಿಂದ ನಿಯಂತ್ರಿತ ಮಾರುಕಟ್ಟೆ ವಿದ್ಯುಕ್ತವಾಗಿ ಪ್ರಾರಂಭಗೊಂಡಿತು. ಈ ಕಾಯಿದೆಯ ಪ್ರಕಾರ ಕರ್ನಾಟಕ ಸರ್ಕಾರವು ೧೯೮೭ರಲ್ಲಿ ಜಿಲ್ಲಾಮಟ್ಟದ ಕಛೇರಿಗಳಿಗೆ 'ಕೃಷಿ ಮಾರಾಟ ಸಹಾಯಕ ನಿರ್ದೇಶಕರ ಕಚೇರಿ' ಎಂದು ಪುನರ್ ನಾಮಕರಣ ಮಾಡಿತು. ೧೯೮೭ರ ನಂತರ ಸಹಾಯಕ ನಿರ್ದೇಶಕರು ಕೃಷಿ ಉತ್ಪನ್ನ ಮಾರುಕಟ್ಟೆ ತುಮಕೂರು ಅವರಿಗೆ ಜಿಲ್ಲೆಯ ಮಾರಾಟ ವ್ಯವಸ್ಥೆಯ ಅಧಿಕಾರವನ್ನು ವಹಿಸಿತು.  ಕೇಂದ್ರ ಸರ್ಕಾರದ ಆಗ್‌ಮಾರ್ಕ್ ಕಾಯಿದೆ ಗ್ರೇಡಿಂಗ್ ಮತ್ತು ಮಾಕಿ(ಂಗ್), ಕರ್ನಾಟಕ ಉಗ್ರಾಣ ಕಾಯಿದೆ ೧೯೬೧ ಮತ್ತು ನಿಯಮಗಳು ೧೯೬೯ (ಲೈಸೆನ್ಸ್ ಮಂಜೂರಾತಿ) ಇವುಗಳನ್ನು ಕಾರ್ಯಾಚರಣೆಗೆ ತರಲಾಯಿತು. ಜಿಲ್ಲೆಯ ನಿಯಂತ್ರಿತ ಮಾರುಕಟ್ಟೆಯ ಕಾರ್ಯಗಳ ಉಸ್ತುವಾರಿ ನೋಡಿಕೊಳ್ಳಲು ರೈತರ ಪ್ರತಿನಿಧಿಗಳ ಸಾಮಾನ್ಯ ವರ್ಗಕ್ಕೆ ೧೧, ಪರಿಶಿಷ್ಟ ಜಾತಿಗೆ ೧, ಪರಿಶಿಷ್ಟ ವರ್ಗಕ್ಕೆ ೧, ಮಹಿಳಾ ವರ್ಗಕ್ಕೆ–೧, ಮತ್ತು ಹಿಂದುಳಿದ ವರ್ಗಕ್ಕೆ ೨ ಸ್ಥಾನ, ಓರ್ವ ಖರೀದಿದಾರ,  ಒಂದು ಸಹಕಾರಿ ಮಾರಾಟ ಸಂಘ, ಒಂದು ಸಹಕಾರಿ ಸಂಸ್ಕರಣ ಸಂಘ ಹಾಗೂ ಸರ್ಕಾರದ ಮಾರಾಟ ಇಲಾಖೆಯ ಅಧಿಕಾರಿಯೊಬ್ಬರು; ಹೀಗೆ ಒಟ್ಟು ೨೪ ಚುನಾಯಿತ ಸದಸ್ಯರು ಮತ್ತು ಸರ್ಕಾರದಿಂದ ನಾಮಕರಣಗೊಂಡ ೩ ಸದಸ್ಯರನ್ನೊಳಗೊಂಡಂತೆ ಒಂದು ಮಾರುಕಟ್ಟೆ ಸಮಿತಿಯನ್ನು ಪ್ರತೀ ಮಾರುಕಟ್ಟೆಯಲ್ಲಿಯೂ ರಚಿಸುವಂತೆ ಕಾಯಿದೆ ಅವಕಾಶ ಕಲ್ಪಿಸಿದೆ.  ಚುನಾಯಿತ ಸಮಿತಿಯ ಅವಧಿಯು ಐದು ವರ್ಷವಾಗಿದ್ದು, ಸಮಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ರೈತರ ಪ್ರತಿನಿಧಿಗಳಾಗಿರುತ್ತಾರೆ.  ಮಾರುಕಟ್ಟೆ ಸಮಿತಿಯು ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಾರಾಟ ವ್ಯವಸ್ಥೆಯನ್ನು ನಿಯಂತ್ರಿಸುವುದರಲ್ಲದೆ ಮಾರುಕಟ್ಟೆ ಆವರಣದಲ್ಲಿ ರಸ್ತೆ ಚರಂಡಿ

ವ್ಯವಸ್ಥೆ ದೀಪ, ನೀರು, ಹರಾಜುಕಟ್ಟೆ, ಶೌಚಾಲಯ ವ್ಯವಸ್ಥೆ, ಉಪಾಹಾರ ಗೃಹ, ರೈತಭವನ, ಬ್ಯಾಂಕುಗಳು, ದಾಸ್ತಾನು ವ್ಯವಸ್ಥೆ, ಶೀತಲಗೃಹ, ವಿಶ್ರಾಂತಿ ಗೃಹ, ವಾಚನಾಲಯ, ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ, ಉದ್ಯಾನವನ, ಮುಂತಾದ ಮೂಲಭೂತ ಸೌಕರ್ಯಗಳನ್ನು ಮತ್ತು ಕೃಷಿ ಉತ್ಪನ್ನಗಳ ವರ್ಗೀಕರಣ ಸೌಲಭ್ಯವನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.

ಜಿಲ್ಲೆಯ ಹತ್ತು ತಾಲೂಕುಗಳಿಗೆ ಒಳಪಡುವಂತೆ ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆಯ ಸ್ಥಾಪನೆ, ರಾಜ್ಯ ಉಗ್ರಾಣ ವ್ಯವಸ್ಥೆ, ಬ್ಯಾಂಕುಗಳಿಂದ ಹಣಕಾಸಿನ ವ್ಯವಸ್ಥೆ, ಕೃಷಿ ಉತ್ಪನ್ನಗಳನ್ನು ವಿವಿಧ ದರ್ಜೆಗಳಲ್ಲಿ ಗುಣಮಟ್ಟದ ಆಧಾರದಲ್ಲಿ ವರ್ಗೀಕರಣ, ಆಹಾರ ಧಾನ್ಯ ಸಂಸ್ಕರಣಾ ವ್ಯವಸ್ಥೆ, ಮೊದಲಾದ ಕೃಷಿ ಉತ್ಪನ್ನ ಮಾರಾಟದ ಸುಧಾರಣೆಗಳು, ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆಗೆ ಮಾರಾಟ ಮಾಡಲು, ರಾಜ್ಯ ಉಗ್ರಾಣಗಳಲ್ಲಿ ದಾಸ್ತಾನಾಗಿಡಲು ಸೌಕರ್ಯ, ಮೆಟ್ರಿಕ್ ಪದ್ಧತಿ ವಿದ್ಯುನ್ಮಾನ ತೂಕ ವ್ಯವಸ್ಥೆ ಮತ್ತು ಅಳತೆ, ಬ್ಯಾಂಕುಗಳಿಂದ ಮುಂಗಡ ಸಾಲ ಸವಲತ್ತು ಮೊದಲಾದ ಸೌಲಭ್ಯಗಳನ್ನು ರೈತರಿಗೆ ಒದಗಿಸುವುದು ಸುಗ್ಗಿಯ ನಂತರದ ಪ್ರಮುಖ ಕಾರ್ಯಗಳಾಗಿದ್ದು, ಇದರಿಂದಾಗಿ ಸಾಕಷ್ಟು ಸುಧಾರಣೆಗಳಾಗಿವೆ.

**ಮಾರುಕಟ್ಟೆ ಸಮಿತಿಯ ಮುಖ್ಯ ಆದಾಯದ ಮೂಲಗಳು:** ಮಾರುಕಟ್ಟೆ ಶುಲ್ಕ ಮತ್ತು ಪರವಾನಗಿ ಶುಲ್ಕಗಳು, ಆದಾಯದ ಮೂಲಗಳಾಗಿದ್ದು, ಮಾರುಕಟ್ಟೆ ಸಮಿತಿಯ ಎಲ್ಲಾ ಖರ್ಚು ವೆಚ್ಚಗಳನ್ನು ಇದರಿಂದ ಭರಿಸಲಾಗುತ್ತದೆ. ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯವಹರಿಸುವ ಮಾರುಕಟ್ಟೆ ವ್ಯಾಪಾರಸ್ಥರ ಮೇಲೆ ಪರವಾನಗಿ (ಲೈಸೆನ್ಸ್) ಶುಲ್ಕವನ್ನು ವಿಧಿಸಲಾಗುತ್ತದೆ. ಅಲ್ಲದೇ ಕೃಷಿ ಉತ್ಪನ್ನಗಳ ಖರೀದಿದಾರರಿಂದ ಉತ್ಪನ್ನಗಳ ಮೌಲ್ಯದ ಆಧಾರದ ಮೇಲೆ ಶೇ.೪ ರಿಂದ ೫ ಶುಲ್ಕ ಹಾಗೂ ಜಾನುವಾರುಗಳಿಗೆ ತಲಾ ರೂ. ಎರಡು ಅಥವಾ ಒಂದು ರೂ ಮಾರುಕಟ್ಟೆ ಶುಲ್ಕವನ್ನು ವಸೂಲಿ ಮಾಡಲಾಗುತ್ತಿತ್ತು.

**ನಿಯಂತ್ರಿತ ಸರಕುಗಳು:** ಸಾಮಾನ್ಯವಾಗಿ ಮಾರುಕಟ್ಟೆ ಕ್ಷೇತ್ರದಲ್ಲಿ ಕೃಷಿ ಉತ್ಪನ್ನಗಳ ಸಮೀಕ್ಷೆ ನಡೆಸಿದ ಮೇಲೆ ಆ ಕ್ಷೇತ್ರದಲ್ಲಿ ಬೆಳೆದ ಕೃಷಿ ಉತ್ಪನ್ನಗಳಲ್ಲಿ ಪ್ರಮುಖವಾದವು ನಿಯಂತ್ರಣಕ್ಕೊಳಪಡುತ್ತವೆ. ಅಲ್ಲದೆ, ಕಾಲಕಾಲಕ್ಕೆ ಹೊಸಹುಟ್ಟುವಳಿಗಳನ್ನು ಸಹ ನಿಯಂತ್ರಣ ಕಾಯಿದೆಯ ವ್ಯಾಪ್ತಿಗೆ ತರಲಾಗುತ್ತದೆ. ತುಮಕೂರು ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಸರ್ಕಾರದ ಅಧಿಸೂಚನೆ ದಿನಾಂಕ ೨೯-೧೦-೨೦೦೧ರ ಅನ್ವಯ ಒಟ್ಟು ೧೨೦ ಕೃಷಿ ಉತ್ಪನ್ನಗಳನ್ನು ನಿಯಂತ್ರಣಕ್ಕೊಳಪಡಿಸಲಾಗಿದೆ. ಅವುಗಳಲ್ಲಿ ಕೊಬ್ಬರಿ, ತೆಂಗು, ಅಡಿಕೆ, ಬತ್ತ ಅಕ್ಕಿ, ರಾಗಿ, ಜೋಳ, ಸಜ್ಜೆ, ನವಣೆ, ಸೂರ್ಯಕಾಂತಿ, ಶೇಂಗಾ, ಸೀಗೇಕಾಯಿ, ಕಡಲೆಕಾಯಿ, ಎಳ್ಳು, ಜೋಳ, ಮೆಕ್ಕೇಜೋಳ, ಹುಣಸೆಹಣ್ಣು, ಒಣಮೆಣಸಿನಕಾಯಿ, ಬೆಲ್ಲ, ಬಾಳೆಹಣ್ಣು, ಬಾಳೆಕಾಯಿ, ಮಾವಿನಹಣ್ಣು, ದಿನಸಿ ಪದಾರ್ಥಗಳು, ಸಾಂಬಾರ, ದ್ವಿದಳ ಧಾನ್ಯಗಳು, ಹುಚ್ಚೆಳ್ಳು, ಹುರುಳಿ, ಹೊಂಗೇಬೀಜ, ದನಿಯಾ, ಹರಳು, ಬೇವಿನಬೀಜ, ಹಿಪ್ಪೆಬೀಜ, ಮುಂತಾದವು ಪ್ರಮುಖ ಕೃಷಿ ಉತ್ಪನ್ನಗಳಾಗಿವೆ. ಅಲ್ಲದೇ ಜಾನುವಾರುಗಳು, ಮರಮುಟ್ಟು ಮುಂತಾದವೂ ಸೇರುತ್ತವೆ.

**ನಿಯಂತ್ರಿತ ಮಾರುಕಟ್ಟೆ:** ಸ್ವಾತಂತ್ರ್ಯಪೂರ್ವದಲ್ಲಿ ಮೈಸೂರು ಸರ್ಕಾರ ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆ ಕಾಯಿದೆಯನ್ನು ೧೯೩೯ರಲ್ಲಿ ಜಾರಿಗೊಳಿಸಿತು. ಇದು, ೧೯೪೭ರಿಂದ ಜಿಲ್ಲೆಯಲ್ಲಿ ಕಾರ್ಯಾರಂಭ ಮಾಡಿತು. ಮುಂದೆ, ನಿಯಂತ್ರಿತ ಮಾರುಕಟ್ಟೆಯನ್ನು ೧೯೪೮ರಲ್ಲಿ ತಿಪಟೂರಿನಲ್ಲಿ, ೧೯೫೨ರಲ್ಲಿ ತುಮಕೂರಿನಲ್ಲಿ, ೧೯೫೬ರಲ್ಲಿ ಶಿರಾದಲ್ಲಿ, ೧೯೫೯ರಲ್ಲಿ ತುರುವೇಕೆರೆಯಲ್ಲಿ, ಮತ್ತು ೧೯೬೧ ರಲ್ಲಿ ಜಿಲ್ಲೆಯ ಇತರ ತಾಲೂಕುಗಳಲ್ಲದೆ ಹುಳಿಯಾರಿನಲ್ಲೂ ಸ್ಥಾಪಿಸಲಾಯಿತು. ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಮಾರುಕಟ್ಟೆ ಸಮಿತಿಯನ್ನು ಸ್ಥಾಪಿಸುವುದರ ಜೊತೆಗೆ ರೈತರ ಕೃಷಿ ಉತ್ಪನ್ನಗಳನ್ನು ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಗೆ ಒಳಪಡಿಸುವುದು, ಉತ್ತಮ ಬೆಲೆಗೆ ಮಾರಾಟ ಮಾಡುವುದು; ಮಂಡಿ ವರ್ತಕರು ಹಾಗೂ ಮಧ್ಯವರ್ತಿ ದಲ್ಲಾಳಿಗಳು ಅನಾವಶ್ಯಕವಾಗಿ ವಿಧಿಸಿ ಸಂಗ್ರಹಿಸುತ್ತಿದ್ದ ಕಾನೂನುಬಾಹಿರ ಶುಲ್ಕ, ದಾನ, ದತ್ತಿ, ದೇಣಿಗೆ ಮತ್ತು ಕಮಿಷನ್‌ಗಳನ್ನು ರದ್ದುಗೊಳಿಸಲಾಯಿತು. ಇಂತಹ ಅನುಕೂಲಕರ ವ್ಯವಸ್ಥೆ ಮತ್ತು ಲಾಭದಾಯಕ ವ್ಯಾಪಾರದಿಂದ ರೈತರಿಗೆ ನಿಯಂತ್ರಿತ ಮಾರುಕಟ್ಟೆಗಳು ಉತ್ತಮ ಭರವಸೆ ನೀಡಿವೆ.

**ತುಮಕೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ:** ತುಮಕೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ತನ್ನ ಕಾರ್ಯ ನಿರ್ವಹಣೆಯನ್ನು ದಿ. ೦೧-೦೪-೧೯೫೭ರಿಂದ ಪ್ರಾರಂಭಿಸಿದ್ದು, ಇದರ ಕಾರ್ಯವ್ಯಾಪ್ತಿಯು ತುಮಕೂರು ಮತ್ತು ಕೊರಟಗೆರೆ ತಾಲೂಕುಗಳನ್ನು ಒಳಗೊಂಡಿರುತ್ತದೆ. ಕ್ಯಾತ್ಸಂದ್ರ, ಅಕ್ಕಿರಾಂಪುರ, ಕೊರಟಗೆರೆ, ಸಿದ್ಧಿವಿನಾಯಕ ತರಕಾರಿ ಉಪಮಾರುಕಟ್ಟೆ, ಮಂಡೀಪೇಟೆ ತುಮಕೂರು ಮತ್ತು ಅಂತರಸನಹಳ್ಳಿ ಉಪಮಾರುಕಟ್ಟೆಯಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ರೂ.೩೫೦ ಲಕ್ಷಗಳಲ್ಲಿ ಸುಸಜ್ಜಿತ ಕಂಪ್ಯೂಟರೀಕೃತ ಹೂ-ಹಣ್ಣು ಮತ್ತು ತರಕಾರಿ ಮಾರುಕಟ್ಟೆಯನ್ನು ಸಹ ನಿರ್ಮಿಸಲಾಗಿದೆ. ಈ ಮಾರುಕಟ್ಟೆ ಪ್ರಾಂಗಣದಲ್ಲಿ ವರ್ತಕರಿಗೆ ೨೫೦ ಮಳಿಗೆಗಳನ್ನು ಹಂಚಿದೆ.

ಮಾರುಕಟ್ಟೆ ಸಮಿತಿಯು ಹಮಾಲರಿಗೆ ವಿಮಾ ಯೋಜನೆ; ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ ಮತ್ತು ರೈತರ ಕೃಷಿ ಉತ್ಪನ್ನಗಳಿಗೆ ಮುಂಗಡವಾಗಿ ಸಾಲ ನೀಡಿಕೆ ಮುಂತಾದವನ್ನು ಒದಗಿಸಿದೆ. ಸರ್ಕಾರವು ನಿಗದಿಪಡಿಸಿದ ಬೆಂಬಲ ಬೆಲೆಯಲ್ಲಿ ಆಯ್ದ ಕೃಷಿ ಉತ್ಪನ್ನಗಳನ್ನು ಖರೀದಿಸಿ ರೈತರಿಗೆ ಸಮಾಧಾನಕರವಾದ ಬೆಲೆಯನ್ನು ಒದಗಿಸುತ್ತಿದೆ. ಸರ್ಕಾರವು ರೈತರ ಹಿತರಕ್ಷಣೆಗಾಗಿ ಸ್ಥಾಪಿಸಿರುವ ಆವರ್ತನ ನಿಧಿಗೆ ಸಮಿತಿಯು ೨೦೦೭-೦೮ನೇ ಸಾಲಿನಲ್ಲಿ ರೂ. ೨೦,೪೮,೦೦೦ ಗಳನ್ನು ಪಾವತಿಸಿರುತ್ತದೆ. ಸರ್ಕಾರದ ಬೆಂಬಲ ಬೆಲೆಯಲ್ಲಿ ಕೊಬ್ಬರಿ, ರಾಗಿ, ಬತ್ತ, ಜೋಳ ಮತ್ತು ಇತರ ಪ್ರಮುಖ ಉತ್ಪನ್ನಗಳ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಕೃಷಿ ಉತ್ಪನ್ನಗಳ ಮಾರಾಟದಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ 'ಇ-ಟೆಂಡರಿಂಗ್' ಪದ್ಧತಿಯನ್ನು ಜಾರಿಗೆ ತಂದಿದೆ. ರೈತರು ರಾಜ್ಯದ ವಿವಿಧ ಮಾರುಕಟ್ಟೆಗಳಲ್ಲಿ ಪ್ರತೀದಿನ ಇರುವ ಕೃಷಿ ಉತ್ಪನ್ನಗಳ ದರಗಳ ಸಮಿತಿಯು ದೂರದರ್ಶನದಲ್ಲಿ ಧಾರಣೆಗಳ ಮಾಹಿತಿಯನ್ನು ಪ್ರದರ್ಶಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಸಮಿತಿಯು ಟೆಂಡರ್ ಪದ್ಧತಿಯಲ್ಲಿ ಹುಣಸೇಹಣ್ಣು, ಸೀಗೆಕಾಯಿ, ಕಡಲೆಕಾಯಿ, ಹೊಂಗೇಬೀಜ, ಹುಚ್ಚೆಳ್ಳು, ಹರಳು, ಬೇವಿನಬೀಜ, ಹಿಪ್ಪೆಬೀಜ ಮತ್ತು ಅಚ್ಚೆಳ್ಳು ಮಾರಾಟ ಮಾಡುತ್ತಿದೆ. ಬಹಿರಂಗ ಹರಾಜಿನಲ್ಲಿ ತೆಂಗಿನಕಾಯಿ, ಮೆಣಸಿನ ಕಾಯಿ ಮತ್ತು ಇತರ ಉತ್ಪನ್ನಗಳನ್ನು ಪರಸ್ಪರ ಒಪ್ಪಂದದಿಂದ ಮಾರಾಟ ಮಾಡುತ್ತಿದೆ. ಈ ಉತ್ಪನ್ನಗಳಲ್ಲಿ ಬಹುಪಾಲು ತಮಿಳು ನಾಡು, ಕೇರಳ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲದೇ ಉತ್ತರ ಭಾರತದ ರಾಜ್ಯಗಳಿಗೂ ರವಾನೆಯಾಗುತ್ತಿದೆ. ಹೆಚ್ಚಿನ ವಿವರಕ್ಕೆ ಮುಂದಿನ ಕೋಷ್ಟಕ ೬.೨೨ ಹಾಗೂ ೬.೨೩ ಗಳನ್ನು ನೋಡಿ.

**ಕೋಷ್ಟಕ ೬.೨೨ : ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವಿವರ**

| ಕ್ರ.ಸಂ | ಮುಖ್ಯ ಮಾರುಕಟ್ಟೆ ಸಮಿತಿ ಹೆಸರು | ಮಾರುಕಟ್ಟೆ ಸಮಿತಿಯ ಕಾರ್ಯವ್ಯಾಪ್ತಿ | ಉಪ ಮಾರುಕಟ್ಟೆಗಳು |
|---|---|---|---|
| ೧ | ತುಮಕೂರು | ತುಮಕೂರು ತಾ.<br>ಕೊರಟಗೆರೆ ತಾ. | ಅಕ್ಕಿರಾಂಪುರ, ಕೊರಟಗೆರೆ, ಕ್ಯಾತ್ಸಂದ್ರ, ಸಿದ್ಧಿವಿನಾಯಕ ತರಕಾರಿ ಉಪಮಾರುಕಟ್ಟೆ, ಅಂತರಸನಹಳ್ಳಿ ಹಣ್ಣು ತರಕಾರಿ ಉಪ ಮಾರುಕಟ್ಟೆ |
| ೨ | ತುರುವೇಕೆರೆ | ತಾಲೂಕು ವ್ಯಾಪ್ತಿ | |
| ೩ | ಚಿಕ್ಕನಾಯಕನಹಳ್ಳಿ | ತಾಲೂಕು ವ್ಯಾಪ್ತಿ | |
| ೪ | ಮಧುಗಿರಿ | ತಾಲೂಕು ವ್ಯಾಪ್ತಿ | |
| ೫ | ಶಿರಾ | ತಾಲೂಕು ವ್ಯಾಪ್ತಿ | |
| ೬ | ಪಾವಗಡ | ತಾಲೂಕು ವ್ಯಾಪ್ತಿ | |
| ೭ | ಗುಬ್ಬಿ | ಗುಬ್ಬಿ | ನಿಟ್ಟೂರು, ಚೇಳೂರು, ಚಂದ್ರಶೇಖರಪುರ, ಹೊಸಕೆರೆ, ಕೆ.ಜಿ. ಟೆಂಪಲ್ |
| ೮ | ಕುಣಿಗಲ್ | ತಾಲೂಕು ವ್ಯಾಪ್ತಿ | |
| ೯ | ತಿಪಟೂರು | ತಾಲೂಕು ವ್ಯಾಪ್ತಿ | |
| ೧೦ | ಕೊರಟಗೆರೆ | ತಾಲೂಕು ವ್ಯಾಪ್ತಿ | |

**ಕೊಷ್ಟಕ ೬.೨೩ : ೨೦೦೧-೦೨ ರಿಂದ ೨೦೦೮-೦೯ನೇ ಸಾಲಿನವರೆಗೆ ರೈತ ಸಂಜೀವಿನಿ ವಿಮಾ ಯೋಜನೆಯಡಿ ಪಾವತಿಸಿರುವ ವಿಮಾ ಪರಿಹಾರದ ವಿವರ**

| ಕ್ರ.ಸಂ | ವರ್ಷ | ಫಲಾನುಭವಿಗಳ ಸಂಖ್ಯೆ | ವಿಮಾ ಪರಿಹಾರದ ಮೊತ್ತ |
|---|---|---|---|
| ೧ | ೨೦೦೧-೦೨ | ೪ | ೧,೦೦,೦೦೦ |
| ೨ | ೨೦೦೨-೦೩ | ೮ | ೧,೦೨,೦೦೦ |
| ೩ | ೨೦೦೩-೦೪ | ೮ | ೨,೦೦,೦೦೦ |
| ೪ | ೨೦೦೪-೦೫ | ೯ | ೨,೨೫,೦೦೦ |
| ೫ | ೨೦೦೫-೦೬ | ೨ | ೫೦,೦೦೦ |
| ೬ | ೨೦೦೬-೦೭ | ೪ | ೧,೦೦,೦೦೦ |
| ೭ | ೨೦೦೭-೦೮ | ೧೪ | ೫,೨೫,೦೦೦ |
| ೮ | ೨೦೦೮-೦೯ | ೧೩ | ೬,೫೦,೦೦೦ |

**ಮುಖ್ಯ ಮಾರುಕಟ್ಟೆ ಆವರಣದಲ್ಲಿ ಒದಗಿಸಿರುವ ಸೌಲಭ್ಯಗಳು**

ಆಡಳಿತ ಕಚೇರಿ, (ಟೆಂಡರ್ ಭವನ) ಅತಿಥಿಗೃಹ, ರೈತರ ವಿಶ್ರಾಂತಿ ಭವನ, ಉಪಾಹಾರ ಗೃಹ, ಪಶುವೈದ್ಯ ಶಾಲೆ ಕಟ್ಟಡ, ವೇ-ಬ್ರಿಡ್ಜ್, ಬೀದಿ ದೀಪಗಳು, ನೀರಿನ ಸೌಲಭ್ಯಗಳು, ಡಾಂಬರು ರಸ್ತೆಗಳು, ಸೋಡಿಯಂ ವೇಪರ್ ಲ್ಯಾಂಪ್‌ಗಳು, 'ಎ' ಮಾದರಿ ಗೋದಾಮುಗಳು, 'ಬಿ' ಮಾದರಿ ಗೋದಾಮುಗಳು, 'ಸಿ' ಮಾದರಿ ಗೋದಾಮುಗಳು, ಹರಾಜು ಕಟ್ಟೆಗಳು, ಸುಲಭ ಶೌಚಾಲಯಗಳು, ಚರಂಡಿ ಮತ್ತು ಸೇತುವೆಗಳು, ನೆರಳಿನ ಗಿಡಗಳು, ನೀರಿನ ತೊಟ್ಟಿಗಳು, ದನದ ಕೊಟ್ಟಿಗೆ, ರೈತರಿಗೆ ಅಡಮಾನ ಸಾಲ ಯೋಜನೆ, ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ, ಕಡು ಬಡವರಿಗೆ ಜನಶ್ರೀ ವಿಮಾ ಯೋಜನೆ ಮುಂತಾದವನ್ನು ಒದಗಿಸಲಾಗಿದೆ.

**ರೈತ ಸಂಜೀವಿನಿ:** ಮಾರುಕಟ್ಟೆ ಸಮಿತಿಗೆ ಒಳಪಟ್ಟ ಪ್ರತಿಯೊಬ್ಬ ರೈತ, ನೌಕರ, ಹಮಾಲಿಗೆ ಅಗತ್ಯ ಸಂದರ್ಭದಲ್ಲಿ ರೂ. ೫೦,೦೦೦-೦೦ ಪರಿಹಾರ ನೀಡಲಾಗುತ್ತಿದೆ. ವಿವರಗಳಿಗೆ ಕೋಷ್ಟಕ ೬.೨೪ ರಿಂದ ಕೋಷ್ಟಕ ೬.೩೦ ರವರೆಗೆ ನೋಡಿ.

**ಕೋಷ್ಟಕ ೬.೨೪: ತುಮಕೂರು ಮಾರುಕಟ್ಟೆ, ತುಮಕೂರು (೦೧-೦೪-೨೦೦೬ ರಿಂದ ೩೧-೦೩-೨೦೦೭)**

| ಕ್ರ. ಸಂ | ಸಂತೆ ನಡೆಯುವ ಊರಿನ ಹೆಸರು | ಜಿಲ್ಲೆ | ತಾಲೂಕು | ಹೋಬಳಿ | ಸಂತೆ ನಡೆಯುವ ದಿನಾಂಕ | ಒದಗಿಸಿರುವ ಸೌಲಭ್ಯಗಳು |
|---|---|---|---|---|---|---|
| ೧ | ನಾಗವಲ್ಲಿ | ತುಮಕೂರು | ತುಮಕೂರು | ಗೂಳೂರು | ಭಾನುವಾರ | ಹರಾಜು ಕಟ್ಟೆ |
| ೨ | ಹೆಬ್ಬೂರು | ತುಮಕೂರು | ತುಮಕೂರು | ಹೆಬ್ಬೂರು | ಗುರುವಾರ | ಇಲ್ಲ |
| ೩ | ಬೆಳ್ಳಾವಿ | ತುಮಕೂರು | ತುಮಕೂರು | ಬೆಳ್ಳಾವೆ | ಗುರುವಾರ | ಇಲ್ಲ |
| ೪ | ಕೆಸ್ತೂರು | ತುಮಕೂರು | ತುಮಕೂರು | ಕೋರಾ | ಶುಕ್ರವಾರ | ಆಡಳಿತ ಕಚೇರಿ |
| ೫ | ಕೊರಟಗೆರೆ | ತುಮಕೂರು | ತುಮಕೂರು | ಕೊರಟಗೆರೆ | ಸೋಮವಾರ | ಇಲ್ಲ |
| ೬ | ತೋವಿನಕೆರೆ | ತುಮಕೂರು | ತುಮಕೂರು | ತೋವಿನಕೆರೆ | ಬುಧವಾರ | ೨ ಹರಾಜು ಕಟ್ಟೆ, ಕುಡಿಯುವ ನೀರು, ತಂತಿಬೇಲಿ |
| ೭ | ಅಕ್ಕಿರಾಂಪುರ | ತುಮಕೂರು | ತುಮಕೂರು | | ಪ್ರತಿ ಶನಿವಾರ | |
| ೮ | ಕ್ಯಾತ್ಸಂದ್ರ | ತುಮಕೂರು | ತುಮಕೂರು | | ಮಂಗಳವಾರ | |

### ಕೋಷ್ಟಕ ೬.೨೫: ಸಗಟು ವ್ಯವಹಾರ ನಡೆಯುವ ಸಂತೆಗಳ ವಿವರಣಾ ಪಟ್ಟಿ (೦೧-೦೪-೨೦೦೬ ರಿಂದ ೩೧-೦೩-೨೦೦೭)

| ಕ್ರ. ಸಂ | ಸಂತೆ ನಡೆಯುವ ಊರಿನ ಹೆಸರು | ಬರೇ ಸಗಟು ವ್ಯವಹಾರ ನಡೆಯುವ ವ್ಯವಸಾಯೋತ್ಪನ್ನಗಳ (ಹುಟ್ಟುವಳಿ)ಹೆಸರು | ಒದಗಿಸಿರುವ ಸೌಲಭ್ಯಗಳು |
|---|---|---|---|
| ೧ | ತುಮಕೂರು | ಕಡಲೇಕಾಯಿ, ಹುಣಸೇಹಣ್ಣು, ಸೀಗೆಕಾಯಿ, ಹೊಂಗೆಬೀಜ, ರಾಗಿ, ಜೋಳ, ಬತ್ತ, ಹುರುಳಿ, ಹುಚ್ಚೆಳ್ಳು, ಮೆಕ್ಕೆಜೋಳ, ತೆಂಗಿನಕಾಯಿ, ಒಣಮೆಣಸಿನಕಾಯಿ, ಈರುಳ್ಳಿ, ಆಲೂಗಡ್ಡೆ, ದನಿಯಾ, ಹರಳು ಮತ್ತು ಇತರೆ ಎಲ್ಲಾ ಕೃಷಿ ಉತ್ಪನ್ನಗಳು. | ಹರಾಜುಕಟ್ಟೆ, ಕುಡಿಯುವ ನೀರು, ಆಡಳಿತಕಚೇರಿ, ಉಪಾಹಾರ ಗೃಹ, ರೈತ ಭವನ, ಅತಿಥಿಗೃಹ, ಗಣಕಯಂತ್ರ ವ್ಯವಸ್ಥೆ, ಹರಾಜು ಭವನ, ಶೌಚಾಲಯ, ಡಾಂಬರೀಕರಣ, ರಸ್ತೆಗಳು, ಬ್ಯಾಂಕುಗಳು, ಪೋಸ್ಟ್‌ಆಫೀಸ್, ಎಲ್ಲಾ ರಸ್ತೆಗಳಿಗೂ ಸ್ಪೀಕರ್ ವ್ಯವಸ್ಥೆ ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. |

### ಕೋಷ್ಟಕ ೬.೨೬: ೨೦೦೮-೦೯ನೇ ಸಾಲಿನಲ್ಲಿ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಕಾರ್ಯನಿರತರಾಗಿದ್ದ ಮಾರುಕಟ್ಟೆ ಕಾರ್ಯಕರ್ತರ ವಿವರ, (ಸಂಖ್ಯೆಗಳಲ್ಲಿ)

| ಕ್ರ.ಸಂ | ಮಾರುಕಟ್ಟೆ ಸಮಿತಿ | ವರ್ತಕರು | ಚಿಲ್ಲರೆ ವರ್ತಕರು | ದಲ್ಲಾಳಿಗಳು | ಹಂಗಾಮಿ ವರ್ತಕರು | ಆಮದು-ದಾರರು | ರಫ್ತುದಾರರು | ಪ್ರೊಸೆಸರ್ಸ್ | ಬ್ರೋಕರ್ಸ್ | ಪ್ರೆಸರ್ಸ್ | ತೂಕದವರು | ಹಮಾಲಿಗಳು | ಗಾಡಿಯವರು | ಸಾರಿಗೆಯವರು | ಉಗ್ರಾಣ ಪಾಲಕರು | ದಾಸ್ತಾನು-ದಾರರು | ಜಿನ್ನರ್ಸ್ | ಕ್ರಷರ್ಸ್ |
|---|---|---|---|---|---|---|---|---|---|---|---|---|---|---|---|---|---|---|
| ೧ | ಕೃ.ಉ. ಮಾ.ಸ ತುಮಕೂರು | ೪೭೦ | | ೫೦೮ | ೯ | ೩೪೯ | ೩೩೯ | ೮೭ | ೫ | – | ೨೩ | ೫೧ | – | ೩ | ೨ | ೨೦೭ | ೯ | ೮ |

### ಕೋಷ್ಟಕ ೬.೨೭: ೨೦೦೧-೦೨ ರಿಂದ ೨೦೦೮-೦೯ನೇ ಸಾಲಿನವರೆಗಿನ ಆದಾಯ ವೆಚ್ಚ, ಉಳಿತಾಯದ ವಿವರ

| ಕ್ರ. ಸಂ | ವರ್ಷ | ಆದಾಯ | ವೆಚ್ಚ | ಉಳಿತಾಯ | ಮಾರುಕಟ್ಟೆ ಶುಲ್ಕ | ಲೈಸೆನ್ಸ್ ಶುಲ್ಕ | ಇತರೆ ಆದಾಯ | ಒಟ್ಟು |
|---|---|---|---|---|---|---|---|---|
| ೧ | ೨೦೦೧-೦೨ | ೧೨೮೨೭೮೭೫ | ೯೨೫೩೧೦೪ | ೩೫೭೪೭೨೧ | ೧೦೫೧೦೨೯ | ೩೧೧೧೮೦ | ೨೦೦೬೪೨೬ | ೧೨೮೨೭೮೨೫ |
| ೨ | ೨೦೦೨-೦೩ | ೨೧೭೨೮೪೭೯ | ೭೩೮೮೭೫೦ | ೧೪೩೩೯೭೨೯ | ೧೬೨೮೨೧೧೧ | ೨೨೦೧೨೦ | ೫೨೨೬೨೪೮ | ೨೧೭೨೮೪೭೯ |
| ೩ | ೨೦೦೩-೦೪ | ೧೬೩೫೮೬೮೧ | ೧೭೪೭೦೪೬೦ | ೧೧೧೧೭೭೬ (ಕೊರತೆ) | ೧೨೯೫೮೮೨೪ | ೨೯೫೨೬೫ | ೩೧೦೪೫೯೨ (ಕೊರತೆ) | ೧೬೩೫೮೬೮೧ |
| ೪ | ೨೦೦೪-೦೫ | ೧೧೭೯೫೩೪೭ | ೮೨೧೪೭೬೨ | ೩೫೮೦೫೮೫ | ೯೧೩೬೦೩೬ | ೩೭೫೦೧೦ | ೨೨೮೬೩೦೧ | ೧೧೭೯೫೩೪೭ |

| | | | | | | | | |
|---|---|---|---|---|---|---|---|---|
| ೫ | ೨೦೦೫-೦೬ | ೧೪೭೩೯೭೪ | ೧೦೧೧೫೨೧೮ | ೪೬೨೨೭೫೬ | ೧೯೨೭೨೦೨ | ೩೧೬೭೬೫ | ೨೪೯೪೫೦೭ | ೧೪೭೩೯೭೪ |
| ೬ | ೨೦೦೬-೦೭ | ೨೧೦೩೫೭೯ | ೧೨೧೩೬೦೪೩ | ೮೮೯೬೭೬ | ೧೬೮೨೫೬೯ | ೩೦೮೯೩೫ | ೩೯೦೧೧೦೫ | ೨೧೦೩೫೭೯ |
| ೭ | ೨೦೦೭-೦೮ | ೨೭೨೫೩೪೧೬ | ೧೫೪೪೦೨೪೩ | ೧೧೮೧೩೧೭೩ | ೨೨೫೬೭೯೫೮ | ೩೩೯೪೪೩ | ೪೩೫೧೦೧೫ | ೨೭೨೫೩೪೧೬ |
| ೮ | ೨೦೦೮-೦೯ | ೩೯೯೦೩೫೫೧ | ೨೨೨೭೧೦೬೩ | ೧೭೬೩೨೪೮೮ | ೩೨೩೯೭೨೩೭ | ೨೮೮೮೩೨೫ | ೪೬೧೭೮೯ | ೩೯೯೦೩೫೫೧ |

ಆಧಾರ: ಕೃಷಿ ಉತ್ಪನ್ನ ಮಾರುಕಟ್ಟೆ ನಿಯಮಿತ, ತುಮಕೂರು

## ಕೋಷ್ಟಕ ೬.೨೮; ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ತುಮಕೂರು

| ಕ್ರ.ಸಂ | ಹುಟ್ಟುವಳಿಯ ಹೆಸರು | ೨೦೦೦-೨೦೦೧ | | ೨೦೦೫-೨೦೦೬ | | ೨೦೦೮-೨೦೦೯ | |
|---|---|---|---|---|---|---|---|
| | | ಅವಕ (ಕ್ವಿಂಟಾಲ್) | ಮೌಲ್ಯ (ಲಕ್ಷ ರೂ.) | ಅವಕ (ಕ್ವಿಂಟಾಲ್) | ಮೌಲ್ಯ (ಲಕ್ಷ ರೂ.) | ಅವಕ (ಕ್ವಿಂಟಾಲ್) | ಮೌಲ್ಯ (ಲಕ್ಷ ರೂ.) |
| ೧ | ಕಡಲೆಕಾಯಿ (ಕ್ವಿ) | ೫೫೮೭೩ | ೬೯೮೪೧೩೦೦ | ೬೬೨೫ | ೮೯೪೩೭೫೦ | ೩೧೦೧೦೦ | ೧೯೩೨೦೦೦ |
| ೨ | ಹುಣಸೇಹಣ್ಣು | ೯೭೩೮೫ | ೧೮೫೦೩೧೫೦೦ | ೪೮೩೯೨ | ೧೧೩೭೨೧೨೦೦ | ೩೨೯೦೦ | ೨೨೮೫೫೭೦೦೦ |
| ೩ | ಸೀಗೆಕಾಯಿ | ೧೭೯೨೨ | ೫೩೭೬೬೦೦೦ | ೮೫೨೦ | ೧೭೦೪೦೦೦ | ೪೦೦೫೦೦ | ೭೧೪೧೨೦೦೦ |
| ೪ | ತೆಂಗಿನಕಾಯಿ (ಸಾವಿರ) | ೧೫೫೮೯೮೪೩ | ೪೩೭೬೯೫೦೦ | ೬೧೩೫೨೦೦ | ೨೭೬೦೮೪೦೦ | ೩೨೦೧೦೦ | ೯೩೫೧೧೮೬ |
| ೫ | ಅಡಿಕೆ | ೧೨೮೧೨ | ೮೯೪೦೮೬೦೦ | ೨೧೮೮೨ | ೧೭೫೦೫೬೦೦೦ | ೩೪೦೧೦೦ | ೨೧೮೨೫೬೦೦೦ |
| ೬ | ಬತ್ತ | ೭೪೬೩೭ | ೩೯೫೫೭೬೦೦ | ೩೩೪೩೩೧ | ೨೫೦೭೪೮೨೫೦ | ೧೦೦೧೦೦ | ೧೮೫೯೩೪೦೦೦ |
| ೭ | ಅಕ್ಕಿ | ೧೬೫೫೦೦ | ೧೫೬೨೫೯೫೦೦ | ೪೧೧೯ | ೫೭೬೬೦೦ | ೧೦೦೨೦೦ | ೫೨೨೯೦೦೦೦ |
| ೮ | ರಾಗಿ | ೪೧೮೮ | ೧೮೪೮೯೭೦೦ | ೧೩೬೬೪ | ೬೬೨೬೩೭೯೫ | ೧೦೦೪೦೦ | ೪೦೪೭೦೦೦ |
| ೯ | ದನಿಯಾ | ೧೦೭೭೨ | ೨೧೫೪೪೦೦೦ | ೧೪೩೨೨ | ೨೮೬೪೦೦೦ | ೩೨೦೨೦೦ | ೪೦೫೬೧೫೦೦ |
| ೧೦ | ಮೆಣಸಿನಕಾಯಿ | ೮೯೮ | ೧೭೯೬೦೦೦ | ೫೬೫ | ೧೫೨೫೫೦೦ | ೩೨೦೧೦೦ | ೮೪೦೦೦೦೦ |
| ೧೧ | ಮೆಕ್ಕೆಜೋಳ | ೧೩೦೮೯ | ೫೨೩೫೬೦೦ | ೮೧೨೮ | ೪೩೦೭೮೪೦ | ೧೦೦೫೦೦ | ೧೫೩೩೦೦೦ |
| ೧೨ | ಈರುಳ್ಳಿ | ೪೦೩೫೦ | ೧೧೭೦೧೫೦೦ | ೧೩೩೮೦ | ೬೨೮೮೬೦೦ | ೪೦೦೧೦೦ | ೧೧೧೭೬೦೦೦ |

| | | | | | | | |
|---|---|---|---|---|---|---|---|
| ೧೩ | ಆಲೂಗಡ್ಡೆ | ೨೧೭೫೦ | ೫೩೯೨೫೦೦ | ೬೪೯೭ | ೩೫೯೩೩೦೦ | ೪೦೦೨೦೦ | ೪೪೫೯೦೦೦ |
| ೧೪ | ಹುರುಳಿ | ೫೬೯೩ | ೩೯೫೬೬೦೦ | ೬೯೨೦ | ೫೬೨೩೨೦೦ | ೨೦೯೦೦ | ೧೦೦೦೦೮೦೦೦ |
| ೧೫ | ಅಲಸಂದೆ | ೨೮೨೪ | ೨೮೨೪೦೦೦ | ೮೮೮೮ | ೧೨೪೪೩೨೦೦ | ೩೧೯೦೦ | ೯೬೦೦೦೦ |
| ೧೬ | ತೊಗರಿ | – | – | ೬೩೪ | ೧೦೭೮೦೦ | ೨೧೦ | ೨೯೪೦೦೦ |
| ೧೭ | ಅವರೇಕಾಳು | – | | ೧೩೨೦ | ೧೧೪೦೦೦೦ | ೧೬೯೫೦ | ೬೭೮೦೦೦೦೦ |
| ೧೮ | ಹುಚ್ಚೆಳ್ಳು | ೩೮೪೮ | ೬೨೦೬೪೦೦ | ೩೦೮೯ | ೫೫೬೦೨೦೦ | ೧೨೦೦ | ೨೪೦೦೦೦೦ |
| ೧೯ | ಕೊಬರಿ | – | – | – | – | ೨೨೦ | ೮೩೬೦೦೦ |
| ೨೦ | ಬೇವಿನ ಬೀಜ | ೨೭೪೮ | ೨೦೬೧೦೦೦ | ೪೫೮೪ | ೪೫೮೪೦೦ | ೧೬೦ | ೧೯೨೦೦೦ |
| ೨೧ | ಹುರುಳೀಬೀಜ | ೩೫೫೨೬ | ೪೨೩೮೦೦ | ೧೧೫೭೮ | ೪೦೫೨೩೦೦ | ೬೦೦೬೦೦ | ೮೦೨೦೮೦೦ |
| ೨೨ | ಗೋಧಿ | – | – | ೧೨೪೬ | ೧೨೪೬೦೦ | ೮೪೫೦ | ೧೦೯೮೫೦೦೦೦ |
| ೨೩ | ತೊಗರಿ ಬೇಳೆ | ೫೨೨೯ | ೧೭೨೫೮೦೦ | ೧೫೨೮ | ೪೫೮೪೦೦ | ೧೬೯೫೦ | ೬೭೮೦೦೦೦ |
| ೨೪ | ಬೆಲ್ಲ | – | – | ೧೨೪೩ | ೨೨೩೭೪೬೦ | ೪೨೦೦ | ೧೦೫೦೦೦೦೦ |
| ೨೫ | ಕಡಲೆ ಬೇಳೆ | ೨೧೭೦ | ೬೩೯೬೦೦೦ | ೬೩೪ | ೧೪೫೮೨೦೦ | ೫೪೦ | ೧೬೨೦೦೦೦ |
| ೨೬ | ಟೊಮೋಟೋ | ೪೨೦೫ | ೯೪೧೧೦೦೦ | ೫೧೮೫ | ೨೪೩೬೯೫೦ | ೧೪೬೧೫ | ೬೮೭೬೭೫೦ |
| ೨೭ | ಹೂವು | – | | ೧೧೩೭೯ | ೨೦೪೮೨೨೦೦ | ೩೦೬೫ | ೬೧೩೦೦೦೦ |
| ೨೮ | ವೀಳೇದೆಲೆ | ೨೩೭೫ | ೪೭೫೦೦೦ | ೧೫೬೯ | ೫೦೭೬೦೦ | – | – |
| ೨೯ | ಹೆಸರುಕಾಳು | ೩೭೦೦ | ೬೮೪೫೦೦೦ | ೩೬೯೭ | ೯೨೪೨೫೦೦ | – | – |
| ೩೦ | ಸಾಸಿವೆ | – | – | ೪೬೧ | ೩೭೬೨೫೦ | – | – |
| ೩೧ | ಹೊಂಗೆ ಬೀಜ | – | – | ೧೩೨೪ | ೧೦೫೯೨೦೦ | – | – |
| ೩೨ | ಹಿಪ್ಪೆಬೀಜ | ೪೯೨ | ೩೪೪೪೦೦ | ೩೫೦ | ೩೮೯೪೦೦ | – | – |
| ೩೩ | ಬೇವಿನಬೀಜ | ೨೭೪೮ | ೨೦೬೧೦೦೦ | ೪೫೮೪ | ೪೫೮೪೦೦ | | – |
| ೩೪ | ಕುರಿ ಮೇಕೆ | ೧೧೯೩೧ | – | ೧೦೫೯೧೭ | – | ೧೨೦೮೭೦ | – |

**ಕೋಷ್ಟಕ ೬.೨೯: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗುಬ್ಬಿ ೨೦೦೮–೦೯ನೇ ಸಾಲಿನ ಕ್ರಮಪಡಿಸಿದ ಹುಟ್ಟುವಳಿಗಳ ವಾರ್ಷಿಕ ವರದಿ**

| ಕ್ರ.ಸಂ | ಹುಟ್ಟುವಳಿಗಳ ಹೆಸರು | ಕೋಡ್ ನಂ | ಪ್ರಮಾಣ | ಅವಕ (ಕ್ವಿಂಟಾಲ್‌ಗಳಲ್ಲಿ) | ಜಾವಕ ಮೊತ್ತ (ರೂ.ಗಳಲ್ಲಿ) | ಕನಿಷ್ಠ | ಗರಿಷ್ಠ | ಮಾದರಿ |
|---|---|---|---|---|---|---|---|---|
| ೧ | ಬತ್ತ | ೧೦೦೧೦೦ | ಕ್ವಿಂಟಾಲ್ | ೫೩೨೧೨ | ೫೫೨೮೩೪೦೫ | ೭೦೦ | ೧೪೦೦ | ೧೦೫೦ |
| ೨ | ರಾಗಿ | ೧೦೦೪೦೦ | ಕ್ವಿಂಟಾಲ್ | ೧೨೯೮ | ೯೪೧೭೧೯೦ | ೬೦೦ | ೯೫೦ | ೮೦೦ |
| ೩ | ಅಕ್ಕಿ | ೧೦೦೨೦೦ | ಕ್ವಿಂಟಾಲ್ | ೧೨೧ | ೧೯೩೪೦೦ | ೧೦೦೦ | ೩೦೦೦ | ೨೦೦೦ |
| ೪ | ಕೊಬ್ಬರಿ | ೩೧೧೫೦೦ | ಕ್ವಿಂಟಾಲ್ | ೪೯೧೭೨ | ೧೭೧೬೭೮೬೫೦ | ೩೫೦೦ | ೫೦೦೦ | ೪೨೫೦ |
| ೫ | ತೆಂಗಿನಕಾಯಿ | ೩೨೧೩೦೦ | ಸಾವಿರಕ್ಕೆ | ೭೫೯೫೨೭೧ | ೩೮೩೬೩೭೧೪ | ೩೦೦೦ | ೭೦೦೦ | ೫೦೦೦ |
| ೬ | ಅಡಿಕೆ | ೩೪೦೧೦೦ | ಕ್ವಿಂಟಾಲ್ (ಹುಂಡೆ) | ೨೧೬೫ | ೧೭೪೬೪೫೧೨ | ೫೦೦೦ | ೧೦೪೫೦ | ೮೦೦೦ |
| ೭ | ಹಲಸಿನಹಣ್ಣು | – | ಕ್ವಿಂಟಾಲ್ | ೧೩೦ | ೧೫೦೦೦ | ೧೦೦ | ೨೫೦ | ೧೭೫ |
| ೮ | ಹುಣಸೇ ಬೀಜ | | ಕ್ವಿಂಟಾಲ್ | ೩೪೩ | ೧೦೨೯೬೦ | ೩೦೦ | ೪೫೦ | ೩೭೫ |
| ೯ | ಶೇಂಗಾ | ೩೧೦೧೦೦ | ಕ್ವಿಂಟಾಲ್ | ೧೦ | ೧೫೦೦೦ | ೧೫೦೦ | ೧೯೦೦ | ೧೭೦೦ |
| ೧೦ | ಮುಸುಕಿನಜೋಳ | ೧೦೦೫೦೦ | ಕ್ವಿಂಟಾಲ್ | ೧೬೮೦ | ೧೪೩೧೪೫ | ೭೦೦ | ೯೫೦ | ೮೫೦ |
| ೧೧ | ಶುಂಠಿ | – | ಕ್ವಿಂಟಾಲ್ | ೪೩೦ | ೧೮೬೫೦೦ | ೩೫೦ | ೫೫೦ | ೪೫೦ |
| ೧೨ | ಕಲ್ಲಂಗಡಿ | ೫೦೧೧೦೦ | ಕ್ವಿಂಟಾಲ್ | ೭೦ | ೧೧೦೦೦ | ೧೫೦ | ೧೮೦ | ೧೫೭ |
| ೧೩ | ಹೊಂಗೆ ಬೀಜ | ೩೧೧೦೦೦ | ಕ್ವಿಂಟಾಲ್ | ೨೭೬೩ | ೩೪೯೧೮೧೧ | ೯೦೦ | ೧೬೦೦ | ೧೨೫೦ |
| ೧೪ | ಹುಣಸೆ ಹಣ್ಣು | ೩೨೦೮೦೦ | ಕ್ವಿಂಟಾಲ್ | ೨೧ | ೪೨೫೦೦ | ೫೦೦ | ೩೦೦೦ | ೧೭೫೦ |
| ೧೫ | ಬಾಳೆಕಾಯಿ | ೪೦೨೯೦೦ | ಕ್ವಿಂಟಾಲ್ | ೪೨೯ | ೫೪೮೬೮೩ | ೫೦೦ | ೧೭೦೦ | ೧೧೦೦ |
| ೧೬ | ತೆಂಗಿನಕಡ್ಡಿ | – | | ೧೬೫೫೦ | ೮೪೫೯೦೬ | ೪೦೦ | ೭೭೦ | ೫೮೫ |
| ೧೭ | ಮಾವಿನಕಾಯಿ | ೪೦೩೧೦೦ | ಕ್ವಿಂಟಾಲ್ | ೯೯೫ | ೧೮೯೪೬೬ | ೩೦೦ | ೧೦೦೦ | ೬೫೦ |
| ೧೮ | ಹುರುಳಿ | ೨೦೯೦೦ | ಕ್ವಿಂಟಾಲ್ | ೧೭೦ | ೧೨೦೭೩೩ | ೭೦೦ | ೧೦೦೦ | ೮೫೦ |
| ೧೯ | ಎಮ್ಮೆ | | ಒಂದಕ್ಕೆ | ೧೬೦ | – | – | – | – |
| ೨೦ | ಕುರಿ | ೭೦೦೭೦೦ | ಒಂದಕ್ಕೆ | ೧೫೨೪ | – | – | – | – |
| ೨೧ | ಮೇಕೆ | ೭೦೦೦೦೦ | ಕ್ವಿಂಟಾಲ್ | ೧೮೦೫ | – | – | – | – |

## ಕೋಷ್ಟಕ ೬.೩೦ ಜಿಲ್ಲೆಯಲ್ಲಿದ್ದ ಕೃಷಿ ನಿಯಂತ್ರಿತ ಮಾರುಕಟ್ಟೆಗಳ ವಿವರ (೩೧-೩-೨೦೧೩ ರಲ್ಲಿದ್ದಂತೆ)

| ಕ್ರ.ಸಂ | ತಾಲೂಕುಗಳು | ಮುಖ್ಯ ಮಾರು ಕಟ್ಟೆ | ಉಪ ಮಾರು ಕಟ್ಟೆ | ಒಟ್ಟು | ವ್ಯವಹಾರ ಮೌಲ್ಯ (ರೂ. ಕೋಟಿಗಳಲ್ಲಿ) | ಅತಿ ಹೆಚ್ಚು ಮಾರಾಟದ ಕೃಷಿ ಹುಟ್ಟುವಳಿಗಳ ಹೆಸರು ಮತ್ತು ಮೌಲ್ಯ | | | ಇತರೆ ಎಲ್ಲಾ ಹುಟ್ಟುವಳಿಗಳು | | | ಕೃಷಿ ಸಂಸ್ಕರಣ ಘಟಕ ಸಂಖ್ಯೆ | ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಸಂಖ್ಯೆ |
|---|---|---|---|---|---|---|---|---|---|---|---|---|---|
| | | | | | | ಹೆಸರು | ಪ್ರಮಾಣ | ಮೌಲ್ಯ ಕೋಟಿ ರೂ.ಗಳಲ್ಲಿ) | ಹುಟ್ಟುವಳಿಗಳ ಸಂಖ್ಯೆ | ಪ್ರಮಾಣ | ಮೌಲ್ಯ (ಕೋಟಿ ರೂ.ಗಳಲ್ಲಿ) | | |
| ೧ | ಚಿಕ್ಕನಾಯಕನಹಳ್ಳಿ | ೧ | ೧ | ೨ | ೪೪೯೩ | ಕೊಬ್ಬರಿ | ೫೦೧೭೬ | ೨೩೨೬ | ೨೭ | ೨೬೧೧೮ | ೬೦೮.೭ | ೫ | – |
| ೨ | ಗುಬ್ಬಿ | ೧ | ೯ | ೧೦ | ೩೨೭೪ | ಕೊಬ್ಬರಿ | ೩೯೮೬೬ | ೧೯೯೧ | ೧೧ | ೩೦೮೨೫ | ೭೦೯.೫ | ೧೧ | – |
| ೩ | ಕೊರಟಗೆರೆ | – | – | – | – | – | – | – | – | – | – | – | – |
| ೪ | ಕುಣಿಗಲ್ | ೧ | ೨ | ೩ | ೧೮೮೪ | ರಾಗಿ | ೧೧೦೭೬ | ೧೪೧.೨ | ೧೪ | ೧೯೭೭೮ | ೨೭೩.೯ | ೧೦ | – |
| ೫ | ಮಧುಗಿರಿ | ೧ | ೩ | ೪ | ೧೧೪೫ | ಶೇಂಗಾ | ೧೦೧೭೯ | ೪೧೮.೧ | ೧೪ | ೬೦೯೨ | ೧೧೦.೧ | ೯ | – |
| ೬ | ಪಾವಗಡ | ೧ | ೧ | ೨ | ೧೮೨೪ | ಸೂರ್ಯಕಾಂತಿ | ೧೨೬೮೮ | ೪೩೮.೮ | ೧೫ | ೯೬೭೯ | ೩೬೨.೬ | ೫೬ | – |
| ೭ | ಶಿರಾ | ೧ | ೧ | ೨ | ೫೪.೧೪ | ಶೇಂಗಾ | ೧೨೭೭೪ | ೫೩೩.೬ | ೧೭ | ೨೨೨೬೦ | ೫೪೨.೧ | ೧೯ | – |
| ೮ | ತಿಪಟೂರು | ೧ | ೨ | ೩ | ೩೮೬೦೨ | ಕೊಬ್ಬರಿ | ೮೬೭೦೫ | ೩೭೬೭೫ | ೬ | ೧೬೨೩೭ | ೧೪೩.೫ | ೭೦ | – |
| ೯ | ತುಮಕೂರು | ೧ | ೫ | ೬ | ೩೩೩೩೭ | ಬತ್ತ | ೯೮೭೦೫ | ೧೫೩೩೭ | ೩೩ | ೫೭೮೦೫ | ೬೭೫೦ | ೧೨೦ | – |
| ೧೦ | ತುರುವೇಕೆರೆ | ೧ | ೩ | ೪ | ೪೬೨೪ | ಕೊಬ್ಬರಿ | ೭೭.೮ | ೪೦೪೩ | ೧೪ | ೨೪.೩೨ | ೫೭೭.೫ | ೮ | – |
| ಜಿಲ್ಲಾ ಮೊತ್ತ | | ೯ | ೨೭ | ೩೬ | ೮೯೨೩೭.೧೪ | ೦ | ೩೨೨೨೪೬.೮ | ೬೨೯೦೪ | ೧೫೧ | ೧೮೮೮೧೮.೩೨ | ೧೦೦೭೮ | ೩೦೮ | – |

ಆಧಾರ : ತುಮಕೂರು ಜಿಲ್ಲಾ ಅಂಕಿ – ಅಂಶಗಳ ನೋಟ – ೨೦೧೪, ತುಮಕೂರು

## ತಿಪಟೂರು ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆ

ತಿಪಟೂರು ಮಾರುಕಟ್ಟೆ ಅತ್ಯಂತ ಪ್ರಮುಖವಾದ ಕೊಬ್ಬರಿ ಮಾರುಕಟ್ಟೆಯೆಂದು ಪ್ರಸಿದ್ಧಯಾಗಿದ್ದು, ದಕ್ಷಿಣ ಭಾರತದಲ್ಲಿ ಕಲ್ಪವೃಕ್ಷ (ಕಲ್ಪತರು) ನಾಡೆಂದೆ ಖ್ಯಾತಿ ಗಳಿಸಿದೆ. ತಿಪಟೂರಿನ ಕೊಬ್ಬರಿ, ತೆಂಗಿನಕಾಯಿ ಮತ್ತು ತೆಂಗಿನ ಉಪ ಉತ್ಪ ನ್ನಗಳು ಕರ್ನಾಟಕ ಮಾತ್ರವಲ್ಲದೇ ಭಾರತದ ವಿವಿಧ ರಾಜ್ಯಗಳಲ್ಲಿ ಹಾಗೂ ವಿದೇಶಿ ಮಾರುಕಟ್ಟೆಗಳಲ್ಲಿ ಅಧಿಕ ಪ್ರಮಾಣದಲ್ಲಿ ಮಾರಾಟವಾಗುತ್ತಿದ್ದು, ಕರ್ನಾಟಕ ಸರ್ಕಾರದ ಆದಾಯಕ್ಕೆ ಹೆಚ್ಚಿನ ಪ್ರಮಾಣದ ಕೊಡುಗೆ ನೀಡುತ್ತಿದೆ. ಈ ತಾಲೂಕಿನ ವಿಸ್ತೀರ್ಣ ೭೬,೫೧೦ ಹೆಕ್ಟೇರುಗಳಷ್ಟಿದ್ದು, ಒಂದು ಲಕ್ಷ ಹೆಕ್ಟೇರ್ ಸಾಗುವಳಿಗೊಳಪಟ್ಟ ಜಮೀನಿನಲ್ಲಿ ಶೇ. ೮೦ ರಷ್ಟು ಪ್ರದೇಶದಲ್ಲಿ ತೆಂಗಿನ ತೋಟಗಳಿವೆ.

ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆ ೧೯೪೮ರಲ್ಲಿ ಅಂದಿನ ಮೈಸೂರು ಸಂಸ್ಥಾನದ ನಿಯಂತ್ರಿತ ಮಾರುಕಟ್ಟೆಗಳ ಕಾಯಿದೆ ಅನ್ವಯ ಸ್ಥಾಪನೆಗೊಂಡ ಮೊಟ್ಟಮೊದಲ ಮಾರುಕಟ್ಟೆಯೆಂದು ಹೆಸರು ಪಡೆದಿದೆ. ೧೯೬೬ರ ಕೃಷಿ ಉತ್ಪನ್ನ ಮಾರಾಟ ನಿಯಂತ್ರಣ ಕಾಯಿದೆ ಮತ್ತ ನಿಯಮ ೧೯೬೮ರ ಅನ್ವಯ ಕಾರ್ಯ ನಿರ್ವಹಿಸುತ್ತಿದೆ. ಈ ಮಾರುಕಟ್ಟೆ ೭೧.೨೦ ಎಕರೆ ವಿಸ್ತೀರ್ಣದ ವಿಶಾಲವಾದ ಪ್ರಾಂಗಣವನ್ನು ಹೊಂದಿದ್ದು, ಎಲ್ಲಾ ಮೂಲಭೂತ ಸೌಲಭ್ಯಗಳಿವೆ. ಆಡಳಿತ ಕಚೇರಿ, ರೈತಭವನ, ಅಂಚೆಕಚೇರಿ, ಬ್ಯಾಂಕು, ಉಗ್ರಾಣ, ಉಪಾಹಾರ ಗೃಹ, ಅತಿಥಿ ಗೃಹ, ೧೯೦ ದಾಸ್ತಾನು ಮಳಿಗೆಗಳು ಮುಂತಾದವುಗಳನ್ನು ಹೊಂದಿದೆ. ತಾಲೂಕಿನ ಕರಡಾಳು, ಕೋನೇಹಳ್ಳಿ, ನೊಣವಿನಕೆರೆ, ಹೊನ್ನವಳ್ಳಿ ಮತ್ತು ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ಉಪಮಾರುಕಟ್ಟೆಗಳನ್ನು ಸ್ಥಾಪಿಸಿದೆ. ವಾರದ ಸಂತೆಗಳು ತಾಲೂಕಿನ ಪ್ರಮುಖ ಗ್ರಾಮ, ಹೋಬಳಿಗಳಲ್ಲಿ ಜರುಗುತ್ತಿವೆ. ಈ ಮಾರುಕಟ್ಟೆ ರೈಲ್ವೆ ನಿಲ್ದಾಣಕ್ಕೆ ಹೊಂದಿಕೊಂಡಿದ್ದು, ಎರಡನೇ ಗುರುವಾರ ಮತ್ತು ಭಾನುವಾರ ರಜಾ ದಿನಗಳಾಗಿದ್ದು, ಉಳಿದ ಎಲ್ಲಾ ದಿವಸಗಳಲ್ಲಿ ವ್ಯಾಪಾರ ವಹಿವಾಟು ಜರುಗುತ್ತಿದೆ.

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಿಪಟೂರು,ವಾರ್ಷಿಕ ಮಾರಾಟ, ವಹಿವಾಟು ವಿವರ**

| ಪ್ರಮುಖ ಉತ್ಪನ್ನಗಳು | ೨೦೦೭-೦೮ | ೨೦೦೮-೦೯ | ೨೦೦೯-೧೦ |
|---|---|---|---|
| ಕೊಬ್ಬರಿ (ಕ್ವಿಂಟಾಲ್) (ಟೆಂಡರ್) | ೨೩೨೫೦೭ | ೨೩೩೨೭೮ | ೪೨೯೦೦೫ |
| ಕೌಟು (ನೇರ ಖರೀದಿ) | ೭೭೦೩೨ | ೯೧೭೯೧ | ೨೦೪೧೯ |
| ತೆಂಗಿನಕಾಯಿ ನೇರ ಖರೀದಿ | ೩೨೯೬೦೦ | ೪೮೮೨೬೫ | ೧೧೨೧೧೭೫ |

ಖರೀದಿದಾರರಿಂದ ಕಮೀಷನ್ ೭% ಮಾರುಕಟ್ಟೆ ಫೀ ೧.೫% ಕೊಬ್ಬರಿ (ತೂಕ) ರೂ.೨.೦ (ರತಿ ಚೀಲಕ್ಕೆ) ವ್ಯಾಟ್ ತೆರಿಗೆ ೨% ಇತ್ಯಾದಿ ಶುಲ್ಕ ಸಂಗ್ರಹಿಸಲಾಗುತ್ತದೆ. ಹಮಾಲಿ ಚಾರ್ಜು ರೂ.೨/- ಪ್ರತಿ ಚೀಲಕ್ಕೆ ವರ್ತಕರು ೧೩೫ ಚಿಲ್ಲರೆ ವ್ಯಾಪಾರಿಗಳು ೬೭ ದಾಸ್ತಾನುದಾರರು-೧೩೨, ರಫ್ತುದಾರರು -೧೩೪, ಆಮದುದಾರರು (೯೪), ದಲ್ಲಾಳರು ೨೩, ಹಮಾಲರು ೪೨೧ ತೂಕದವರು ೧೦೧, ಹಾಗೂ ಒಬ್ಬ ಉಗ್ರಾಣ ಸಿಬ್ಬಂದಿ ಇದ್ದರು.

**ಕೃಷಿ ಮಾರಾಟ ನೀತಿ – ೨೦೧೩:** ಸರ್ಕಾರ ೨೦೧೩ ರಲ್ಲಿ ರಚಿಸಿದ್ದ ಕೃಷಿ ಮಾರಾಟ ಸುಧಾರಣಾ ಸಮಿತಿಯು ೨೦೧೩ ರ ಮೇ ಮಾಹೆಯಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿದ ಕೃಷಿ ಮಾರಾಟ ನೀತಿ – ೨೦೧೩ ಅನ್ನು ದೇಶದಲ್ಲಿ ಪ್ರಪ್ರಥಮ ಬಾರಿಗೆ ರೂಪಿಸಿ ಜಾರಿಗೆ ತಂದ ಹೆಗ್ಗಳಿಕೆ ಕರ್ನಾಟಕ ಸರ್ಕಾರದ್ದಾಗಿದೆ.

ದೇಶದಲ್ಲಿ ಮೊದಲ ಬಾರಿಗೆ ಏಕೀಕೃತ ಮಾರುಕಟ್ಟೆ ವ್ಯವಸ್ಥೆಯನ್ನು ಕೊಬ್ಬರಿ ಮಾರಾಟಕ್ಕಾಗಿ ರಾಜ್ಯದ ತಿಪಟೂರು ಹಾಗೂ ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ, ಅರಿಶಿನ ಉತ್ಪನ್ನಕ್ಕಾಗಿ ಚಾಮರಾಜನಗರ ಮಾರುಕಟ್ಟೆ ಎಂದು ಘೋಷಿಸಿ, ದಿನಾಂಕ ೨೨-೨-೨೦೧೩ ರಂದು ಜಾರಿಗೆ ತರಲಾಯಿತು. ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ತತ್ಪರಿಣಾಮವಾಗಿ ಡಿಸೆಂಬರ್ ೨೦೧೪ರ ವೇಳೆಗೆ ಒಟ್ಟು ೪೬ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಏಕೀಕೃತ ಮಾರುಕಟ್ಟೆ ವ್ಯವಸ್ಥೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯ ತಿಪಟೂರು, ತುಮಕೂರು, ತುರುವೇಕೆರೆ, ಗುಬ್ಬಿ, ಶಿರಾ ಮತ್ತು ಹುಳಿಯಾರು ಮಾರುಕಟ್ಟೆ ಸಮಿತಿಗಳೂ ಏಕೀಕೃತ ಮಾರುಕಟ್ಟೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ತತ್ಪರಿಣಾಮವಾಗಿ

ಉಂಡೆ ಕೊಬ್ಬರಿ ವಹಿವಾಟಿನಲ್ಲಿ ಗಣನೀಯ ಹೆಚ್ಚಳ ಕಂಡುಬಂದಿತು. ೨೦೧೩ ಸಾಲಿನಲ್ಲಿ ೨೫೧.೮೬ ಕೋಟಿ ರೂ ವಹಿವಾಟು ಕಂಡುಬಂದರೆ ೨೦೧೪ರ ಅಕ್ಟೋಬರ್ ಅಂತ್ಯದವರೆಗೆ ೪೦೧.೧೬ ಕೋಟಿ ರೂ ವಹಿವಾಟು ನಡೆದಿದ್ದು, ಶೇ. ೫೯.೩% ಹೆಚ್ಚಳವಾಗಿರುವುದು ಗಮನಾರ್ಹವಾಗಿದೆ. ಇದಕ್ಕೆ ಕೊಬ್ಬರಿ ಬೆಲೆಯಲ್ಲಾದ ಏರಿಕೆಯೂ ಕಾರಣವಾಗಿದೆ.

## ಉಗ್ರಾಣ ವ್ಯವಸ್ಥೆ

ಕೃಷಿಕರು ಬೆಳೆದ ಉತ್ಪನ್ನಗಳನ್ನು ತಮ್ಮ ಸ್ವಂತ ಉಪಯೋಗಕ್ಕೆ ಉಪಯೋಗಿಸುವುದರ ಜೊತೆಗೆ ಉತ್ತಮ ಬೆಲೆಗೆ ಮಾರಾಟ ಮಾಡಲು ವರ್ಷವಿಡೀ ಗುಣಮಟ್ಟದಿಂದ ದಾಸ್ತಾನಾಗಿಡುವ ಉಗ್ರಾಣ ವ್ಯವಸ್ಥೆಗೆ ಸುಗ್ಗಿಯ ನಂತರದ ವೈಜ್ಞಾನಿಕ ತಂತ್ರಜ್ಞಾನವೆಂದು ಹೆಸರು. ಸುಗ್ಗಿಯ ಪೂರ್ವದ ತಂತ್ರಜ್ಞಾನವು ಕೃಷಿಯ ಉತ್ಪಾದನಾ ಹಂತವಾಗಿದ್ದರೆ, ಕೃಷಿ ಉತ್ಪನ್ನಗಳ ಉತ್ತಮ ಮಟ್ಟದ ದಾಸ್ತಾನು ವ್ಯವಸ್ಥೆ ಅಥವಾ ಉಗ್ರಾಣ ವ್ಯವಸ್ಥೆ ಸುಗ್ಗಿಯ ನಂತರದ ಕಾರ್ಯತಂತ್ರವಾಗಿರುತ್ತದೆ.

ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಸಾಂಪ್ರದಾಯಿಕ ಉಗ್ರಾಣಗಳಾದ ಹಗೇವು, ಪಂಡ್ತ, ಮೂಟೆ, ಗೂಡೆ, ವಾಡೆ, ಕಣಜ, ಬಣವೆಗಳಲ್ಲಿ ದಾಸ್ತಾನಾಗಿಟ್ಟ ಧಾನ್ಯಗಳು ಗೆದ್ದಲು, ಹುಳ, ಉಪ್ಪಟೆ, ಚಿಟ್ಟೆ, ಇರುವೆ, ಜಿರಲೆ, ಗೊದ್ದ, ಇಲಿ ಹೆಗ್ಗಣ, ಕ್ರಿಮಿಕೀಟಗಳ ಉಪಟಳ ಮೊದಲಾದವುಗಳಿಂದ ದೋಷಪೂರಿತವಾಗಿದ್ದು, ಶೇ. ೨೦ ರಷ್ಟು ಆಹಾರ ಧಾನ್ಯಗಳು ನಷ್ಟವಾಗುತ್ತಿದ್ದವು. ವಾತಾವರಣದ ತೇವಾಂಶ, ಮಳೆ, ಗಾಳಿ, ಬಿಸಿಲು ಮುಂತಾದ ಪ್ರಕೃತಿ ವಿಕೋಪಗಳಿಂದ ಶೇ. ೧೦ ರಷ್ಟು ಧಾನ್ಯಗಳು ನಷ್ಟವಾಗುತ್ತಿದ್ದವು. ಹೀಗೆ ರೈತರು ಕಷ್ಟುಪಟ್ಟು ಬೆಳೆದ ಕೃಷಿ ಉತ್ಪನ್ನಗಳಲ್ಲಿ ಶೇ. ೩೦ ರಷ್ಟು ಧಾನ್ಯಗಳು ಅವೈಜ್ಞಾನಿಕ ಉಗ್ರಾಣ ಪದ್ಧತಿಯಿಂದ ನಷ್ಟವನ್ನನುಭವಿಸುತ್ತಿದ್ದರು. ಇಂತಹ ದೋಷಪೂರಿತ ಹಳೆಯ ಪದ್ಧತಿಯ ಉಗ್ರಾಣ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಉತ್ತಮಪಡಿಸಲು ಸರ್ಕಾರ ಆಧುನಿಕ ವೈಜ್ಞಾನಿಕ ತಂತ್ರಜ್ಞಾನದಿಂದ ಕೂಡಿದ ಉಗ್ರಾಣಗಳ ನಿರ್ಮಾಣಕ್ಕೆ ಒಂದು ಯೋಜನೆಯನ್ನು ರೂಪಿಸಿತು.

ರೈತರಿಗೆ ವೈಜ್ಞಾನಿಕ ಕಾರ್ಯತಂತ್ರದ ಉತ್ತಮ ಉಗ್ರಾಣ ಸೌಲಭ್ಯಗಳನ್ನು ಒದಗಿಸಲು ಭಾರತ ಸರ್ಕಾರವು ೧೯೫೪ರಲ್ಲಿ ರಚಿಸಿದ್ದ ಗ್ರಾಮೀಣ ಪತ್ತು ಸಮೀಕ್ಷಾ ಸಮಿತಿಯನ್ನು ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಮೂರು ಹಂತಗಳ ಉಗ್ರಾಣ ವ್ಯವಸ್ಥೆಯನ್ನು ಜಾರಿಗೆ ತರಲು ಶಿಫಾರಸ್ಸು ಮಾಡಿತು. ಇದರನ್ವಯ ೧೯೫೬ರಲ್ಲಿ ಕೇಂದ್ರ ಸರ್ಕಾರ "ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಮತ್ತು ಉಗ್ರಾಣ ಮಂಡಳಿ" ಯನ್ನೂ ಮತ್ತು ೧೯೫೭ರಲ್ಲಿ "ಕೇಂದ್ರ ಉಗ್ರಾಣ ನಿಗಮ"ವನ್ನೂ ಸ್ಥಾಪಿಸಿತು. ಈ ನಿಗಮಗಳು ರಾಜ್ಯದ ಪ್ರಮುಖ ನಗರ ಪಟ್ಟಣಗಳಲ್ಲಿ ಗೋದಾಮು ಅಥವಾ ದಾಸ್ತಾನು ಮಳಿಗೆಗಳನ್ನು ವೈಜ್ಞಾನಿಕವಾಗಿ ನಿರ್ಮಿಸಿವೆ. ಕರ್ನಾಟಕ ಸರ್ಕಾರವೂ ರಾಜ್ಯ ಉಗ್ರಾಣ ನಿಗಮವನ್ನು ಸ್ಥಾಪಿಸಿದೆ.

ರಾಷ್ಟ್ರಮಟ್ಟದಲ್ಲಿ "ಭಾರತ ಆಹಾರ ನಿಗಮ" (F.C.I) ವು ೧೯೬೫ರಲ್ಲಿ ಸ್ಥಾಪಿಸಲಾಯಿತು. ರಾಜ್ಯಾದ್ಯಂತ ಸಹಕಾರ ಸಂಘಗಳು ಪ್ರತಿ ನಗರ, ಜಿಲ್ಲೆ, ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಉಗ್ರಾಣ ವ್ಯವಸ್ಥೆಯನ್ನು ರೈತರಿಗೆ ಕಲ್ಪಿಸಿವೆ. ಖಾಸಗಿ ಆಹಾರ ಸಂಸ್ಕರಣ ಸಂಸ್ಥೆಗಳು ಮಂಡಿ ವರ್ತಕರ ಗೋದಾಮು, ದಲ್ಲಾಳಿಗಳು, ಖಾಸಗಿ ಉದ್ಯಮಿಗಳು, ಜಮೀನ್ದಾರರೂ ಸೇರಿದಂತೆ, ಖಾಸಗಿ ಕಂಪನಿಗಳು ಸಹ ವೈಜ್ಞಾನಿಕವಾದ ಉಗ್ರಾಣ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ.

ಕೇಂದ್ರಿಯ ಉಗ್ರಾಣ ನಿಗಮ, (ಎಫ್.ಸಿ.ಐ.) ರಾಜ್ಯ ಮತ್ತು ರಾಷ್ಟ್ರೀಯ ಉಗ್ರಾಣ ನಿಗಮಗಳು, ರಾಜ್ಯ ಸರ್ಕಾರ ಆಹಾರ, ನಾಗರಿಕ ಸರಬರಾಜು ಇಲಾಖೆ, ಸಹಕಾರಿ ಕೃಷಿ ಉತ್ಪನ್ನ ಮಾರಾಟ ಸಂಸ್ಥೆಗಳು, ದಾಸ್ತಾನು ಉಗ್ರಾಣಗಳ ಸೌಲಭ್ಯಗಳನ್ನು ಒದಗಿಸುತ್ತಿವೆ.

ಸುಗ್ಗಿಯ ನಂತರ ರೈತರು ತಮ್ಮ ಗ್ರಾಮದ ಸಾಹುಕಾರರಿಗೆ, ದಲ್ಲಾಳಿಗಳಿಗೆ ಮತ್ತು ಮಂಡಿವರ್ತಕರಿಗೆ ಕಡಿಮೆ ಬೆಲೆಗೆ ಮತ್ತು ಮೋಸದ ತೂಕಕ್ಕೆ ಮಾರಾಟ ಮಾಡುವುದನ್ನು ತಪ್ಪಿಸಲು, ದಲ್ಲಾಳಿಗಳಿಂದ ರಕ್ಷಿಸಲು, ಉಗ್ರಾಣದಲ್ಲಿ ದಾಸ್ತಾನಾಗಿದ್ದ ಧಾನ್ಯಗಳ ಪ್ರಸ್ತುತ ಮಾರುಕಟ್ಟೆ ಮೌಲ್ಯಗಳ ಮೇಲೆ ಶೇ. ೭೦ ರಷ್ಟು ನಗದು ಹಣವನ್ನು ಬ್ಯಾಂಕಿನಿಂದ ಮುಂಗಡವಾಗಿ ಸಾಲ ಸೌಲಭ್ಯವನ್ನು ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸಿವೆ. ಕೃಷಿ ಉತ್ಪನ್ನಗಳ ತೂಕ ಮತ್ತು ಅಳತೆಯನ್ನು ರೈತರ ಎದುರಿಗೆ ವಿದ್ಯುನ್ಮಾನ ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಗೆ ಅಳವಡಿಸಲಾಗಿದೆ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ರೈತರು, ಬಡಮಹಿಳಾ ರೈತರು ದುರ್ಬಲವರ್ಗದವರಿಗೆ ಸಣ್ಣ ರೈತರಿಗೆ ಪಹಣಿ ಆಧಾರದ ಮೇಲೆ

ಆಹಾರ ಭದ್ರತೆಯೊಂದಿಗೆ ಶೇ.೭೦ರಷ್ಟು ಹಣವನ್ನು ಮುಂಗಡವಾಗಿ ಬ್ಯಾಂಕುಗಳು ಸಾಲ ನೀಡುತ್ತಿದ್ದು, ದಾಸ್ತಾನಾಗಿದ್ದ ಎಲ್ಲಾ ಕೃಷಿ ಉತ್ಪನ್ನಗಳು ಉಗ್ರಾಣ ವಿಮೆಗೆ ಒಳಪಟ್ಟಿವೆ.

ತುಮಕೂರು ಜಿಲ್ಲಾ ಕೇಂದ್ರ, ಹತ್ತು ತಾಲೂಕು ಕೇಂದ್ರಗಳು, ಹೋಬಳಿಗಳಲ್ಲದೇ ಪ್ರಮುಖ ಗ್ರಾಮಗಳಲ್ಲಿ ರಾಜ್ಯ ಸರ್ಕಾರವು ಉಗ್ರಾಣಗಳನ್ನು ವೈಜ್ಞಾನಿಕವಾಗಿ ನಿರ್ಮಿಸಿದೆ. ಈ ಉಗ್ರಾಣಗಳಲ್ಲಿ ದಾಸ್ತಾನಾಗಿಟ್ಟ ಕೃಷಿ ಉತ್ಪನ್ನಗಳಿಗೆ ಧೂಮೋಪಚಾರ ಮತ್ತು ಔಷಧಿ ಸಿಂಪರಣೆ ಸೌಲಭ್ಯವನ್ನು ಒದಗಿಸುತ್ತಿದೆ.

ಕರ್ನಾಟಕ ಸರ್ಕಾರ ತುಮಕೂರು ನಗರದಲ್ಲಿ ಸ್ಥಾಪಿಸಿರುವ ಎರಡು ಪ್ರತ್ಯೇಕ ಉಗ್ರಾಣ ಘಟಕಗಳು ಸುಮಾರು ೧೬೦೦೦ ಮೆಟ್ರಿಕ್ ಟನ್‌ಗಳಷ್ಟು ಸಂಗ್ರಹಣಾ ಸಾಮರ್ಥ್ಯಗಳನ್ನು ಹೊಂದಿವೆ. ಅಡಿಕೆ, ಕೊಬ್ಬರಿ, ಬತ್ತ, ಅಕ್ಕಿ, ರಾಗಿ, ಶೇಂಗಾ, ಸೀಗೇಕಾಯಿ, ದ್ವಿದಳ ಧಾನ್ಯಗಳು, ಮೆಕ್ಕೆಜೋಳ, ಗೋಧಿ ಮುಂತಾದ ಆಹಾರ ಧಾನ್ಯಗಳ ಮೂಟೆಗಳನ್ನು ಮರದ ಹಲಗೆಗಳ ಮೇಲೆ ಬಿದಿರಿನ ಚಾಪೆ, ಪ್ಲಾಸ್ಟಿಕ್ ಹಾಳೆಗಳ ಮೇಲೆ ಸುರಕ್ಷಿತವಾಗಿ ಗುಣಮಟ್ಟದಿಂದ ಸಂರಕ್ಷಿಸುವುದರ ಮೂಲಕ ದಾಸ್ತಾನು ಮಾಡಲಾಗುತ್ತದೆ. ಉಗ್ರಾಣಗಳಲ್ಲಿ ಸಂಗ್ರಹಣೆಗೆ ದಾಸ್ತಾನಾಗಿಟ್ಟ ಉತ್ಪನ್ನಗಳ ಮೌಲ್ಯಗಳ ಆಧಾರದ ಮೇಲೆ ಶೇ. ೧ ರಿಂದ ಶೇ. ೫ ರವರೆಗೆ ದಾಸ್ತಾನು ಶುಲ್ಕವನ್ನು ವಿಧಿಸುತ್ತದೆ. ಪರಿಶಿಷ್ಟ ಜಾತಿ, ವರ್ಗಗಳ ರೈತರು, ದುರ್ಬಲ ವರ್ಗದ ಮಹಿಳೆಯರು ಮತ್ತು ಅತಿ ಸಣ್ಣ ರೈತರಿಗೆ ಇದರಿಂದ ಪೂರ್ತಿ ವಿನಾಯಿತಿ ನೀಡಲಾಗಿದೆ.

**ತೂಕ ಮತ್ತು ಅಳತೆ**

ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯನ್ನು ಆಚರಣೆಗೆ ತರುವುದಕ್ಕಿಂತ ಪೂರ್ವದಲ್ಲಿ ಮೈಸೂರು ಸಂಸ್ಥಾನದಲ್ಲಿ ವಿವಿಧ ಪ್ರಕಾರದ ತೂಕ ಮತ್ತು ಅಳತೆಗಳು ಜಾರಿಯಲ್ಲಿದ್ದ ಬಗ್ಗೆ ಐತಿಹಾಸಿಕ ಶಾಸನಗಳಿಂದ ತಿಳಿದು ಬಂದಿದೆ. ಗ್ರಾಹಕರು ಖರೀದಿಸುವ ಪ್ರತಿಯೊಂದು ವಸ್ತುಗಳನ್ನು ತೂಕ ಮತ್ತು ಅಳತೆಯ ಮಾಪನದಿಂದ ನಿಗದಿಪಡಿಸಿ ಅವುಗಳ ನಗದು ಮೌಲ್ಯವನ್ನು ನಿರ್ಧರಿಸಿ ಮಾರಾಟ ಮಾಡುವ ವ್ಯವಸ್ಥೆ ಇದೆ. ಮಾರುಕಟ್ಟೆಯಲ್ಲಿ ಮಾರಾಟವಾಗುವ ಮತ್ತು ಕೊಂಡುಕೊಳ್ಳುವ ಪ್ರತಿಯೊಂದು ವಸ್ತು ಮತ್ತು ಸೇವೆಗಳು ಇಂದಿನ ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಗೆ ಒಳಪಡಿಸಿ ರೂಪಾಯಿ ಮೌಲ್ಯದಿಂದ ಬೆಲೆಯನ್ನು ನಿರ್ಧರಿಸುವ ಕ್ರಮ ದೇಶದ ಸಮಸ್ತ ಜನರಿಂದ ಮಾನ್ಯತೆ ಪಡೆದಿರುತ್ತದೆ.

ಪುರಾತನ ಕಾಲದಲ್ಲಿ ತುಮಕೂರು ಜಿಲ್ಲೆಯ ತೂಕ ಮತ್ತು ಅಳತೆ ವ್ಯವಸ್ಥೆಯು ಒಂದೊಂದು ಸ್ಥಳದಲ್ಲಿ ಒಂದೊಂದು ರೀತಿಯ ತೂಕ ಮತ್ತು ಅಳತೆ ಜಾರಿಯಲ್ಲಿದ್ದವು. ಅವು ವಿಭಿನ್ನತೆಯಿಂದ ಕೂಡಿದ್ದು, ಅಷ್ಟಾಗಿ ಕರಾರುವಾಕ್ಕಾಗಿರಲಿಲ್ಲ. ಇದರಿಂದ ವ್ಯಾಪಾರದಲ್ಲಿ ಗೊಂದಲವುಂಟಾಗಿ ಜನರಲ್ಲಿ ಸಮಾಧಾನಕರವಾಗಿರಲಿಲ್ಲ. ೧೮೮೬ರಲ್ಲಿ ಮೈಸೂರು ಸರ್ಕಾರವು ಜಿಲ್ಲೆಯಲ್ಲಿ ತೂಕ ಮತ್ತು ಅಳತೆಗಳ ಮೇಲೆ ಮುದ್ರೆ ಹಾಕುವ ಮೂಲಕ ಏಕರೂಪದ ಪದ್ಧತಿಯನ್ನು ಜಾರಿಗೊಳಿಸಲಾಯಿತು. ಅದರ ಪ್ರಕಾರ ಒಂದು ಪಕ್ಕಾ ಸೇರಿನ ಅಳತೆಯಲ್ಲಿ ನೂರು ಸೇರಿಗೆ ಒಂದು ಪಲ್ಲವೆಂದೂ, ೧೬ ಸೇರಿಗೆ ಒಂದು ಕೊಳಗವೆಂದು, ಬಳ್ಳ ಮತ್ತು ಅಳತೆಯ ಸೇರು, ಸವ್ವಾಸೇರು, ಅಚ್ಚೇರು (ಅರ್ಧ ಸೇರು) ಪಾವು ಚಿಟ್ಟೆ, ಚಟಾಕು ಮುಂತಾದವು ಅಳೆಯುವ ಮಾಪಕವಾಗಿದ್ದವು. ದೊಡ್ಡ ಪ್ರಮಾಣದ ದವಸ ಧಾನ್ಯಗಳನ್ನು ಖಂಡುಗ, ಕೊಳಗ, ಬಳ್ಳ, ಪಡಿ, ಮುಂತಾದ ಅಳತೆ ಮಾಪನಗಳು ಬಳಕೆಯಲ್ಲಿದ್ದವು. ಆಗಿನ ಕಾಲದಲ್ಲಿ ತಕ್ಕಡಿಗಳಲ್ಲಿ ತೂಕ ಮಾಡಲು ಮಣ, ದಡಿಯ, ಪಂಚೇರು, ತೊಲ ಮುಂತಾದ ತೂಕದ ಬಟ್ಟುಗಳನ್ನು ಬಳಸುತ್ತಿದ್ದರು. ಬಟ್ಟೆ ಮತ್ತು ದೂರದ ಮಾರ್ಗವನ್ನು ಅಳೆಯಲು ಗಜ, ಮೊಳ, ಅಡಿ, ಗೇಣು, ಮಾರು, ಗಾವುದ ಮುಂತಾದ ಮಾಪನಗಳಿಂದ ಅಳೆಯುತ್ತಿದ್ದರು. ಬೆಣ್ಣೆ, ತುಪ್ಪವನ್ನು ತೂಕ ಮಾಡಲು ವೀಸೆಯನ್ನು ಮತ್ತು ಎಣ್ಣೆ ಪದಾರ್ಥವನ್ನು ಸೇರಿನಲ್ಲಿ ಅಳೆಯುವ ಪದ್ಧತಿ ಜಾರಿಯಲ್ಲಿದ್ದಿತು. ಹಳೆಯ ಪದ್ಧತಿಯ ತೂಕ ಮತ್ತು ಅಳತೆಗಳು ವಾರದ ಸಂತೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಕ್ವಚಿತ್ತಾಗಿ ರೂಢಿಯಲ್ಲಿವೆ.

ಮೈಸೂರು ರಾಜಮನೆತನದ ಚಿಕ್ಕದೇವರಾಜ ಒಡೆಯರ್ ಅವರು ಇಡೀ ಸಂಸ್ಥಾನಕ್ಕೆ ಅನ್ವಯಿಸುವಂತೆ ಏಕಪ್ರಕಾರದ ತೂಕ ಮತ್ತು ಅಳತೆ ಪದ್ಧತಿಯನ್ನು ಜಾರಿಗೆ ತಂದರು. ರಾಜಮನೆತನದ ಲಾಂಛನವುಳ್ಳ ಚಿಹ್ನೆಯನ್ನು ತೂಕದ ಬಟ್ಟುಗಳ ಮೇಲೆ ಮುದ್ರಿಸಿ ಎಲ್ಲರೂ ಒಪ್ಪಿ ಬಳಸುವಂತೆ ಜಾರಿಗೊಳಿಸಿದರು. ಹಿತ್ತಾಳೆ, ತಾಮ್ರ ಮತ್ತು ಉಕ್ಕಿನ ತಗಡುಗಳಿಂದ ಮಾಡಿದ ಕರಾರುವಾಕ್ಕಾದ ಪಕ್ಕಾ ಸೇರು, ಸವಾಸೇರು, ಅರ್ಧ ಸೇರು, ಪಾವು, ಚಟಾಕು, ಮೊದಲಾದ ಅಳತೆಯ ಭಾಗಗಳಾಗಿ

ವಿಂಗಡಿಸಿ, ಅಳೆಯಲು ಉಪಯೋಗಿಸುತ್ತಿದ್ದರು. ಕಡಿಮೆ ಮೌಲ್ಯದ ಲೋಹಗಳಿಂದ ನಿರ್ದಿಷ್ಟ ಗಾತ್ರದ ಕಲ್ಲುಗಳಿಂದ ಮಾಡಿದ ಮಣ, ದಡಿಯ, ಪಂಚೇರು, ಮುಂತಾದ ತೂಕದ ಕಲ್ಲು(ಬಟ್ಟು)ಗಳನ್ನು ತಕ್ಕಡಿಯಲ್ಲಿಟ್ಟು ಸರಕನ್ನು ತೂಕ ಮಾಡುವ ಪದ್ಧತಿ ಜಾರಿಯಲ್ಲಿದ್ದಿತು. ಬಟ್ಟೆಗಳನ್ನು ಅಳೆಯಲು ಗಜಕಡ್ಡಿಯನ್ನು ಬಳಸುತ್ತಿದ್ದರು. ಹಗ್ಗ, ಹೂವುಗಳನ್ನು ಅಳೆಯಲು ಮಾರು, ಮೊಳ, ಅಡಿ, ಗೇಣು ಮುಂತಾದವು ಮಾಪನ ಘಟಕಗಳಾಗಿದ್ದವು.

ಟಿಪ್ಪುಸುಲ್ತಾನನು ಸುಲ್ತಾನಿ ಕೊಳಗವನ್ನು ಅಳತೆಯಾಗಿ ಬಳಸುವಂತೆ ಆಜ್ಞೆ ಹೊರಡಿಸಿದ್ದು, ಅದರ ಪ್ರಕಾರ ಹದಿನಾರು ಸೇರುಗಳಿಗೆ ಒಂದು ಕೊಳಗವೆಂದು ವ್ಯಾಪಾರದಲ್ಲಿ ಬಳಸಲಾಗುತ್ತಿದ್ದಿತು. ದಿವಾನ್ ಪೂರ್ಣಯ್ಯನು ಕೃಷ್ಣರಾಜ ಕೊಳಗವನ್ನು ಅಳತೆಯಾಗಿ ಒಪ್ಪಿಕೊಳ್ಳುವಂತೆ ಜಾರಿಗೊಳಿಸಿದರು. ೧೯೦೨ರಲ್ಲಿ ಮೈಸೂರು ಸಂಸ್ಥಾನದಲ್ಲಿ ತೂಕ ಮತ್ತು ಅಳತೆಯ ಕಾಯಿದೆ ಬಗ್ಗೆ ನಿಯಂತ್ರಣಗಳನ್ನು ಆಗಿನ ಸರ್ಕಾರ ಜಾರಿಗೊಳಿಸಿ ೧೯೧೨ರಿಂದ ಅನ್ವಯಿಸುವಂತೆ ಶಾಸನಬದ್ಧವಾಗಿ ಜಾರಿಗೆ ತರಲಾಯಿತು. ೧೯೧೨ರಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಸಂಘವು ಮೈಸೂರಿನಲ್ಲಿ ಏರ್ಪಡಿಸಿದ ಆರ್ಥಿಕ ಸಮ್ಮೇಳನದಲ್ಲಿ ತೂಕ ಮತ್ತು ಅಳತೆಯ ಬಗ್ಗೆ ಆರ್ಥಿಕ ತಜ್ಞರು ಸುದೀರ್ಘ ಚರ್ಚೆ ನಡೆಸಿ ಸರ್ವಸಮ್ಮತವಾದ ತೂಕ ಮತ್ತು ಅಳತೆಯನ್ನು ಜಾರಿಗೆ ತರುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದರು. ಅದರ ಪ್ರಕಾರ ೧೯೧೮ರಲ್ಲಿ ಸರ್ವಸಮ್ಮತವಾದ ಒಂದೇ ಪ್ರಕಾರವಾದ ಮತ್ತು ಪ್ರಮಾಣೀಕರಿಸಿದ ತೂಕ ಮತ್ತು ಬಟ್ಟುಗಳಿಗೆ ಸರ್ಕಾರದ ಚಿಹ್ನೆಯುಳ್ಳ ಮೊಹರುಗಳನ್ನು ಮುದ್ರಿಸಿದ ವಿವಿಧ ವಿನ್ಯಾಸದ ತೂಕ ಮತ್ತು ಅಳತೆಗಳ ಪರಿಕರ ಸಾಧನಗಳನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ನಿರ್ದೇಶಕರು ಜಾರಿಗೆ ತಂದರು, ಅವು ಪ್ರಮಾಣೀಕೃತ ಪರೀಕ್ಷೆಗೆ ಒಳಪಡಿಸುವ ಜವಾಬ್ದಾರಿಯನ್ನು ಕಂದಾಯ ಮತ್ತು ಪೊಲೀಸ್ ಇಲಾಖೆಗೆ ವರ್ಗಾವಣೆ ಮಾಡಲಾಯಿತು. ಮೈಸೂರು ಪ್ರೀಮಿಯರ್ ಮೆಟಲ್ ಕಾರ್ಖಾನೆಯು ತೂಕ ಮತ್ತು ಅಳತೆಗಳ ಮಾಪನಗಳನ್ನು ತಯಾರಿಸಿ ಸರಬರಾಜು ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡಿತು. ತೂಕ ಮತ್ತು ಅಳತೆಯಲ್ಲಿ ಮೋಸ ಮಾಡುವ ವರ್ತಕರಿಗೆ ದಂಡವಿಧಿಸುವ ಮತ್ತು ಶಿಕ್ಷೆಗೊಳಪಡಿಸುವ ಕ್ರಮವನ್ನು ಜಾರಿಗೊಳಿಸಲಾಯಿತು.

## ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆ

೧೯೫೬ಕ್ಕಿಂತ ಪೂರ್ವದಲ್ಲಿ ರಾಜ್ಯದಲ್ಲಿ ರೂಢಿಯಲ್ಲಿದ್ದ ವಿವಿಧ ಪ್ರಕಾರದ ತೂಕ ಮತ್ತು ಅಳತೆಗಳನ್ನು ಸರ್ಕಾರವು ಸಂಪೂರ್ಣವಾಗಿ ನಿಷೇಧಿಸಿತು. ಭಾರತ ಸರ್ಕಾರದ ಕೇಂದ್ರಿಯ ಕಾಯಿದೆ ಅನ್ವಯ ಮೆಟ್ರಿಕ್ ಪದ್ಧತಿಯನ್ನು ೧೯೫೮ರಲ್ಲಿ ಕರ್ನಾಟಕ ರಾಜ್ಯದಲ್ಲಿ ವಿಧಿವತ್ತಾಗಿ ಜಾರಿಗೊಳಿಸಲಾಯಿತು. ೧೯೫೮ರ ಕರ್ನಾಟಕ ತೂಕ ಮತ್ತು ಅಳತೆ (ನಿಬಂಧನೆ) ಅಧಿನಿಯಮವನ್ನು ೧೯೬೦ರ ಏಪ್ರಿಲ್ ಒಂದರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಈ ಹೊಸತೂಕಗಳ ಬಳಕೆಯನ್ನು ಇಡೀ ರಾಜ್ಯದಲ್ಲಿ ೧೯೭೨ರ ಏಪ್ರಿಲ್ ಒಂದರಿಂದ ಕಡ್ಡಾಯವಾಗಿ ಜಾರಿಗೆ ತರಲಾಗಿದೆ.

ಕರ್ನಾಟಕ ರಾಜ್ಯ ಮಾರುಕಟ್ಟೆ ಇಲಾಖೆಯ ಅವಿಭಾಜ್ಯ ಅಂಗವಾಗಿದ್ದ ತೂಕ ಮತ್ತು ಅಳತೆ ಇಲಾಖೆಯನ್ನು ೧೯೭೬ರಲ್ಲಿ ಪ್ರತ್ಯೇಕಿಸಿ ಸ್ವತಂತ್ರ ಇಲಾಖೆಯಾದ 'ತೂಕ ಮತ್ತು ಅಳತೆ ಮಾಪನ ಇಲಾಖೆ'ಯನ್ನು ಸ್ಥಾಪಿಸಲಾಯಿತು. ೧೯೯೦ರಿಂದ ಈ ಇಲಾಖೆಯ ಹೆಸರನ್ನು ಕಾನೂನು ಮಾಪನ ಶಾಸ್ತ್ರ ಇಲಾಖೆಯೆಂದು ಪುನರ್‌ನಾಮಕರಣ ಮಾಡಲಾಗಿದೆ. ಜಿಲ್ಲೆಯಲ್ಲಿ ಈ ಇಲಾಖೆಯ ಆಡಳಿತ ನಿರ್ವಹಿಸಲು ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರ ಕಚೇರಿಯನ್ನು ೧೯೬೨ರಲ್ಲಿ ತೆರೆಯಲಾಯಿತು. ಈ ಕಚೇರಿಯ ಅಧೀನಕ್ಕೆ ಒಳಪಟ್ಟಂತೆ ಉಪವಿಭಾಗ ಮಟ್ಟದ ಕಾನೂನು ಮಾಪನ ಶಾಸ್ತ್ರ ನಿರೀಕ್ಷಕರ ಕಚೇರಿಗಳನ್ನು ತುಮಕೂರು ೧ ಆಟೋ ಮತ್ತು ಟ್ಯಾಕ್ಸಿ ಘಟಕ, ತುಮಕೂರು, ತಿಪಟೂರು, ಮಧುಗಿರಿ, ಈ ನಾಲ್ಕು ವಿಭಾಗಗಳನ್ನು ನಂತರ ಸ್ಥಾಪಿಸಲಾಯಿತು.

ಕಾನೂನು ಮಾಪನ ಶಾಸ್ತ್ರ ಇಲಾಖೆಯವರು ತೂಕ ಮತ್ತು ಅಳತೆಗಳಿಗೆ ಸಂಬಂಧಪಟ್ಟ ಅಧಿನಿಯಮವನ್ನು ಸಹ ಕಾರ್ಯಗತಗೊಳಿಸುವುದರ ಜೊತೆಗೆ ಉಪಯೋಗದಲ್ಲಿದ್ದಂತೆ ತೂಕ ಮತ್ತು ಅಳತೆಗಳ ಪರೀಕ್ಷೆ ಅವುಗಳಿಗೆ ಮುದ್ರೆ ಹಾಕುವುದು ಮತ್ತು ಅವುಗಳನ್ನು ಪರಿಶೀಲಿಸುವುದೇ ಮೊದಲಾದ ಕೆಲಸಗಳಲ್ಲದೇ ಅಧಿನಿಯಮ ಹಾಗೂ ನಿಬಂಧನೆಗಳನ್ನು ಉಲ್ಲಂಘಿಸುವಂತಹ ವ್ಯಾಪಾರಿಗಳ ವಿರುದ್ಧ ಕಾನೂನು ಕ್ರಮ ಸಹ ಕೈಗೊಳ್ಳುವರು. ಈ ಇಲಾಖೆ ತೂಕ ಮತ್ತು ಅಳತೆ ಪ್ರಮಾಣಗಳ ಅಧಿನಿಯಮ (ಪ್ಯಾಕ್ ಮಾಡಿದ ವಸ್ತುಗಳು) ೧೯೭೭ನ್ನು ಕಾನೂನುಬದ್ಧವಾಗಿ

ಜಾರಿಗೆ ತರುತ್ತಿದೆ. ಇದಕ್ಕನುಗುಣವಾಗಿ ಪ್ರತಿಯೊಬ್ಬ ತಯಾರಕನೂ ಮತ್ತು ಭಾಂಗಿ (ಪೊಟ್ಟಣ) ಕಟ್ಟುವವನು, ಭಾಂಗಿಯ ಮೇಲೆ ತಯಾರಕನ ಹೆಸರು, ಪ್ಯಾಕ್ ಮಾಡುವವರ ಹೆಸರು, ವಸ್ತು ತಯಾರಾದ ಮತ್ತು ಪ್ಯಾಕ್ ಮಾಡಿದ ದಿನಾಂಕ, ವಸ್ತುವಿನ ನಿವ್ವಳ ತೂಕ ಮತ್ತು ನಿವ್ವಳ ಬೆಲೆ, ವಸ್ತುವಿನ ಗುಣಮಟ್ಟ ಮತ್ತು ಅದರ ಉಪಯೋಗದ ಒಳಗಿನ ದಿನಾಂಕ ಮುಂತಾದವನ್ನು ಶಾಸನರೀತ್ಯಾ ನಮೂದಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ತೂಕ ಮತ್ತು ಅಳತೆಯ ಸಾಧನಗಳು ಮತ್ತು ಪರಿಕರಗಳು, ಶುದ್ಧ ಪ್ರಾಮಾಣೀಕೃತ ಹಾಗೂ ಕರಾರು ಪರೀಕ್ಷೆಗೊಳಪಟ್ಟು ನ್ಯಾಯಬದ್ಧವಾಗಿ ತೂಕ ಮತ್ತು ಅಳತೆಯನ್ನು ನೋಡಿಕೊಳ್ಳುವುದು, ಕಾನೂನಿನ ನಿಬಂಧನೆ ಮತ್ತು ನಿಯಂತ್ರಣಗಳಿಗೆ ಒಳಪಟ್ಟು ಪ್ರತಿವರ್ಷ ನವೀಕರಿಸುವ ಪದ್ಧತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿದೆ. ಇಂತಹ ಪ್ರಾಮಾಣೀಕೃತ ಅಳತೆ ಮತ್ತು ತೂಕದಲ್ಲಿ ಮೋಸ, ವಂಚನೆ, ಅಥವಾ ಕೃತಕವಾಗಿ ಕಡಿಮೆ ತೂಕ ಮತ್ತು ಅಳತೆ ಮಾಡುವ ಪ್ರಕರಣಗಳನ್ನು ನಿಯಂತ್ರಣ ಕಾಯಿದೆ ಪ್ರಕಾರ ವ್ಯಾಪಾರದ ಲೈಸೆನ್ಸ್ ರದ್ದುಪಡಿಸುವ, ದಂಡ ವಿಧಿಸುವ ಮತ್ತು ಶಿಕ್ಷೆಗೆ ಒಳಪಡಿಸುವ ಕಾನೂನನ್ನು ಜಾರಿಗೆ ತಂದಿದೆ.

ಪೆಟ್ರೋಲ್ ಬಂಕುಗಳಲ್ಲಿ ವಿದ್ಯುನ್ಮಾನ ಮೆಟ್ರಿಕ್ ಪದ್ಧತಿಯ ಸ್ವಯಂ ಚಾಲಿತ ವಿದ್ಯುತ್ ಉಪಕರಣಗಳನ್ನು ಅಳವಡಿಸಿ ಕರಾರುವಾಕ್ಕಾಗಿ ಪೆಟ್ರೋಲ್, ಡೀಝಲ್ ಮತ್ತು ಇತರೆ ದ್ರವ ಪದಾರ್ಥಗಳನ್ನು ಅಳತೆ ಮಾಡುವಂತೆ ನೋಡಿಕೊಳ್ಳಲಾಗುತ್ತದೆ. ನಿಯಂತ್ರಿತ ಮಾರುಕಟ್ಟೆ ಸಹಕಾರಿ ಮಾರಾಟ ಮಂಡಳಿ, ಮಂಡಿಪೇಟೆಯಲ್ಲದೆ ಜಿಲ್ಲೆಯ ಎಲ್ಲಾ ಅಂಗಡಿಗಳಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವಿಭಾಗವು ಪಡಿತರ ಪದ್ಧತಿಗೊಳಪಟ್ಟ ಕಾರ್ಡುದಾರರಿಗೆ ನ್ಯಾಯಬೆಲೆ ಅಂಗಡಿಗಳು ಮತ್ತು ಗ್ರಾಹಕರ ಸಹಕಾರ ಸೊಸೈಟಿಗಳಲ್ಲಿ ವಿದ್ಯುನ್ಮಾನದ ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯನ್ನು ಅಳವಡಿಸಿದೆ.

ಪ್ರಸ್ತುತ ಪದ್ಧತಿಯ ಮೆಟ್ರಿಕ್ ಪದ್ದತಿಯ ತೂಕ ಮತ್ತು ಅಳತೆಯಲ್ಲಿ ಬೆಲೆಗಳನ್ನು ನಮೂದಿಸಲು ಬಹಳ ಸುಲಭವಾಗಿರುತ್ತದೆ. ತೂಕ ಮಾಡಲು ಕಿಲೋಗ್ರಾಂ (ಕೆ.ಜಿ) ಗುಣಕಗಳಲ್ಲಿ ವಿಭಾಗಗಳಿವೆ. ಅಳತೆ ಮಾಡಲು ಬೇರೆ ಬೇರೆ ಗುಣಕಗಳಲ್ಲಿ ಲೀಟರ್ ಮತ್ತು ಮೀಟರ್‌ಗಳಿವೆ. ಭಾರವಾದಂತಹ ಸಾಮಾನುಗಳನ್ನು ತೂಕ ಮಾಡಲು ಕಾಂಟರ್, ಸ್ಕೇಲ್, ಪ್ಲಾಟ್‌ಫಾರಂ, ತೂಕದ ಸಾಧನಗಳು, ಲಾರಿ ವೇ ಬ್ರಿಡ್ಜ್ ಮುಂತಾದವುಗಳಿವೆ. ಅದೇ ರೀತಿ ಅತಿ ಸೂಕ್ಷ್ಮವಾದ ಬೆಲೆ ಬಾಳುವ ವಸ್ತುಗಳನ್ನು ತೂಕ ಮಾಡಲು ಎಲೆಕ್ಟ್ರಾನಿಕ್ ಬ್ಯಾಲೆನ್ಸ್ ತಕ್ಕಡಿಗಳು ವಿಶೇಷ ಎಲೆಕ್ಟ್ರಾನಿಕ್ ಕ್ಯಾರಟ್ ಬ್ಯಾಲೆನ್ಸ್‌ಗಳು ಕೂಡ ಬಳಕೆಯಲ್ಲಿವೆ. ವಾಹನಗಳಿಗೆ ಪೆಟ್ರೋಲ್, ಡೀಜಲ್ ಮುಂತಾದ ಇಂಧನ ತುಂಬಲು ಪೆಟ್ರೋಲ್ ಪಂಪುಗಳ ಮಾಪಕಗಳಿವೆ. ಇದೇ ರೀತಿ ಅಡುಗೆ ಅನಿಲ ಸಿಲೆಂಡರ್ (ಎಲ್‌ಪಿಜಿ) ಮತ್ತು ವಾಹನಗಳಿಗೆ ಅನಿಲದ ಪ್ರಮಾಣವನ್ನು ತಿಳಿಸುವ ಮಾಪಕಗಳು ಉಪಯೋಗದಲ್ಲಿವೆ. ಮುಚ್ಚಿರುವ ಪೊಟ್ಟಣಗಳ (ಪ್ಯಾಕೇಜ್ ಕಾಮೋಡಿಟಿ ನಿಯಮ) ಕಾನೂನು, ಸ್ಟ್ಯಾಂಡರ್ಡ್ಸ್ ಆಫ್ ವೈಟ್ಸ್ ಆಂಡ್ ಮೇಝರ್ ಆಕ್ಟ್ ೧೯೭೬ ರ ನಿಯಮ ಜಾರಿಯಲ್ಲಿದೆ.

## ನಾಣ್ಯ ಪದ್ಧತಿ ಮತ್ತು ಹಣದ ಚಲಾವಣೆ

ಪ್ರಾಚೀನ ಕಾಲದಲ್ಲಿ ಮೈಸೂರು ಸಂಸ್ಥಾನವು ರಾಜಮನೆತನದ ಆಳ್ವಿಕೆಗೆ ಒಳಪಟ್ಟ ಕಾಲದಲ್ಲಿ ರಾಜ್ಯದಲ್ಲಿ ನಾಣ್ಯ ಪದ್ಧತಿ ಚಲಾವಣೆಯಲ್ಲಿದ್ದಂತೆ ತುಮಕೂರು ಜಿಲ್ಲೆಯಲ್ಲೂ ಚಿನ್ನ, ಬೆಳ್ಳಿ ನಾಣ್ಯಗಳು ಚಲಾವಣೆಯಲ್ಲಿದ್ದ ಬಗ್ಗೆ ಹಿಂದಿನ ಶಾಸನಗಳಿಂದ ವೇದ್ಯವಾಗುತ್ತದೆ. ತಲಕಾಡಿನ ಗಂಗರಸರ ಕಾಲದಲ್ಲಿ ಮದಗಜ ಚಿಹ್ನೆಯನ್ನು ನಾಣ್ಯದಲ್ಲಿ ಮುದ್ರಿಸಿ, ಜಾರಿಗೆ ತಂದ ಬಗ್ಗೆ ಇತಿಹಾಸಕಾರ ಪ್ರೊ.ಎಂ.ಎಚ್. ಕೃಷ್ಣ ಅವರು ಉಲ್ಲೇಖಿಸಿದ್ದಾರೆ. ಆಗಿನ ಕಾಲದಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ಲೋಹಗಳಿಂದ ಮುದ್ರಿಸಿದ ಐದು ಪ್ರಕಾರದ ನಾಣ್ಯಗಳು ಚಲಾವಣೆಯಲ್ಲಿದ್ದು, ಅವುಗಳಿಗೆ 'ಗದ್ಯಾಣ' ನಾಣ್ಯಪದ್ಧತಿ ಎಂದು ಕರೆಯಲಾಗುತ್ತಿತ್ತು.

ಹಿಂದಿನ ಕಾಲದಲ್ಲಿ ಹಲವಾರು ತರಹದ 'ಗದ್ಯಾಣ' ನಾಣ್ಯಗಳು ಚಲಾವಣೆಯಲ್ಲಿದ್ದವು. ಕ್ರಿ.ಶ. ೧೧-೧೨ನೇ ಶತಮಾನದಲ್ಲಿ ಶಾಸನಗಳಲ್ಲಿ ಗದ್ಯಾಣದ ಉಲ್ಲೇಖವಿದೆ. ಈ ನಾಣ್ಯಗಳು ಚಿನ್ನದಲ್ಲಿ ಮಾಡಲ್ಪಟ್ಟಿದ್ದವು. ತರುವಾಯ ಟಂಕಸಾಲೆಯಲ್ಲಿ ಬಂಗಾರದ ಎರಕ ಹೊಯ್ಯಲ್ಪಟ್ಟ ನಾಣ್ಯಗಳು; ಚಿನ್ನ ಬೆಳ್ಳಿ, ತಾಮ್ರ ಮುಂತಾದ ಒಂದಕ್ಕಿಂತ ಹೆಚ್ಚು ಲೋಹಗಳ ಮಿಶ್ರಣಗಳಿಂದ ಮಾಡಲ್ಪಟ್ಟ ನಾಣ್ಯಗಳು ಚಲಾವಣೆಯಲ್ಲಿದ್ದವು. ಶುದ್ಧ ಬಂಗಾರದಿಂದ (ಅಪರಂಜಿ) ಮಾಡಲ್ಪಟ್ಟ ನಾಣ್ಯಕ್ಕೆ ಹೊನ್ನು ನಾಣ್ಯಗಳೆಂದೂ 'ಘಟ್ಟಿ ವರಾಹ' ಅಂದರೆ ಹೆಚ್ಚು ಬಂಗಾರವನ್ನು ಹೊಂದಿರುವ ವರಹಗಳಿಗೆ

ದೊಡ್ಡ ವರಾಹ ಗದ್ಯಾಣ ನಾಣ್ಯವೆಂದೂ ಆಗಿನ ಕಾಲದಲ್ಲಿ ಚಲಾವಣೆಯಲ್ಲಿದ್ದವು. ವಿಜಯನಗರ ರಾಜರಿಂದ ನೀಡಲ್ಪಟ್ಟ ಸಣ್ಣ ಪ್ರತಾಪ ಗದ್ಯಾಣ ನಾಣ್ಯಗಳು ಬಳಕೆಯಲ್ಲಿದ್ದವು. ಗದ್ಯಾಣ ಅಥವಾ ವರಾಹ ನಾಣ್ಯಗಳು ತುಮಕೂರು ಜಿಲ್ಲೆಯಲ್ಲಿ ಚಲಾವಣೆಯಲ್ಲಿದ್ದ ಬಗ್ಗೆ ಶಾಸನಾಧಾರಗಳಿವೆ. ಅಲ್ಪ ಮೊತ್ತದ ಬೆಳ್ಳಿ ನಾಣ್ಯವೂ ಸಹ ಚಲಾವಣೆಯಲ್ಲಿತ್ತು. ವಿಜಯನಗರ ರಾಜಮನೆತನದ ಆಳ್ವಿಕೆಯ ಕಾಲದಲ್ಲಿ ಚಿನ್ನ ಮತ್ತು ಬೆಳ್ಳಿ ಲೋಹಗಳಿಂದ ಮುದ್ರಿಸಿದ ಒಂದು ನಾಣ್ಯದ ತೂಕವು ೫೨ ಗ್ರೈನ್ಸ್ ಇತ್ತು. ಆ ಕಾಲದಲ್ಲಿ ಪಗೋಡ, ಹೊನ್ನು, ಪ್ರತಾಪ, ಪಣ ಹಾಗ, ಪಾವಲಿ, ಆಣೆ, ಕಾಸು, ದುಗ್ಗಾಣೆ ಎಂಬ ವಿವಿಧ ವರ್ಗದ ನಾಣ್ಯಗಳು ಚಲಾವಣೆಯಲ್ಲಿದ್ದವು.

೧೬೩೮–೧೬೫೮ರ ಅವಧಿಯಲ್ಲಿ ಮೈಸೂರು ಸಂಸ್ಥಾನದ ಕಂಠೀರವ ನರಸರಾಜರು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರು (೧೭೯೯–೧೮೬೮ರಲ್ಲಿ) ವಿಜಯನಗರ ನಾಣ್ಯ ಪದ್ಧತಿಯನ್ನು ಮುಂದುವರಿಸುವುದರ ಜೊತೆಗೆ ಬೆಳ್ಳಿ ಮತ್ತು ತಾಮ್ರ ಮಿಶ್ರಿತ ಲೋಹದಿಂದ ಸಿಂಹದ ಲಾಂಛನವನ್ನು ನಾಣ್ಯದ ಒಂದು ಮುಖದಲ್ಲಿ ಮುದ್ರಿಸಿ ಇನ್ನೊಂದು ಮುಖದ ಮೇಲೆ ಆಲೇಖವನ್ನು ಕನ್ನಡ, ದೇವನಗರಿ, ಇಂಗ್ಲಿಷ್ ಮತ್ತು ಪರ್ಶಿಯನ್ ಭಾಷೆಗಳಿಂದ ಮುದ್ರಿಸುವುದರ ಮೂಲಕ ಚಲಾವಣೆಗೆ ತಂದಿದ್ದರು. ಅವುಗಳನ್ನು ಕಂಠೀರಾಯ ಪಗೋಡ, ಆಣೆ, ದುಡ್ಡು ಎಂದು ಕರೆಯಲಾಗಿದ್ದಿತು. ಚಿನ್ನದ ಒಂದು ರೂಪಾಯಿ ನಾಣ್ಯದ ತೂಕ ೫೨ ಗ್ರೈನ್ಸ್; ೨೬ ಗ್ರೈನ್ಸ್ ವರಹದ ನಾಣ್ಯಕ್ಕೆ ಅರ್ಧ ರೂಪಾಯಿ, ೫.೨ ಗ್ರೈನ್ಸ್ ನಾಣ್ಯಕ್ಕೆ ಹತ್ತನೇ ಒಂದು ಭಾಗದ ನಾಣ್ಯವೆಂದು ಕರೆಯಲಾಗಿದ್ದಿತು. ಬೆಳ್ಳಿಯ ನಾಣ್ಯಗಳು ರೂಪಾಯಿ, ಅರ್ಧರೂಪಾಯಿ, ಪಾವಲಿ ಎಂಬುದಾಗಿ ಚಲಾವಣೆಯಲ್ಲಿದ್ದಿತು.

ಹೈದರಾಲಿ ಆಳ್ವಿಕೆಯಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರ ಮಿಶ್ರಿತ ನಾಣ್ಯಪದ್ಧತಿ ಜಾರಿಯಲ್ಲಿದ್ದಿತು. ಈ ನಾಣ್ಯ ಪದ್ಧತಿಯು ಕೆಳದಿಯ ಸದಾಶಿವರಾಯರು ಚಲಾವಣೆಗೆ ತಂದ ನಾಣ್ಯ ಪದ್ಧತಿಯಂತೆಯೇ ಸಮಾನವಾಗಿದ್ದಿತು. ಟಿಪ್ಪುಸುಲ್ತಾನ ಪರ್ಶಿಯನ್ ಲಿಪಿಯಲ್ಲಿ ತಮ್ಮ ಮುಸ್ಲಿಮ್ ಧರ್ಮ ಗುರುಗಳ ಮುಖ ಚಿಹ್ನೆಯ ನಾಣ್ಯವನ್ನು ಚಲಾವಣೆಗೆ ತಂದಿರುವುದರ ಬಗ್ಗೆ ಆಗಿನ ಶಾಸನಗಳಿಂದ ತಿಳಿದುಬಂದಿದೆ. ಟಿಪ್ಪುಸುಲ್ತಾನ್ ಅಧಿಕ ಮೌಲ್ಯವುಳ್ಳ ನಾಣ್ಯಕ್ಕೆ ಅಹಮದಿ ಎಂದೂ, ಅತ್ಯಂತ ಕಡಿಮೆ ಮೌಲ್ಯದ ನಾಣ್ಯಕ್ಕೆ ಪನಮ್ ಎಂದು ಟಿಪ್ಪು ಕರೆದಿದ್ದರು. ಅರ್ಧ ರೂಪಾಯಿಗೆ ಅಬೀದಿ ಎಂದೂ, ಕಾಲು ರೂಪಾಯಿಗೆ ಬದೂರಿ ಎಂದು ಕರೆಯಲಾಗಿದ್ದಿತು. ತಾಮ್ರದ ನಾಣ್ಯಗಳಿಗೆ ಪಾವಲಿ, ಎರಡಾಣೆ, ಒಂದಾಣೆ, ದುಗ್ಗಾಣೆ, ಕಾಸು (ಪೈ) ಎಂದು ಗುರುತಿಸಲಾಗಿದ್ದಿತು. ಟಿಪ್ಪುಸುಲ್ತಾನ್ ಶ್ರೀರಂಗಪಟ್ಟಣದಲ್ಲಿ ಟಂಕಸಾಲೆಯಲ್ಲಿ ಲೋಹಗಳಿಂದ ಮುದ್ರಿಸಿದ ನಾಣ್ಯಗಳಿಗೆ ಹೈದರಾಲಿ, ಇಮಾನಿ ಎಂಬ ಹೆಸರುಗಳಿಂದ ಕರೆಯುತ್ತಿದ್ದರು.

ಭಾರತ ಸರ್ಕಾರವು ೧೮೭೦ರಲ್ಲಿ ನಾಣ್ಯ ಪದ್ಧತಿಯನ್ನು ಜಾರಿಗೆ ತಂದ ಸಂದರ್ಭದಲ್ಲಿ ಮೈಸೂರು ಸಂಸ್ಥಾನವು ಈ ನಾಣ್ಯಪದ್ಧತಿಯನ್ನು ಶಾಸನಬದ್ಧವಾದ ಚಲಾವಣೆಗೆ ಒಳಪಡಿಸಿ ಸರ್ವಮಾನ್ಯತೆ ನೀಡಿ ಚಲಾವಣೆಗೆ ತಂದಿತು. ೧೮೮೧ರ ಅನುಬಂಧ ೧೫ರ ಶಾಸನದ ಪ್ರಕಾರ, ಬ್ರಿಟಿಷ್ ಸರ್ಕಾರವು ಮೈಸೂರು ಸಂಸ್ಥಾನದಲ್ಲಿ ಕಾನೂನುಬದ್ಧವಾದ ನಾಣ್ಯ ಪದ್ಧತಿಯನ್ನು ಚಲಾವಣೆಗೆ ತಂದಿತು. ೧೯೧೯ರಲ್ಲಿ ಭಾರತ ಸರ್ಕಾರವು ಕಾನೂನು ಬದ್ಧವಾದ ನಾಣ್ಯ ಪದ್ಧತಿಯನ್ನು ಚಲಾವಣೆಗೆ ತಂದಿತು. ಈ ನಾಣ್ಯಪದ್ಧತಿ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿದ್ದು, ಒಂದು ರೂಪಾಯಿ=೧೬ ಆಣೆ; ಅರ್ಧ ರೂಪಾಯಿ=೮ ಆಣೆ; ಪಾವಲಿ = ನಾಲ್ಕು ಆಣೆ, ಎರಡಾಣೆ, ಒಂದಾಣೆ, ಅರ್ಧ ಆಣೆ, ಮೂರು ಕಾಸು, ಕಾಸು, ಎಂಬ ಹೆಸರುಗಳಿಂದ ಚಲಾವಣೆಯಲ್ಲಿದ್ದಿತು. ಒಂದು ಆಣೆಗೆ ೧೨ ಕಾಸುಗಳಾಗಿದ್ದು, ಒಂದು ರೂಪಾಯಿಗೆ ೧೯೨ (೧೬ ಆಣೆ) ಕಾಸುಗಳಾಗುತ್ತಿತ್ತು.

ಸ್ವಾತಂತ್ರ್ಯಪೂರ್ವದಲ್ಲಿ ಭಾರತದಲ್ಲಿ ಬ್ರಿಟಿಷ್ ಚಕ್ರವರ್ತಿ ಆರನೇ ಜಾರ್ಜ್‌ನ ಮುಖ ಮುದ್ರೆಯುಳ್ಳ ನಾಣ್ಯಗಳು ನಮ್ಮ ರಾಜ್ಯದಲ್ಲಿ ಚಲಾವಣೆಯಲ್ಲಿದ್ದಿತು. ಸ್ವಾತಂತ್ರ್ಯಾನಂತರ ಭಾರತದ ನಾಣ್ಯ ಪದ್ಧತಿಯಲ್ಲಿ ಸಂವಿಧಾನಾತ್ಮಕವಾದ ಪ್ರಜಾಸತ್ತಾತ್ಮಕ ಗಣರಾಜ್ಯದ ರಚನೆಯಲ್ಲಿ ನಾಣ್ಯ ಪದ್ಧತಿ ೧೯೫೭ರವರೆಗೂ ಚಲಾವಣೆಯಲ್ಲಿತ್ತು. ೧–೦೭–೧೯೫೭ ರಿಂದ ಜಾರಿಯಾದ ದಶಮಾಂಶ ಪದ್ಧತಿಯ ನಾಣ್ಯ ಪದ್ಧತಿಯು ದೇಶದ ಇತರೆಡೆಯಂತೆ ತುಮಕೂರು ಜಿಲ್ಲೆಯಲ್ಲಿಯೂ ಚಲಾವಣೆಯಲ್ಲಿದೆ.

ಭಾರತೀಯ ರಿಸರ್ವ್ ಬ್ಯಾಂಕು ೧೯೩೫ ಏಪ್ರಿಲ್ ಒಂದರಂದು ಸ್ಥಾಪನೆಯಾದ ನಂತರ ರೂಪಾಯಿ ಕರೆನ್ಸಿ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುವ ಪರಮಾಧಿಕಾರ ಹೊಂದಿದ್ದು, ರೂ. ೨, ೫, ೧೦, ೨೦, ೫೦,

೧೦೦, ೫೦೦ ಮತ್ತು ೧,೦೦೦ ಮೌಲ್ಯಗಳ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುತ್ತದೆ. ಒಂದು ರೂಪಾಯಿ ಮತ್ತು ಅದಕ್ಕೂ ಕಡಿಮೆ ಮೌಲ್ಯದ ಚಿಲ್ಲರೆ ನಾಣ್ಯಗಳನ್ನು ಭಾರತ ಸರ್ಕಾರದ ಹಣಕಾಸು ಸಚಿವಾಲಯ ಟಂಕಿಸುತ್ತದೆ. ಭಾರತೀಯ ರಿಜ಼ರ್ವ್ ಬ್ಯಾಂಕಿನಲ್ಲಿ ಇಶ್ಯೂ ಇಲಾಖೆ ಎಂಬ ಪ್ರತ್ಯೇಕವಾದ ಕಾರ್ಯಾಲಯವು ಕರೆನ್ಸಿ ನೋಟುಗಳಿಗೆ ಆಧಾರವಾಗಿ (ಬೆಂಬಲವಾಗಿ) ಚಿನ್ನ ಅಥವಾ ಬಂಗಾರದ ಗಟ್ಟಿಗಳು, ವಿದೇಶಿ ಸಾಲಪತ್ರಗಳು, ಮತ್ತು ಸರ್ಕಾರದ ರೂಪಾಯಿ ಭರವಸೆಯ ಸಾಲಪತ್ರಗಳನ್ನು ಆಸ್ತಿಗಳನ್ನಾಗಿ ಇಟ್ಟುಕೊಂಡಿರುತ್ತದೆ.

## ವಿಮೆ ವ್ಯವಹಾರ

**ಕರ್ನಾಟಕ ಸರ್ಕಾರಿ ವಿಮಾ ಇಲಾಖೆ:** ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ೧೮೯೧ರಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಶ್ರೀ. ಕೆ. ಶೇಷಾದ್ರಿ ಅಯ್ಯರ್‌ರವರಿಂದ ಸ್ಥಾಪಿಸಲ್ಪಟ್ಟು ರಾಜ್ಯ ಸರ್ಕಾರಿ ನೌಕರರಿಗೆ ತನ್ನ ಸೇವೆಯನ್ನು ಸಲ್ಲಿಸುವುದರಲ್ಲಿ ಅತ್ಯಂತ ಪ್ರಮುಖವಾದ ಹೊಣೆಯನ್ನು ಹೊಂದಿದೆ. ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಸದಸ್ಯರ ಭವಿಷ್ಯದ ಯೋಗಕ್ಷೇಮಕ್ಕೆ ಸಂರಕ್ಷಣೆ ನೀಡುತ್ತದೆ. ರಾಜ್ಯ ಸರ್ಕಾರಿ ನೌಕರರಿಗೆ ಜೀವವಿಮೆಯನ್ನು ಕಡ್ಡಾಯಗೊಳಿಸಿದೆ. ನೌಕರರು ತಮ್ಮ ಸೇವೆಯಿಂದ ನಿವೃತ್ತಿ ಹೊಂದಿದಾಗ ಆರ್ಥಿಕ ಸೌಲಭ್ಯಗಳನ್ನು ಒದಗಿಸಿದ್ದು, ನೌಕರರು ಸೇವೆಯಲ್ಲಿರುವಾಗ ಅಕಾಲಿಕ ಮರಣಕ್ಕೆ ತುತ್ತಾದಾಗ ಆ ನೌಕರನ ಕುಟುಂಬ ವರ್ಗಕ್ಕೆ ಮತ್ತು ಆಶ್ರಿತರಿಗೆ ಸಂರಕ್ಷಣೆಯನ್ನು ನೀಡುತ್ತದೆ. ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ೧೯೭೬ರಲ್ಲಿ ತನ್ನ ಆಡಳಿತವನ್ನು ವಿಕೇಂದ್ರೀಕರಣಗೊಳಿಸಿ ವಿಮಾ ಪಾಲಿಸಿದಾರರ ವಾಸಸ್ಥಳದಲ್ಲಿಯೇ ತ್ವರಿತ ಸೇವೆ ಸಲ್ಲಿಸಲು ಅನುಕೂಲವಾಗುವಂತೆ ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ವಿಮಾ ಕಛೇರಿಗಳನ್ನು ತೆರೆಯಲಾಗಿರುತ್ತದೆ. ಸರ್ಕಾರದ ಆದೇಶದಂತೆ ಇಲಾಖೆಯ ಎಲ್ಲಾ ಕಾರ್ಯಗಳನ್ನು ಗಣಕೀಕರಣಗೊಳಿಸಿದೆ. ವಿಮಾ ಶಾಖೆಗೆ ಸಂಬಂಧಿಸಿದಂತೆ ಬೆಂಗಳೂರು ಮತ್ತು ವಿಭಾಗೀಯ ಕಚೇರಿಗಳಲ್ಲಿ ಡಾಟಾ ಎಂಟ್ರಿ ಗಣಕೀಕರಣ ಮಾಡಲಾಗಿದೆ.

**ಕಡ್ಡಾಯ ಜೀವವಿಮಾ ಶಾಖೆ**: ಕರ್ನಾಟಕ ಸರ್ಕಾರಿ ನೌಕರರಿಗೆ ಕಡ್ಡಾಯ ಜೀವವಿಮಾ ನಿಯಮಗಳು ೧೯೫೫ರಿಂದ ಜಾರಿಯಲ್ಲಿದೆ. ನೌಕರರು ತಮ್ಮ ವೇತನ ಶ್ರೇಣಿಗೆ ಅನುಗುಣವಾಗಿ ಮತ್ತು ತಾನು ಅಪೇಕ್ಷಿಸಿದಲ್ಲಿ ಹೆಚ್ಚಿನ ಮೊತ್ತಕ್ಕೆ ಕಡ್ಡಾಯವಾಗಿ ವಿಮೆ ಪಾಲಿಸಿಗಳಿಗೆ ಒಳಪಡಬೇಕಾಗುತ್ತದೆ.

**ವಾಹನ ವಿಮಾ ಶಾಖೆ**: ಕರ್ನಾಟಕ ರಾಜ್ಯ ಸರ್ಕಾರದ ಹಾಗೂ ಸರ್ಕಾರದ ಆರ್ಥಿಕ ಹಿತಾಸಕ್ತಿ ಹೊಂದಿರುವ ಎಲ್ಲಾ ವಾಹನಗಳನ್ನು ಕಡ್ಡಾಯ ವಿಮೆಗೆ ಒಳಪಡಿಸಿ ಪ್ರತಿ ವರ್ಷ ಜಿಲ್ಲಾ ಕೇಂದ್ರದ ಕಚೇರಿಯಲ್ಲಿಯೇ ನವೀಕರಿಸುವ ಕಾರ್ಯ ನಿರ್ವಹಿಸುತ್ತಿದೆ. ಅಪಘಾತದ ವಿಮೆಗೆ ಸಂಬಂಧಿಸಿದ ಪ್ರಕರಣಗಳನ್ನು ಕೇಂದ್ರ ಕಚೇರಿ, ಬೆಂಗಳೂರು ಇಲ್ಲಿ ನಿರ್ವಹಿಸಲಾಗುತ್ತದೆ.

**ಸಾಮೂಹಿಕ ವಿಮಾ ಯೋಜನೆ :** ೧೯೮೧ರಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ ಜಾರಿಗೆ ಬಂದಿದೆ. ಈ ಯೋಜನೆಯಲ್ಲಿ ಸರ್ಕಾರಿ ನೌಕರರ ವಿವಿಧ ದರ್ಜೆಗಳಾದ ಎ ದರ್ಜೆಗೆ ರೂ.೨೪೦–೦೦, ಬಿ.ದರ್ಜೆಗೆ ರೂ. ೧೮೦–೦೦, ಸಿ ದರ್ಜೆಗೆ ರೂ. ೧೨೦–೦೦ ಮತ್ತು ಡಿ ದರ್ಜೆಗೆ ರೂ.೬೦–೦೦ ಗಳನ್ನು ಪ್ರತಿ ತಿಂಗಳ ವೇತನಗಳಲ್ಲಿ ಕಡಿತಗೊಳಿಸಲಾಗುತ್ತದೆ. ಈ ಯೋಜನೆಯಡಿಯಲ್ಲಿ ಒಳಪಟ್ಟಿರುವ ಸರ್ಕಾರಿ ನೌಕರರು ಮೃತಪಟ್ಟ ಸಂದರ್ಭದಲ್ಲಿ ಸಾಮೂಹಿಕ ವಿಮಾ ಯೋಜನೆಯಡಿಯಲ್ಲಿ ಎ.ಬಿ.ಸಿ. ಮತ್ತು ಡಿ ದರ್ಜೆ ನೌಕರರಿಗೆ ಕ್ರಮವಾಗಿ ರೂ. ೨,೪೦,೦೦೦ ರೂ. ೧,೮೦,೦೦೦; ಬಿ. ರೂ. ೧,೨೦,೦೦೦ ಮತ್ತು ಡಿ ದರ್ಜೆಗೆ ರೂ. ೬೦,೦೦೦ ಗಳನ್ನು ಪಾವತಿಸಲಾಗುತ್ತದೆ. ಉಳಿತಾಯ ನಿಧಿಯಿಂದ ತೊಡಗಿಸಿರುವ ಮೊತ್ತವನ್ನು ಸರ್ಕಾರ ನಿಗದಿಪಡಿಸಿರುವ ಕೋಷ್ಟಕಗಳಂತೆ ಪಾವತಿಸಲಾಗುವುದು. ಜಿಲ್ಲೆಯಲ್ಲಿ ಒಟ್ಟು ೧೬೪೦ ವೇತನ ಬಟವಾಡೆ ಅಧಿಕಾರಿಗಳಿದ್ದು ಅವರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಮತ್ತು ಅಧಿಕಾರಿಗಳ ಸೇವಾ ಪುಸ್ತಕವನ್ನು ಪರಿಶೀಲಿಸಿ ಮತ್ತು ಅವರ ವಂತಿಗೆ ಮತ್ತು ಪಾವತಿಗಳನ್ನು ಸಹ ಪರಿಶೀಲಿಸಲಾಗುತ್ತದೆ. ಇದಕ್ಕಾಗಿ ಜಿಲ್ಲೆಯಲ್ಲಿ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿದೆ.

**ಕುಟುಂಬ ಕಲ್ಯಾಣ ನಿಧಿ:** ಕುಟುಂಬ ಕಲ್ಯಾಣ ನಿಧಿ ಯೋಜನೆಯು ಸ್ಥಳೀಯ ಸಂಸ್ಥೆಗಳು ಮತ್ತು ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳ ನೌಕರರ ಸಾಮೂಹಿಕ ಭದ್ರತೆಯ ಕ್ರಮವಾಗಿ ಈ ಶಾಖೆಯು ಕಾರ್ಯನಿರ್ವಹಿಸುತ್ತದೆ. ವಿವರಗಳಿಗೆ ಕೋಷ್ಟಕ ೬.೩೧ ಅನ್ನು ನೋಡಿ.

### ಕೊಷ್ಟಕ ೬.೩೧: ತುಮಕೂರು ಜಿಲ್ಲಾ ವಿಮಾ ವ್ಯವಹಾರಗಳ ವಿವರ

| ಕ್ರ. ಸಂ | ವಿವರ | ವರ್ಷ | | | |
|---|---|---|---|---|---|
| | | ೨೦೦೫-೦೬ | ೨೦೦೬-೦೭ | ೨೦೦೭-೦೮ | ೨೦೧೩-೧೪ |
| ೧ | ವಿಮಾ ಕಂತಿನ ಆದಾಯ (ರೂ.ಗಳಲ್ಲಿ) | ೧೧,೮೮,೪೦,೧೪೨ | ೧೧,೯೬,೯೫,೨೧೩ | ೧೨,೬೦,೯೩,೮೮೧ | – |
| ೨ | ನೀಡಿದ ಪಾಲಿಸಿಗಳ ಸಂಖ್ಯೆ | ೯೫೮ | ೭೫೬ | ೫,೮೨೫ | – |
| ೩ | ವಿಮಾ ಕಂತು (ರೂ.ಗಳಲ್ಲಿ) | ೪,೩೬,೬೫೦ | ೩,೯೭,೩೨೬ | ೨೯,೯೭,೫೬೧ | – |
| ೪ | ಪಾಲಿಸಿಗಳ ವಿಮಾ ಮೊಬಲಗು (ರೂ.ಗಳಲ್ಲಿ) | ೧೧,೯೪,೦೨,೯೨೫ | ೯,೯೦,೩೮,೦೯೬ | ೫೪,೯೩,೨೩,೯೭೮ | – |

### ಜೀವ ವಿಮಾ ನಿಗಮ

ಭಾರತೀಯ ಜೀವ ವಿಮಾ ನಿಗಮವು ೧೯೫೬ರಲ್ಲಿ ಸ್ಥಾಪನೆಗೊಳ್ಳುವ ಪೂರ್ವದಲ್ಲಿ ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಜೀವವಿಮೆ ಮತ್ತು ಸಾಮಾನ್ಯ ವ್ಯವಹಾರವನ್ನು ಪ್ರೋತ್ಸಾಹಿಸಲು ಕೆಲವು ಖಾಸಗಿ ವಿಮಾ ಸಂಸ್ಥೆಗಳು ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ವಿಮಾ ಏಜೆಂಟರನ್ನು ಹೊಂದಿದ್ದವು. ೧೯೧೩ರಲ್ಲಿ ವಿಮಾ ಸಂಸ್ಥೆಯು ಸುರಕ್ಷತಾ ಯೋಜನೆ ಮತ್ತು ವಿವಾಹ ವಿಮಾ ಆಶ್ವಾಸನೆ ಸಂಸ್ಥೆಯನ್ನು ಸ್ಥಾಪಿಸಿ, ವಿಮಾ ಸೌಲಭ್ಯಗಳನ್ನು ಜಿಲ್ಲೆಯಾದ್ಯಂತ ವಿಸ್ತರಿಸಿತು. ಅದೇ ಸಂದರ್ಭದಲ್ಲಿ ವಿಮಾ ಸಂಸ್ಥೆಯು ಏಷ್ಯಾಟಿಕ್ ಸುರಕ್ಷತಾ ಜೀವ ವಿಮಾ ಸಂಸ್ಥೆ ಮತ್ತು ಸಾರ್ವತ್ರಿಕ ಆಶ್ವಾಸನಾ ಸಂಸ್ಥೆಯನ್ನು ಸ್ಥಾಪಿಸಿತು. ೧೯೫೬ರಲ್ಲಿ ಜೀವವಿಮಾ ನಿಗಮವನ್ನು ರಾಷ್ಟ್ರೀಕರಣಗೊಳಿಸಲಾಯಿತು. ರಾಷ್ಟ್ರೀಕರಣದ ನಂತರ ತುಮಕೂರು ಜಿಲ್ಲೆಯ ೧೦ ತಾಲೂಕುಗಳಲ್ಲಿ ಜೀವವಿಮಾ ಯೋಜನೆ ಮತ್ತು ಸಾಮಾನ್ಯ ಆಶ್ವಾಸನಾ ಯೋಜನಾ ವ್ಯವಹಾರಗಳನ್ನು ಹೆಚ್ಚು ಜನಪ್ರಿಯವಾಗುವಂತೆ ಪ್ರಚಾರಾಂದೋಲನವನ್ನು ಕೈಗೊಂಡಿತು. ಈ ವಿಮಾ ವಿಭಾಗವು ರಾಜ್ಯ ಸರ್ಕಾರಿ ನೌಕರರಿಗೆ ಪ್ರತ್ಯೇಕವಾದ ರಾಜ್ಯ ಸರ್ಕಾರಿ ವಿಮಾ ಇಲಾಖೆಯನ್ನು (ಕೆ.ಜಿ.ಐ.ಡಿ) ಸ್ಥಾಪಿಸಿತು. ೧೯೭೬ರಲ್ಲಿ ರಾಜ್ಯ ವಿಮಾ ಇಲಾಖೆಯ ಆಡಳಿತವನ್ನು ವಿಕೇಂದ್ರೀಕರಣಗೊಳಿಸಲಾಯಿತು. ಈ ವಿಮಾ ವಿಭಾಗವು ಮೋಟಾರು ವಾಹನ ವಿಮಾ ವ್ಯವಹಾರವನ್ನು ಸಹ ನಿರ್ವಹಿಸುತ್ತದೆ. ವಿಮಾ ವಿಭಾಗವು ಜಿಲ್ಲೆಯ ೧೦ ತಾಲೂಕುಗಳು, ಹೋಬಳಿಗಳು, ಮತ್ತು ಗ್ರಾಮಾಂತರ ಪ್ರದೇಶದ ಜನರೊಂದಿಗೆ ವಿಮಾ ಏಜೆಂಟ್ ಸಂಪರ್ಕ ಬೆಳೆಸಿ ವಿಮಾ ಪಾಲಿಸಿಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿದೆ. ವಿವರಗಳಿಗೆ ಕೋಷ್ಟಕ ೬.೩೨ ನೋಡಿ

### ಕೋಷ್ಟಕ ೬.೩೨: ಜೀವವಿಮಾ ನಿಗಮ ತುಮಕೂರು ಜಿಲ್ಲೆ ಶಾಖೆ ೨೦೦೧-೦೨ರಿಂದ ೨೦೦೮-೦೯ರವರೆಗಿನ ವಿಮಾ ವ್ಯವಹಾರಗಳ ವಿವರ

(ಮೊತ್ತ ರೂ.ಲಕ್ಷಗಳಲ್ಲಿ)

| ಕ್ರ.ಸಂ | ವಿವರ | ೨೦೦೧-೦೨ | ೨೦೦೫-೦೬ | ೨೦೦೬-೦೭ | ೨೦೦೭-೦೮ | ೨೦೦೮-೦೯ |
|---|---|---|---|---|---|---|
| ೧ | ನೀಡಲಾದ ಪಾಲಿಸಿಗಳು (ಸಂಖ್ಯೆ) | ೭೧೬೮೩ | ೯೯೮೦ | ೧೫೧೭೩೦ | ೧೨೫೦೧೩ | ೧೦೮೧೧೫ |
| ೨ | ವಿಮಾ ಮೊತ್ತ | ೪೪೩೪೨.೬೪ | ೭೧೨೩೭.೬೨ | ೧೧೨೯೬.೧೬ | ೭೮೬೦೪.೦೨ | ೮೩೩೦೫.೫೯ |
| ೩ | ವಿಮಾ ಮೊದಲ ಕಂತು (ಪ್ರೀಮಿಯಮ್) | ೧೭೧೪.೯೭ | ೩೨೯.೮೯ | ೧೨೩೮೯.೭೧ | ೧೦೬೧೧.೭೪ | ೮೨೭೨.೦೮ |
| ೪ | ವಿಮಾ ಏಜೆಂಟರ ಸಂಖ್ಯೆ (ಪ್ರತಿನಿಧಿಗಳು) | ೨೧೦೫ | ೩೦೬೦ | ೩೨೬೬ | ೩೭೧೭ | ೪೧೫೩ |
| ೫ | ವಿಮಾ ಇಲಾಖೆಯ ಸಿಬ್ಬಂದಿಯ ಸಂಖ್ಯೆ | ೨೬೭ | ೩೦೫ | ೩೨೨ | ೩೨೫ | ೨೮೯ |

## ಆಶಾಕಿರಣ

ಆಶಾಕಿರಣ ಯೋಜನೆಯನ್ನು ಅಸಂಘಟಿತ ವಲಯಕ್ಕೊಳಪಟ್ಟ ರೈತರು, ರೈತ ಕಾರ್ಮಿಕರು, ಅಶಕ್ತರು, ದುರ್ಬಲ ವರ್ಗದವರು ವಿಕಲಚೇತನರು, ಬಡಕುಟುಂಬದ ಮಹಿಳೆಯರು, ಗರ್ಭಿಣಿಯರು, ಮೊದಲಾದವರಿಗೆ ಸಾಮಾಜಿಕ ಆಶ್ವಾಸನೆ ಯೋಜನೆಗಳನ್ನು ಸೆಪ್ಟೆಂಬರ್ ೧೯೮೨ರಲ್ಲಿ ಜಾರಿಗೆ ತಂದಿದೆ. ಈ ಯೋಜನೆಯಡಿಯಲ್ಲಿ ಗುಂಪು, ವೈಯಕ್ತಿಕ ಅಪಘಾತ ವಿಮಾ ಸೌಲಭ್ಯಗಳನ್ನು ಸಹ ಕಡ್ಡಾಯವಾಗಿ ಜಾರಿಗೊಳಿಸಿದೆ. ಪ್ರಸ್ತುತ ಜಾರಿಯಲ್ಲಿರುವ ವೈಯಕ್ತಿಕ ಮತ್ತು ಗುಂಪು ಅಪಘಾತ ವಿಮಾ ಯೋಜನೆಯಲ್ಲಿ ೧೬ ವರ್ಷ ವಯಸ್ಸಿನಿಂದ ೬೫ ವರ್ಷದವರೆಗಿನ ವಯೋಮಿತಿಗೊಳಪಟ್ಟ ಖಾಸಗಿ, ಸ್ವಂತ ವೃತ್ತಿ, ಸ್ವ–ಉದ್ಯೋಗದಲ್ಲಿ ಅಸಂಘಟಿತ ವಲಯದ ಎಲ್ಲಾ ಕಾರ್ಮಿಕರಿಗೆ, ಅಪಘಾತಕ್ಕೊಳಗಾದಾಗ ಅದರ ಪರಿಹಾರವಾಗಿ ವಿಮಾ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಪ್ರಕೃತಿ ವಿಕೋಪಕ್ಕೊಳಗಾಗಿ ಜೀವ ಕಳೆದುಕೊಂಡ ನತದೃಷ್ಟ ಕುಟುಂಬಗಳಿಗೆ, ಬಡಕುಟುಂಬದ ರೋಗಿಗಳಿಗೆ, ಗರ್ಭಿಣಿಯರು, ಬಡಕುಟುಂಬದ ಹೆಣ್ಣುಮಕ್ಕಳಿಗೆ ವಿಮಾ ಯೋಜನೆ, ಆಶ್ರಿತರಿಗೆ ವಿಮಾ ಯೋಜನೆ ಅಡಿಯಲ್ಲಿ ಒಂದು ಲಕ್ಷ ರೂ.ಗಳಿಗೂ ಹೆಚ್ಚಿನ ಪರಿಹಾರ ನೀಡುವ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದೆ.

**ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ:** ರೈತರು, ರೈತ ಕಾರ್ಮಿಕರು ಹಾಗೂ ಕುಟುಂಬದ ಸದಸ್ಯರು (೧೮ ರಿಂದ ೬೦ ವಯಸ್ಸಿನ) ಕೃಷಿ ಚಟುವಟಿಕೆಯಲ್ಲಿ ತೊಡಗಿರುವಾಗ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಗಳಲ್ಲಿ ಕಾರ್ಯನಿರತರಾದಾಗ ಅಪಘಾತವಾಗಿ ಸಾವು ಸಂಭವಿಸಿದರೆ ಅಥವಾ ಅಂಗವಿಕಲರಾದರೆ ಕನಿಷ್ಠ ೧೫೦೦ ರೂ. ಗಳಿಂದ ೨೫,೦೦೦ ರೂ.ಗಳವರೆಗೆ ಪರಿಹಾರವನ್ನು ಈ ಯೋಜನೆಯಡಿಯಲ್ಲಿ ನೀಡಲಾಗುತ್ತದೆ. ಹಮಾಲರಿಗೆ ಮತ್ತು ತೂಕದವರಿಗೆ ಸಾಮಾಜಿಕ ಭದ್ರತೆಗಾಗಿ ಸಮೂಹ ವಿಮಾ ಯೋಜನೆಯನ್ನು ಜಾರಿಗೆ ತಂದಿದೆ. ರೂ.೨೫,೦೦೦ ರಿಂದ ರೂ. ಒಂದು ಲಕ್ಷದವರೆವಿಗೂ ವಿಮಾ ಪರಿಹಾರವನ್ನು ಪಡೆಯಬಹುದಾಗಿದೆ.

## ಸಣ್ಣ ಉಳಿತಾಯ

ಕರ್ನಾಟಕ ಸರ್ಕಾರದ ಆದೇಶದಂತೆ ೨೦೦೬ರಿಂದ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆಗೆ "ಬಂಡವಾಳ ಹೂಡಿಕೆ ಮಾಹಿತಿ ನಿರ್ವಹಣೆ ಹಾಗೂ ವಸೂಲಾತಿ ಇಲಾಖೆ" ಎಂದು ಪುನರ್‌ನಾಮಕರಣ ಮಾಡಲಾಗಿದೆ. ೧೯೪೮ರಲ್ಲಿ ಭಾರತ ಸರ್ಕಾರದ ರಾಷ್ಟ್ರೀಯ ಉಳಿತಾಯ ಯೋಜನೆಯನ್ನು ದೇಶಾದ್ಯಂತ ಜಾರಿಗೆ ತರಲಾಯಿತು. ಈ ಯೋಜನೆಯಡಿಯಲ್ಲಿ ತುಮಕೂರು ಜಿಲ್ಲೆಯಲ್ಲಿ ರಾಷ್ಟ್ರೀಯ ಉಳಿತಾಯ ಯೋಜನಾ ಸಂಸ್ಥೆ ೧೯೫೭ರಲ್ಲಿ ಸ್ಥಾಪನೆಗೊಂಡಿತು.

೧೮೭೦ ರಲ್ಲಿ ಆಗಿನ ಮೈಸೂರು ಸಂಸ್ಥಾನದ ಪ್ರಾಂತೀಯ ಸರ್ಕಾರ ತುಮಕೂರು ಜಿಲ್ಲೆಯಲ್ಲಿ ಸಣ್ಣ ಉಳಿತಾಯ ಯೋಜನೆಯನ್ನು ಜಾರಿಗೊಳಿಸಿ ಸಾರ್ವಜನಿಕರ ಉಳಿತಾಯದ ಹಣವನ್ನು ಅಂಚೆ ಕಚೇರಿಗಳು ಸಂಗ್ರಹಿಸಿ ನಿಶ್ಚಿತ ಠೇವಣಿಯಾಗಿಟ್ಟು, ಠೇವಣಿದಾರರಿಗೆ ಮಾಸಿಕ ಬಡ್ಡಿಯನ್ನು ನೀಡುವುದರ ಜೊತೆಗೆ ವಾಯಿದೆ ಮುಗಿದ ನಂತರ ಠೇವಣಿ ಮೊತ್ತವನ್ನು ಮರುಪಾವತಿ ಮಾಡುತ್ತಾ ಬಂದಿದೆ. ಜಿಲ್ಲೆಯ ಟ್ರೆಜರಿಯು ಸಹ ಜನರಲ್ಲಿ ಉಳಿತಾಯವನ್ನು ಪ್ರೋತ್ಸಾಹಿಸಿ ಅವರಿಂದ ಹಣವನ್ನು ಸಂಗ್ರಹಿಸಿ ಬಡ್ಡಿ ನೀಡುವ ಕಾರ್ಯವನ್ನು ನಡೆಸಿಕೊಂಡು ಬಂದಿವೆ. ೧೮೮೨ರಲ್ಲಿ ಜಿಲ್ಲೆಯ ಎಲ್ಲಾ ಅಂಚೆ ಕಚೇರಿಗಳಲ್ಲಿ ಉಳಿತಾಯ ಖಾತೆ ಬ್ಯಾಂಕನ್ನು ಸ್ಥಾಪಿಸುವುದರ ಮೂಲಕ ಜನರಿಂದ ಉಳಿತಾಯದ ಹಣವನ್ನು ಸಂಗ್ರಹಿಸಿ ನಿಗದಿತ ವಾಯಿದೆ ಮುಗಿದ ನಂತರ ಬಡ್ಡಿ ಸೇರಿಸಿ ಮರು ಪಾವತಿ ಮಾಡಿದೆ. ೧೯೪೧ ರಿಂದ ರಕ್ಷಣಾ ಉಳಿತಾಯ ನಿಧಿಯನ್ನು ಸ್ಥಾಪಿಸಿ ಜನರಿಂದ ಉಳಿತಾಯದ ಹಣವನ್ನು ಸಂಗ್ರಹಿಸಿ ಆರ್ಥಿಕ ಯೋಜನೆಗಳ ಕಾರ್ಯಕ್ರಮಗಳಿಗೆ ಜಿಲ್ಲೆಯಲ್ಲಿ ಉತ್ಪಾದಕ ವೆಚ್ಚ ಮಾಡಿದೆ.

ರಾಷ್ಟ್ರೀಯ ಉಳಿತಾಯ ಸಂಸ್ಥೆಯು ಪ್ರಾರಂಭದಲ್ಲಿ ಶೇ. ೩.೭೫ ಬಡ್ಡಿದರದಲ್ಲಿ ಸಾರ್ವಜನಿಕರಿಂದ ಕನಿಷ್ಠ ಮೊತ್ತವಾದ ೦.೨೫ ಪೈಸೆಗಳಿಂದ ಗರಿಷ್ಟ ಮೊತ್ತ ೫೦೦೦ ರೂ.ಗಳವರೆಗೆ ಉಳಿತಾಯದ ಯೋಜನೆಯಲ್ಲಿ ಠೇವಣಿಗಳನ್ನು ಸಂಗ್ರಹಿಸಿದೆ. ೧೮೮೯ ರಿಂದ ಠೇವಣಿಯ ಗರಿಷ್ಠ ಮೊತ್ತವನ್ನು ೫೦೦೦ ರೂ.ಗಳಿಂದ ೨,೦೦೦ರೂ.ಗಳಿಗೆ ಇಳಿಸಿ ಬಡ್ಡಿದರವನ್ನು ಸಹ ಶೇ. ೩.೨೫ ಕ್ಕೆ ಇಳಿಸಿತು. ಕನಿಷ್ಠ ಠೇವಣಿ ಮೊತ್ತವನ್ನು ೨೦೦ ರೂ.ಗಳಿಗೆ ನಿಗದಿಪಡಿಸಿದೆ. ವಿವರಗಳಿಗೆ ಕೋಷ್ಟಕ ೬.೩೩ ನೋಡಿ

**ಕೋಷ್ಟಕ ೬.೩೩: ೨೦೦೪–೦೫ರಿಂದ ೨೦೦೮–೦೯ರವರೆಗೆ ಸಣ್ಣ ಉಳಿತಾಯ ಸಂಗ್ರಹಣೆ ಮತ್ತು ಅದರ ಗುರಿ ಸಾಧನೆ**

(ಲಕ್ಷ ರೂ.ಗಳಲ್ಲಿ)

| ವರ್ಷ | ನಿಗದಿಪಡಿಸಿದ ವಾರ್ಷಿಕ ಗುರಿ | ಸಾಧನೆ |
|---|---|---|
| ೨೦೦೪–೨೦೦೫ | ೬೬೦೦.೦೦ | ೭೫೩೨.೯೭ |
| ೨೦೦೫–೦೬ | ೬೬೦೦.೦೦ | ೬೨೭೮.೮೩ |
| ೨೦೦೬–೦೭ | ಗುರಿ ನಿಗದಿಪಡಿಸಿರುವುದಿಲ್ಲ | ೧೮೦೭.೨೮ |
| ೨೦೦೭–೦೮ | ಗುರಿ ನಿಗದಿಪಡಿಸಿರುವುದಿಲ್ಲ | ೯೨.೬೧ |
| ೨೦೦೮–೦೯ | ಗುರಿ ನಿಗದಿಪಡಿಸಿರುವುದಿಲ್ಲ | ೧೪೮೮.೦೭ |

## ಕರ್ನಾಟಕ ರಾಜ್ಯ ಲಾಟರಿ ಯೋಜನೆ

ಕರ್ನಾಟಕ ಸರ್ಕಾರವು ಸಣ್ಣ ಉಳಿತಾಯ ಯೋಜನಾ ಇಲಾಖೆಯ ನಿರ್ದೇಶಕರ ಉಸ್ತುವಾರಿಯಲ್ಲಿ "ರಾಜ್ಯ ಲಾಟರಿ ಯೋಜನೆ' ಯನ್ನು ೧೯೭೦ರಲ್ಲಿ ಜಾರಿಗೆ ತಂದಿತು. ಇದರ ಮೂಲ ಉದ್ದೇಶವೆಂದರೆ ಸಾರ್ವಜನಿಕರಿಗೆ ಆಕರ್ಷಕ ಬಹುಮಾನ ಹಾಗೂ ಬಂಪರ್ ಬಹುಮಾನ ನೀಡಿ ಅವರಲ್ಲಿರುವ ಉಳಿತಾಯ ಹಣವನ್ನು ಏಜೆಂಟರ ಮೂಲಕ ಲಾಟರಿ ಚೀಟಿ ಮಾರಾಟ ಮಾಡುವುದರ ಮೂಲಕ ಸಂಗ್ರಹಿಸುವುದು. ಈ ಯೋಜನೆಯಿಂದ ಸಂಗ್ರಹಿಸಿ ಮಿಕ್ಕ ಹಣವನ್ನು ಆರ್ಥಿಕ ಯೋಜನಾ ಕಾರ್ಯಕ್ರಮಗಳಿಗೆ ವಿನಿಯೋಗಿಸುವುದು. ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡುವ ಏಜೆಂಟರಿಗೆ ಕಮಿಷನ್‌ನಿಂದ ಅವರ ಉಪಜೀವನಕ್ಕೆ ನೆರವಾಗುವುದು. ಇದರ ಮಾರಾಟದಿಂದ ದೇಶಾದ್ಯಂತ ಲಕ್ಷಾಂತರ ನಿರುದ್ಯೋಗಿಗಳಿಗೆ ಉದ್ಯೋಗ ಭರವಸೆ ನೀಡುವುದು ಸೇರಿರುತ್ತದೆ. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂ.ಎಸ್.ಐ.ಎಲ್) ಬೆಂಗಳೂರು ಸಂಸ್ಥೆಯು ಲಾಟರಿಯ ಅಧಿಕೃತ ಮಾರಾಟಗಾರರಾಗಿದ್ದು ಅದರ ಮುದ್ರಣ ಕಾರ್ಯ, ಏಜೆಂಟರ ನೇಮಕ, ಲಾಟರಿ ಟಿಕೇಟುಗಳ ವಿತರಣೆ ಮತ್ತು ಮಾರಾಟದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿತ್ತು.

ರಾಜ್ಯ ಲಾಟರಿ ಯೋಜನೆಯಲ್ಲಿ ೫೦೦೦ ರೂ.ಗಳಿಗಿಂತ ಹೆಚ್ಚಿನ ಮೊತ್ತದ ಬಹುಮಾನವನ್ನು ಪಡೆದ ವಿಜೇತರಿಂದ ವರಮಾನ ತೆರಿಗೆಯನ್ನು ಸಂಗ್ರಹಿಸಿ ಸಂಪನ್ಮೂಲವನ್ನು ಕ್ರೋಢೀಕರಿಸುವ ಕಡ್ಡಾಯ ರಾಷ್ಟ್ರೀಯ ಉಳಿತಾಯ ಯೋಜನೆ ಮತ್ತು ಸಣ್ಣ ಉಳಿತಾಯ ಯೋಜನೆ ಮೊದಲಾದವುಗಳ ತುಮಕೂರು ಜಿಲ್ಲೆಯಲ್ಲೂ ವ್ಯಾಪಕ ಪ್ರಚಾರದಿಂದ ಸಾರ್ವಜನಿಕರ ಉಳಿತಾಯದ ಹಣವನ್ನು ಸಂಗ್ರಹಿಸುವಲ್ಲಿ ಯಶಸ್ಸು ಸಾಧಿಸಿತ್ತು.

ಸರ್ಕಾರ ದಿನಾಂಕ ೦೧–೦೪–೨೦೦೭ರಿಂದ ಲಾಟರಿ ಯೋಜನೆಯನ್ನು ಸಂಪೂರ್ಣವಾಗಿ ನಿಷೇಧಿಸಿ ಕರ್ನಾಟಕ ರಾಜ್ಯವನ್ನು ಲಾಟರಿ ಮುಕ್ತ ವಲಯವೆಂದು ಘೋಷಿಸಲಾಗಿದೆ. ಆದುದರಿಂದ ರಾಜ್ಯದಲ್ಲಿ ಯಾವುದೇ ಲಾಟರಿ ಮಾರಾಟ ಮಾಡಲು ಆಸ್ಪದ ಇರುವುದಿಲ್ಲ. ಅನಧಿಕೃತ ಲಾಟರಿ ಮಾರಾಟ ಕಂಡು ಬಂದಲ್ಲಿ ಅವುಗಳ ಮೇಲೆ ಕ್ರಮ ತೆಗೆದುಕೊಳ್ಳಲು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಲಾಟರಿ ವಿಚಕ್ಷಣ ದಳವನ್ನು ನೇಮಕ ಮಾಡಲಾಗಿದೆ. ಈ ದಳದಲ್ಲಿ ಪೋಲೀಸ್ ಅಧಿಕಾರಿಗಳನ್ನೊಳಗೊಂಡ ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳ ನಿರ್ದೇಶನದಲ್ಲಿ ಈ ತಂಡವು ಕಾರ್ಯನಿರ್ವಹಿಸುತ್ತಿದೆ.

## ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ

ಕ್ರಿಯಾಶೀಲ ಆರೋಗ್ಯವಂತ ಜೀವನಕ್ಕಾಗಿ ದೇಶದ ಎಲ್ಲಾ ಜನರಿಗೆ ಎಲ್ಲಾ ವೇಳೆಯಲ್ಲಿ ಸಾಕಷ್ಟು ಸತ್ವಪೂರ್ಣ ಆಹಾರ ಧಾನ್ಯಗಳಲ್ಲದೆ ಜೀವನಾವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಸಮರ್ಪಕವಾಗಿ ವಿತರಣೆ ಮಾಡಲು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಜಿಲ್ಲಾ ಮಟ್ಟದಲ್ಲಿ ಕಾರ್ಯರೂಪಗೊಂಡಿದೆ. ಪ್ರತೀ ಕುಟುಂಬಕ್ಕೂ ಆಹಾರ ಭದ್ರತೆಯನ್ನು ಒದಗಿಸುವ ಉದ್ದೇಶದಿಂದಾಗಿ ಸರ್ಕಾರಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಉತ್ತಮ ಪಾರದರ್ಶಕತೆ ಒದಗಿಸಿಕೊಡಲು ಪ್ರಯತ್ನಿಸುತ್ತಿವೆ. ಕಳೆದ ಅನೇಕ ದಶಕಗಳಿಂದ ಕರ್ನಾಟಕದಲ್ಲಿ ಪಡಿತರ ವ್ಯವಸ್ಥೆ ನಿರಂತರ ಆಹಾರ ಭದ್ರತಾ ಯೋಜನೆಯಡಿಯಲ್ಲಿ ಪ್ರತೀ ಕುಟುಂಬಕ್ಕೆ ಅರ್ಹತೆಗನುಸಾರವಾಗಿ ಪಡಿತರ ಚೀಟಿ ನೀಡುವುದು, ಪ್ರತಿ ಪಡಿತರ ಕಾರ್ಡುದಾರರಿಗೆ ನಿರ್ದಿಷ್ಟ ಪ್ರಮಾಣದ ಆಹಾರ ಧಾನ್ಯ ನೀಡುವುದು, ಅಗ್ಗದ ದರದಲ್ಲಿ ಪಡಿತರ ಪೂರೈಸುವುದು ಮತ್ತು ಪಡಿತರ ಆಹಾರ ಪೂರೈಕೆಗೆ ಸಬ್ಸಿಡಿ ನೀಡುತ್ತಿರುವುದು ಮತ್ತು ಗ್ರಾಹಕರ ಸಂರಕ್ಷಣೆ ಮುಂತಾದವು ಯೋಜನೆಯ ಮುಖ್ಯಾಂಶಗಳಾಗಿವೆ.

ಇಂದು ಕರ್ನಾಟಕದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಒಂದು ಬೃಹತ್ ಕಾರ್ಯಕ್ರಮವಾಗಿದ್ದು, ಇದರ ಪರಿಣಾಮಕಾರಿ ಕಾರ್ಯಾಚರಣೆಗೆ ಸರ್ಕಾರ, ಸರ್ಕಾರೇತರ ಸೇವಾ ಸಂಸ್ಥೆಗಳು ಮತ್ತು ಮತಮಾನ್ಯಗಳು ನಿರಂತರವಾಗಿ ಕಾರ್ಯಾಚರಣೆಯಲ್ಲಿ ತೊಡಗಿವೆ. ೨೦೦೫ರಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ಜಿಲ್ಲಾ, ತಾಲೂಕು, ಮತ್ತು ಗ್ರಾಮಪಂಚಾಯಿತಿಗಳಿಗೆ ಸರ್ಕಾರ ನೀಡಿದೆ. ತುಮಕೂರು ಜಿಲ್ಲೆಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಆಹಾರ ಖಾತರಿ ಸಮಿತಿಯನ್ನು ರಚಿಸಲಾಗಿದೆ. ಈ ಖಾತರಿ ಸಮಿತಿಯು ತನ್ನ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ನ್ಯಾಯಬೆಲೆ ಅಂಗಡಿಗಳ ಕಾರ್ಯನಿರ್ವಹಣೆ ಬಗ್ಗೆ ಪರಿಶೀಲಿಸುವ ಮತ್ತು ಆಹಾರ ಪಡಿತರ ಪದಾರ್ಥಗಳು ದೊರಕುವಂತೆ ಕೆಲಸ ಮಾಡಬೇಕಾಗಿದೆ. ಅದರಂತೆ ಜಿಲ್ಲೆಯಲ್ಲಿ ಪ್ರತಿ ತಿಂಗಳು ಪಡಿತರ ಆಹಾರ ಧಾನ್ಯಗಳನ್ನು ನ್ಯಾಯ ಬೆಲೆ ಅಂಗಡಿಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿವೆ ಪ್ರತಿಯೊಬ್ಬ ಪಡಿತರ ಕಾರ್ಡುದಾರನಿಗೆ ನ್ಯಾಯ ದೊರಕಿಸಿಕೊಡುವುದು ಇದರ ಉದ್ದೇಶವಾಗಿದೆ.

## ಆಹಾರ ಮತ್ತು ನಾಗರಿಕ ಸರಬರಾಜು–ವಿವಿಧ ಪಡಿತರ ಚೀಟಿ ವ್ಯವಸ್ಥೆ

೧೯೪೨ರಲ್ಲಿ ಆಹಾರ ಧಾನ್ಯ ನಿಯಂತ್ರಣ ಕಾಯ್ದೆಯನ್ನು ಸರ್ಕಾರ ಜಾರಿಗೆ ತಂದು ಆಹಾರ ಧಾನ್ಯಗಳು ಹೊರ ಜಿಲ್ಲೆಗಳಿಗೆ ರವಾನೆಯಾಗದಂತೆ ನಿರ್ಬಂಧಿಸಿತು. ನಂತರ ೧೯೫೦ರಲ್ಲಿ ಸರ್ಕಾರ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಿತು. ಮತ್ತು ಕೆಲವು ವರ್ತಕರಿಗೆ ಇದರ ಜವಾಬ್ದಾರಿಯನ್ನು ವಹಿಸಿತು. ನ್ಯಾಯ ಬೆಲೆ ಅಂಗಡಿಗಳ ಮೂಲಕ ಆಹಾರ ಮತ್ತು ನಾಗರಿಕ ಪದಾರ್ಥಗಳನ್ನು ಸರಬರಾಜು ಮಾಡಲು ಕುಟುಂಬ ಆಧಾರಿತ ಚೀಟಿ (ರೇಶನ್ ಕಾರ್ಡ್) ವ್ಯವಸ್ಥೆಯನ್ನು ಜಾರಿಗೊಳಿಸಿತು. ಪ್ರಸ್ತುತ ಕುಟುಂಬದ ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಪಡಿತರ ಚೀಟಿಯನ್ನು ೨ ಮುಖ್ಯ ಭಾಗಗಳಾಗಿ ವಿಂಗಡಿಸಲಾಗಿದೆ. (೧) ಎಪಿಎಲ್ (ಬಡತನದ ರೇಖೆಯ ಮೇಲಿರುವ ಕುಟುಂಬ) (೨) ಬಿಪಿಎಲ್ (ಬಡತನದ ರೇಖೆಯ ಕೆಳಗೆ ಇರುವ ಕುಟುಂಬ) ಬಿಪಿಎಲ್ ಕಾರ್ಡುಗಳಲ್ಲಿಯೂ ೨ ವಿಧದ ಬಣ್ಣವನ್ನು ಹೊಂದಿರುವ ಅಂದರೆ ಹಸಿರು ಕಾರ್ಡ್ ಅತೀ ಬಡವರಿಗೆ ಹಳದಿ ಕಾರ್ಡ್ ಸುಧಾರಿತ ಬಡವರಿಗೆ ನೀಡಲಾಗಿದೆ.

ಪ್ರತೀ ಗ್ರಾಮದಲ್ಲಿ ನ್ಯಾಯಬೆಲೆ ಅಂಗಡಿಗಳ ಮೇಲ್ವಿಚಾರಣೆ ಮತ್ತು ಪಡಿತರ ಗ್ರಾಹಕರ ಹಿತರಕ್ಷಣೆ ಮಾಡಲು ಆಹಾರ ಖಾತರಿ ಸಮಿತಿಗಳ ಜೊತೆ ಪ್ರತಿ ನ್ಯಾಯ ಬೆಲೆ ಅಂಗಡಿಯಲ್ಲಿ ಏಳು ಕಾರ್ಡುದಾರ ಸದಸ್ಯರ ಆಹಾರ ಜಾಗೃತಿ ಸಮಿತಿಯನ್ನು ಸಹ ರಚಿಸಲಾಗಿದೆ. ಜಾಗೃತ ಸಮಿತಿಗಳು ಪ್ರತಿಯೊಬ್ಬ ಪಡಿತರ ಚೀಟಿದಾರನಿಗೆ ಪ್ರತಿ ತಿಂಗಳು ನಿಗದಿತ ಪ್ರಮಾಣದ ಆಹಾರ ಧಾನ್ಯಗಳು ನ್ಯಾಯ ಬದ್ದ ತೂಕ ಮತ್ತು ಅಳತೆಯಲ್ಲಿ ನೀಡುವಂತೆ ಕಾರ್ಯನಿರ್ವಹಿಸುವಂತೆ ಪಡಿತರದಾರರ ನ್ಯಾಯಸಮ್ಮತ ಅಹವಾಲುಗಳು, ನ್ಯಾಯಬೆಲೆ ಅಂಗಡಿಯ ಕಾರ್ಯನಿರ್ವಹಣೆ ಬಗ್ಗೆ ಪರಾಮರ್ಶೆ ಮಾಡಲು ಅಧಿಕಾರವಿದೆ. ಜಿಲ್ಲೆಯಲ್ಲಿ ಪಡಿತರ ವ್ಯವಸ್ಥೆಯನ್ನು ೧೯೬೬ರಲ್ಲಿ ಜಾರಿಗೆ ತರಲಾಯಿತು. ಈ ವ್ಯವಸ್ಥೆಯನ್ನು ೪೦,೦೦೦ ಮತ್ತು ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ಎಲ್ಲಾ ನಗರ ಮತ್ತು ಪಟ್ಟಣಗಳಿಗೂ ವಿಸ್ತರಿಸಲಾಯಿತು. ಅದರಂತೆ, ತುಮಕೂರು ಜಿಲ್ಲೆಯು ಅನೌಪಚಾರಿಕ ಪಡಿತರ ಪದ್ಧತಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಅವಶ್ಯಕ ವಸ್ತುಗಳು ಅಂದರೆ ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆ ಹಾಗೂ ಪಾಮೊಲಿನ್ ಎಣ್ಣೆಯನ್ನು ಪಡಿತರ ಚೀಟಿ ವ್ಯವಸ್ಥೆಯನ್ವಯ ನ್ಯಾಯಬೆಲೆ ಅಂಗಡಿಗಳ ಮೂಲಕ ನಗರ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕ ವಿತರಣಾ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ವಾರ್ಷಿಕ ಆದಾಯ ರೂ.೧೨,೦೦೦ಕ್ಕಿಂತ ಕಡಿಮೆ ಇರುವ ಗ್ರಾಮಾಂತರ ಪ್ರದೇಶದ ಬಡಜನರಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳ ವಿತರಣಾ ಪದ್ಧತಿಯನ್ನು ೧–೧೧–೧೯೮೫ ರಿಂದ ಅನುಷ್ಠಾನಗೊಳಿಸಲಾಯಿತು. ಈ ಯೋಜನೆಯ ವ್ಯಾಪ್ತಿಗೆ ಭೂ ರಹಿತ ಕೃಷಿ ಕಾರ್ಮಿಕರು, ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು, ತೋಟಗಾರಿಕೆ ಕೂಲಿಕೆಲಸಗಾರರು, ಗ್ರಾಮೀಣ ಕುಶಲಕರ್ಮಿಗಳು, ಅಂಗವಿಕಲರು, ವೃದ್ಧಾಪ್ಯ ಹಾಗೂ ವಿಧವಾ ಮಾಸಾಶನದ ಫಲಾನುಭವಿಗಳು ಮುಂತಾದವರನ್ನು ಒಳಪಡಿಸಲಾಯಿತು. ಈ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಯನ್ನು ನೀಡಲಾಗುತ್ತಿದೆ. ಪ್ರತಿ ಪಡಿತರ ಚೀಟಿಗೆ ತಿಂಗಳಿಗೆ ಐದು ಕಿಲೋ ಅಕ್ಕಿ (ಕಿಲೋ ಗ್ರಾಂ ಗೆ ರೂ.೨.೫೦) ಮತ್ತು ಐದು ಕಿ.ಲೋ ಗೋಧಿಯನ್ನು (ಕಿಲೋಗ್ರಾಂ ಗೆ ೧.೬೦) ವಿತರಿಸಲಾಗುತ್ತಿತ್ತು. ಈ ಸೌಲಭ್ಯವನ್ನು ೧೯೮೯ ಆಗಸ್ಟ್ ೧೫ ರಿಂದ ೨೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪಟ್ಟಣ ಪ್ರದೇಶದ ಬಡಜನರಿಗೂ ವಿಸ್ತರಿಸಲಾಯಿತು. ಗ್ರಾಮೀಣ ಪ್ರದೇಶದ ದುರ್ಬಲ ವರ್ಗದವರನ್ನು ಪ್ರತ್ಯೇಕವಾಗಿ ಗುರುತಿಸುವ ಉದ್ದೇಶದಿಂದ ಅಂತಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಯನ್ನು ಮತ್ತು ಇತರರಿಗೆ ಕೇಸರಿ ಬಣ್ಣದ ಪಡಿತರ ಚೀಟಿಯನ್ನು ನೀಡಲಾಗಿತ್ತು. ಅಂತೆಯೇ

ಪಟ್ಟಣ ಪ್ರದೇಶದ ದುರ್ಬಲ ವರ್ಗದವರಿಗೆ ಹಸಿರು ಪಡಿತರ ಚೀಟಿಯನ್ನೂ ಹಾಗೂ ಇತರರಿಗೆ ಸಾಮಾನ್ಯ ಪಡಿತರ ಚೀಟಿಗಳನ್ನು ವಿತರಿಸಲಾಯಿತು. ಗ್ರಾಮೀಣ ಪ್ರದೇಶದಲ್ಲಿನ ಕೇಸರಿ ಪಡಿತರ ಚೀಟಿಯನ್ನು ಪಡೆದವರು ಮತ್ತು ಪಟ್ಟಣ ಪ್ರದೇಶಗಳಲ್ಲಿನ ಸಾಮಾನ್ಯ ಪಡಿತರ ಚೀಟಿಯನ್ನು ಹೊಂದಿದವರು ಪರಿಮಿತ ಪ್ರಮಾಣದಲ್ಲಿ ಸಾಮಾನ್ಯ ನೀಡಿಕೆ ಬೆಲೆಗಳಲ್ಲಿ ನಿರ್ದಿಷ್ಟ ಪ್ರಮಾಣದ ಅವಶ್ಯಕ ಸಾಮಗ್ರಿಗಳನ್ನು ಪಡೆಯುತ್ತಿದ್ದರು.

ರಾಜ್ಯದಲ್ಲಿ ೧೯೯೭ರ ಜೂನ್ ೧ ರಿಂದ ಗುರಿ ಆಧಾರಿತ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಆಚರಣೆಗೆ ತರಲಾಗಿದೆ. ದಿನಾಂಕ: ೧-೧೧-೧೯೮೫ ರಿಂದ ರಾಜ್ಯದಲ್ಲಿ ರೂಢಿಯಲ್ಲಿದ್ದ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳ ವಿತರಣಾ ಪದ್ಧತಿಯನ್ನು ಮುಂದುವರಿಸಲಾಗಿದೆ. ವಾರ್ಷಿಕ ಆದಾಯ ರೂ. ೧೭,೦೦೦ ಕ್ಕಿಂತ ಹೆಚ್ಚಿಗೆ ಇರುವ ನಗರವಾಸಿ ಕುಟುಂಬಗಳಿಗೆ ಭಾವಚಿತ್ರವಿರುವ ಫೋಟೋ ಪಡಿತರ ಚೀಟಿಯನ್ನು, ವಾರ್ಷಿಕ ಆದಾಯ ರೂ. ೧೨,೦೦೦ಕ್ಕಿಂತ ಹೆಚ್ಚಿಗೆ ಇರುವ ಗ್ರಾಮಾಂತರ ಪ್ರದೇಶದ ಜನರಿಗೆ ಕೇಸರಿ ಪಡಿತರ ಚೀಟಿಯನ್ನೂ ನೀಡಲಾಗಿದೆ. ವಾರ್ಷಿಕ ಆದಾಯ ರೂ. ೧೨,೦೦೦ಕ್ಕಿಂತ ಕಡಿಮೆ ಇರುವ ಗ್ರಾಮಾಂತರ ಪ್ರದೇಶದ ಬಡಜನರಿಗೂ ಹಾಗೂ ವಾರ್ಷಿಕ ಆದಾಯ ರೂ. ೧೭,೦೦೦ಕ್ಕಿಂತ ಕಡಿಮೆ ಇರುವ ಪಟ್ಟಣ/ ನಗರವಾಸಿ ಬಡಜನರಿಗೂ ಹಸಿರು/ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇರೆಗೆ ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಅಸ್ತಿತ್ವದಲ್ಲಿರುವ ಹಸಿರು ಪಡಿತರ ಚೀಟಿಯನ್ನು ಬದಲಿಸಿ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಹಳದಿ ಪಡಿತರ ಚೀಟಿಯನ್ನು ಪಡೆದಿರುವ ಪ್ರತಿ ಕುಟುಂಬಕ್ಕೆ ನ್ಯಾಯಬೆಲೆ ಅಂಗಡಿಗಳ ಮೂಲಕ ತಿಂಗಳಿಗೆ ೨೮ ಕಿ.ಗ್ರಾಂ ಅಕ್ಕಿ (ಕಿಲೋಗೆ ರೂ. ೬.೧೫ ರಂತೆ) ಮತ್ತು ೭ ಕಿ.ಗ್ರಾಂ ಗೋಧಿ (ಕಿಲೋಗೆ ರೂ.೪.೬೫ರಂತೆ)ಯನ್ನು ನೀಡಲಾಗುತ್ತಿತ್ತು. ಈ ಯೋಜನೆಯನ್ನು ದಿನಾಂಕ ೧-೯-೨೦೦೪ ರಿಂದ ಪರಿಷ್ಕರಿಸಲಾಗಿದ್ದು, ಅದರಂತೆ ೨೦ ಕಿಗ್ರಾಂ ಅಕ್ಕಿ (ಕಿಲೋಗೆ ೩ ರೂ.) ಹಾಗೂ ಐದು ಕಿ.ಗ್ರಾಂ. ಗೋಧಿಯನ್ನು (ಕಿಲೋಗೆ ೩ ರೂ.) ನೀಡಲಾಗುತ್ತಿತ್ತು.

ಭಾರತ ಸರ್ಕಾರ ಕಡು ಬಡವರಿಗಾಗಿ "ಅಂತ್ಯೋದಯ ಅನ್ನ ಯೋಜನೆ" (ಎ.ಎ.ವೈ) ಎಂಬ ಹೊಸ ಯೋಜನೆಯನ್ನು ೨೦೦೧-೦೨ ರಲ್ಲಿ ಆರಂಭಿಸಿದೆ. ಈ ಯೋಜನೆಯಡಿಯಲ್ಲಿ ಪ್ರತೀ ಬಿ.ಪಿ.ಎಲ್.ಕುಟುಂಬಕ್ಕೆ ತಿಂಗಳಿಗೆ ೨೮ ಕಿ.ಗ್ರಾಂ. ಅಕ್ಕಿಯನ್ನು ಮತ್ತು ೭ ಕಿ.ಗ್ರಾಂ. ಗೋಧಿಯನ್ನು ಅತಿ ರಿಯಾಯಿತಿ ದರಗಳಲ್ಲಿ ಅಂದರೆ ಅಕ್ಕಿ ಕಿ.ಗ್ರಾಂ.ಗೆ ರೂ.೩ ಹಾಗೂ ಗೋಧಿ ಕಿ.ಗ್ರಾಂ.ಗೆ ರೂ. ೨ ರಂತೆ ವಿತರಿಸಲಾಗುತ್ತಿದೆ.

ಒಂದು ರೂಪಾಯಿಗೆ ಒಂದು ಕೆ.ಜಿ.ಯಂತೆ ಬಿ.ಪಿ.ಎಲ್, ಕಾರ್ಡು ಇರುವ ಪ್ರತೀ ಕುಟುಂಬಕ್ಕೆ ೩೦ ಕೆ.ಜಿ. ಅಕ್ಕಿಯನ್ನು ನೀಡುವ ಯೋಜನೆಯನ್ನು ಜಾರಿಗೆ ತಂದಿತ್ತು. ಪ್ರಸ್ತುತ, ಬಿ.ಪಿ.ಎಲ್, ಕಾರ್ಡು ಹೊಂದಿರುವ ಪ್ರತೀ ಕುಟುಂಬಕ್ಕೆ ಉಚಿತವಾಗಿ ಅಕ್ಕಿ,ಗೋಧಿ, ಜೋಳ, ರಾಗಿಯನ್ನು ನೀಡುವ ಯೋಜನೆಯನ್ನು ಸರ್ಕಾರ ಅನುಷ್ಠಾನಕ್ಕೆ ತಂದಿದೆ.

೨೦೧೪ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ೧೦೮೬ (೨೨೫ ನಗರ ಹಾಗೂ ೮೬೧ ಗ್ರಾಮೀಣ) ಪಡಿತರ ವಿತರಣಾ ಅಂಗಡಿಗಳಿದ್ದು, ಒಟ್ಟು ೪೯,೪೫೨ (೩೬೯ ನಗರ ಹಾಗೂ ೪೫,೮೫೩) ಬಿ.ಪಿ.ಎಲ್.(ಅಂತ್ಯೋದಯ) ಕಾರ್ಡುಗಳಿದ್ದವು. ಜಿಲ್ಲೆಯಲ್ಲಿ ಒಟ್ಟಾರೆ ೬,೭೩,೬೯೫ (೧,೩೬,೧೩೫ ನಗರ ಹಾಗೂ ೫,೩೭,೬೯೫ ಗ್ರಾಮೀಣ) ಭಾವಚಿತ್ರವುಳ್ಳ ಪಡಿತರ ಚೀಟಿಗಳಿದ್ದವು.

ಅಲ್ಲದೆ, ರಾಜ್ಯ ಸರ್ಕಾರ ಎ.ಪಿ.ಎಲ್. ಕಾರ್ಡುದಾರರಿಗೂ ಅಕ್ಕಿ, ಗೋಧಿಯನ್ನು ರಿಯಾಯಿತಿ ದರದಲ್ಲಿ ನೀಡುತ್ತಿದೆ. ಜಿಲ್ಲೆಯಲ್ಲಿ ೨೦೧೪ರ ಮಾರ್ಚ್ ಅಂತ್ಯಕ್ಕೆ, ಸಿಲಿಂಡರ್ ಹೊಂದಿದ್ದ ೩೭,೮೨೨ ಹಾಗೂ ಸಿಲಿಂಡರ್ ರಹಿತ ೬೨,೪೬೯ ಎ.ಪಿ.ಎಲ್. ಕಾರ್ಡುದಾರರಿದ್ದರು. ವಿವರಗಳಿಗೆ ಕೋಷ್ಟಕ ೬.೩೪ ಹಾಗೂ ೬.೩೫ ನೋಡಿ.

## ಕೋಷ್ಟಕ ೬.೩೪: ತುಮಕೂರು ಜಿಲ್ಲೆಯಲ್ಲಿ ಚಾಲ್ತಿಯಲ್ಲಿದ್ದ ವರ್ಗವಾರು ಪಡಿತರ ಚೀಟಿಗಳ ವಿವರ ದಿ. ೦೧–೧೦–೨೦೦೯ರ ಅಂತ್ಯಕ್ಕೆ (ಆಹಾರ ಶಾಖೆ)

| ಕ್ರ.ಸಂ | ತಾಲೂಕು | ೨೦೦೧ರ ಜನಗಣತಿ ಪ್ರಕಾರ ಕುಟುಂಬಗಳ ಸಂಖ್ಯೆ | ೨೦೦೫ರ ಮನೆ–ಮನೆ ಸಮೀಕ್ಷೆಯಂತೆ ಗುರುತಿಸಲಾದ ಕುಟುಂಬಗಳ ಸಂಖ್ಯೆ | ಅಂತ್ಯೋದಯ ಅನ್ನ ಯೋಜನೆ | ಅಕ್ಷಯ | ನೆಮ್ಮದಿ ಕೇಂದ್ರಗಳಲ್ಲಿ ವಿತರಿಸಲಾದ ಬಿಪಿಎಲ್ ಪಡಿತರ ಚೀಟಿಗಳ ಪೈಕಿ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳು | ಒಟ್ಟು ಬಿಪಿಎಲ್ | ಒಟ್ಟು ಎಪಿಎಲ್ | ನೆಮ್ಮದಿ ಕೇಂದ್ರಗಳಲ್ಲಿ ವಿತರಿಸಲಾದ ಎಪಿಎಲ್ ಪಡಿತರ ಚೀಟಿಗಳ ಪೈಕಿ ಚಾಲ್ತಿಯಲ್ಲಿರುವ ಪಡಿತರ ಚೀಟಿಗಳು | ಒಟ್ಟು | (ಜ.೯ರಡಿ) ವಿತರಿಸಿರುವ ಬಿಪಿಎಲ್ ಫಲಾನುಭವಿಗಳ ಸಂಖ್ಯೆ | ಗುರುತಿಸಲಾದ ಅನರ್ಹ ಬಿಪಿಎಲ್ ಪಡಿತರ ಚೀಟಿಗಳ ಸಂಖ್ಯೆ | ಗುರುತಿಸಲಾದ ಅನರ್ಹಬಿಪಿಎಲ್ ಪಡಿತರ ಚೀಟಿಗಳ ಸಂಖ್ಯೆ (ನೆಮ್ಮದಿ) | ಬಿಪಿಎಲ್ ಶೇಕಡವಾರು ಪ್ರಮಾಣ (ನೆಮ್ಮದಿ ಪಡಿತರ ಚೀಟಿ ಸೇರಿ) |
|---|---|---|---|---|---|---|---|---|---|---|---|---|---|---|
| ೧ | ತುಮಕೂರು ನಗರ | ೫೩೯೫೮ | ೬೪೪೮೬ | ೧೯೦೪ | ೩೮೧೦೦ | ೧೮೫೫೫ | ೫೮೫೫೯ | ೨೨೨೮೬ | ೬೪೩೭ | ೮೭೨೮೨ | ೭೩೧೭ | ೨೬೩೭ | ೧೩೨೨ | ೯೦.೮೧ |
| ೨ | ತುಮಕೂರು (ಗ್ರಾ) | ೫೫೬೧೮ | ೬೪೬೧೭ | ೬೦೮೮ | ೪೧೯೫೪ | ೬೭೪೨ | ೫೪೭೮೪ | ೨೦೯೮೮ | ೨೯೩೦ | ೭೮೭೦೨ | ೪೫೭೦ | ೨೬೭೩ | ೫೪೨೧ | ೮೪.೭೮ |
| ೩ | ಕುಣಿಗಲ್ | ೫೦೭೯೨ | ೫೭೮೧೭ | ೫೭೨೪ | ೩೩೧೪೦ | ೮೧೬೫ | ೪೭೦೨೯ | ೧೮೫೭೮ | ೩೩೪೨ | ೬೮೯೪೯ | ೨೬೯೧ | ೧೩೫೫ | ೪೨೬೮ | ೮೧.೩೪ |
| ೪ | ಗುಬ್ಬಿ | ೫೪೬೮೮ | ೭೨೫೦೮ | ೪೯೨೪ | ೩೮೩೨೯ | ೯೭೨೫ | ೫೨೯೭೮ | ೨೧೦೪೭ | ೪೫೧೧ | ೭೮೫೩೬ | ೪೮೩೯ | ೩೮೧೫ | ೪೩೨೪ | ೮೪.೭೫ |
| ೫ | ತಿಪಟೂರು | ೪೭೪೨೩ | ೫೩೩೧೭ | ೪೧೯೧ | ೩೩೯೦೧ | ೪೦೬೯ | ೪೨೧೬೧ | ೧೮೬೩೧ | ೧೯೮೯ | ೬೨೭೮೧ | ೫೯೯೧ | ೧೬೫೩ | ೬೧೨೧ | ೭೯.೦೮ |
| ೬ | ತುರುವೇಕೆರೆ | ೩೮೪೧೮ | ೪೧೫೧೦ | ೩೪೩೨ | ೨೩೩೩೬ | ೪೦೧೧ | ೩೦೭೭೯ | ೧೫೪೫೬ | ೧೮೫೬ | ೪೮೦೯೧ | ೩೨೦೫ | ೧೬೧೫ | ೬೨೭೭ | ೭೪.೧೫ |
| ೭ | ಚಿ.ನಾಹಳ್ಳಿ | ೪೮೫೯೬ | ೫೧೮೪೩ | ೪೭೧೫ | ೩೦೬೦೦ | ೭೦೪೯ | ೪೨೩೬೪ | ೧೭೮೬೬ | ೩೯೩೧ | ೬೪೧೬೧ | ೩೪೭೪ | ೨೭೨೬ | ೫೮೬೭ | ೮೧.೭೨ |
| ೮ | ಮಧುಗಿರಿ | ೫೬೯೩೬ | ೬೬೨೧೯ | ೭೨೯೮ | ೪೧೪೪೧ | ೬೮೩೬ | ೫೫೫೭೫ | ೧೪೫೨೨ | ೩೩೬೭ | ೭೩೪೬೪ | ೨೫೫೯ | ೭೪೦೫ | ೭೩೯೭ | ೮೩.೯೩ |
| ೯ | ಕೊರಟಗೆರೆ | ೩೫೫೯೧ | ೪೧೧೧೪ | ೪೬೫೪ | ೨೬೩೦೪ | ೩೨೮೫ | ೩೪೨೪೩ | ೧೨೪೬೯ | ೧೪೦೬ | ೪೮೧೧೮ | ೨೯೩೨ | ೪೪೦೩ | ೧೦೯೩ | ೮೩.೨೯ |
| ೧೦ | ಶಿರಾ | ೬೦೮೨೩ | ೬೮೯೦೭ | ೬೫೮೯ | ೪೩೧೨೮ | ೧೦೭೬೬ | ೬೦೪೮೩ | ೨೦೮೦೬ | ೭೬೫ | ೮೨೦೫೪ | ೪೪೮೯ | ೩೭೮೯ | ೭೫೮೨ | ೮೭.೭೭ |
| ೧೧ | ಪಾವಗಡ | ೫೦೩೩೦ | ೫೯೭೧೬ | ೬೭೮೮ | ೪೧೫೦೧ | ೬೨೪೩ | ೫೪೫೩೨ | ೧೨೬೨೮ | ೨೩೫೪ | ೬೯೫೧೪ | ೪೯೦೭ | ೩೦೬೫ | ೭೭೫೭ | ೯೧.೩೨ |
| ಒಟ್ಟು | | ೫೫೦೪೭೩ | ೬೩೨೦೫೪ | ೫೬೩೦೭ | ೩೯೧೭೩೪ | ೮೫೪೪೬ | ೫೩೩೪೮೭ | ೧೯೫೨೭೭ | ೩೨೮೮೮ | ೭೬೧೬೫೨ | ೪೬೯೭೪ | ೩೫೧೩೬ | ೫೭೪೨೯ | ೯೨೨.೯೪ |

**ಕೋಷ್ಟಕ: ೬.೩೫: ತುಮಕೂರು ಜಿಲ್ಲೆಯಲ್ಲಿ ಜಾಗೃತಿ ಸಮಿತಿ (ಮಾಹೆವಾರು ಪ್ರತ್ಯೇಕವಾಗಿ) ೨೦೦೯–೧೦**

| ಕ್ರ.ಸಂ | ತಾಲೂಕಿನ ಹೆಸರು | ಒಟ್ಟು ನ್ಯಾಯಬೆಲೆ ಅಂಗಡಿ ಸಂಖ್ಯೆ | ಜಾಗೃತಿ ಸಮಿತಿ ರಚಿಸಲಾದ ನ್ಯಾಯಬೆಲೆ ಅಂಗಡಿ ಸಂಖ್ಯೆ | ಜನವರಿ ೦೯ | ಫೆಬ್ರವರಿ ೦೯ | ಮಾರ್ಚ್ ೦೯ | ಏಪ್ರಿಲ್ ೦೯ | ಮೇ ೦೯ | ಜೂನ್ ೦೯ | ಜುಲೈ ೦೯ | ಆಗಸ್ಟ್ ೦೯ |
|---|---|---|---|---|---|---|---|---|---|---|---|
| ೧ | ತುಮಕೂರು ನಗರ | ೧೩೫ | ೧೩೫ | ೦ | ೨೫ | ೬ | ೨೫ | ೬ | ೩೨ | ೮ | ೧೩ |
| ೨ | ತುಮಕೂರು (ಗ್ರಾ) | ೧೧೪ | ೧೧೪ | ೨೮ | ೬ | ೪೨ | ೨೪ | ೨೦ | ೩೫ | ೧೪ | ೩೪ |
| ೩ | ಕುಣಿಗಲ್ | ೧೧೮ | ೧೧೮ | ೩೫ | ೬ | ೩೦ | ೨೧ | ೩೮ | ೨೩ | ೧೮ | ೩೦ |
| ೪ | ಗುಬ್ಬಿ | ೧೦೫ | ೧೦೫ | ೧೮ | ೧೫ | ೩೦ | ೧೨ | ೩೯ | ೨೮ | ೨೧ | ೧೮ |
| ೫ | ತಿಪಟೂರು | ೬೮ | ೬೮ | ೧೯ | ೨೪ | ೨೨ | ೨೧ | ೨೨ | ೨೩ | ೧೪ | ೨೧ |
| ೬ | ತುರುವೇಕೆರೆ | ೭೯ | ೭೯ | ೧೨ | ೧೬ | ೧೫ | ೩೦ | ೧೯ | ೧೮ | ೩ | ೧೦ |
| ೭ | ಚಿಕ್ಕನಾಯಕನಹಳ್ಳಿ | ೬೮ | ೬೮ | ೬ | ೮ | ೩೧ | ೧೫ | ೧೫ | ೧೨ | ೬ | ೧೦ |
| ೮ | ಮಧುಗಿರಿ | ೧೨೪ | ೧೨೪ | ೨೨ | ೧೨ | ೩೫ | ೧೨ | ೨೦ | ೧೫ | ೮ | ೮ |
| ೯ | ಕೊರಟಗೆರೆ | ೮೫ | ೮೫ | ೩೨ | ೧೮ | ೨೪ | ೨೪ | ೮ | ೨೮ | ೧೨ | ೩೩ |
| ೧೦ | ಶಿರಾ | ೧೨೧ | ೧೨೧ | ೩೦ | ೨೦ | ೨೫ | ೮ | ೧೫ | ೧೨ | ೯ | ೧೨ |
| ೧೧ | ಪಾವಗಡ | ೮೯ | ೮೯ | ೧೯ | ೨೦ | ೧೯ | ೨೦ | ೨೧ | ೧೫ | ೨೧ | ೨೫ |
| ಒಟ್ಟು | | ೧೧೦೬ | ೧೧೦೬ | ೨೨೧ | ೧೭೦ | ೨೭೯ | ೨೧೨ | ೨೨೩ | ೨೪೧ | ೧೩೪ | ೨೧೪ |

## ತುಮಕೂರು ಜಿಲ್ಲಾ ಗ್ರಾಹಕರ ವಿವಾದಗಳ ಪರಿಹಾರ ವೇದಿಕೆ

ಇಂದಿನ ವೈವಿಧ್ಯಮಯ ಮತ್ತು ಶೋಷಣೆಯಿಂದ ಕೂಡಿದ ವ್ಯಾಪಾರ-ವಾಣಿಜ್ಯ ವ್ಯವಸ್ಥೆಯಲ್ಲಿ ಗ್ರಾಹಕನನ್ನು ಅಭಿವ್ಯಕ್ತ ಸ್ವಾತಂತ್ರ್ಯವುಳ್ಳ ಪ್ರಜ್ಞಾವಂತ ಸಾರ್ವಭೌಮನೆಂದೂ, ಅಗ್ರಮಾನ್ಯ ಸ್ವತಂತ್ರ ಪ್ರಭುವೆಂದೂ ಎಷ್ಟೇ ಹೊಗಳಿದರೂ ಅವನು ಎಷ್ಟೇ ಜಾಗೃತನಾಗಿದ್ದರೂ ಅವನು ಹಲವಾರು ವಿಧಗಳಲ್ಲಿ ವರ್ತಕರಿಂದ, ಮಧ್ಯವರ್ತಿ ವ್ಯಾಪಾರಿಗಳಿಂದ, ವಿತರಕರಿಂದ, ಸರ್ಕಾರಿ, ಅರೆಸರ್ಕಾರಿ ಸಂಸ್ಥೆಗಳಿಂದ ಒಂದಲ್ಲಾ ಒಂದು ಬಗೆಯ ಶೋಷಣೆಗೆ ಒಳಗಾಗುತ್ತಾನೆ. ಇಂತಹ ನಿರಂತರ ಶೋಷಣೆ ಮತ್ತು ಅತೃಪ್ತಿಕರ ಸೇವೆಗಳಿಂದ ತಪ್ಪಿಸಲು ಗ್ರಾಹಕರಿಗೆ ಅವರ ಹಕ್ಕುಗಳ ಬಗ್ಗೆ ಜಾಗೃತಿಯನ್ನು ಮೂಡಿಸಲು ಮತ್ತು ವಾಣಿಜ್ಯಕ ಮೌಲ್ಯಗಳನ್ನು, ಸೇವೆಗಳನ್ನು ಸುಧಾರಿಸಲು ಸಹಾಯಕವಾಗುವಂತೆ ಕೇಂದ್ರ ಸರ್ಕಾರವು ೧೯೮೬ರಲ್ಲಿ "ಗ್ರಾಹಕ ಸಂರಕ್ಷಣಾ ಕಾಯಿದೆ"ಯನ್ನು ಜಾರಿಗೊಳಿಸಿತು. ಅದರ ಅನ್ವಯ ಗ್ರಾಹಕರ ಕುಂದುಕೊರತೆಗಳನ್ನು ನಿವಾರಿಸಲು ಕರ್ನಾಟಕ ಸರ್ಕಾರವು ಗ್ರಾಹಕ ಸಂರಕ್ಷಣಾ ಕಾಯಿದೆಯನ್ನು ಅನುಷ್ಠಾನಕ್ಕೆ ಜಾರಿಗೊಳಿಸಿದ್ದು, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಗ್ರಾಹಕರ ವಿವಾದಗಳ ಪರಿಹಾರ ವೇದಿಕೆಯನ್ನು ಸ್ಥಾಪಿಸಿದೆ. ಈ ವೇದಿಕೆಯು ತುಮಕೂರು ಜಿಲ್ಲೆಯಲ್ಲಿ ೧೯೯೧ರಲ್ಲಿ ಸ್ಥಾಪನೆಯಾಯಿತು. ಈ ವೇದಿಕೆಯು ಜಿಲ್ಲೆಯ ೧೦ ತಾಲೂಕುಗಳಿಗೆ ಒಳಪಟ್ಟಿದೆ. ಗ್ರಾಹಕರ ವ್ಯಾಜ್ಯ ಪರಿಹಾರ ಪಡೆಯಲಿಚ್ಛಿಸುವವರು ಜಿಲ್ಲಾ ವ್ಯಾಪ್ತಿಯವರೇ ಆಗಿರಬೇಕು.

## ಗ್ರಾಹಕ ಸಂರಕ್ಷಣಾ ಕಾಯೆಯನ್ವಯ

೧. ಗ್ರಾಹಕರು ಯಾವುದೇ ಗೃಹಬಳಕೆ ಅಥವಾ ಇತರ ಉಪಯುಕ್ತ ವಸ್ತುವನ್ನು ಖರೀದಿಸಿದಾಗ ಮಾರಾಟಗಾರನಿಂದ ಉಂಟಾಗಿರುವಂತಹ ವಂಚನೆ, ಖರೀದಿಸಿದ ವಸ್ತು ಕಳಪೆ ಎಂದು ಕಂಡು ಬಂದಾಗ ವಂಚನೆ ಕುರಿತು ಪರಿಹಾರ ಪಡೆಯಬಹುದು.

೨. ಯಾವುದೇ ವ್ಯಕ್ತಿ ಗ್ರಾಹಕ ಎಂದು ಪರಿಗಣಿಸಲ್ಪಟ್ಟಾಗ ಅದರಿಂದ ಉಂಟಾಗಿರುವ ಅನ್ಯಾಯದ ಕುರಿತು ಪರಿಹಾರ ಪಡೆಯಬಹುದಾಗಿದೆ.

೩. ಗ್ರಾಹಕರಿಗೆ ಸೇವಾ ನ್ಯೂನತೆ ಉಂಟು ಮಾಡಿರುವ ಬ್ಯಾಂಕು ಮತ್ತು ಇತರ ವ್ಯವಹಾರ ಸೇವಾ ಸಂಸ್ಥೆಗಳು, ಪ್ರವಾಸದಲ್ಲಿ ಅತೃಪ್ತ ಸೇವೆ, ಅಂಚೆ, ವೈದ್ಯಕೀಯ ವಿಮೆ, ವಿದ್ಯಾಭ್ಯಾಸ, ಗೃಹ ನಿರ್ಮಾಣ, ಏರ್‌ವೇಸ್, ಸಾರಿಗೆ ಸಂಪರ್ಕ, ಮೊಬೈಲ್ ವಾಹನಗಳ ಮಾಲೀಕರಿಂದ ಸೇವಾ ನ್ಯೂನತೆ, ವಿದ್ಯುಚ್ಛಕ್ತಿ, ಗೃಹ ಬಳಕೆ ವಸ್ತುಗಳು, ಕಂಪ್ಯೂಟರ್, ಹೋಟೆಲ್ ವಸತಿ ಗೃಹಗಳು ಮೊದಲಾದವುಗಳಲ್ಲಿ ಸೇವಾ ನ್ಯೂನತೆ ಉಂಟಾಗಿದ್ದರೆ, ಗ್ರಾಹಕ ವ್ಯಾಜ್ಯದಿಂದ ಪರಿಹಾರ ಪಡೆಯಬಹುದು.

೪. ಗ್ರಾಹಕರು ತಮ್ಮ ವ್ಯಾಜ್ಯಗಳನ್ನು ಮೂರು ತಿಂಗಳಿನಿಂದ ಐದು ತಿಂಗಳ ಒಳಗಾಗಿ ಪರಿಹರಿಸಿಕೊಳ್ಳಬಹುದು.

೫. ಗ್ರಾಹಕರು ತಮ್ಮ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ವೇದಿಕೆಯ ಮುಂದೆ ತಮ್ಮ ವಾದವನ್ನು ತಾವೇ ಮಂಡಿಸಿ ವ್ಯಾಜ್ಯ ನಡೆಸಬಹುದು.

೬. ಗ್ರಾಹಕರು ತಮ್ಮ ವ್ಯಾಜ್ಯವನ್ನು ಸಲ್ಲಿಸಲು ವ್ಯಾಜ್ಯ ನಡೆದ ದಿನಾಂಕದಿಂದ ಎರಡು ವರ್ಷಗಳ ಒಳಗಾಗಿ ದೂರು ಸಲ್ಲಿಸಬೇಕು.

೭. ಗ್ರಾಹಕರು ವ್ಯಾಜ್ಯದಲ್ಲಿ ತಮಗೆ ಉಂಟಾಗಿರುವ ಮಾನಸಿಕ ವೇದನೆ ಪ್ರಕರಣದ ವಿಲೇವಾರಿಗೆ ಆಗಿರುವ ಖರ್ಚು ವೆಚ್ಚಗಳನ್ನು ಸಹ ಎದುರುವಾದಿಯಿಂದ ಪಡೆಯಬಹುದು.

೮. ಗ್ರಾಹಕರು ಜಿಲ್ಲಾ ವೇದಿಕೆಯಲ್ಲಿ ದೂರು ಸಲ್ಲಿಸಿ ಪರಿಹಾರ ಕೇಳುವ ಗರಿಷ್ಟ ಮೊತ್ತ ರೂ. ೨೦ ಲಕ್ಷ ಮತ್ತು ರೂ. ೨೦ ಲಕ್ಷ ಮೀರಿ ಪರಿಹಾರ ಕೇಳಲಿಚ್ಛಿಸುವವರು ರಾಜ್ಯ ಆಯೋಗ ಮತ್ತು ರಾಷ್ಟ್ರೀಯ ಆಯೋಗಕ್ಕೆ ದೂರು ಸಲ್ಲಿಸಬಹುದು. ರಾಜ್ಯ ಆಯೋಗದ ಮಿತಿ ರೂ. ೨೦ ಲಕ್ಷ ದಿಂದ ಒಂದು ಕೋಟಿ. ರಾಷ್ಟ್ರೀಯ ಆಯೋಗದ ಮಿತಿ ರೂ. ಒಂದು ಕೋಟಿಗಿಂತ ಮೇಲ್ಪಟ್ಟದ್ದು.

೯. ಗ್ರಾಹಕರು ಜಿಲ್ಲಾ ವೇದಿಕೆಯು ನೀಡಿದ ಪರಿಹಾರಕ್ಕೆ ಅತೃಪ್ತರಾದ ಪಕ್ಷದಲ್ಲಿ ಜಿಲ್ಲಾ ವೇದಿಕೆಯ ಆದೇಶದ ವಿರುದ್ಧ ರಾಷ್ಟ್ರೀಯ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಬಹುದು.

೧೦. ಒಂದು ವೇಳೆ ಎದುರುದಾರರು ಜಿಲ್ಲಾ ವೇದಿಕೆಯ ಆದೇಶಕ್ಕೆ ತೃಪ್ತರಾಗದಿದ್ದಲ್ಲಿ ರಾಜ್ಯ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆಯನ್ನು ಪಡೆಯಬಹುದು ಅಥವಾ ವಜಾ ಆದೇಶವನ್ನೂ ಸಹ ಪಡೆಯಬಹುದು.

೧೧. ಗ್ರಾಹಕರು ಪಡೆದ ಆದೇಶವನ್ನು ಎದುರುದಾರರು ಪಾಲಿಸದಿದ್ದಲ್ಲಿ ಅವರ ವಿರುದ್ಧ ಎಕ್ಸಿಕ್ಯೂಷನ್ ಅರ್ಜಿಯ ಮೂಲಕ ಪರಿಹಾರದ ಮೊತ್ತ ಅದರ ಮೇಲಿನ ಬಡ್ಡಿ ಖರ್ಚು ವೆಚ್ಚಗಳನ್ನು ಪಾವತಿಸುವಂತೆ ಅರ್ಜಿ ಸಲ್ಲಿಸಬಹುದು.

೧೨. ಜಿಲ್ಲೆಯಲ್ಲಿ ಗ್ರಾಹಕ ಜಾಗೃತಿಯನ್ನು ಉಂಟು ಮಾಡಲು ಜಾಗೃತಿ ಅದಾಲತ್‌ಗಳು, ಶಾಲಾ ಕಾಲೇಜುಗಳಲ್ಲಿ, ಕ್ಲಬ್, ಮಹಿಳಾ ವೇದಿಕೆಗಳಲ್ಲಿ, ಜಾಗೃತಿ ಶಿಬಿರಗಳನ್ನು ಏರ್ಪಡಿಸುವ ಮೂಲಕ ಜಾಗೃತಿ ಉಂಟು ಮಾಡಲಾಗುತ್ತದೆ.

೧೩. ಜಿಲ್ಲಾ ವೇದಿಕೆಯಲ್ಲಿ ದೂರು ಸಲ್ಲಿಸುವವರು ರೂ.೧ ಲಕ್ಷದವರೆಗೆ ಪರಿಹಾರ ಕೇಳುವವರು ರೂ.೧೦೦-೦೦ ಗಳ ಶುಲ್ಕ; ರೂ. ೧ ಲಕ್ಷ ದಿಂದ ೫ ಲಕ್ಷ ದವರೆಗೆ ಕೇಳುವವರು ರೂ.೨೦೦, ರೂ. ೫ ಲಕ್ಷ ದಿಂದ ೧೦ ಲಕ್ಷ ದವರೆಗೆ ಪರಿಹಾರ ಕೇಳುವವರು ರೂ. ೪೦೦-೦೦ ಮತ್ತು ರೂ. ೧೦ ಲಕ್ಷ ದಿಂದ ೨೦ ಲಕ್ಷ ಗಳ ಪರಿಹಾರ ಕೇಳುವವರು ರೂ. ೫೦೦ ಶುಲ್ಕವನ್ನು ಡಿ.ಡಿ.ರೂಪದಲ್ಲಿ ವೇದಿಕೆಯ ಅಧ್ಯಕ್ಷರ ಹೆಸರಿನಲ್ಲಿ ನೀಡಬೇಕಾಗಿರುತ್ತದೆ. ಒಂದು ವೇಳೆ ಫಿರ್ಯಾದುದಾರರು ಬಡತನದ ರೇಖೆಗಿಂತ ಕೆಳಗೆ ಇದ್ದ ಅಕ್ಷಯ ಅಂತ್ಯೋದಯ ಕಾರ್ಡುದಾರರಾಗಿದ್ದರೆ ಯಾವುದೇ ಶುಲ್ಕವಿರುವುದಿಲ್ಲ.

೧೪. ಜಿಲ್ಲಾ ವೇದಿಕೆಯು ಅಧ್ಯಕ್ಷರು, ಸದಸ್ಯರು ಮತ್ತು ಒಬ್ಬ ಮಹಿಳಾ ಸದಸ್ಯರನ್ನು ಒಳಗೊಂಡಿರುತ್ತದೆ.

೧೫. ಕಾರ್ಯನಿರ್ವಹಿಸುವ ಸಿಬ್ಬಂದಿಗಳು-ಸಹಾಯಕ ನೋಂದಣಾಧಿಕಾರಿ, ಸಹಾಯಕ ಆಡಳಿತಾಧಿಕಾರಿ, ಶಿರಸ್ತೇದಾರರು, ಪ್ರಥಮ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು, ದ್ವಿತೀಯ ದರ್ಜೆ ಸಹಾಯಕರು, ಮೂರು ಗ್ರೂಪ್ ಡಿ ನೌಕರರು, ಇಷ್ಟು ಆಡಳಿತ ಸಿಬ್ಬಂದಿಗಳನ್ನೊಳಗೊಂಡಿರುತ್ತದೆ. ವಿವರಗಳಿಗೆ ಕೋಷ್ಟಕ ೬.೩೬ ನೋಡಿ.

**ಕೋಷ್ಟಕ ೬.೩೬: ತುಮಕೂರು ಜಿಲ್ಲೆಯಲ್ಲಿ ಮಾರ್ಚ ೨೦೦೯ರವರೆಗೂ ದಾಖಲಾಗಿ ಇತ್ಯರ್ಥವಾಗಿರುವ ಪ್ರಕರಣಗಳ ವಿವರ**

| ವರ್ಷ | ದಾಖಲೆಗೊಂಡಿರುವುದು | ಇತ್ಯರ್ಥವಾಗಿರುವುದು |
|---|---|---|
| ೧೯೯೨ | ೨೫೩ | ೨೫೩ |
| ೧೯೯೩ | ೪೪೨ | ೪೪೨ |
| ೧೯೯೪ | ೩೯೦ | ೩೯೦ |
| ೧೯೯೫ | ೩೬೪ | ೩೬೪ |
| ೧೯೯೬ | ೨೨೮ | ೨೨೮ |
| ೧೯೯೭ | ೧೫೯ | ೧೫೯ |
| ೧೯೯೮ | ೮೩ | ೮೩ |
| ೧೯೯೯ | ೧೫೬ | ೧೫೬ |
| ೨೦೦೦ | ೧೦೧ | ೧೦೧ |
| ೨೦೦೧ | ೮೭ | ೮೭ |
| ೨೦೦೨ | ೭೬ | ೭೬ |
| ೨೦೦೩ | ೧೩೦ | ೧೩೦ |
| ೨೦೦೪ | ೧೦೪ | ೧೦೪ |
| ೨೦೦೫ | ೧೦೪ | ೧೦೪ |
| ೨೦೦೬ | ೧೯೪ | ೧೯೪ |
| ೨೦೦೭ | ೨೮೫ | ೨೮೫ |
| ೨೦೦೮ | ೧೮೩ | ೧೭೧ |
| ೨೦೦೯* | ೩೯ | ೦೬ |

* ಮಾರ್ಚ್ ೩೧ರ ಅಂತ್ಯಕ್ಕೆ

**ತುಮಕೂರು ಜಿಲ್ಲಾ ಬಳಕೆದಾರರ ವೇದಿಕೆ (ಜಾಗೃತಾ ವೇದಿಕೆ)**

ಜಿಲ್ಲಾ ಬಳಕೆದಾರರ ವೇದಿಕೆ ಕಾನೂನಿನ ಪ್ರಕಾರ ನೋಂದಣಿ ಹೊಂದಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಮಾನ್ಯತೆ ಪಡೆದ ಸ್ವಯಂ ಸೇವಾ ಸಂಸ್ಥೆ, ಗ್ರಾಹಕ ಹಕ್ಕುಗಳ ರಕ್ಷಣೆ, ಶಿಕ್ಷಣ, ಜನಜಾಗೃತಿ ಹಾಗೂ ಬಳಕೆದಾರರ ಕಲ್ಯಾಣಕ್ಕಾಗಿ ಕಟಿಬದ್ಧವಾಗಿದೆ. ೧೯೮೦ ರಿಂದ ಈ ಸಂಸ್ಥೆಯು ಗ್ರಾಹಕರ ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ. ವೇದಿಕೆಯ ಧ್ಯೇಯಗಳು ಈ ಕೆಳಕಂಡಂತಿತ್ತು.

**ಬಳಕೆದಾರರ ಶಿಕ್ಷಣ:** ವೇದಿಕೆಯು ಬಳಕೆದಾರರು ತಮ್ಮ ಹಕ್ಕು ಮತ್ತು ಹಿತಾಸಕ್ತಿಯನ್ನು ಅರಿತುಕೊಳ್ಳುವಂತೆ ಅವರಿಗೆ ಶಿಕ್ಷಣ ನೀಡುವುದು, ಅವರ ಜಾಗೃತಿಗಾಗಿ ಶಿಬಿರಗಳನ್ನು ಏರ್ಪಡಿಸುವುದು. ಅವರಿಗೆ ಮಾರ್ಗದರ್ಶನ ಮಾಹಿತಿ ಹಾಗೂ ತರಬೇತಿಯನ್ನು ನೀಡಿ ಅವರು ಸದಾ ಜಾಗೃತರಾಗುವಂತೆ ಮಾಡುವುದು.

**ಬಳಕೆದಾರರ ಹೋರಾಟ:** ಬಳಕೆದಾರರು ವೈಯಕ್ತಿಕ ಹೋರಾಟ ನಡೆಸಲು ವೇದಿಕೆ ಬೆಂಬಲವನ್ನು ನೀಡುವುದು. ಸಾಮೂಹಿಕ ಸಮಸ್ಯೆಗಳಿಗೆ ನ್ಯಾಯಯುತ ಪರಿಹಾರಗಳನ್ನು ಒದಗಿಸಲು ಶ್ರಮಿಸುವುದು. ಅವರ ಪರವಾಗಿ ಹೋರಾಟ ನಡೆಸುವುದು. ಬಳಕೆದಾರರ ಆಂದೋಲನಕ್ಕೆ ಇದು ಎಲ್ಲಾ ಬಗೆಯ ಬೆಂಬಲವನ್ನು ನೀಡುವುದು.

**ವೇದಿಕೆ ನಡೆದು ಬಂದ ದಾರಿ**

೧೯೮೦ರಲ್ಲಿ ಈ ವೇದಿಕೆ ತುಮಕೂರಿನಲ್ಲಿ ಜಿಲ್ಲಾ ಬಳಕೆದಾರರ ವೇದಿಕೆಯ ಸಹಾಯವನ್ನು ಕೋರುವ ಗ್ರಾಹಕರಿಗೆ ಯಾವ ಶುಲ್ಕವನ್ನು ವಿಧಿಸದೆ ಯಾವ ಜಾಹಿರಾತು ಮತ್ತು ಪ್ರಚಾರಗಳನ್ನು ಬಳಸಿಕೊಳ್ಳದೇ ಬಳಕೆದಾರರ ನ್ಯಾಯ ಸಮ್ಮತವಾದ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಒದಗಿಸುತ್ತಾ ಬಂದಿದೆ. ಇದರ ಪರಿಶ್ರಮದಿಂದ ಸಮಸ್ಯೆಗಳು ಸುಲಭದಲ್ಲಿ ಪರಿಹಾರವಾಗಿ ಗ್ರಾಹಕರಲ್ಲಿ ಜನಜಾಗೃತಿ ಮೂಡಿಸಿವೆ. ಈ ವಿಚಾರದಲ್ಲಿ ಸಮೂಹ ಮಾಧ್ಯಮಗಳೂ ಕೂಡ ವೇದಿಕೆಯ ಜೊತೆಗೆ ಸಹಕರಿಸಿ ಗ್ರಾಹಕರ ಹಕ್ಕುಗಳ ಬಗ್ಗೆ ಮಾಹಿತಿ ಒದಗಿಸುವಲ್ಲಿ ಯಶಸ್ವಿಯಾಗಿವೆ. ಸಾಮೂಹಿಕ ಸಮಸ್ಯೆಗಳಾದ ನೀರು ಪೂರೈಕೆ, ಕಾಮಗಾರಿ, ವಿದ್ಯುತ್ ಸೌಲಭ್ಯ, (ಮೂಲಭೂತ ಆರ್ಥಿಕ ಸೌಲಭ್ಯಗಳು), ಪಡಿತರ ವ್ಯವಸ್ಥೆ, ಪರಿಸರ ಮಾಲಿನ್ಯ, ಹಿರಿಯ ನಾಗರಿಕರ ಸಮಸ್ಯೆಗಳಿಗೆ ಪರಿಹಾರ, ವೈದ್ಯಕೀಯ ಸವಲತ್ತು, ಶಿಕ್ಷಣ, ಸಾರ್ವಜನಿಕ ಸೌಲಭ್ಯ, ಸಾರಿಗೆ ವ್ಯವಸ್ಥೆ ಮುಂತಾದವುಗಳಿಗೆ ಪರಿಹಾರ ಕ್ರಮಗಳು ಮತ್ತು ಜನಹಿತ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿದೆ. ಚಳುವಳಿ, ಪ್ರತಿಭಟನೆ ಮುಂತಾದವುಗಳ ಮೂಲಕ ಜನಜಾಗೃತಿಯನ್ನುಂಟು ಮಾಡಿ ಸೂಕ್ತ ಪರಿಹಾರವನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ. ಮತ್ತು ಗ್ರಾಹಕರ ಚಳುವಳಿಗೆ ಸಕ್ರಿಯವಾಗಿ ಬೆಂಬಲ ನೀಡುತ್ತಾ ಬಂದಿದೆ. ಹೀಗೆ ವೈಯಕ್ತಿಕ ಹಾಗೂ ಸಾಮೂಹಿಕ ಆಂದೋಲನಕ್ಕೆ ಗ್ರಾಹಕ ಸಮಸ್ಯೆಗಳಿಗೆ ನ್ಯಾಯಯುತ ಪರಿಹಾರ ಒದಗಿಸುವಲ್ಲಿನ ಹೋರಾಟದಲ್ಲಿ ವೇದಿಕೆಯು ಯಶಸ್ಸನ್ನು ಕಂಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಿ ಇಲಾಖೆಗಳೊಂದಿಗೆ, ಸಾರ್ವಜನಿಕರೊಂದಿಗೆ, ಸಂವಾದವನ್ನು ಜಿಲ್ಲೆಯಲ್ಲಿ ಏರ್ಪಡಿಸುವ ಮೂಲಕ ಹಲವಾರು ರಚನಾತ್ಮಕ ಕಾರ್ಯಗಳನ್ನು ವೇದಿಕೆ ಕೈಗೊಳ್ಳುತ್ತಾ ಬಂದಿದೆ.

***